● www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಆಳ-ಅಗಲ
ಹಣಕ್ಕಾಗಿ ಆಸ್ತಿ ನಗದೀಕರಣ

ದಿಬ್ಬ ಕುಸಿತ: ನಂದಿಗಿರಿಧಾಮ ಪ್ರವೇಶ ಬಂದ್ 4

ಗಡುವು ನಿಕಟ: ವಲಸೆಗೆ ಧಾವಂತ 11


ಸೆನ್ಸೆಕ್ಸ್	ನಿಫ್ಟಿ	₹/$
55,944 ▼	16,634 ▲	74.24 ▼

ಕೋವಿಡ್ ಸಾವು ಅ'ಗಣಿತ'


2 ವರ್ಷಗಳಲ್ಲಿ ಸತ್ತವರು 11.25 ಲಕ್ಷ ! ಕೋವಿಡ್‌ನಿಂದ ಸತ್ತವರೆಷ್ಟು– ತಪ್ಪು ಲೆಕ್ಕ ಕೊಟ್ಟ ಸರ್ಕಾರ?

• ಎಸ್.ರವಿಪ್ರಕಾಶ್

ರಾಜ್ಯದಲ್ಲಿ ಮರಣ ಸಂಖ್ಯೆ



ಪ್ರಜಾವಾಣಿ ಗ್ರಾಫಿಕ್ಸ್



ಸಾವಿನ ಜಿಗಿತ (ಎರಡು ವರ್ಷಗಳಲ್ಲಿ) 25,073 5.05% 2018-19 43,224 8.49% 2019-20

ಬೆಂಗಳೂರು: ರಾಜ್ಯಕ್ಕೆ ಕೋವಿಡ್ ಕಾಲಿಟ್ಟ ಬಳಿಕ ಮರಣ ಪ್ರಮಾಣ ಭಾರಿ ಹೆಚ್ಚಳವಾಗಿದೆ. ಎರಡು ವರ್ಷಗಳಲ್ಲಿ 11.25 ಲಕ್ಷ ಮಂದಿ ಸಾವಿಗೀಡಾಗಿದ್ದು, ಇವರಲ್ಲಿ ಕೋವಿಡ್‌ನಿಂದಾಗಿ ಮೃತಪಟ್ಟವರು ಎಷ್ಟು ಎಂಬ ಜಿಜ್ಞಾಸೆ ನಡೆದಿದೆ.

ರಾಜ್ಯದಲ್ಲಿ ನಾನಾ ಕಾರಣಗಳಿಂದ ಮೃತಪಡುವವರ ವಾರ್ಷಿಕ ಸರಾಸರಿ ಲೆಕ್ಕಕ್ಕೆ ಹೋಲಿಸಿದರೆ, ಈ ಸಂಖ್ಯೆಯಲ್ಲಿ ಗಣನೀಯ ಏರಿಕೆಯಾಗಿದೆ ಎಂಬುದನ್ನು ಸರ್ಕಾರದ ದಾಖಲೆಗಳೇ ಹೇಳುತ್ತವೆ.

ದೇಶದ ಬೇರೆ ಬೇರೆ ರಾಜ್ಯಗಳಲ್ಲಿ ಕೋವಿಡ್‌ನಿಂದ ಮೃತಪಟ್ಟವರ ಸಂಖ್ಯೆಯನ್ನು ಅಲ್ಲಿನ ಸರ್ಕಾರಗಳು ಮುಚ್ಚಿಟ್ಟಿವೆ ಎಂಬ ವರದಿಗಳು ಚರ್ಚೆಗೆ ಗ್ರಾಸವಾಗಿದ್ದವು. ಕರ್ನಾಟಕ ವಿಧಾನ ಮಂಡಲದ ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿಗೆ ರಾಜ್ಯ ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ ಸಲ್ಲಿಸಿರುವ ಮರಣ ದಾಖಲೆಯು 'ಪ್ರಜಾವಾಣಿ'ಗೆ ಲಭ್ಯವಾಗಿದೆ. ಅಗಣಿತ ಸಾವುಗಳ ಅಂಕಿ ಅಂಶವನ್ನು ಈ ದಾಖಲೆ ಹೊರಗೆಡಹಿದ್ದು, ಕರ್ನಾಟಕದಲ್ಲೂ ಕೋವಿಡ್‌ನಿಂದ ಸಾವಿಗೀಡಾದವರ ಸಂಖ್ಯೆ 'ರಹಸ್ಯ'ವಾಗಿಯೇ ಉಳಿದಿದೆಯೇ ಎಂಬ ಅನುಮಾನವನ್ನು ಹುಟ್ಟುಹಾಕಿದೆ.


ಪ್ರಜಾವಾಣಿ ವಿಶೇಷ

2018 ರಲ್ಲಿ ರಾಜ್ಯದಲ್ಲಿ ಒಟ್ಟು ಸಾವಿನ ಸಂಖ್ಯೆ 4,83,511 ಇತ್ತು. 2019 ರಲ್ಲಿ (ಕೋವಿಡ್ ಮೊದಲ ಅಲೆ) ಸಾವಿನ ಸಂಖ್ಯೆ 5,08,584ಕ್ಕೆ ಏರಿತು. 2020 ರಲ್ಲಿ 5,51,808ಕ್ಕೆ ಮುಟ್ಟಿತು. 2021ರ ಜುಲೈವರೆಗೆ 65,530 ಮಂದಿ ಮೃತಪಟ್ಟಿದ್ದಾರೆ. ಇವರಲ್ಲಿ ಕೋವಿಡ್‌ನಿಂದ ಮೃತಪಟ್ಟವರು ಎಷ್ಟು ಮತ್ತು ಇತರ ಕಾರಣಗಳಿಗೆ ನಿಧನರಾದವರ ಸಂಖ್ಯೆ ಎಷ್ಟು ಎಂಬ ಮಾಹಿತಿಯನ್ನು ಸರ್ಕಾರ ಕರಾರುವಾಕ್ಕಾಗಿ ಬಹಿರಂಗಪಡಿಸಬೇಕು ಎಂಬ ಒತ್ತಾಯವನ್ನು ವಿರೋಧ ಪಕ್ಷಗಳು ಮಾಡಿವೆ.

ಆರೋಗ್ಯ ಇಲಾಖೆ ಮಾಹಿತಿಯ ಪ್ರಕಾರ, ರಾಜ್ಯದಲ್ಲಿ ಈವರೆಗೆ ಕೋವಿಡ್‌ನಿಂದ ಮೃತಪಟ್ಟವರ ಸಂಖ್ಯೆ 37,184 ಮಾತ್ರ. ಕೋವಿಡ್ ಪೂರ್ವ ಅಂದರೆ 2018 ಸಾಮಾನ್ಯ ವರ್ಷವಾಗಿತ್ತು.

6ನೇ ಪುಟ ನೋಡಿ

'ಸಾವಿನ ಸಂಖ್ಯೆ ಮುಚ್ಚಿಟ್ಟಿದೆ'



ರಾಜ್ಯ ಸರ್ಕಾರ ಸಾವಿನ ಸಂಖ್ಯೆ ಮುಚ್ಚಿಟ್ಟಿದೆ ಎಂಬುದನ್ನು ಮೊದಲಿನಿಂದಲೂ ಹೇಳುತ್ತಲೇ ಬಂದಿದ್ದೇವೆ. ಸತ್ಯವನ್ನು ಮುಚ್ಚಿಡುವುದರಿಂದ ಏನನ್ನೂ ಸಾಧಿಸಿದಂತಾಗುವುದಿಲ್ಲ. ಸಾರ್ವಜನಿಕ ಲೆಕ್ಕಪತ್ರ ಸಮಿತಿಯ ಸಭೆಗಳಲ್ಲೂ ಇದೇ ವಿಚಾರವಾಗಿ ಸರ್ಕಾರಕ್ಕೆ ಮಾಹಿತಿ ಕೇಳಿದ್ದೆವು. ಸರಿಯಾದ ಮಾಹಿತಿಗಳನ್ನು ಅಧಿಕಾರಿಗಳು ನೀಡುತ್ತಿರಲಿಲ್ಲ. ಈಗಲಾದರೂ ಕೋವಿಡ್‌ನಿಂದ ಮೃತಪಟ್ಟವರ ನಿಖರ ಸಂಖ್ಯೆಯನ್ನು ಹೇಳಬೇಕು. ಗುಜರಾತ್ ಸೇರಿದಂತೆ ಹಲವು ರಾಜ್ಯಗಳಲ್ಲಿ ಕೋವಿಡ್ ಸಾವಿನ ಸಂಖ್ಯೆಯನ್ನು ಮುಚ್ಚಿಡಲಾಗಿತ್ತು. ರಾಜ್ಯದಲ್ಲೂ ಅದೇ ರೀತಿ ಆಗಿದೆ ಎಂಬುದನ್ನು ಅಂಕಿಅಂಶಗಳೇ ಸಾರುತ್ತವೆ. ಎರಡು ವರ್ಷಗಳಲ್ಲಿ 11,25,922 ಸಾವು ಕಡಿಮೆ ಸಂಖ್ಯೆಯೇನಲ್ಲ.

ರಾಮಲಿಂಗಾರೆಡ್ಡಿ, ಅಧ್ಯಕ್ಷ, ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿ

'ಅಂಕಿಅಂಶ ಮುಚ್ಚಿಡುವ ಉದ್ದೇಶ ಇಲ್ಲ'



'ನಮ್ಮ ಸರ್ಕಾರಕ್ಕೆ ಕೊರೊನಾ ಅಂಕಿಅಂಶಗಳನ್ನು ಮುಚ್ಚಿಡುವ ಉದ್ದೇಶ ಇಲ್ಲ. ಅದು ಸಾಧ್ಯವೂ ಇಲ್ಲ. ದಾಖಲೆಯ ಮೂಲ ಮತ್ತು ಅದರ ಸತ್ಯಾಸತ್ಯತೆ ನನಗೆ ತಿಳಿದಿಲ್ಲ' ಎಂದು ಆರೋಗ್ಯ ಸಚಿವ ಡಾ.ಕೆ.ಸುಧಾಕರ್ ಪ್ರತಿಕ್ರಿಯಿಸಿದ್ದಾರೆ.

'ಸುಮಾರು ನಾಲ್ಕೈದು ತಿಂಗಳ ಹಿಂದೆ ವಿರೋಧ ಪಕ್ಷದ ಕೆಲ ನಾಯಕರು ಇದೇ ರೀತಿಯ ಆರೋಪ ಮಾಡಿದ್ದರು. ಆ ಸಂದರ್ಭದಲ್ಲಿ ಅಂಕಿಅಂಶಗಳು ಇ-ಜನ್ಮ ತಂತ್ರಾಂಶದಲ್ಲಿ ತಾತ್ಕಾಲಿಕವಾಗಿ ದಾಖಲಿಸಲಾಗಿದ್ದ ದತ್ತಾಂಶವಾಗಿತ್ತು. ರಿಜಿಸ್ಟ್ರಾರ್ ಜನರಲ್ ಆಫ್ ಇಂಡಿಯಾ ಹೊರಡಿಸಿರುವ ಮಾರ್ಗಸೂಚಿಗಳ ಅನುಸಾರ ಪರಿಷ್ಕರಣೆ ನಡೆದು ಅಂತಿಮ ಅಂಕಿಅಂಶಗಳ ಪ್ರಕಟಣೆ ಇನ್ನೂ ಬಾಕಿಯಿರುವಾಗಲೇ ವೃಥಾ ಆರೋಪ ಮಾಡಿದ್ದರು' ಎಂದರು.

6ನೇ ಪುಟ ನೋಡಿ

ಮೈಸೂರು: ಸ್ನೇಹಿತನೊಂದಿಗೆ ತೆರಳಿದ್ದ ಯುವತಿ

ವಿದ್ಯಾರ್ಥಿನಿ ಮೇಲೆ ಸಾಮೂಹಿಕ ಅತ್ಯಾಚಾರ

ಪ್ರಜಾವಾಣಿ ವಾರ್ತೆ

ಮೈಸೂರು: ಚಾಮುಂಡಿಬೆಟ್ಟದ ತಪ್ಪಲಿನಲ್ಲಿರುವ ಲಲಿತಾದ್ರಿಪುರದ ಗುಡ್ಡದಲ್ಲಿ ಮಂಗಳವಾರ ರಾತ್ರಿ ಸುಮಾರು 7.30ರ ವೇಳೆ ಕಾಲೇಜು ವಿದ್ಯಾರ್ಥಿನಿಯೊಬ್ಬರ ಮೇಲೆ ಐದು ಮಂದಿ ಸಾಮೂಹಿಕ ಅತ್ಯಾಚಾರ ನಡೆಸಿದ್ದಾರೆ. ಈ ವಿಷಯ ಬುಧವಾರ ಗೊತ್ತಾಗಿದೆ.

ಆಕೆಯೊಂದಿಗೆ ಇದ್ದ ಸ್ನೇಹಿತನ ಮೇಲೆ ಗಂಭೀರ ಹಲ್ಲೆ ನಡೆಸಲಾಗಿದೆ. ಹೀಗಾಗಿ ಇಬ್ಬರೂ ನಗರದ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಆಲನಹಳ್ಳಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಆರೋಪಿಗಳು ಹೊರ ರಾಜ್ಯದಿಂದ ಬಂದ ಕಾರ್ಮಿಕರೆಂದು ಪೊಲೀಸರು ಶಂಕಿಸಿದ್ದು, ಪತ್ತೆಗೆ ವಿಶೇಷ ತಂಡವನ್ನು ರಚಿಸಲಾಗಿದೆ.

ಯುವತಿ ಮಹಾರಾಷ್ಟ್ರದವರಾಗಿದ್ದಾರೆ. ಯುವಕ ಕರ್ನಾಟಕದವರೇ, ಆದರೆ ಸ್ಥಳೀಯರಲ್ಲ. ಅತ್ಯಾಚಾರ ದೂರು ದಾಖಲಿಸಲು ಪೊಲೀಸರು ವಿಳಂಬ ಮಾಡಿದರು ಎಂಬ ಆರೋಪವೂ ಕೇಳಿಬಂದಿದೆ.

'ಘಟನೆಯಿಂದ ಆಘಾತಕ್ಕೆ ಒಳಗಾಗಿರುವ ಯುವತಿ ಅತ್ಯಾಚಾರ ಕುರಿತು ಹೇಳಿಕೆ ನೀಡಿಲ್ಲ. ಆಕೆಯ ಸ್ನೇಹಿತನ ಹೇಳಿಕೆ ಆಧರಿಸಿ ಪ್ರಕರಣ ದಾಖಲಿಸಲಾಗಿದೆ' ಎಂದು ನಗರ ಪೊಲೀಸ್ ಕಮಿಷನರ್ ಡಾ.ಚಂದ್ರಗುಪ್ತ ತಿಳಿಸಿದರು.

'ನಗರದ ಕಾಲೇಜ್‌ವೊಂದರಲ್ಲಿ ಎಂಬಿಎ ಓದುತ್ತಿರುವ ಇಬ್ಬರೂ ಬೈಕ್‌ನಲ್ಲಿ ತೆರಳಿ ಲಲಿತಾದ್ರಿಪುರದ ಗುಡ್ಡದಲ್ಲಿ ಕುಳಿತಿದ್ದಾಗ ಘಟನೆ ನಡೆದಿದೆ. ಅವರನ್ನು ಹೊರವರ್ತುಲ ರಸ್ತೆಯಿಂದಲೇ ದುಷ್ಕರ್ಮಿಗಳು ಹಿಂಬಾಲಿಸಿದ್ದರು. ಯುವಕನನ್ನು ಥಳಿಸಿ, ಆತನ ಎದುರಲ್ಲೇ ವಿದ್ಯಾರ್ಥಿನಿಯ ಮೇಲೆ ಅತ್ಯಾಚಾರ ನಡೆಸಿದರು. ನಂತರ ಚೇತರಿಸಿಕೊಂಡ ಯುವಕ ತನ್ನ ಸ್ನೇಹಿತರೊಬ್ಬರಿಗೆ ಮಾಹಿತಿ ನೀಡಿದ್ದರು. ಅವರು ಬಂದು ಇಬ್ಬರನ್ನೂ ಆಸ್ಪತ್ರೆಗೆ ದಾಖಲಿಸಿದರು' ಎಂದು ಮೂಲಗಳು ತಿಳಿಸಿವೆ.

5ನೇ ಪುಟ ನೋಡಿ

ತನಿಖೆಗೆ ವಿಶೇಷ ತಂಡ: ಆರಗ ಜ್ಞಾನೇಂದ್ರ



ಬೆಂಗಳೂರು: 'ಮೈಸೂರು ನಗರದಲ್ಲಿ ವಿದ್ಯಾರ್ಥಿನಿ ಮೇಲೆ ಸಾಮೂಹಿಕ ಅತ್ಯಾಚಾರ ನಡೆದಿದ್ದು, ಪ್ರಕರಣದ ತನಿಖೆಗೆ ವಿಶೇಷ ತಂಡಗಳನ್ನು ರಚಿಸಲಾಗಿದೆ' ಎಂದು ಗೃಹ ಸಚಿವ ಆರಗ ಜ್ಞಾನೇಂದ್ರ ತಿಳಿಸಿದರು.

ಪ್ರಕರಣ ಕುರಿತು ಮೈಸೂರು ನಗರ ಪೊಲೀಸ್ ಕಮಿಷನರ್ ಅವರಿಂದ ಮಾಹಿತಿ ಪಡೆದ ಬಳಿಕ ಸುದ್ದಿಗಾರರ ಜತೆ ಬುಧವಾರ ಮಾತನಾಡಿದ ಅವರು, 'ತಕ್ಷಣ ಮೈಸೂರಿಗೆ ತೆರಳಿ ತನಿಖೆಗೆ ಮಾರ್ಗದರ್ಶನ ನೀಡುವಂತೆ ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕ ಪ್ರತಾಪ್ ರೆಡ್ಡಿ ಅವರಿಗೆ ಸೂಚನೆ ನೀಡಲಾಗಿದೆ. ಗುರುವಾರ ಮೈಸೂರಿಗೆ ಭೇಟಿ ನೀಡಲಿದ್ದು, ಅಧಿಕಾರಿಗಳ ಸಭೆ ನಡೆಸಿ ಪರಿಶೀಲನೆ ನಡೆಸುತ್ತೇನೆ' ಎಂದು ಹೇಳಿದರು.

'ಸಂತ್ರಸ್ತೆಯನ್ನು ಮಂಗಳವಾರ ರಾತ್ರಿಯೇ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಲಾಗಿದೆ. ಮೈಸೂರು ಪ್ರವಾಸಿ ತಾಣ. ಅಲ್ಲಿ ಪದೇ ಪದೇ ಇಂತಹ ಘಟನೆಗಳು ನಡೆಯುವುದರಿಂದ ನಗರದ ಘನತೆಗೆ ಧಕ್ಕೆಯಾಗಲಿದೆ. ಈ ಮೊದಲು ಶೂಟೌಟ್ ನಡೆದಿತ್ತು. ಈಗ ಸಾಮೂಹಿಕ ಅತ್ಯಾಚಾರ ನಡೆದಿದೆ. ಇದೊಂದು ದುರಂತ. ಈ ಪ್ರಕರಣವನ್ನು ನಾವು ಗಂಭೀರವಾಗಿ ಪರಿಗಣಿಸಿದ್ದೇವೆ' ಎಂದರು.



ಅತ್ಯಾಚಾರ ಪ್ರಕರಣದ ಆರೋಪಿಗಳನ್ನು ಬಂಧಿಸಲು ತಕ್ಷಣವೇ ಕ್ರಮಕೈಗೊಳ್ಳುವಂತೆ ಪೊಲೀಸ್ ಮಹಾನಿರ್ದೇಶಕರಿಗೆ ಸೂಚಿಸಿದ್ದೇನೆ.
ಬಸವರಾಜ ಬೊಮ್ಮಾಯಿ, ಮುಖ್ಯಮಂತ್ರಿ

'ಕಾನೂನು ಸುವ್ಯವಸ್ಥೆ ಕುಸಿದಿದೆ'

ಬೆಂಗಳೂರು: ಮೈಸೂರಿನಲ್ಲಿ ಕಾನೂನು ಸುವ್ಯವಸ್ಥೆ ಸಂಪೂರ್ಣವಾಗಿ ಕಣ್ಮರೆಯಾಗಿದೆ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಆರೋಪಿಸಿದ್ದಾರೆ. 5

ಸೆ. 5ರೊಳಗೆ ಎಲ್ಲ ಶಿಕ್ಷಕರಿಗೆ ಲಸಿಕೆ: ರಾಜ್ಯಗಳಿಗೆ ಸೂಚನೆ

ನವದೆಹಲಿ (ಪಿಟಿಐ): 'ಶಿಕ್ಷಕರಿಗೆ ಆದ್ಯತೆಯ ಮೇಲೆ ಕೋವಿಡ್ ಲಸಿಕೆ ನೀಡಬೇಕು. ಶಿಕ್ಷಕರ ದಿನಾಚರಣೆಗೂ (ಸೆ. 5) ಮುನ್ನ ಎಲ್ಲ ಶಿಕ್ಷಕರಿಗೆ ಲಸಿಕೆ ನೀಡುವಂತೆ ರಾಜ್ಯಗಳಿಗೆ ಸೂಚಿಸಲಾಗಿದೆ' ಎಂದು ಕೇಂದ್ರ ಆರೋಗ್ಯ ಸಚಿವ ಮನಸುಖ್ ಮಾಂಡವೀಯ ಬುಧವಾರ ತಿಳಿಸಿದ್ದಾರೆ.

'ಈ ಉದ್ದೇಶಕ್ಕಾಗಿ ಈ ತಿಂಗಳು ರಾಜ್ಯಗಳಿಗೆ ಹೆಚ್ಚುವರಿಯಾಗಿ 2 ಕೋಟಿಗೂ ಅಧಿಕ ಡೋಸ್ ಲಸಿಕೆ ಪೂರೈಸಲಾಗುವುದು' ಎಂದು ಅವರು ಟ್ವೀಟ್ ಮಾಡಿದ್ದಾರೆ.

ದೇಶದಲ್ಲಿ ಕೋವಿಡ್ ಪ್ರಕರಣಗಳ ಸಂಖ್ಯೆಯಲ್ಲಿ ಇತ್ತೀಚೆಗೆ ಇಳಿಕೆ ಕಂಡು ಬರುತ್ತಿರುವ ಕಾರಣ, ಶಾಲೆಗಳನ್ನು ಆರಂಭಿಸಲು ಕೆಲವು ರಾಜ್ಯಗಳು ಕ್ರಮ ಕೈಗೊಂಡಿವೆ. ಆದರೆ, ಎಲ್ಲ ಶಿಕ್ಷಕರಿಗೆ ಕೋವಿಡ್ ಲಸಿಕೆ ನೀಡುವುದು ಸಾಧ್ಯವಾಗದೇ ಇರುವ ಬಗ್ಗೆ ಕಳವಳ ವ್ಯಕ್ತವಾಗಿತ್ತು. ಈ ಹಿನ್ನೆಲೆಯಲ್ಲಿ ಆರೋಗ್ಯ ಸಚಿವರ ಹೇಳಿಕೆಗೆ ಮಹತ್ವ ಬಂದಿದೆ.

'ಈವರೆಗೆ ದೇಶದಲ್ಲಿ 60 ಕೋಟಿಗೂ ಅಧಿಕ ಡೋಸ್‌ಗಳಷ್ಟು ಕೋವಿಡ್ ಲಸಿಕೆ ಹಾಕಲಾಗಿದೆ' ಎಂದೂ ಸಚಿವರು ತಿಳಿಸಿದ್ದಾರೆ.

'85 ದಿನಗಳ ಅವಧಿಯಲ್ಲಿ 10 ಕೋಟಿ ಡೋಸ್ ಲಸಿಕೆ ಹಾಕಲಾಗಿತ್ತು. 45 ದಿನಗಳಲ್ಲಿ 20 ಕೋಟಿ ಡೋಸ್ ಗಡಿ ದಾಟಲಾಗಿತ್ತು. ನಂತರದ 29 ದಿನಗಳ ಅವಧಿಯಲ್ಲಿ ಈ ಪ್ರಮಾಣ 30 ಕೋಟಿ ತಲುಪಿತ್ತು' ಎಂದು ಮಾಹಿತಿ ನೀಡಿದ್ದಾರೆ.

'30 ಕೋಟಿ ಡೋಸ್‌ಗಳಿಂದ 40 ಕೋಟಿ ಡೋಸ್‌ಗಳ ಹಂತವನ್ನು 24 ದಿನಗಳಲ್ಲಿ ತಲುಪಿದ್ದರೆ, ನಂತರದ 20 ದಿನಗಳ ಅವಧಿಯಲ್ಲಿ 50 ಕೋಟಿಗೂ ಅಧಿಕ ಡೋಸ್‌ಗಳಷ್ಟು ಲಸಿಕೆ ಹಾಕುವ ಮೂಲಕ ಸಾಧನೆ ಮಾಡಲಾಗಿದೆ' ಎಂದು ಹೇಳಿದ್ದಾರೆ.

ಸಭೆ: ಆರೋಗ್ಯ ಸಚಿವಾಲಯದ ಕಾರ್ಯದರ್ಶಿ ರಾಜೇಶ್ ಭೂಷಣ್ ಅವರು ಬುಧವಾರ ಎಲ್ಲ ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳ ಅಧಿಕಾರಿಗಳೊಂದಿಗೆ ಉನ್ನತ ಮಟ್ಟದ ಸಭೆ ನಡೆಸಿ, ಲಸಿಕೆ ಕಾರ್ಯಕ್ರಮದ ಪ್ರಗತಿ ಪರಿಶೀಲಿಸಿದರು.

ಚಿನಕುರಳಿ
ಪ್ರಕಾಶ್ ಶೆಟ್ಟಿ



ರಾಷ್ಟ್ರೀಕೃತ ಬ್ಯಾಂಕ್ ನೌಕರರ ಕೌಟುಂಬಿಕ ಪಿಂಚಣಿ ಹೆಚ್ಚಳ

ಮುಂಬೈ (ಪಿಟಿಐ): ಬ್ಯಾಂಕ್ ನೌಕರರು ಕರ್ತವ್ಯದಲ್ಲಿದ್ದ ಅವಧಿಯಲ್ಲಿ ಮೃತಪಟ್ಟರೆ ಅವರ ಕುಟುಂಬಕ್ಕೆ ನೀಡುವ ಪಿಂಚಣಿ ಮೊತ್ತ ಕಡಿಮೆ ಎಂಬುದನ್ನು ಒಪ್ಪಿಕೊಂಡಿರುವ ಕೇಂದ್ರ ಸರ್ಕಾರವು, ಈ ಮೊತ್ತವನ್ನು ನೌಕರನ ಕೊನೆಯ ಸಂಬಳದ ಶೇಕಡ 30ರಷ್ಟಕ್ಕೆ ಹೆಚ್ಚಿಸುವ ಘೋಷಣೆಯನ್ನು ಬುಧವಾರ ಮಾಡಿದೆ. 10

ಮೊಬೈಲೂ ಇಲ್ಲ; ಟಿವಿಯೂ ಇಲ್ಲ 05
ಮಧ್ಯ ವಯಸ್ಕರಿಗೆ 'ಕೋವಿಡ್' ಮನೋವ್ಯಾಧಿ 06

ಜನತಾ ಸೇವಾ ಕೋ ಆಪರೇಟಿವ್ ಬ್ಯಾಂಕ್ ಲಿ.,


ನಂ.14, ರಜತ ಭವನ, 1 ನೇ ಮುಖ್ಯರಸ್ತೆ, ಹಕ್ಕ ರಸ್ತೆ, ಹಂಪಿನಗರ 2ನೇ ಹಂತ, ವಿಜಯನಗರ, ಬೆಂಗಳೂರು-560104
ದೂರವಾಣಿ: 23300497-41159606 ಫ್ಯಾಕ್ಸ್: 23359600, Email: vjn@jscbl com

ಟೆಂಡರ್/ಸ್ಥಿರಾಸ್ತಿಯ ಬಹಿರಂಗ ಹರಾಜು

ಸೆಕ್ಯೂರಿಟೈಸೇಶನ್ ಮತ್ತು ರಿಕನ್ಸ್ಟ್ರಕ್ಷನ್ ಆಫ್ ಫೈನಾನ್ಸಿಯಲ್ ಅಸ್ಸೆಟ್ ಮತ್ತು ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿ ಇಂಟರೆಸ್ಟ್ ಅಧಿನಿಯಮ 2002 ರಡಿಯಲ್ಲಿ ಜನತಾ ಸೇವಾ ಕೋ ಆಪರೇಟಿವ್ ಬ್ಯಾಂಕ್ ಲಿ., ಪ್ರಧಾನ ಕಛೇರಿ: ನಂ 14, ರಜತ ಭವನ, 1ನೇ ಮುಖ್ಯ ರಸ್ತೆ, ಹಕ್ಕ ರಸ್ತೆ, ಹಂಪಿನಗರ 2ನೇ ಹಂತ, ವಿಜಯನಗರ, ಬೆಂಗಳೂರು-560104 ರ ಇವರಿಗೆ ಈ ಸಾಲಗಾರರಿಂದ ಬರಬೇಕಾದ ಸಾಲ ವಸೂಲಿಗಾಗಿ ಬ್ಯಾಂಕಿಗೆ ಅಡಮಾನ ಮಾಡಿರುವ ಕೆಳಕಂಡ ಸ್ಥಿರಾಸ್ತಿಯನ್ನು "ಎಲ್ಲಿ ಹೇಗಿದೆಯೋ ಹಾಗೆಯೇ ಮತ್ತು ಏನಿದೆಯೋ ಹಾಗಿನ ಆಧಾರದ" ಮೇಲೆ ಹರಾಜು ನಡೆಸಿ ಮಾರಾಟ ಮಾಡಲಾಗುವುದು.

ಸಾಲಗಾರರ ಹೆಸರು ಮತ್ತು ವಿಳಾಸ

ಅದಾಗಿ, **ಶ್ರೀ ವೆಂಕಟೇಶ್ವರ ಎಸ್.** ಬಿನ್ ಲೇಟ್ ಶ್ರೀ ಸಿದ್ದಯ್ಯ, ನಂ. 37, 1ನೇ ಮಹಡಿ, 7ನೇ ಮುಖ್ಯರಸ್ತೆ, 4ನೇ ಬ್ಲಾಕ್, ನಂದಿನಿ ಲೇಔಟ್, ಬೆಂಗಳೂರು – 560 096, ಇಲ್ಲಿನ ನಿವಾಸಿ ಇವರು ಜನತಾ ಸೇವಾ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್, ವಿಜಯನಗರ, ಬೆಂಗಳೂರು ಇದರಿಂದ ಪಡೆದಿರುವ ಸಾಲವನ್ನು ಮರುಪಾವತಿ ಮಾಡಲು ವಿಫಲರಾಗಿದ್ದಾರೆ. ಇವರು ಒಪ್ಪಿರುವ ನಿಯಮಗಳು ಮತ್ತು ನಿಬಂಧನೆಗಳ ಅನ್ವಯ ಸ್ವತಃ ಪಾವತಿ ಮಾಡಬೇಕಾಗಿರುವ ಒಟ್ಟು ಬಾಕಿ ಮೊತ್ತ ದಿನಾಂಕ 24-08-2021 ರಂದು ಇದ್ದಂತೆ ರೂ. 72,76,949/- (ಎಪ್ಪತ್ತೆರಡು ಲಕ್ಷದ ಎಪ್ಪತ್ತಾರು ಸಾವಿರದ ಒಂಭೈನೂರ ನಲವತ್ತೊಂಭತ್ತು ರೂಪಾಯಿಗಳು ಮಾತ್ರ) ಜೊತೆಗೆ ಇದರ ಮೇಲಿನ ಅನ್ವಯವಾಗುವ ದರದಲ್ಲಿನ ಬಡ್ಡಿ ಮತ್ತು ಖರ್ಚು ವೆಚ್ಚಗಳು.



ಶ್ರೀ ವೆಂಕಟೇಶ್ವರ ಎಸ್.

ಹರಾಜಿಗಿರುವ ಸ್ಥಿರಾಸ್ತಿಯ ವಿವರ	ಬಹಿರಂಗ ಹರಾಜು ನಡೆಯುವ ದಿನಾಂಕ ಹಾಗೂ ಸಮಯ ಸ್ಥಳ	ಕನಿಷ್ಠ ಮೀಸಲು ಬೆಲೆ ಮತ್ತು ಮುಂಗಡ ಠೇವಣಿ (ಇ.ಎಂ.ಡಿ)
ವಳಗೆರಹಳ್ಳಿ ಗ್ರಾಮ, ಕೆಂಗೇರಿ ಹೋಬಳಿ, ಬಿ.ಬಿ.ಎಂ.ಪಿ. ವಾರ್ಡ್ ನಂ. 159 (ಕೆಂಗೇರಿ), ಬೆಂಗಳೂರು – 560 063, ಇಲ್ಲಿರುವ ಖಾತಾ ನಂ. 49, ಅಸೆಸ್‌ಮೆಂಟ್ ನಂ. 24/1 ಒಳಗೊಂಡಿರುವ, ಪೂರ್ವದಿಂದ ಪಶ್ಚಿಮಕ್ಕೆ : 30 ಅಡಿ ಮತ್ತು ಉತ್ತರದಿಂದ ದಕ್ಷಿಣಕ್ಕೆ : 50 ಅಡಿ ಹೀಗೆ 1500 ಚದರ ಅಡಿ ವಿಸ್ತೀರ್ಣವುಳ್ಳ ನಂ. 6/3ಡಿರ ಮನೆ ಸ್ಥಿರಾಸ್ತಿ. ಸದರಿ ಸ್ವತ್ತಿನ ಚೆಕ್ಕುಬಂದಿ ಕೆಳಕಂಡಂತಿರುವುದು. ಪೂರ್ವಕ್ಕೆ : ಖಾಸಗಿ ಸ್ವತ್ತು, ಪಶ್ಚಿಮಕ್ಕೆ : ಖಾಸಗಿ ಸ್ವತ್ತು, ಉತ್ತರಕ್ಕೆ : ರಸ್ತೆ, ದಕ್ಷಿಣಕ್ಕೆ : ಖಾಸಗಿ ಸ್ವತ್ತು.	**ದಿನಾಂಕ:28/09/2021, ಮಂಗಳವಾರ,** ಬೆಳಗ್ಗೆ 11.30 ಘಂಟೆಗೆ ಜನತಾ ಸೇವಾ ಕೋ ಆಪರೇಟಿವ್ ಬ್ಯಾಂಕ್ ಲಿ., ನಂ 14, ರಜತ ಭವನ, 1ನೇ ಮುಖ್ಯ ರಸ್ತೆ, ಹಕ್ಕ ರಸ್ತೆ, ಹಂಪಿನಗರ 2ನೇ ಹಂತ, ವಿಜಯನಗರ, ಬೆಂಗಳೂರು-560104	**ರೂ.1,00,00,000/-** (ರೂ ಒಂದು ಕೋಟಿ ಮಾತ್ರ) **ರೂ.10,00,000/-** (ಮೀಸಲು ಬೆಲೆಯ ಶೇ.10) (ರೂ ಹತ್ತು ಲಕ್ಷ ಮಾತ್ರ)

ಬಹಿರಂಗ ಹರಾಜಿನ ನಿಯಮ ಮತ್ತು ಷರತ್ತುಗಳು:

1. ಹರಾಜಿನಲ್ಲಿ ಭಾಗವಹಿಸುವ ಆಸಕ್ತರು ಹಿಂತಿರುಗಿಸಲಾಗುವ ಇ.ಎಂ.ಡಿ.ಗಾಗಿ ಕಾಯ್ದಿಟ್ಟ ಬೆಲೆಯ ಶೇಕಡ 10% ರಷ್ಟನ್ನು ಡಿ.ಡಿ/ಪೇ ಆರ್ಡರ್ ಮುಖಾಂತರ **ಜನತಾ ಸೇವಾ ಕೋ ಆಪರೇಟಿವ್ ಬ್ಯಾಂಕ್ ಲಿ, ವಿಜಯನಗರ ಶಾಖೆ, ಬೆಂಗಳೂರು.** ಇವರ ಹೆಸರಿಗೆ ಮೇಲೆ ತಿಳಿಸಿರುವ ಸ್ಥಿರಾಸ್ತಿಯ ಹರಾಜಿನ ದಿನ ಅಥವಾ 27/09/2021, ಸಂಜೆ 5:30ರ ಒಳಗೆ ಪಾವತಿಸಿ ರಸೀದಿ ಮತ್ತು ಟೆಂಡರ್ ಪಾರಂನ್ನು ಪಡೆಯುವುದು, ವಿಜಯಿ ಬಿಡ್ಡುದಾರರು ಹರಾಜಿನ ನಿಯಮಗಳನ್ನು ಪಾಲಿಸದಿದ್ದಲ್ಲಿ ಮುಂಗಡವಾಗಿ ಕೊಟ್ಟ ಹಣವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು.
2. ಮುಂಗಡ ಠೇವಣಿಯನ್ನು ಪಾವತಿಸಿದ ಬಿಡ್ದಾರರರು ಬ್ಯಾಂಕಿನಿಂದ ನೀಡಲಾಗುವ ಫಾರಂನಲ್ಲಿ ಮುಚ್ಚಿದ ಲಕೋಟೆಯಲ್ಲಿ ಬಿಡ್ಡನ್ನು ಸಲ್ಲಿಸುವುದು. ಎಲ್ಲಾ ಲಕೋಟೆಗಳು ಬಂದ ನಂತರ ಬಿಡ್ಡುದಾರರ ಸಮ್ಮುಖದಲ್ಲಿ ದಿನಾಂಕ:28/09/2021, ಮಂಗಳವಾರ, 11.30 ಘಂಟೆಗೆ ಅಧಿಕೃತ ಅಧಿಕಾರಿಯು ಲಕೋಟೆಯನ್ನು ತೆರೆದು ಅಂತಿಮಗೊಳಿಸುವರು.
3. ಬಿಡ್ಡಿನಲ್ಲಿ ಯಶಸ್ವಿಯಾಗದ ಬಿಡ್‌ದಾರರಿಗೆ ಇ.ಎಂ.ಡಿ. ಹಣವನ್ನು ತಕ್ಷಣವೇ ಮರುಪಾವತಿಸಲಾಗುವುದು. ಸ್ಥಿರ ಸ್ವತ್ತನ್ನು ಯಾವುದೇ ಕಾರಣಕ್ಕೂ ಮೀಸಲು ಬೆಲೆಗಿಂತ ಕಡಿಮೆ ಮೌಲ್ಯಕ್ಕೆ ಮಾರಾಟ ಮಾಡಲಾಗುವುದಿಲ್ಲ.
4. ವಿಜಯಿ ಬಿಡ್ಡುದಾರರು ಹರಾಜಿನ ಮೊಬಲಿಗಿನ ಶೇ.25 ರಷ್ಟು (ಮುಂಗಡವಾಗಿ ಪಾವತಿಸಿದ ಹಣವನ್ನು ಸೇರಿ) ಮೊತ್ತವನ್ನು ಹರಾಜಿನ ದಿನವೇ ಪಾವತಿಸತಕ್ಕದ್ದು, ಆ ಹಣವನ್ನು ಸ್ವೀಕರಿಸಿದ ಮತ್ತು ಕೆವೈಸಿ ದಾಖಲೆಗಳ ಮೂಲ ಪ್ರತಿಗಳನ್ನು (ಫೋಟೋ ಐಡಿ ಮತ್ತು ವಿಳಾಸದ ದಾಖಲೆ) ಪರಿಶೀಲಿಸಿದ ನಂತರ ಅಧಿಕೃತ ಅಧಿಕಾರಿಯು ಮಾರಾಟ ಧೃಡೀಕರಣ ಪತ್ರವನ್ನು ನೀಡುತ್ತಾರೆ. ಉಳಿದ ಹಣವನ್ನು 15 ದಿನಗಳ ಒಳಗಾಗಿ ಪಾವತಿಸಬೇಕು.
5. ವಿಜಯಿಯಾದ ಬಿಡ್ಡುದಾರರು ಈ ಪ್ರಕಟಣೆಯ ನಿಯಮಗಳನ್ನು ಪಾಲಿಸದಿದ್ದರೆ ಮತ್ತು ಯಾವುದೇ ರೀತಿಯಲ್ಲಾದರು ತಪ್ಪುಗಳನ್ನು ಮಾಡಿದರೆ ಅವರು ಪಾವತಿಸಿದ ಹಣವನ್ನು ಬ್ಯಾಂಕ್ ಯಾವುದೇ ಸೂಚನೆ ನೀಡದೆ ಮುಟ್ಟುಗೋಲು ಹಾಕಿಕೊಳ್ಳಲಾಗುತ್ತದೆ ಹಾಗೂ ಮತ್ತೆ ಹರಾಜು ಮಾಡಲಾಗುತ್ತದೆ.
6. ವಿಜಯಿಯಾದ ಬಿಡ್ಡುದಾರರು ತನ್ನ ಪರವಾಗಿ ನೊಂದಣಿ ಮಾರಾಟ ಪತ್ರವನ್ನು ಪಡೆದುಕೊಳ್ಳಲು ತೆರಿಗೆಗಳು, ನೋಂದಣಿ ಶುಲ್ಕ ಮತ್ತು ಸಾಮಾನ್ಯ ಮುದ್ರಾಂಕ ಟಿ.ಡಿ.ಎಸ್. ಮತ್ತಿತರ ಖರ್ಚುಗಳನ್ನು ಭರಿಸತಕ್ಕದ್ದು.
7. ಬ್ಯಾಂಕಿನ ಅಧಿಕೃತ ಅಧಿಕಾರಿಗಳು ಹರಾಜನ್ನು ಯಾವುದೇ ಕಾರಣ ಕೊಡದೆ ಅಂಗೀಕರಿಸುವ, ಮುಂದೂಡುವ ಅಥವಾ ತಿರಸ್ಕರಿಸುವ ಅಧಿಕಾರ ಹೊಂದಿರುತ್ತಾರೆ.
8. ಸದರಿ ಸ್ಥಿರಾಸ್ತಿಯ ಬಗ್ಗೆ ಬಾಕಿ ಇರುವ ಸ್ಥಿರಾಸ್ತಿ ತೆರಿಗೆ ಮತ್ತು ಇತರೆ ಖರ್ಚುಗಳಿಗೆ ಹಾಗೂ ಇತರೆ ಯಾವುದೇ ಸಾಲಗಳಿಗೆ ಬ್ಯಾಂಕು ಜವಾಬ್ದಾರಿಯಾಗಿರುವುದಿಲ್ಲ. ಬಿಡ್ಡುದಾರರು ಇಚ್ಛಿಸಿದ ಆಧಾರದ ಮೇಲೆ ಮತ್ತು ಸೆಕ್ಯೂರಿಟೈಸೇಷನ್ ಅಧಿನಿಯಮ-2002 ರಲ್ಲಿ ನಿಗಧಿಪಡಿಸಿರುವ ಷರತ್ತುಗಳಿಗೆ ಒಳಪಟ್ಟು ಮಾರಾಟ ಮಾಡಲಾಗುತ್ತದೆ.
9. ಹರಾಜು ಮಾಡಲಿರುವ ಸ್ಥಿರಾಸ್ತಿಯನ್ನು ಬಿಡ್ಡುದಾರರು ಆಡಳಿತ ಕಛೇರಿಯಲ್ಲಿ ಅಧಿಕೃತ ಅಧಿಕಾರಿಯನ್ನು ದೂ.ಸಂ. 080-23300497, 41159606, ಶಾಖಾ ವ್ಯವಸ್ಥಾಪಕರನ್ನು ಸಂಪರ್ಕಿಸಿ, ಬಿಡ್ಡುದಾರರು ಆಸ್ತಿಯ ಬಗ್ಗೆ ವಿಚಾರಿಸುವ ಮತ್ತು ಆಸ್ತಿಯ ಮೇಲಿನ ಸಾಲದ ವಿವರಗಳನ್ನು ಪಡೆಯಲು ಸ್ವತಂತ್ರರಿರುತ್ತಾರೆ.
10. ಅಧಿಕೃತ ಬಿಡ್ಡುದಾರರು ಹೊರತು ಜಿ.ಪಿ.ಎ. ಹೋಲ್ಡರ್, ಏಜೆಂಟರು ಅಥವಾ ಇತರೆ ಯಾವುದೇ ವ್ಯಕ್ತಿಗಳು ಹರಾಜಿನಲ್ಲಿ ಭಾಗವಹಿಸಲು ಅರ್ಹರಲ್ಲ .
11. ಸ್ಥಿರ ಸತ್ತು "ಎಲ್ಲಿ ಹೇಗಿದೆಯೋ ಹಾಗೆಯೇ ಮತ್ತು ಏನಿದೆಯೋ ಹಾಗಿನ ಆಧಾರದ" ಮೇಲೆ ಮಾರಾಟ ಮಾಡಲಾಗುವುದು.
12. ಡಿ.ಆರ್.ಟಿ/ಡಿ.ಆರ್.ಎ.ಟಿ/ಹೈಕೋರ್ಟ್ ಅಥವಾ ಯಾವುದೇ ನ್ಯಾಯಾಲಯದ ಪ್ರಕ್ರಿಯೆಗಳ ಅನ್ವಯ ಈ ಹರಾಜಿಗೆ ತಡೆಯಾಜ್ಞೆ ನೀಡಿದರೆ ಈ ಹರಾಜನ್ನು ಮುಂದೂಡಲಾಗುವುದು ಅಥವಾ ರದ್ದು ಮಾಡಲಾಗುವುದು, ಹರಾಜಿನ ಮುಂದೂಡಿಕೆ ಅಥವಾ ರದ್ದು ಆದಾಗ ಹರಾಜಿನಲ್ಲಿ ಭಾಗವಹಿಸುವವರು ಯಾವುದೇ ರೀತಿಯ ನಷ್ಟ ಪರಿಹಾರ ಅಥವಾ ಮೊತ್ತವನ್ನು ಪಡೆಯುವ ಹಕ್ಕು ಹೊಂದಿರುವುದಿಲ್ಲ.
13. ಪೂರ್ಣವಾಗಿ ಬಾಕಿ ಹಣವನ್ನು ಪಾವತಿ ಮಾಡದಿದ್ದಲ್ಲಿ ಮೇಲೆ ತಿಳಿಸಿರುವ ದಿನಾಂಕದಂದು ಹರಾಜು ನಡೆಸುವ ಬಗ್ಗೆ ಸದರಿಯವರು (ಸಾಲಗಾರರು, ಜಾಮೀನುದಾರರು ಅಥವಾ ಈಡುದಾರರು) ಇದನ್ನು ನೋಟೀಸೆಂದು ಪರಿಗಣಿಸಬೇಕು.

ಬಿಡ್ದಾರರು ಟೆಂಡರ್‌ನ ಹೆಚ್ಚಿನ ಮಾಹಿತಿಗಾಗಿ ಅಧಿಕೃತ ಅಧಿಕಾರಿ, **ಜನತಾ ಸೇವಾ ಕೋ ಆಪರೇಟಿವ್ ಬ್ಯಾಂಕ್ ಲಿ, ನಂ 14, 'ರಜತ ಭವನ', 1 ನೇ ಮುಖ್ಯರಸ್ತೆ, ಹಕ್ಕ ರಸ್ತೆ, ಹಂಪಿನಗರ, ವಿಜಯನಗರ 2ನೇ ಹಂತ, ಬೆಂಗಳೂರು-560104. ದೂರವಾಣಿ: 23300497, 41159606 ಫ್ಯಾಕ್ಸ್: 23359600 Email: vjn@jscbl.com**

ಸ್ಥಳ : ಬೆಂಗಳೂರು
ದಿನಾಂಕ : 25-08-2021

ಸಹಿ/- ಅಧಿಕೃತ ಅಧಿಕಾರಿ,
ಜನತಾ ಸೇವಾ ಕೋ ಆಪರೇಟಿವ್ ಬ್ಯಾಂಕ್ ಲಿ,

ಹೊಸಕೋಟೆ ಯೋಜನಾ ಪ್ರಾಧಿಕಾರ

ಮಿಷನ್ ಹಾಸ್ಪಿಟಲ್ ರಸ್ತೆ, 1ನೇ ಅಡ್ಡರಸ್ತೆ, ಶ್ರೀ ವೆಂಕಟಾದ್ರಿ ಬಡಾವಣೆ, ಹೊಸಕೋಟೆ-562114. ಬೆಂಗಳೂರು (ಗ್ರಾ) ಜಿಲ್ಲೆ. ದೂರವಾಣಿ. ಫ್ಯಾಕ್ಸ್: 080-27934470, 27935412, ಇ-ಮೇಲ್: hosakote.pa@gmail.com, ವೆಬ್‌ಸೈಟ್: www.hoskote.tpa.gov.in

ಸಂಖ್ಯೆ: ಹೊಯೋಪ್ರಾ/ಎಲ್.ಎ.ಓ/09/2012-13 ದಿನಾಂಕ: 25.08.2021

ನೋಟೀಸ್
(ಕೆ.ಟಿ.ಸಿ.ಪಿ. ಕಾಯ್ದೆ, 1961 ರ ಕಲಂ 17 ಮತ್ತು 76(ಓ)ರ ಅಡಿಯಲ್ಲಿ)

ಇವರಿಗೆ,
(1) ಶ್ರೀ.ಹೆಚ್.ಜೆ.ರಮೇಶ್ ಬಿನ್ ಜಂಗಾರೆಡ್ಡಿ, ಹಾರೋಹಳ್ಳಿ ಗ್ರಾಮ, ಮುತ್ಸಂದ್ರ ಅಂಚೆ, ಅನುಗೊಂಡನಹಳ್ಳಿ ಹೋಬಳಿ, ಹೊಸಕೋಟೆ ತಾಲ್ಲೂಕು, ಬೆಂಗಳೂರು (ಗ್ರಾ) ಜಿಲ್ಲೆ, (2) ಶ್ರೀ.ಟಿ.ರಾಜಣ್ಣ ಬಿನ್ ತಮ್ಮಣ್ಣ ದೊಡ್ಡಹಸಳ ಗ್ರಾಮ, ಕೋಲಾರ ತಾಲ್ಲೂಕು ಮತ್ತು ಜಿಲ್ಲೆ.

ವಿಷಯ: ಹೊಸಕೋಟೆ ತಾಲ್ಲೂಕು, ಅನುಗೊಂಡನಹಳ್ಳಿ ಹೋಬಳಿ, ಹಾರೋಹಳ್ಳಿ ಗ್ರಾಮದ ಸ.ನಂ. 66/1, 66/2, 67/1, 67/2, 67/3, 70/1, 70/2, 70/3, 70/4, 70/5, 71/1, 71/2, 71/3, 71/4, 71/5, 72/1, 72/2, 72/3, 74/1, 74/2, 83/3 ಮತ್ತು ಸ.ನಂ. 83/4 ರಲ್ಲಿನ ಒಟ್ಟು 16 ಎಕರೆ 33 ಗುಂಟೆ ವಿಸ್ತೀರ್ಣದ ಜಮೀನುಗಳಿಗೆ ಸುಳ್ಳು/ನಕಲಿ ದಾಖಲಾತಿಗಳನ್ನು ಸಲ್ಲಿಸಿ ವಸತಿ ವಿನ್ಯಾಸ ನಕ್ಷೆಗೆ ಅನುಮೋದನೆ ಪಡೆದಿರುವ ಸಂಬಂಧ ಸೂಕ್ತ ಕಾನೂನು ಕ್ರಮ ಕೈಗೊಳ್ಳುವ ಬಗ್ಗೆ.

ಉಲ್ಲೇಖ: (1) ಶ್ರೀ.ಹೆಚ್.ಜೆ. ರಮೇಶ್ ಬಿನ್ ಜಂಗಾರೆಡ್ಡಿ, ಹಾರೋಹಳ್ಳಿ ಗ್ರಾಮ, ಹೊಸಕೋಟೆ ತಾಲ್ಲೂಕು ರವರು ವಿನ್ಯಾಸ ಅನುಮೋದನೆ ಕೋರಿ ದಿನಾಂಕ: 18.06.2012 ರಂದು ಪ್ರಾಧಿಕಾರಕ್ಕೆ ಸಲ್ಲಿಸಿರುವ ಅರ್ಜಿ. (2) ಈ ಪ್ರಾಧಿಕಾರದ ಮಂಜೂರಾತಿ ಆದೇಶ ಸಮ ಸಂಖ್ಯೆ ಪತ್ರ ದಿನಾಂಕ: 23.07.2012. (3) ಮೆ॥ ಆಲ್ಫಾ ಆರ್.ಜೆ. ಲೇಔಟ್‌ನ ನಿವೇಶನಗಳ ಮಾಲೀಕರ ಸಂಘ ರವರು ದಿನಾಂಕ: 02.07.2018, 28.08.2018, 14.10.2020 ಮತ್ತು 28.12.2020 ರಂದು ಸಲ್ಲಿಸಿರುವ ದೂರಿನ ಪ್ರತಿಗಳು. (4) ವಿನ್ಯಾಸದ ಮಾಲೀಕರಾದ ಶ್ರೀ.ಹೆಚ್.ಜೆ. ರಮೇಶ್ ಬಿನ್ ಜಂಗಾರೆಡ್ಡಿ ಮತ್ತು ಇತರರಿಗೆ ಲಿಖಿತ ಉತ್ತರ/ ಹೇಳಿಕೆಗಳನ್ನು ಸಲ್ಲಿಸಲು ದಿನಾಂಕ: 30.10.2018, 05.11.2019, 21.10.2020, 01.01.2021 ರಂದು ಈ ಕಛೇರಿಯಿಂದ ನೀಡಲಾಗಿದ್ದ ನೋಟೀಸ್‌ಗಳು.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ (1) ರಲ್ಲಿ ಅರ್ಜಿದಾರರಾದ ಶ್ರೀ.ಹೆಚ್.ಜೆ.ರಮೇಶ್ ಬಿನ್ ಜಂಗಾರೆಡ್ಡಿ ಮತ್ತು ಇತರರು ಸದರಿ ಜಮೀನುಗಳಿಗೆ ಸಂಬಂಧಿಸಿದಂತೆ ಅಗತ್ಯ ದಾಖಲಾತಿಗಳಾದ ಕ್ರಯಪತ್ರ, ಆರ್.ಟಿ.ಸಿ. ಪ್ರತಿ, ಇ.ಸಿ., ಭೂ ಪರಿವರ್ತನಾ ಆದೇಶದ ಪ್ರತಿ, ಜಂಟಿ ಸರ್ವೆ ನಕ್ಷೆ, ಗ್ರಾಮ ನಕ್ಷೆ ಇತರೆ ದಾಖಲಾತಿಗಳನ್ನು ಸಲ್ಲಿಸಿ ವಸತಿ ವಿನ್ಯಾಸಕ್ಕೆ ಅನುಮೋದನೆ ಕೋರಿ ಈ ಕಛೇರಿಗೆ ಅರ್ಜಿ ಸಲ್ಲಿಸಿರುತ್ತಾರೆ. ಅರ್ಜಿದಾರರು ಸಲ್ಲಿಸಲಾದ ನಕಲು ದಾಖಲೆಗಳನ್ನು ಪರಿಶೀಲಿಸಿ, ವಸತಿ ವಿನ್ಯಾಸ ನಕ್ಷೆಗೆ ಉಲ್ಲೇಖ (2) ರಲ್ಲಿ ಅನುಮೋದನೆ ನೀಡಿ ವಿನ್ಯಾಸದಲ್ಲಿನ ಶೇ 60 ರಷ್ಟು ನಿವೇಶನಗಳನ್ನು ಮಾತ್ರ ನೋಂದಣಿಗೆ ಬಿಡುಗಡೆ ಮಾಡಲಾಗಿರುತ್ತದೆ. ವಿನ್ಯಾಸದಲ್ಲಿನ ಎಲ್ಲಾ ಅಭಿವೃದ್ಧಿ ಕಾಮಗಾರಿಗಳನ್ನು ಪೂರ್ಣಗೊಳಿಸಿ, ಅಗತ್ಯ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಿ ನಂತರ ವಿನ್ಯಾಸದ ಉಳಿಕೆ ಶೇ 40 ರಷ್ಟು ನಿವೇಶನಗಳನ್ನು ಬಿಡುಗಡೆ ಮಾಡುವ ಷರತ್ತನ್ನು ವಿಧಿಸಿ ಅನುಮೋದನೆ ನೀಡಲಾಗಿರುತ್ತದೆ.

ತದನಂತರ, ಉಲ್ಲೇಖ (3) ರಲ್ಲಿ ಸದರಿ ವಿನ್ಯಾಸದಲ್ಲಿನ ನಿವೇಶನಗಳನ್ನು ಖರೀದಿ ಮಾಡಿದಂತಹ ನಿವೇಶನದ ಮಾಲೀಕರುಗಳು ಒಟ್ಟಾರೆಯಾಗಿ ಈ ಕಛೇರಿಗೆ ಸಲ್ಲಿಸಿದ ದೂರುಗಳ ಅರ್ಜಿಯನ್ನು ಪರಿಶೀಲಿಸಲಾಗಿ, ವಿನ್ಯಾಸದ ಮಾಲೀಕರುಗಳು ಅನುಮೋದನೆ ಪಡೆಯಲಾದ ವಿನ್ಯಾಸದಲ್ಲಿ ಒಳಗೊಂಡಿರುವ ವಿವಿಧ ಜಮೀನುಗಳ ಪೈಕಿ ಕೆಲವೊಂದು ಪೂರ್ಣ ಸ.ನಂ.ಗಳ ವಿಸ್ತೀರ್ಣವುಳ್ಳ ಜಮೀನುಗಳನ್ನು ವಿನ್ಯಾಸ ನಕ್ಷೆಗೆ ಈ ಪ್ರಾಧಿಕಾರದ ಅನುಮೋದನೆ ಪಡೆಯುವುದಕ್ಕೂ ಮೊದಲೇ ಮಾರಾಟ ಮಾಡಲಾಗಿದ್ದರೂ ಸಹ ಈ ಪ್ರಾಧಿಕಾರಕ್ಕೆ ನಕಲಿ/ ಸುಳ್ಳು ದಾಖಲೆಗಳನ್ನು ಸಲ್ಲಿಸಿ ಸತ್ಯವನ್ನು ಮರೆಮಾಚಿ ವಿನ್ಯಾಸ ನಕ್ಷೆಗೆ ಅನುಮೋದನೆ ಪಡೆಯಲಾಗಿರುವುದನ್ನು ಗಮನಿಸಲಾಗಿರುತ್ತದೆ.

ಅಲ್ಲದೆ, ಸದರಿ ವಿನ್ಯಾಸದಲ್ಲಿ ಅಭಿವೃದ್ಧಿಪಡಿಸಲಾದ ಸಾರ್ವಜನಿಕ ರಸ್ತೆಗಳನ್ನು ಅಗೆದು ಸಾರ್ವಜನಿಕರ ಓಡಾಟಕ್ಕೆ ತೊಂದರೆ ಉಂಟುಮಾಡಲಾಗುತ್ತಿದೆ ಎಂದು ಛಾಯಾಚಿತ್ರಗಳೊಂದಿಗೆ ಈ ಪ್ರಾಧಿಕಾರಕ್ಕೆ ದೂರನ್ನು ಸಲ್ಲಿಸಿರುತ್ತಾರೆ. ಹಾಗಾಗಿ, ಈ ಬಗ್ಗೆ ಉಲ್ಲೇಖ (4) ರಲ್ಲಿ ಈ ಮೇಲೆ ತಿಳಿಸಲಾದ ವಿನ್ಯಾಸದ ಮಾಲೀಕರುಗಳಿಗೆ ಈ ಕಛೇರಿಯಿಂದ ಕಾರಣ ಕೇಳಿ ಅನೇಕ ಬಾರಿ ಪತ್ರ/ನೋಟೀಸ್‌ಗಳನ್ನು ನೀಡಲಾಗಿದ್ದರೂ ಸಹ ಇವುಗಳಿಗೆ ಯಾವುದೇ ರೀತಿಯಲ್ಲಿ ಸ್ಪಂಧಿಸಿರುವುದಿಲ್ಲ ಹಾಗೂ ಪ್ರತಿಕ್ರಿಯಿಸಿರುವುದಿಲ್ಲ. ಈ ಬಗ್ಗೆ ಪ್ರಾಧಿಕಾರದಿಂದ ಅನೇಕ ಬಾರಿ ಪತ್ರ/ನೋಟೀಸ್‌ಗಳನ್ನು ನೀಡಲಾಗಿದ್ದರೂ ಸಹ ಅವುಗಳು ಸ್ವೀಕೃತಿಯಾಗದೇ ಈ ಕಛೇರಿಗೆ ಹಿಂದಿರುಗಿಸಲಾಗಿರುತ್ತದೆ.

ಉಲ್ಲೇಖ (3) ರಲ್ಲಿ ದೂರುದಾರರು ಸಲ್ಲಿಸಿರುವ ದೂರಿನ ಬಗ್ಗೆ ಕೂಲಂಕುಷವಾಗಿ ಪರಿಶೀಲಿಸಲಾಗಿದೆ, ಕೆಲವೊಂದು ಜಮೀನುಗಳನ್ನು **ವಿನ್ಯಾಸ ನಕ್ಷೆಗೆ ಅನುಮೋದನೆ ಪಡೆಯುವ ಮೊದಲೇ ಅರ್ಜಿದಾರರುಗಳೇ ಮಾರಾಟ ಮಾಡಿರುವುದು ಸ್ಪಷ್ಟವಾಗಿ ಕಂಡುಬರುತ್ತದೆ ಹಾಗೂ ಸದರಿ ವಿನ್ಯಾಸದ ಭಾಗವಾಗಿರುವ ಸಾರ್ವಜನಿಕ ರಸ್ತೆಗಳನ್ನು ವಿನ್ಯಾಸದ ಮಾಲೀಕರು ಮತ್ತು ಇತರರುಗಳು ಅಗೆದು ವಿನ್ಯಾಸದಲ್ಲಿನ ನಿವೇಶನಗಳನ್ನು ಖರೀದಿಸಿರುವ ಸಾರ್ವಜನಿಕರಿಗೆ ಅನಾವಶ್ಯಕವಾಗಿ ತೊಂದರೆ ಉಂಟು ಮಾಡುತ್ತಿರುವುದು ಕಂಡುಬಂದಿರುತ್ತದೆ.** ಆದುದರಿಂದ, ಈ ತಕ್ಷಣವೇ ವಿನ್ಯಾಸದ ಸಾರ್ವಜನಿಕ ರಸ್ತೆಗಳನ್ನು ಅಗೆದು ತೊಂದರೆ ಉಂಟು ಮಾಡಿರುವುದನ್ನು ಸರಿಪಡಿಸಿ, ವಿನ್ಯಾಸದಲ್ಲಿ ನಿವೇಶನಗಳನ್ನು ಖರೀದಿಸಲಾಗಿದ್ದ ನಿವೇಶನಗಳ ಮಾಲೀಕರುಗಳಿಗೆ ತೊಂದರೆ ಉಂಟಾಗದಂತೆ ತಕ್ಷಣವೇ ಕ್ರಮವಹಿಸಲು ತಿಳಿಸಲಾಗಿದೆ. ಒಂದುವೇಳೆ ಈ ಬಗ್ಗೆ ತಕ್ಷಣವೇ ಸ್ಪಂಧಿಸದೇ ಇದ್ದಲ್ಲಿ ತಮ್ಮ ಮೇಲೆ **ಸೂಕ್ತ ಕಾನೂನು ಕ್ರಮ ಕೈಗೊಳ್ಳುವ ಸಂಬಂಧ ಈ ನೋಟೀಸನ್ನು ಅಂತಿಮವಾಗಿ ತಮಗೆ ನೀಡಲಾಗುತ್ತಿದೆ.**

ಆದ್ದರಿಂದ, ಈ ಪತ್ರಿಕಾ ಪ್ರಕಟಣೆ ನೀಡಲಾದ 15 ದಿನಗಳೊಳಗಾಗಿ ತಮ್ಮ ಲಿಖಿತ ಹೇಳಿಕೆ/ ದಾಖಲೆಗಳನ್ನು ಈ ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ಒಂದು ವೇಳೆ ನಿಗದಿತ ಅವಧಿಯಲ್ಲಿ ತಮ್ಮ ಲಿಖಿತ ಹೇಳಿಕೆ/ ದಾಖಲೆಗಳನ್ನು ಈ ಕಛೇರಿಗೆ ಖುದ್ದು ಹಾಜರಾಗಿ ಸಲ್ಲಿಸದೇ ಇದ್ದಲ್ಲಿ ಈ ಪ್ರಾಧಿಕಾರದ ವತಿಯಿಂದ ಮುಂದಿನ **ಸೂಕ್ತ ಕಾನೂನು ಕ್ರಮವನ್ನು ಕೈಗೊಳ್ಳುವ ಜೊತೆಗೆ ನಿಮ್ಮ ಮೇಲೆ ಕ್ರಿಮಿನಲ್ ಮೊಕದ್ದಮೆಯನ್ನು ದಾಖಲಿಸಲಾಗುವುದು** ಎಂದು ಈ ಮೂಲಕ ತಿಳಿಸಲಾಗಿದೆ.

ಸಹಿ/-
ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು
ಹಾಗೂ ಸದಸ್ಯ ಕಾರ್ಯದರ್ಶಿ,
ಹೊಸಕೋಟೆ ಯೋಜನಾ ಪ್ರಾಧಿಕಾರ, ಹೊಸಕೋಟೆ.

ವಾಸಾಸಂಇ/ಉನಿಕ/ಬೆಂಗ್ರಾಜಿ/ಶಿರಡಿ ಸಾಯಿ/180/2021-22

ಬೆಂಗಳೂರು ವಿ.ವಿ. ಪರೀಕ್ಷಾ ಶುಲ್ಕ: ಅವಧಿ ವಿಸ್ತರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ವಿಶ್ವವಿದ್ಯಾಲಯದ ವಿವಿಧ ಪದವಿಗಳ 6 ಹಾಗೂ 8ನೇ ಸೆಮಿಸ್ಟರ್‌ನ ಪರೀಕ್ಷಾ ಶುಲ್ಕ ಪಾವತಿ ಅವಧಿಯನ್ನು ವಿಸ್ತರಿಸಲಾಗಿದೆ.

ದಂಡ ರಹಿತ ಶುಲ್ಕ ಪಾವತಿಗೆ ಸೆ.2 ಕೊನೆಯ ದಿನ. ₹200 ದಂಡದೊಂದಿಗೆ ಸೆ.4ರೊಳಗೆ, ₹1000 ದಂಡದೊಂದಿಗೆ ಸೆ.7ರೊಳಗೆ ಪರೀಕ್ಷಾ ಶುಲ್ಕ ಪಾವತಿಸಬೇಕು ಎಂದು ಪ್ರಕಟಣೆ ತಿಳಿಸಿದೆ.

ಮಾಹಿತಿಗೆ, ವಿಶ್ವವಿದ್ಯಾಲಯದ ಅಧಿಕೃತ ವೆಬ್‌ಸೈಟ್ www.bangaloreuniversity.ac.in ಸಂಪರ್ಕಿಸಬಹುದು.

SBI STATE BANK OF INDIA

LOCAL HEAD OFFICE No. 65, St Marks' Road, Bengaluru – 560 001

NOTICE INVITING TENDER

Notice is hereby given inviting tenders for installation and maintenance of LED Advertisement Display boards for promoting our various products and services at selected offices and branches located in prominent areas across Bengaluru City and District Headquarters on monthly hiring basis. Competent agencies may send their quotations/tenders by courier/post to: Asst General Manager (Marketing & Communication), State Bank of India, Local Head office, **First Floor, Annexe Building, PR Department, No. 65, St Marks Road, Bengaluru 560001.**
Last date for receipt of quotations: 4th September 2021.
In case of any queries, please contact
Assistant General Manager (Marketing & Communication),
Contact no: 080-25943103. "email id: agmprcsb.lhoban@sbi.co.in".

-Sd- AGM (M&C)

ಹಟ್ಟಿ ಚಿನ್ನದ ಗಣಿ ಕಂಪನಿ ನಿಯಮಿತ

(ಕರ್ನಾಟಕ ಸರ್ಕಾರದ ಅಧೀನ ಉದ್ದಿಮೆ)

ಹಟ್ಟಿ - 584 115, ಲಿಂಗಸುಗೂರು-ತಾ., ರಾಯಚೂರು ಜಿಲ್ಲೆ , ಕರ್ನಾಟಕ. ದೂರವಾಣಿ: 08537-275740 / 276339/275463, ಇ-ಮೇಲ್: material276339@gmail.com ವೆಬ್‌ಸೈಟ್: www.huttigold.co.in

ಟೆಂಡರ್ ಪ್ರಕಟಣೆ ನಂ.25/2021-22 ದಿನಾಂಕ: 26.08.2021

(ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ ಮಾತ್ರ)

ಪ್ರಭಾರಿ ಉಪ ಪ್ರಧಾನ ವ್ಯವಸ್ಥಾಪಕರು(ಸರಕು) ಇವರಿಂದ ಈ ಕೆಳಗಿನ ಟೆಂಡರ್‌ಗಳನ್ನು ಇ-ಪ್ರೋಕ್ಯೂರ್‌ಮೆಂಟ್ ಮುಖಾಂತರ ತಯಾರಕರು ಮತ್ತು ಪರಿಗಣಿಸಲ್ಪಟ್ಟ ವಿತರಕರಿಂದ ಆಹ್ವಾನಿಸಲಾಗಿದೆ.

ಕ್ರ. ಸಂ.	ಸಾಮಗ್ರಿ ವಿವರ	ಪ್ರಮಾಣ	ಅಂದಾಜು ವೆಚ್ಚ (ರೂ.ಲಕ್ಷಗಳಲ್ಲಿ)
1	ಕಂಪ್ರೆಸ್ಡ್ ಏರ್‌ಫ್ಲೋ ಮೀಟರ್ ಪೂರೈಕೆ **HGML/2021-22/IND3139**	2 ಸಂಖ್ಯೆ	8.99
2	ನಾನ್ ಎಲೆಕ್ಟ್ರಿಕಲ್ ಡೆಟೋನೇಟರ್ಸ್ ಪೂರೈಕೆ **HGML/2021-22/IND3097/call-2**	ಪಟ್ಟಿಯ ಪ್ರಕಾರ	12.52
3	12.5 HP,110VDC ಟ್ರ್ಯಾಕ್ಷನ್ ಬ್ಯಾಟರಿ ಪೂರೈಕೆ **HGML/2021-22/IND3143**	4 ಸಂಖ್ಯೆ	7.75
4	48 VDC ಟ್ರ್ಯಾಕ್ಷನ್ ಬ್ಯಾಟರಿ ಪೂರೈಕೆ **HGML/2021-22/IND3126**	8 ಸೆಟ್ಸ್	19.35
5	MS ಚೆಕರ್ಡ್ ಪ್ಲೇಟ್ ಪೂರೈಕೆ **HGML/2021-22/IND3148**	30,000 ಕೆ.ಜಿ	28. 50
6	HT ವ್ಯಾಕ್ಯುಮ್ ಸರ್ಕಿಟ್ ಬ್ರೇಕರ್ ಪೆನೆಲ್ಸ್ ಪೂರೈಕೆ **HGML/2021-22/IND3147**	01 ಸಂಖ್ಯೆ	14.10
7	ವಿವಿಧ ಅಳತೆಯ HDPE ಪೈಪುಗಳ ಪೂರೈಕೆ **HGML/2021-22/IND3133**.	ಪಟ್ಟಿಯ ಪ್ರಕಾರ	72.15
8	ರೆಸಿಡ್ಯುಯಲ್ ಕರೆಂಟ್ ಸರ್ಕಿಟ್ ಬ್ರೇಕರ್ ಪೂರೈಕೆ (RCCB) **HGML/2021-22/IND3134**	500 ಸಂಖ್ಯೆ	8.03

(1) ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ: **10.09.2021 ಸಂಜೆ 4.00 ಗಂಟೆಗೆ. (2)** ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ: **13.09.2021 ಬೆಳಿಗ್ಗೆ 10.00 ಗಂಟೆಗೆ.** ಟೆಂಡರ್ ನಮೂನೆಗಳನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್: **https://www.eproc.karnataka.gov.in** ನಲ್ಲಿ ನೋಡಬಹುದು ಹಾಗೂ ಡೌನ್‌ಲೋಡ್ ಮಾಡಿಕೊಳ್ಳಬಹುದು. ಟೆಂಡರ್ ಪ್ರೋಸೆಸ್ಸಿಂಗ್ ಫೀ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಟೆಂಡರ್ ನಿಯಮದ ಅನುಸಾರ. ಹೆಚ್ಚಿನ ಮಾಹಿತಿಗಾಗಿ ಖರೀದಿ ಕಾರ್ಯಾಲಯದ ಕೆಲಸದ ವೇಳೆಯಲ್ಲಿ ಸಂಪರ್ಕಿಸಬಹುದು.

ಸಹಿ/- ಪ್ರಭಾರಿ ಉಪ ಪ್ರಧಾನ ವ್ಯವಸ್ಥಾಪಕರು (ಸರಕು)

ಭಾರತದ ಅತಿ ಹೆಚ್ಚು ಚಿನ್ನದ ಉತ್ಪಾದಕರು

ಗುಜರಾತ್ ಪೆಟ್ರೊಸಿಂಥೀಸ್ ಲಿಮಿಟೆಡ್

ನೊಂದಾಯಿತ ಕಚೇರಿ: ನಂ.24, 2ನೇ ಮುಖ್ಯರಸ್ತೆ, ದೊಡ್ಡನೆಕ್ಕುಂದಿ ಕೈಗಾರಿಕಾ ಪ್ರದೇಶ, ಹಂತ 1, ಮಹದೇವಪುರ ಅಂಚೆ, ಬೆಂಗಳೂರು-560048 ಫೋನ್: 91-80-28524133 ಫ್ಯಾಕ್ಸ್: 91-80-28524171 ಸಿಐಎನ್: L23209KA1977PLC043357
ಇಮೇಲ್: info@gpl.in, secretarial@gujaratpetrosynthese.com ವೆಬ್‌ಸೈಟ್: www.gpl.in

44 ನೇ ವಾರ್ಷಿಕ ಮಹಾಸಭೆ ಸೂಚನೆ ಮತ್ತು ಇ-ವೋಟಿಂಗ್ ಕುರಿತ ಮಾಹಿತಿ

[illegible]

ಎ)	ರಿಮೋಟ್ ಇ-ವೋಟಿಂಗ್ ಆರಂಭವಾಗುವ ದಿನ, ದಿನಾಂಕ ಮತ್ತು ಸಮಯ	ಮಂಗಳವಾರ, ಸೆಪ್ಟೆಂಬರ್ 14, 2021 ರಂದು ಬೆಳಿಗ್ಗೆ 09:00 ಗಂಟೆ
ಬಿ)	ರಿಮೋಟ್ ಇ-ವೋಟಿಂಗ್ ಮುಕ್ತಾಯವಾಗುವ ದಿನ, ದಿನಾಂಕ ಮತ್ತು ಸಮಯ	ಗುರುವಾರ, ಸೆಪ್ಟೆಂಬರ್ 16, 2021 ರಂದು ಸಂಜೆ 05:00 ಗಂಟೆ
ಸಿ)	ಕಟ್-ಆಫ್ ದಿನಾಂಕ	ಶುಕ್ರವಾರ, ಸೆಪ್ಟೆಂಬರ್ 10, 2021.
ಡಿ)	[illegible]	
ಇ)	[illegible]	
ಎಫ್)	[illegible]	

[illegible]

ಇಮೇಲ್ ವಿಳಾಸಗಳ ರಿಜಿಸ್ಟರ್/ಅಪ್‌ಡೇಟ್ ಮಾಡಿಕೊಳ್ಳುವ ವಿಧಾನ	ಎಜಿಎಂ‌ನಲ್ಲಿ ಹಾಜರಾಗುವ ವಿಧಾನ
[illegible] investor@bigshareonline.com [illegible]	[illegible] www.evotingindia.com [illegible]

[illegible] investor@bigshareonline.com [illegible] secretarial@gujaratpetrosynthese.com [illegible]

ದಿನಾಂಕ : ಆಗಸ್ಟ್ 25, 2021
ಸ್ಥಳ : ಮುಂಬೈ

ಗುಜರಾತ್ ಪೆಟ್ರೊಸಿಂಥೀಸ್ ಲಿಮಿಟೆಡ್ ಪರವಾಗಿ
ಸಹಿ/- ಊರ್ಮಿ ಎನ್. ಪ್ರಸಾದ್
ಜಂಟಿ ವ್ಯವಸ್ಥಾಪಕ ನಿರ್ದೇಶಕರು

ರಾಘವೇಶ್ವರ ಭಾರತಿ ಸ್ವಾಮೀಜಿ ಅಭಿಮತ

'ಸಮಾಜಕ್ಕಾಗಿ ಮಾಡುವ ಸಮರ್ಪಣೆ ಔದಾರ್ಯವಲ್ಲ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಮಾಜಕ್ಕಾಗಿ ಮಾಡುವ ಸಮರ್ಪಣೆ ಅಥವಾ ಕೆಲಸ ಔದಾರ್ಯವಲ್ಲ, ಬದಲಿಗೆ ಅದು ಕರ್ತವ್ಯ' ಎಂದು ರಾಮಚಂದ್ರಾಪುರ ಮಠದ ರಾಘವೇಶ್ವರ ಭಾರತಿ ಸ್ವಾಮೀಜಿ ತಿಳಿಸಿದರು.

ಗಿರಿನಗರದ ಶಾಖಾ ಮಠದಲ್ಲಿ 'ವಿಶ್ವವಿದ್ಯಾ-ಚಾತುರ್ಮಾಸ್ಯ' ಕೈಗೊಂಡಿರುವ ಅವರು, ಅಖಿಲ ಹವ್ಯಕ ಮಹಾಸಭೆಯಿಂದ ಬುಧವಾರ ಗುರುಭಿಕ್ಷಾ ಸೇವೆ ಸ್ವೀಕರಿಸಿ ಮಾತನಾಡಿದರು.



ರಾಘವೇಶ್ವರ ಭಾರತಿ ಸ್ವಾಮೀಜಿ

'ಮನುಷ್ಯ ಸಂಘಜೀವಿಯಾಗಿದ್ದು, ಸಮಾಜದಲ್ಲಿ ಪರಸ್ಪರ ಸಹಕಾರವಿಲ್ಲದೆ ಜೀವನ ನಡೆಸಲು ಸಾಧ್ಯವಿಲ್ಲ. ಸಂಘಟನೆ ಹಾಗೂ ಸಮಾಜಕ್ಕೆ ಇರುವೆಗಳು ಪರಮಾದರ್ಶವಾಗಿವೆ. ಅವುಗಳಲ್ಲಿರುವ ಶಿಸ್ತು, ಪರಿಶ್ರಮ ಹಾಗೂ ಸಹಕಾರ ಗುಣಗಳನ್ನು ನೋಡಿ ಕಲಿಯಬೇಕು. ಇರುವೆ ಚಿಕ್ಕದಾದರೂ ಅದರ ಜೀವನ ಆದರ್ಶ ದೊಡ್ಡದು' ಎಂದರು.

ಹವ್ಯಕ ಮಹಾಸಭೆಯ ಅಧ್ಯಕ್ಷ ಡಾ. ಗಿರಿಧರ ಕಜೆ ಮಾತನಾಡಿ, 'ಮಹಾಸಭೆಗೆ ಐಎಸ್‌ಒ ಪ್ರಮಾಣಪತ್ರ ದೊರೆತಿದೆ. ಪಾರದರ್ಶಕ ಹಾಗೂ ಸುವ್ಯವಸ್ಥಿತ ಆಡಳಿತಕ್ಕೆ ಮನ್ನಣೆ ದೊರೆತಿದೆ. ಸಮುದಾಯದ ಹಿರಿಮೆ ಹಾಗೂ ನವ ಸಂಸ್ಕೃತಿಗೆ ಮಹಾಸಭೆಯ ವತಿಯಿಂದ ಅಗತ್ಯ ಸಹಕಾರ ನೀಡಲಾಗುತ್ತಿದೆ' ಎಂದರು.

ಮಹಾಸಭೆಯ ಕೋಶಾಧಿಕಾರಿ ಕೃಷ್ಣಮೂರ್ತಿ ಭಟ್ ಯಲಹಂಕ, ಉಪಾಧ್ಯಕ್ಷರಾದ ಶ್ರೀಧರ ಭಟ್ ಕೆಕ್ಕಾರು, ಕಾರ್ಯದರ್ಶಿಗಳಾದ ಪ್ರಶಾಂತ್ ಭಟ್ ಯಲ್ಲಾಪುರ, ಶ್ರೀಧರ ಭಟ್ ಸಾಲೆಕೊಪ್ಪ ಇದ್ದರು.

ಗೊ.ರು. ಚನ್ನಬಸಪ್ಪಗೆ ರಾಮಕೃಷ್ಣ ಹೆಗಡೆ ಪ್ರಶಸ್ತಿ

ಬೆಂಗಳೂರು: ಭಾರತ ಯಾತ್ರಾ ಕೇಂದ್ರ ನೀಡುವ 'ರಾಮಕೃಷ್ಣ ಹೆಗಡೆ ಪ್ರಶಸ್ತಿ'ಗೆ ಹಿರಿಯ ವಿದ್ವಾಂಸ ಗೊ.ರು. ಚನ್ನಬಸಪ್ಪ ಆಯ್ಕೆಯಾಗಿದ್ದಾರೆ.

ಮಾಜಿ ಸಭಾಪತಿ ಬಿ.ಎಲ್. ಶಂಕರ್ ನೇತೃತ್ವದ ಸಮಿತಿಯು ಈ ಆಯ್ಕೆ ಮಾಡಿದೆ. ಪ್ರಶಸ್ತಿಯು ₹ 10 ಸಾವಿರ ನಗದು ಒಳಗೊಂಡಿದೆ. ಗ್ರಾಮೀಣ ಅಭಿವೃದ್ಧಿಗಾಗಿ ಕೆಲಸ ಮಾಡಿರುವ ಹಾಗೂ ಗಾಂಧಿತತ್ವದಲ್ಲಿ ನಂಬಿಕೆಯಿರುವ ಸಾಧಕರಿಗೆ ಈ ಪ್ರಶಸ್ತಿಯನ್ನು 2012ರಿಂದ ನೀಡಲಾಗುತ್ತಿದೆ.

ಪ್ರಶಸ್ತಿ ಪ್ರದಾನ ಕಾರ್ಯಕ್ರಮವನ್ನು ಇದೇ 29ರಂದು ಬೆಳಿಗ್ಗೆ 11 ಗಂಟೆಗೆ ಕರ್ನಾಟಕ ಚಿತ್ರಕಲಾ ಪರಿಷತ್ತಿನಲ್ಲಿ ಹಮ್ಮಿಕೊಳ್ಳಲಾಗಿದೆ. ಕಾರ್ಯಕ್ರಮವನ್ನು ಬಿ.ಎಲ್. ಶಂಕರ್ ಉದ್ಘಾಟಿಸಲಿದ್ದಾರೆ. ಕೆ.ಆರ್. ರಮೇಶ್ ಕುಮಾರ್ ಪ್ರಶಸ್ತಿ ಪ್ರದಾನ ಮಾಡಲಿದ್ದು, ರಾಷ್ಟ್ರೀಯ ನವನಿರ್ಮಾಣ ವೇದಿಕೆಯ ಅಧ್ಯಕ್ಷ ಮಮತಾ ನಿಚ್ಚಾನಿ ಅಧ್ಯಕ್ಷತೆ ವಹಿಸಲಿದ್ದಾರೆ ಎಂದು ಕೇಂದ್ರದ ಪ್ರಧಾನ ಕಾರ್ಯದರ್ಶಿ ಕೆ.ವಿ. ನಾಗರಾಜಮೂರ್ತಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಗೊ.ರು. ಚನ್ನಬಸಪ್ಪ

'ಗೂಗಲ್ ಮ್ಯಾಪ್: ನಗರಗಳ ಹೆಸರು ತಪ್ಪಾಗಿ ದಾಖಲು'

ಬೆಂಗಳೂರು: 'ಗೂಗಲ್ ಮ್ಯಾಪ್‌ನಲ್ಲಿ ರಾಜ್ಯದ ಬಹಳಷ್ಟು ಗ್ರಾಮ ಮತ್ತು ನಗರಗಳ ಹೆಸರನ್ನು ತಪ್ಪಾಗಿ ದಾಖಲಿಸಲಾಗಿದೆ. ಕೂಡಲೇ ಈ ದೋಷವನ್ನು ಸರಿಪಡಿಸಬೇಕು' ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರ ಆಗ್ರಹಿಸಿದೆ.

ಈ ಬಗ್ಗೆ ಪ್ರಾಧಿಕಾರದ ಅಧ್ಯಕ್ಷ ಟಿ.ಎಸ್. ನಾಗಾಭರಣ ಅವರು ಗೂಗಲ್ ಇಂಡಿಯಾಕ್ಕೆ ಪತ್ರ ಬರೆದಿದ್ದಾರೆ.

'ಪ್ರವಾಸಿಗರಿಗೆ ಗೂಗಲ್ ಮ್ಯಾಪ್ ಸಹಕಾರಿಯಾಗಿದೆ. ಗೊತ್ತಿರದ ಪ್ರದೇಶಗಳಿಗೆ ಹೋದ ಸಂದರ್ಭದಲ್ಲಿ ವ್ಯಕ್ತಿಗಳನ್ನು ವಿಚಾರಿಸುವ ಬದಲು ಗೂಗಲ್ ಮ್ಯಾಪ್ ಬಳಸುತ್ತಾರೆ. ಹಾಗಾಗಿ, ರಾಜ್ಯದ ನಗರಗಳ ಹೆಸರನ್ನು ಕೂಡಲೇ ಸರಿಪಡಿಸಬೇಕು. ಈ ಸಂಬಂಧ ಅಗತ್ಯ ಸಹಾಯವನ್ನು ಒದಗಿಸಲು ಸಿದ್ಧವಿದ್ದೇವೆ' ಎಂದು ಪತ್ರದಲ್ಲಿ ತಿಳಿಸಿದ್ದಾರೆ.

PUBLIC NOTICE

Our clients intend to develop the below mentioned properties together all situated at **Tubarahalli Village, Varthur Hobli, Bangalore East Taluk,**

The property bearing BBMP Khatha No.700, Old Sy.No.54, New Municipal No.700, residentially converted land in Survey Number 54, measuring 2 Acres 17 Guntas (converted vide official memorandum bearing No.ALN.(EVH)SR 104/2008-2009, dated 16.10.2009, passed by the Special Deputy Commissioner Bangalore) bounded on -
East by : Land bearing Sy.No.40
West by : Land bearing Sy.No.55
North by : Land bearing Sy.No.37 & 38
South by : Remaining portion of Sy.No.54

And the Property bearing BBMP Khatha No.699, Old Sy.No.40/1, New Municipal No.699, residentially converted land in Survey Number 40/1, measuring 30 Guntas (converted vide official memorandum bearing No.ALN.(EVH)SR 104/2008-2009, dated 16.10.2009, passed by the Special Deputy Commissioner Bangalore), bounded on -
East by : Remaining portion of Sy.No.40/1
West by : Land bearing Sy.No.54
North by : Land bearing Sy.No.38
South by : Land bearing Sy.No.40/2

And the Residentially converted land in Survey Number 40/2, measuring 13 Guntas (converted vide official memorandum bearing No.ALN.(EVH)SR 104/2008-2009, dated 16.10.2009, passed by the Special Deputy Commissioner Bangalore).
East by : Remaining portion of Sy.No.40/2
West by : Land bearing Sy.No.54
North by : Remaining portion of Sy.No.40/2
South by : Land bearing Sy.No.42

From its owner **Sri.M Krishna Reddy,** and Agreement Holders Col.(Retd) V.Sridharan, Smt.Chitra G Baliga

And the property bearing BBMP Khatha No.702, Old Sy.No. 54, New Municipal No.702,residentially converted Survey Number 54, measuring 2 Acres 2 Guntas, (Converted vide Official Memorandum bearing No.ALN (EVH)SR 103/2008-2009, dated 16.10.2009, issued by the office of Special Deputy Commissioner, Bangalore District, Bangalore), and bounded on the:
East by : Land bearing Sy.No.40
West by : Land bearing Sy.No.55
North by : Remaining portion of Sy.No.54;
South by : Remaining portion of Sy.No.54

from its owners **Sri.Shankar.Y** son of late.Yellappa and his family members,

And the portion of agricultural land bearing Survey Number 55/1 measuring 16 Guntas and bounded on the :
East by : Thoti Inamti land
West by : Land belonging to Sri.Patel Hanumantha Reddy
North by : Remaining portion of same Survey Number belonging to Sri. V.Srinivasa
South by : Remaining portion of same Survey Number belonging to Sri.V.Nagaraj

From its owners **Sri.D.Ramanna** son of Sri.Veerachari and his family members And the portion of agricultural land bearing Survey Number 55/1 measuring 17 Guntas and bounded on the:
East by : Thoti Inamti land
West by : Land belonging to Sri.Patel Hanumantha Reddy
North by : Remaining portion of same Survey Number belonging to Sri.D.Ramanna
South by : Land belonging to Sri.Patel Hanumantha Reddy

From its owners **Smt.Vasantha.M.P** wife of Late.Sri.V.Nagaraj and her children

Persons having any right over the said properties may lodge their objections / claims with documentary evidence within **7 days** from the date of this publication, to the undersigned.

K.V. Narendra & Associates, Advocates
No.557, 2nd Floor, 9th A Main, 1st stage Indiranagar, Bangalore - 560 038
9591067392, 9945109229, 9481868801

ಸಂಕ್ಷಿಪ್ತ ಸುದ್ದಿ

ಡಿಪ್ಲೊಮಾ ಪ್ರಿಂಟಿಂಗ್ ಟೆಕ್ನಾಲಜಿ ಕೋರ್ಸ್‌ಗೆ ಅರ್ಜಿ ಆಹ್ವಾನ

ಅರಮನೆ ರಸ್ತೆಯಲ್ಲಿರುವ ಸರ್ಕಾರಿ ಮುದ್ರಣ ತಂತ್ರಜ್ಞಾನ ಸಂಸ್ಥೆಯು ಡಿಪ್ಲೊಮಾ ಪ್ರಿಂಟಿಂಗ್ ಟೆಕ್ನಾಲಜಿ ಕೋರ್ಸ್ ಪ್ರವೇಶಕ್ಕೆ ಅರ್ಜಿ ಆಹ್ವಾನಿಸಿದೆ.

ಎಸ್ಸೆಸ್ಸೆಲ್ಸಿ ಅಥವಾ ತತ್ಸಮಾನ ಪರೀಕ್ಷೆಯಲ್ಲಿ ಶೇ 35 ಅಂಕ ಗಳಿಸಿ ಉತ್ತೀರ್ಣರಾಗಿರುವ, ಕರ್ನಾಟಕದಲ್ಲಿ ವಾಸಿಸುತ್ತಿರುವ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಲು ಅರ್ಹರಾಗಿದ್ದಾರೆ.

ಆಸಕ್ತ ವಿದ್ಯಾರ್ಥಿಗಳು ಮೂಲ ದಾಖಲಾತಿಗಳೊಂದಿಗೆ ಕಾಲೇಜಿಗೆ ನೇರವಾಗಿ ಭೇಟಿ ನೀಡಿ ಪ್ರವೇಶ ಪಡೆಯಬಹುದು ಎಂದು ಪ್ರಕಟಣೆ ತಿಳಿಸಿದೆ.

ಹೆಚ್ಚಿನ ಮಾಹಿತಿಗೆ 080-22253914 ಅಥವಾ 9448315326 ಗೆ ಸಂಪರ್ಕಿಸಬಹುದು.

ಗ್ರಂಥಾಲಯ ಡಿಪ್ಲೊಮಾ ಪ್ರವೇಶ

ನಗರದ ಎಸ್.ಜೆ.ಪಾಲಿಟೆಕ್ನಿಕ್ ಆವರಣದಲ್ಲಿರುವ ಸರ್ಕಾರಿ ಮಹಿಳಾ ಪಾಲಿಟೆಕ್ನಿಕ್‌ನಲ್ಲಿ ಎರಡು ವರ್ಷದ ಗ್ರಂಥಾಲಯ ವಿಜ್ಞಾನ ಹಾಗೂ ಮಾಹಿತಿ ನಿರ್ವಹಣಾ ಡಿಪ್ಲೊಮಾ ಕೋರ್ಸ್ ಪ್ರವೇಶ ಪ್ರಕ್ರಿಯೆ ಆರಂಭವಾಗಿದೆ.

ಎಸ್‌ಎಸ್‌ಎಲ್‌ಸಿ ಪಾಸಾದವರು ಮೂರು ವರ್ಷದ ಈ ಕೋರ್ಸ್ ಪ್ರವೇಶಕ್ಕೆ ಅರ್ಹರು. ಈ ಕ್ಷೇತ್ರದಲ್ಲಿ ಹೆಚ್ಚಿನ ಉದ್ಯೋಗಾವಕಾಶಗಳು ಲಭ್ಯವಿದ್ದು, ಕೋರ್ಸ್ ಸೇರಲು ಬಯಸುವವರು ಅಗತ್ಯ ದಾಖಲೆಗಳೊಂದಿಗೆ ಪಾಲಿಟೆಕ್ನಿಕ್‌ನಲ್ಲಿ ನೇರವಾಗಿ ಈ ತಿಂಗಳ 31ರ ಒಳಗೆ ಸಂಪರ್ಕಿಸಬಹುದು. ಸಂಪರ್ಕ ಸಂಖ್ಯೆ: 9886394884, 9845285112, 9964420060

ನಿಧನ ವಾರ್ತೆ

ರಾಮಚಂದ್ರರಾವ್

ಬೆಂಗಳೂರು: ಪತ್ರಕರ್ತ ಆರ್. ರಾಮಚಂದ್ರರಾವ್ (73) ಅವರು ಗವಿಪುರದಲ್ಲಿರುವ ತಮ್ಮ ಮನೆಯಲ್ಲಿ ಬುಧವಾರ ಮಧ್ಯಾಹ್ನ ನಿಧನರಾದರು.



ಅವರಿಗೆ ಪತ್ನಿ, ಪುತ್ರಿ ಹಾಗೂ ಇಬ್ಬರು ಪುತ್ರರು ಇದ್ದಾರೆ.

ಬಾಣಸವಾಡಿ ಠಾಣೆ ಪೊಲೀಸರ ಕಾರ್ಯಾಚರಣೆ • ₹4 ಕೋಟಿ ಮೌಲ್ಯದ ಆಭರಣ ಜಪ್ತಿ

ಚಿನ್ನಾಭರಣ ಕಳ್ಳರನ್ನು ಹಿಡಿದುಕೊಟ್ಟ 'ಎಸ್‌ಎಂಎಸ್'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಾಣಸವಾಡಿ ಠಾಣೆಯ ವ್ಯಾಪ್ತಿಯಲ್ಲಿರುವ ಮುತ್ತೂಟ್ ಫೈನಾನ್ಸ್ ಶಾಖೆ ಕಚೇರಿಯಲ್ಲಿ ಕಳ್ಳತನಕ್ಕೆ ಯತ್ನಿಸಿದ್ದ ಇಬ್ಬರು ಆರೋಪಿಗಳನ್ನು ಪೊಲೀಸರು ಬಂಧಿಸಿದ್ದು, ಅವರಿಂದ ₹ 4 ಕೋಟಿ ಮೌಲ್ಯದ ಚಿನ್ನಾಭರಣ ಜಪ್ತಿ ಮಾಡಿದ್ದಾರೆ.

'ನೇಪಾಳದ ರೋಹನ್ (28) ಹಾಗೂ ಅಗ್ರಿ (27) ಬಂಧಿತರು. ಕೆಲಸ ಹುಡುಕಿಕೊಂಡು ನಗರಕ್ಕೆ ಬಂದಿದ್ದ ಆರೋಪಿಗಳು, ಪಾರ್ಟ್‌ಮೆಂಟ್ ಸಮುಚ್ಚಯವೊಂದರಲ್ಲಿ ಭದ್ರತಾ ಸಿಬ್ಬಂದಿಯಾಗಿದ್ದರು' ಎಂದು ಪೊಲೀಸರು ಹೇಳಿದರು.

'ಸುಬ್ಬಯ್ಯನಪಾಳ್ಯದ ಬಹುಮಹಡಿ ಕಟ್ಟಡದ ಮೊದಲ ಮಹಡಿಯಲ್ಲಿ ಮುತ್ತೂಟ್ ಫೈನಾನ್ಸ್ ಶಾಖೆ ಕಚೇರಿಯಿದೆ. ಲಾಕರ್‌ನಲ್ಲಿ ಅಪಾರ ಪ್ರಮಾಣದ ಚಿನ್ನಾಭರಣ ಇರಿಸಲಾಗಿತ್ತು. ಕಚೇರಿಯ ಬಳಿ ಓಡಾಡಿ ಮಾಹಿತಿ ಕಲೆಹಾಕಿದ್ದ ಆರೋಪಿಗಳು, ಒಳನುಗ್ಗಿ ಚಿನ್ನಾಭರಣ ಕಳವು ಮಾಡಲು ಸಂಚು ರೂಪಿಸಿದ್ದರು.'

'ಆಗಸ್ಟ್ 21ರಂದು ರಾತ್ರಿ ಕಚೇರಿಯೊಳಗೆ ನುಗ್ಗಿದ್ದ ಆರೋಪಿಗಳು, ಚಿನ್ನಾಭರಣವಿದ್ದ ಸೇಫ್ಟಿ ಲಾಕರ್ ತೆರೆಯಲು ಯತ್ನಿಸಿದ್ದರು. ಅದೇ ಸಂದರ್ಭದಲ್ಲಿ ಅಲಾರಾಂ ಮೊಳಗಿತ್ತು. ಕಚೇರಿಯ ವ್ಯವಸ್ಥಾಪಕರ ಮೊಬೈಲ್‌ಗೆ ಎಚ್ಚರಿಕೆ 'ಎಸ್‌ಎಂಎಸ್' ಬಂದಿತ್ತು' ಎಂದೂ ಪೊಲೀಸರು ತಿಳಿಸಿದರು.

'ಯಾರೋ ಕಚೇರಿಗೆ ನುಗ್ಗಿದ್ದಾರೆಂಬುದು ಖಾತ್ರಿಯಾಗುತ್ತಿದ್ದಂತೆ ವ್ಯವಸ್ಥಾಪಕರು ಠಾಣೆಗೆ ಮಾಹಿತಿ ನೀಡಿದ್ದರು. ಗಸ್ತಿನಲ್ಲಿದ್ದ ಸಿಬ್ಬಂದಿ, ಸ್ಥಳಕ್ಕೆ ಹೋಗಿದ್ದರು. ಆರೋಪಿಗಳು ಕಚೇರಿಯೊಳಗೆ ಇದ್ದರು. ಇನ್‌ಸ್ಪೆಕ್ಟರ್ ಹಾಗೂ ಹೆಚ್ಚುವರಿ ಸಿಬ್ಬಂದಿ, ಕಚೇರಿಯೊಳಗೆ ಪ್ರವೇಶಿಸಿ ಆರೋಪಿಗಳನ್ನು ವಶಕ್ಕೆ ಪಡೆದರು' ಎಂದೂ ವಿವರಿಸಿದರು.

'ಆರೋಪಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿ ಹೆಚ್ಚಿನ ವಿಚಾರಣೆಗಾಗಿ ಅವರನ್ನು ಕಸ್ಟಡಿಗೆ ಪಡೆಯಲಾಗಿದೆ' ಎಂದೂ ಹೇಳಿದರು.

'ಮೂಟೆಯಲ್ಲಿದ್ದ ಚಿನ್ನಾಭರಣ'

'ಲಾಕರ್‌ನಲ್ಲಿದ್ದ ₹ 4 ಕೋಟಿ ಮೌಲ್ಯದ ಚಿನ್ನಾಭರಣಗಳನ್ನು ಮೂಟೆಯಲ್ಲಿ ತುಂಬಿಕೊಂಡಿದ್ದ ಆರೋಪಿಗಳು, ಹೊತ್ತುಕೊಂಡು ಹೋಗಲು ಸಿದ್ಧವಾಗಿದ್ದರು. ಅಷ್ಟರಲ್ಲೇ ಅವರನ್ನು ಬಂಧಿಸಲಾಯಿತು' ಎಂದು ಪೊಲೀಸರು ಹೇಳಿದರು.

'ಲಾಕ್‌ಡೌನ್‌ನಿಂದಾಗಿ ಕೆಲ ತಿಂಗಳು ಆರೋಪಿಗಳ ಕೆಲಸ ಹೋಗಿತ್ತು. ಇತ್ತೀಚೆಗಷ್ಟೇ ಕೆಲಸ ಸಿಕ್ಕಿತ್ತು. ಹಲವರ ಬಳಿ ಸಾಲ ಮಾಡಿದ್ದ ಇಬ್ಬರು, ಅದನ್ನು ತೀರಿಸಿರಲಿಲ್ಲ. ಸಾಲಗಾರರ ಕಾಟ ಹೆಚ್ಚಾಗಿತ್ತು. ಅದೇ ಕಾರಣಕ್ಕೆ ಆರೋಪಿಗಳು, ಚಿನ್ನಾಭರಣ ಕದಿಯಲು ಸಂಚು ರೂಪಿಸಿದ್ದರು' ಎಂದೂ ಅವರು ತಿಳಿಸಿದರು.


ಅಪರಾಧ ಸುದ್ದಿ

ಸರ ಕಳವು; ಮೂವರು ಯುವಕರ ಬಂಧನ

ಪಶ್ಚಿಮ ವಿಭಾಗ ವ್ಯಾಪ್ತಿಯಲ್ಲಿ ಮಹಿಳೆಯರು ಹಾಗೂ ವೃದ್ಧೆಯರ ಚಿನ್ನದ ಸರ ಕಳವು ಮಾಡುತ್ತಿದ್ದ ಆರೋಪದಡಿ ಮೂವರನ್ನು ವಿಜಯನಗರ ಪೊಲೀಸರು ಬಂಧಿಸಿದ್ದಾರೆ.

'ನಿತಿನ್, ರಿಯಾಜ್ ಅಹ್ಮದ್ ಮೀರಾ ಹಾಗೂ ಕಮಲ್ ಬಂಧಿತರು. ಅವರಿಂದ ₹ 1 ಲಕ್ಷ ಮೌಲ್ಯದ 32 ಗ್ರಾಂ ಚಿನ್ನಾಭರಣ ಹಾಗೂ ಕೃತ್ಯಕ್ಕೆ ಬಳಸಿದ್ದ ಕಪ್ಪು ಬಣ್ಣದ ಪಲ್ಸರ್ ಬೈಕ್ ಜಪ್ತಿ ಮಾಡಲಾಗಿದೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

'ವಿಜಯನಗರ, ಮಾಗಡಿ ರಸ್ತೆ, ಕೆಂಗೇರಿ, ಕಾಮಾಕ್ಷಿಪಾಳ್ಯ ಹಾಗೂ ತಿಲಕನಗರ ಠಾಣೆಗಳ ವ್ಯಾಪ್ತಿಯಲ್ಲಿ ಆರೋಪಿಗಳು ಕೃತ್ಯ ಎಸಗಿದ್ದರು. ಮಹಿಳೆಯರು, ವೃದ್ಧೆಯರನ್ನು ಹಿಂಬಾಲಿಸುತ್ತಿದ್ದ ಆರೋಪಿಗಳು ಸರ ಕಳವು ಮಾಡಿ ಪರಾರಿಯಾಗುತ್ತಿದ್ದರು. ಕೆಲವರನ್ನು ತಳ್ಳಿ ಗಾಯಗೊಳಿಸಿದ್ದರು.'



ಆರೋಪಿಗಳಿಂದ ಜಪ್ತಿ ಮಾಡಲಾದ ಚಿನ್ನಾಭರಣ

'ಆರೋಪಿಗಳ ಬಗ್ಗೆ ವಿಜಯನಗರ ಪೊಲೀಸರಿಗೆ ಇತ್ತೀಚೆಗೆ ಸುಳಿವು ಸಿಕ್ಕಿತ್ತು. ಅದರನ್ವಯ ಕಾರ್ಯಾಚರಣೆ ನಡೆಸಿದ ಪೊಲೀಸರು ಆರೋಪಿಗಳನ್ನ ಬಂಧಿಸಿದ್ದಾರೆ' ಎಂದೂ ತಿಳಿಸಿದರು.



ಬ್ಯಾಡರಹಳ್ಳಿ ಠಾಣೆ ವ್ಯಾಪ್ತಿಯಲ್ಲಿ ಪತ್ತೆಯಾದ ಹೆಣ್ಣು ಶಿಶುವನ್ನು ಸ್ಥಳೀಯ ಮಹಿಳೆಯೊಬ್ಬರು ಎತ್ತಿಕೊಂಡಿದ್ದರು

ಕಸದ ರಾಶಿ ಬಳಿ ಹೆಣ್ಣು ಶಿಶು ಪತ್ತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬ್ಯಾಡರಹಳ್ಳಿ ಠಾಣೆಯ ವ್ಯಾಪ್ತಿಯಲ್ಲಿ ಮೂರು ದಿನಗಳ ಹೆಣ್ಣು ಶಿಶು ಪತ್ತೆಯಾಗಿದ್ದು, ಮಗುವನ್ನು ಚಿಕಿತ್ಸೆಗಾಗಿ ವಾಣಿ ವಿಲಾಸ ಆಸ್ಪತ್ರೆಗೆ ದಾಖಲಿಸಲಾಗಿದೆ.

'ಕೆಎಲ್‌ಇ ಕಾನೂನು ಕಾಲೇಜು ಸಮೀಪದ 80 ಅಡಿ ರಸ್ತೆಯಲ್ಲಿ ಶಿಶು ಪತ್ತೆಯಾಗಿದೆ. ಅದರ ಆರೋಗ್ಯದಲ್ಲಿ ಯಾವುದೇ ತೊಂದರೆ ಇಲ್ಲವೆಂದು ವೈದ್ಯರು ತಿಳಿಸಿದ್ದಾರೆ' ಎಂದು ಪೊಲೀಸರು ಹೇಳಿದರು.

'ರಸ್ತೆಯ ಬದಿಯಲ್ಲಿ ಜನರು ಕಸ ಎಸೆಯುತ್ತಾರೆ. ಅದೇ ಕಸದ ರಾಶಿಗೆ ಹೊಂದಿಕೊಂಡು ಕಟ್ಟೆ ಇದೆ. ಅದರ ಮೇಲೆ ಶಿಶುವನ್ನು ಇರಿಸಲಾಗಿತ್ತು. ಸುತ್ತಲೂ ಬಟ್ಟೆ ಸುತ್ತಲಾಗಿತ್ತು. ಮುಖ ಮಾತ್ರ ಕಾಣುತ್ತಿತ್ತು. ಹೆಣ್ಣು ಶಿಶು ಎಂಬ ಕಾರಣಕ್ಕೆ ತಾಯಿ ಬಿಟ್ಟು ಹೋಗಿರುವ ಅನುಮಾನವಿದೆ' ಎಂದೂ ತಿಳಿಸಿದರು.

ರಾತ್ರಿ ಕೇಳಿಸಿದ್ದ ಅಳು: 'ಮಂಗಳವಾರ ರಾತ್ರಿ 9 ಗಂಟೆ ಸುಮಾರಿಗೆ ಮಗು ಅಳುತ್ತಿದ್ದ ಶಬ್ದ ಕೇಳಿಸಿತ್ತು. ಅದನ್ನು ಗಮನಿಸಿದ್ದ ಸ್ಥಳೀಯರು, ರಸ್ತೆಯಲ್ಲೆಲ್ಲ ಹುಡುಕಾಟ ನಡೆಸಿದ್ದರು. ಕಟ್ಟೆ ಮೇಲೆ ಶಿಶು ಇರುವುದನ್ನು ಗಮನಿಸಿ ಠಾಣೆಗೆ ಮಾಹಿತಿ ನೀಡಿದ್ದರು' ಎಂದೂ ಪೊಲೀಸರು ಹೇಳಿದರು.

ಜಮೀರ್ ಬಗ್ಗೆ ಅವಹೇಳನಕಾರಿ ಪೋಸ್ಟ್; ಎಫ್‌ಐಆರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಾಮರಾಜಪೇಟೆ ಕ್ಷೇತ್ರದ ಕಾಂಗ್ರೆಸ್ ಶಾಸಕ ಜಮೀರ್ ಅಹ್ಮದ್ ಖಾನ್ ಬಗ್ಗೆ ಅವಹೇಳನಕಾರಿ ಪೋಸ್ಟ್ ಪ್ರಕಟಿಸಿದ್ದ ಆರೋಪದಡಿ ಮನೋಜ್ ಗೌಡ ಎಂಬುವರ ವಿರುದ್ಧ ಎಫ್‌ಐಆರ್ ದಾಖಲಾಗಿದೆ.

'ಜಮೀರ್ ಅಹ್ಮದ್ ಖಾನ್ ಬೆಂಬಲಿಗರು ಹೂಡಿದ್ದ ಖಾಸಗಿ ಮೊಕದ್ದಮೆಯಲ್ಲಿ ನ್ಯಾಯಾಲಯ ನೀಡಿರುವ ಆದೇಶದಂತೆ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದೆ' ಎಂದು ಚಾಮರಾಜಪೇಟೆ ಠಾಣೆ ಪೊಲೀಸ್ ಮೂಲಗಳು ಹೇಳಿವೆ.

ಕೆಲ ತಿಂಗಳ ಹಿಂದಷ್ಟೇ ಮನೋಜ್ ಅವರು ಅವಹೇಳನಕಾರಿ ಪೋಸ್ಟ್ ಪ್ರಕಟಿಸಿದ್ದರು. ಅವರ ವಿರುದ್ಧ ಕ್ರಮ ಕೈಗೊಳ್ಳುವಂತೆ ಬೆಂಬಲಿಗರು ಕಮಿಷನರ್ ಕಮಲ್ ಪಂತ್ ಅವರಿಗೆ ದೂರು ನೀಡಿದ್ದರು. ಆರೋಪಿ ವಿರುದ್ಧ ಎನ್‌ಸಿಆರ್ (ಗಂಭೀರವಲ್ಲದ ಪ್ರಕರಣ) ದಾಖಲಾಗಿತ್ತು. ಎಫ್‌ಐಆರ್ ದಾಖಲಿಸುವಂತೆ ಬೆಂಬಲಿಗರು ನ್ಯಾಯಾಲಯದ ಮೆಟ್ಟಿಲೇರಿದ್ದರು.

ಯತ್ನಾಳ್ ಬಗ್ಗೆ ಭಿತ್ತಿಪತ್ರ; ಇಬ್ಬರ ಬಂಧನ

ಬಿಜೆಪಿ ಶಾಸಕ ಬಸನಗೌಡ ಪಾಟೀಲ ಯತ್ನಾಳ್ ಬಗ್ಗೆ ಅವಹೇಳನಕಾರಿ ಭಿತ್ತಿಪತ್ರ ಅಂಟಿಸಿದ್ದ ಪ್ರಕರಣದಲ್ಲಿ ಇಬ್ಬರು ಆರೋಪಿಗಳನ್ನು ವಿಧಾನಸೌಧ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಸೆಲ್ವರಾಜ್ ಹಾಗೂ ಪುಟ್ಟಸ್ವಾಮಿ ಬಂಧಿತರು. ಕಾಂಗ್ರೆಸ್ ಕಾರ್ಯಕರ್ತರೆಂದು ಅವರಿಬ್ಬರು ಹೇಳಿಕೊಳ್ಳುತ್ತಿದ್ದಾರೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಚಾಲಕರಾಗಿದ್ದ ಸೆಲ್ವರಾಜ್ ಹಾಗೂ ಶಾಲೆಯೊಂದರಲ್ಲಿ ಕೆಲಸ ಮಾಡುತ್ತಿದ್ದ ಪುಟ್ಟಸ್ವಾಮಿ, ಶಾಸಕರ ಭವನದೊಳಗೆ ನುಗ್ಗಿ ಯತ್ನಾಳ್ ಅವರ ಕೊಠಡಿ ಬಾಗಿಲಿಗೆ ಪೋಸ್ಟರ್ ಅಂಟಿಸಿದ್ದರು. ಈ ಬಗ್ಗೆ ದೂರು ದಾಖಲಾಗಿತ್ತು.'

'ಶಾಸಕರ ಭವನದಲ್ಲಿರುವ ಸಿ.ಸಿ.ಟಿ.ವಿ ಕ್ಯಾಮೆರಾದಿಂದ ಆರೋಪಿಗಳ ಸುಳಿವು ಸಿಕ್ಕಿತ್ತು. ಅದರನ್ವಯ ಇಬ್ಬರನ್ನು ಬಂಧಿಸಲಾಗಿದೆ. ಇನ್ನಿಬ್ಬರು ಕೃತ್ಯದಲ್ಲಿ ಭಾಗಿಯಾಗಿದ್ದು, ತಲೆಮರೆಸಿಕೊಂಡಿದ್ದಾರೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಗೋಶಾಲೆ ಆರಂಭಿಸಲು ₹ 15 ಕೋಟಿ ಬಿಡುಗಡೆ

ಬೆಂಗಳೂರು: ಜಾನುವಾರು ಹತ್ಯೆ ಪ್ರತಿಬಂಧಕ ಮತ್ತು ಸಂರಕ್ಷಣಾ (ಗೋಹತ್ಯೆ ನಿಷೇಧ) ಕಾಯ್ದೆ ಅನುಷ್ಠಾನಕ್ಕೆ ಪೂರಕವಾಗಿ ಪ್ರತಿ ಜಿಲ್ಲೆಗೆ ಒಂದರಂತೆ ಗೋಶಾಲೆಗಳನ್ನು ಆರಂಭಿಸಲು ಪಶುಸಂಗೋಪನಾ ಇಲಾಖೆಯು ₹ 15 ಕೋಟಿ ಅನುದಾನ ಬಿಡುಗಡೆ ಮಾಡಿ ಆಗಸ್ಟ್ 11ರಂದು ಆದೇಶ ಹೊರಡಿಸಿದೆ.

ಅಕ್ಟೋಬರ್ 2ರ ಒಳಗಾಗಿ ಪ್ರತಿ ಜಿಲ್ಲೆಯಲ್ಲಿ ಕನಿಷ್ಠ ಒಂದು ಗೋಶಾಲೆ ಆರಂಭಿಸಬೇಕು. ಇದಕ್ಕಾಗಿ ಪ್ರತಿ ಜಿಲ್ಲೆಗೆ ತಲಾ ₹ 24 ಲಕ್ಷ ಅನುದಾನ ಬಿಡುಗಡೆ ಮಾಡಲಾಗುವುದು. ಗೋಶಾಲೆಗಳ ನಿರ್ಮಾಣದಲ್ಲಿ ಕೊಟ್ಟಿಗೆ ನಿರ್ಮಾಣ, ಕೃಷಿ ಹೊಂಡಗಳ ನಿರ್ಮಾಣ, ಮೇವು ಉತ್ಪಾದನೆ ಮತ್ತಿತರ ಚಟುವಟಿಕೆಗಳಿಗೆ ಇತರೆ ಯೋಜನೆಗಳನ್ನೂ ಬಳಸಿಕೊಳ್ಳಬೇಕು ಎಂದು ಆದೇಶದಲ್ಲಿ ತಿಳಿಸಲಾಗಿದೆ.

ಪ್ರತಿ ಜಿಲ್ಲೆಯಲ್ಲಿ ಗೋಶಾಲೆ ಪ್ರಾರಂಭಿಸುವುದು ಅಥವಾ ಖಾಸಗಿ ಸಂಸ್ಥೆಗಳಿಂದ ನಡೆಯುತ್ತಿರುವ ಗೋಶಾಲೆಗಳ ವಿಸ್ತರಣೆ ಕುರಿತು ಜಿಲ್ಲಾಧಿಕಾರಿ ಅಧ್ಯಕ್ಷತೆಯ ಜಿಲ್ಲಾ ಮಟ್ಟದ ಸಮಿತಿಗಳು ತೀರ್ಮಾನ ಕೈಗೊಳ್ಳಬೇಕು. ಗೋಶಾಲೆಗಳಿಗೆ ಸಿಸಿಟಿವಿ ಕ್ಯಾಮೆರಾ ಅಳವಡಿಸಿ, ವೆಬ್‌ಲಿಂಕ್ ಮೂಲಕ ವೀಕ್ಷಣೆಗೆ ಅವಕಾಶ ಕಲ್ಪಿಸಬೇಕು. ಗೋಶಾಲೆಯ ಉತ್ಪನ್ನಗಳನ್ನು ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ ಮೂಲಕ ಮಾರಾಟ ಮಾಡಲು ಕ್ರಮ ಕೈಗೊಳ್ಳಬೇಕು ಎಂದು ಸೂಚಿಸಲಾಗಿದೆ.

ಪ್ರೀತಿಸಲು ಒಪ್ಪದಿದ್ದಕ್ಕೆ ಯುವತಿಗೆ ಚಾಕು ಇರಿತ

ಬೆಂಗಳೂರು: ತನ್ನನ್ನು ಪ್ರೀತಿಸಲು ಒಪ್ಪಲಿಲ್ಲವೆಂಬ ಕಾರಣಕ್ಕೆ ಯುವಕನೊಬ್ಬ ಯುವತಿಯೊಬ್ಬರಿಗೆ ಚಾಕುವಿನಿಂದ ಇರಿದಿದ್ದು, ಈ ಸಂಬಂಧ ಬಾಗಲಗುಂಟೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಬುಧವಾರ ನಡೆದಿರುವ ಘಟನೆ ಸಂಬಂಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ಆರೋಪಿ ಉದಯ್ ಎಂಬಾತನನ್ನು ವಶಕ್ಕ ಪಡೆಯಲಾಗಿದ' ಎಂದು ಪೊಲೀಸರು ಹೇಳಿದರು.

'ಸ್ಥಳೀಯ ನಿವಾಸಿಯಾದ ಆರೋಪಿ, ನಿತ್ಯವೂ ಯುವತಿಯನ್ನು ಹಿಂಬಾಲಿಸುತ್ತಿದ್ದ. ತನ್ನನ್ನು ಪ್ರೀತಿಸುವಂತೆ ಪೀಡಿಸುತ್ತಿದ್ದ. ಬೇಸತ್ತ ಯುವತಿ ಹಿಂಬಾಲಿಸದಂತೆ ಎಚ್ಚರಿಕೆ ನೀಡಿದ್ದರು. ಸಿಟ್ಟಾದ ಆರೋಪಿ, ಚಾಕುವಿನಿಂದ ಯುವತಿಯ ಕೈಗೆ ಇರಿದಿದ್ದಾನೆ. ಗಾಯಗೊಂಡಿರುವ ಯುವತಿಯನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ' ಎಂದೂ ತಿಳಿಸಿದರು.



ವೋಲ್ವೊ ಗ್ರೂಪ್ ಇಂಡಿಯಾ ಸಹಯೋಗದಲ್ಲಿ ನಾರಾಯಣ ಹೆಲ್ತ್ ನಗರದಲ್ಲಿ ಬುಧವಾರ ಹಮ್ಮಿಕೊಂಡ 'ವ್ಯಾಕ್ಸಿನೇಷನ್ ಆನ್ ವೀಲ್ಸ್' ಮೊಬೈಲ್ ವ್ಯಾನ್ ಮೂಲಕ ಲಸಿಕೆ ವಿತರಿಸುವ ಕಾರ್ಯಕ್ರಮಕ್ಕೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಚಾಲನೆ ನೀಡಿದರು. ನಾರಾಯಣ ಹೆಲ್ತ್ ಸಂಸ್ಥಾಪಕ ಡಾ. ದೇವಿಪ್ರಸಾದ್ ಶೆಟ್ಟಿ ಇದ್ದರು

ಬೃಂದಾವನ ಪ್ರಾಪರ್ಟೀಸ್ ಪ್ರಕರಣ: ಸಿಬಿಐಗೆ ವಹಿಸಲು ಒತ್ತಾಯ

ಬೆಂಗಳೂರು: ಬೃಂದಾವನ ಪ್ರಾಪರ್ಟೀಸ್ ಮಾಲೀಕ ದಿನೇಶ್‌ಗೌಡ ವಿರುದ್ಧದ ಪ್ರಕರಣವನ್ನು ಸಿಬಿಐಗೆ ವಹಿಸಬೇಕು ಎಂದು ಕರ್ನಾಟಕ ಜನಪರ ಸಮಾನ ವೇದಿಕೆ ಆಗ್ರಹಿಸಿದೆ.

2,800ಕ್ಕೂ ಹೆಚ್ಚು ಜನ ಇವರಿಂದ ಮೋಸ ಹೋಗಿದ್ದಾರೆ. ರಾಜಾಜಿನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ನ್ಯಾಯ ದೊರಕಿಸುವ ಭರವಸೆಯನ್ನು ಪೊಲೀಸರು ನೀಡಿದ್ದಾರೆ. ಆದರೆ, ತನಿಖೆ ಬಗ್ಗೆ ಯಾವುದೇ ಮಾಹಿತಿ ನೀಡುತ್ತಿಲ್ಲ. ನೊಂದವರು ಪ್ರಶ್ನಿಸಲು ಮುಂದಾದರೆ ಅವರಿಗೆ ದಿನೇಶ್‌ಗೌಡ ಬೆಂಬಲಿಗರ ಮೂಲಕ ಬೆದರಿಕೆ ಹಾಕಿಸುತ್ತಿದ್ದಾರೆ ಎಂದು ವೇದಿಕೆ ರಾಜ್ಯ ಘಟಕದ ಅಧ್ಯಕ್ಷ ವೆಂಕಟರೆಡ್ಡಿ, ಕಾರ್ಯದರ್ಶಿ ರವಿಕುಮಾರ್ ಮತ್ತು ಸತೀಶ್ ಆರೋಪಿಸಿದರು.


ಲಾಲ್‌ಬಾಗ್ ಕಥೆ ಹೇಳುವ ಕೃತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾಂಕ್ರಿಟ್ ಕಾಡಾಗಿರುವ ರಾಜಧಾನಿ ಬೆಂಗಳೂರಿನೊಳಗೆ ಓಯಸೀಸ್‌ನಂತೆ, ಸಸ್ಯಕಾಶಿ ಎಂದೇ ಪ್ರಸಿದ್ಧಿಯಾಗಿರುವ ಲಾಲ್‌ಬಾಗ್ ಸಸ್ಯೋದ್ಯಾನ ಕಳೆದ ಕೆಲ ಶತಮಾನಗಳಲ್ಲಿ ಹೇಗೆ ಬೆಳೆಯಿತು, ವಿಸ್ತರಣೆಯಾಯಿತು ಎಂದು ವಿವರಿಸುವ ಕೃತಿಯೊಂದು ಬಿಡುಗಡೆಯಾಗಿದೆ.

'ಬೆಂಗಳೂರ್ಸ್ ಲಾಲ್‌ಬಾಗ್: ಎ ಕ್ರಾನಿಕಲ್ ಆಫ್ ದಿ ಗಾರ್ಡನ್ ಆ್ಯಂಡ್ ದಿ ಸಿಟಿ' ಹೆಸರಿನ ಈ ಕೃತಿಯನ್ನು ಕಲಾವಿದ, ಇತಿಹಾಸಕಾರ ಸುರೇಶ್ ಜಯರಾಮ್ ರಚಿಸಿದ್ದಾರೆ. ಲಾಲ್‌ಬಾಗ್‌ನ ಸಸ್ಯೋದ್ಯಾನದ ಇತಿಹಾಸ ಹಾಗೂ ಉದ್ಯಾನನಗರಿ ಬೆಂಗಳೂರಿನ ಕಥೆಯನ್ನು ಈ ಕೃತಿ ಹೊಂದಿದೆ. ಕೆಂಪೇಗೌಡರು ಆಳಿದ ಬೆಂಗಳೂರು ಹೇಗಿತ್ತು?, ಲಾಲ್‌ಬಾಗ್ ಒಳಗಿರುವ ಸ್ಮಾರಕಗಳು, ಇಲ್ಲಿಗೆ ಭೇಟಿ ನೀಡಿದ ಗಣ್ಯರು, ನಾನಾ ಬಗೆಯ ಗಿಡಮರಗಳು, ಹೂಹಣ್ಣುಗಳ ಪರಿಚಯ ಇದರಲ್ಲಿ ಅಡಕಗೊಂಡಿದೆ.

ಕರ್ನಾಟಕ ಚಿತ್ರಕಲಾ ಪರಿಷತ್‌ನ ಪ್ರಾಂಶುಪಾಲರಾಗಿದ್ದ ಸುರೇಶ್ ಜಯರಾಮ್, ಐವತ್ತು ವರ್ಷಗಳಿಂದ ಲಾಲ್‌ಬಾಗ್‌ನ ಪ್ರತಿ ಬದಲಾವಣೆಯನ್ನು ಹತ್ತಿರದಿಂದ ನೋಡಿದವರು.



ಸುರೇಶ್ ಜಯರಾಮ್

'ಒಂದು ಮುಂಜಾನೆ ಲಾಲ್‌ಬಾಗ್‌ನಲ್ಲಿ ನಡಿಗೆ ಮಾಡುತ್ತಿರುವಾಗ ಮನಸ್ಸಿನಲ್ಲಿ ಬಿತ್ತಿದ ಬೀಜ ಈಗ ಈ ಕೃತಿಯಾಗಿ ಹೆಮ್ಮರವಾಗಿ ಬೆಳೆದಿದೆ. ಲಾಲ್‌ಬಾಗ್ ಬೆಳೆಯುವುದನ್ನು ಹಾಗೂ ಬದಲಾಗುವುದನ್ನು ನಾನು ನೋಡಿದ್ದೇನೆ. ಅದೇ ರೀತಿ ಈ ಸಸ್ಯೋದ್ಯಾನದ ಸುತ್ತಲಿನ ನಗರ ಅಭಿವೃದ್ಧಿಯಾಗುತ್ತಿರುವುದನ್ನೂ ನಾನು ಗಮನಿಸಿದ್ದೇನೆ' ಎನ್ನುತ್ತಾರೆ ಸುರೇಶ್ ಜಯರಾಮ್.

261 ವರ್ಷಗಳ ಹಿಂದೆ ಹೈದರ್ ಅಲಿ ನಿರ್ಮಾಣ ಮಾಡಿದ್ದ ಈ ಲಾಲ್‌ಬಾಗ್‌ನ ದೃಶ್ಯಗಳನ್ನು ಫೋಟೊ, ಚಿತ್ರಕಲೆ ಹಾಗೂ ಪೋಸ್ಟ್‌ಕಾರ್ಡ್ ರೂಪದಲ್ಲಿ ಈ ಕೃತಿಯಲ್ಲಿ ನೀಡಲಾಗಿದೆ. 'ಸುಲ್ತಾನ್ಸ್ ಬಾಗ್' ಎನ್ನುವ ಭಾಗದಲ್ಲಿ ಈ ಕುರಿತ ಉಲ್ಲೇಖವನ್ನೂ ಸುರೇಶ್ ಮಾಡಿದ್ದಾರೆ. ತಮ್ಮ ಕುಟುಂಬದ ಆಲ್ಬಂಗಳಲ್ಲಿ ಇದ್ದ ಲಾಲ್‌ಬಾಗ್‌ನ ಹಳೆಯ ಫೋಟೊಗಳನ್ನೂ ಕೃತಿಯಲ್ಲಿ ಸುರೇಶ್ ಬಳಸಿಕೊಂಡಿದ್ದಾರೆ. 'ಬೆಂಗಳೂರು ನಗರ ಎಷ್ಟೇ ಬದಲಾದರೂ ಹಲವು ಸ್ಥಳ, ವಿಷಯಗಳು ಇನ್ನೂ ಹಾಗೆಯೇ ಉಳಿದಿವೆ. ಈ ಕೃತಿಯು ನಗರವನ್ನು ಹೊಸ ದೃಷ್ಟಿಕೋನದಲ್ಲಿ ನೋಡಲು ಬೆಂಗಳೂರಿನವರಿಗೆ ಸಹಾಯವಾಗಲಿದೆ' ಎಂದರು ಸುರೇಶ್.

'ಲಾಲ್‌ಬಾಗ್ ಕುರಿತಂತೆ ಇರುವ ಎಲ್ಲ ದಾಖಲೆಗಳು, ಕೃತಿಗಳು, ದತ್ತಾಂಶಗಳನ್ನು ಅಧ್ಯಯನ ನಡೆಸಿ ಮೂರು ವರ್ಷಗಳ ಅವಧಿಯಲ್ಲಿ ಈ ಕೃತಿಯನ್ನು ರಚಿಸಿದ್ದೇನೆ. ಬೆಂಗಳೂರು ಎಷ್ಟೇ ನಗರೀಕರಣವಾದರೂ, ಕಬ್ಬನ್ ಪಾರ್ಕ್ ಹಾಗೂ ಲಾಲ್‌ಬಾಗ್ ಬೆಂಗಳೂರಿನ ಎರಡು ಶ್ವಾಸಕೋಶವಾಗಿರಲಿದೆ' ಎನ್ನುತ್ತಾರೆ ಸುರೇಶ್.

ಪ್ರೆಸ್ ವರ್ಕ್ಸ್ ಸಹಯೋಗದಲ್ಲಿ ವಿಷ್ಯುವಲ್ ಆರ್ಟ್ಸ್ ಕಲೆಕ್ಟಿವ್ ಟ್ರಸ್ಟ್ ಈ ಕೃತಿಯನ್ನು ಪ್ರಕಟಿಸಿದ್ದು, ಇದರ ಬೆಲೆ ₹1 ಸಾವಿರ.

ಎಲೆಕ್ಟ್ರಿಕ್ ವಾಹನ ಸವಾರರಿಗೆ ಅನುಕೂಲ

1 ಸಾವಿರ ಇ ಚಾರ್ಜಿಂಗ್ ಸ್ಟೇಷನ್ ಶೀಘ್ರ

ಪ್ರಜಾವಾಣಿ ವಾರ್ತೆ

ಮೈಸೂರು: 'ಎಲೆಕ್ಟ್ರಿಕ್ ವಾಹನಗಳ ಸವಾರರಿಗಾಗಿ ರಾಜ್ಯದಲ್ಲಿ ಡಿಸೆಂಬರ್ ಒಳಗೆ 1 ಸಾವಿರ ಚಾರ್ಜಿಂಗ್ ಸ್ಟೇಷನ್‌ಗಳನ್ನು ತೆರೆಯಲಾಗುವುದು' ಎಂದು ಇಂಧನ ಸಚಿವ ಸುನಿಲ್‌ಕುಮಾರ್ ತಿಳಿಸಿದರು.

ಇಲ್ಲಿ ಬುಧವಾರ ನಡೆದ ಸೆಸ್ಕ್ ಪ್ರಗತಿಪರಿಶೀಲನಾ ಸಭೆಯಲ್ಲಿ ಮಾತನಾಡಿದ ಅವರು, 'ಮೈಸೂರು ನಗರದಲ್ಲಿ ಕೇವಲ 2 ಚಾರ್ಜಿಂಗ್ ಸ್ಟೇಷನ್‌ಗಳಿವೆ. ಕನಿಷ್ಠ 100 ಸ್ಟೇಷನ್‌ಗಳನ್ನಾದರೂ ತೆರೆಯಬೇಕು' ಎಂದು ಅಧಿಕಾರಿಗಳಿಗೆ ಸೂಚಿಸಿದರು.



ವಿ. ಸುನಿಲ್ ಕುಮಾರ್

ಇದಕ್ಕೂ ಮುನ್ನ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಸದ್ಯಕ್ಕೆ ವಿದ್ಯುತ್ ನಿಗಮಗಳ ಖಾಸಗೀಕರಣದ ಪ್ರಸ್ತಾವ ಇಲ್ಲ. ಕೇಂದ್ರ ಸರ್ಕಾರದ ವಿದ್ಯುತ್ ಸರಬರಾಜಿನ ಮಸೂದೆ ಕುರಿತು ಮಾಹಿತಿ ಇಲ್ಲ' ಎಂದರು.

'ಕೋವಿಡ್ ಏರಿಳಿತಕ್ಕೆ ಅನುಗುಣವಾಗಿ ಗಣೇಶೋತ್ಸವ ಆಚರಣೆಯ ನಿಯಮಗಳಲ್ಲಿ ಸಡಿಲಿಕೆ ಮಾಡಲಾಗುವುದು.

ಗಣೇಶೋತ್ಸವದಷ್ಟೇ ಕೋವಿಡ್ ನಿಯಂತ್ರಣವೂ ಮುಖ್ಯ. ಈ ವಿಚಾರದಲ್ಲಿ ಮುಂಜಾಗ್ರತೆಯಿಂದ ನಿರ್ಧಾರ ಕೈಗೊಳ್ಳಲಾಗುವುದು' ಎಂದರು.

ವಿಶ್ವನಾಥ್ ಅಳಿಯ ರಮೇಂದ್ರ ವರ್ಗಾವಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನಪರಿಷತ್ತಿನ ಬಿಜೆಪಿ ಸದಸ್ಯ ಎಚ್.ವಿಶ್ವನಾಥ್ ಅವರ ಅಳಿಯ ರಮೇಂದ್ರ ಅವರನ್ನು ಆರೋಗ್ಯ ಇಲಾಖೆಯ ಮುಖ್ಯ ಎಂಜಿನಿಯರ್ ಹುದ್ದೆಗೆ ವರ್ಗಾವಣೆ ಮಾಡಲಾಗಿದೆ.

ಬಿ.ಎಸ್.ಯಡಿಯೂರಪ್ಪ ಅವರ ಅವಧಿಯಲ್ಲಿ ಅಳಿಯನಿಗೆ ಆಯಕಟ್ಟಿನ ಜಾಗಕ್ಕೆ ವರ್ಗಾವಣೆ ಮಾಡಬೇಕು ಎಂದು ವಿಶ್ವನಾಥ್ ಒತ್ತಡ ಹೇರಿದ್ದರು. ಆದರೆ, ಬೇಡಿಕೆ ಈಡೇರಿಸದ ಕಾರಣ ವಿಶ್ವನಾಥ್ ಮುನಿಸಿಕೊಂಡಿದ್ದರು. ಇದೀಗ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಬೇಡಿಕೆ ಈಡೇರಿಸಿದ್ದಾರೆ.

ಇದರಿಂದ ಸಂತಸಗೊಂಡಿರುವ ವಿಶ್ವನಾಥ್ ಬುಧವಾರ ಮುಖ್ಯಮಂತ್ರಿಯವರ ಗೃಹ ಕಚೇರಿ 'ಕೃಷ್ಣಾ'ದಲ್ಲಿ ಬೊಮ್ಮಾಯಿ ಅವರನ್ನು ಭೇಟಿಯಾಗಿ ತಮ್ಮ ಬೇಡಿಕೆ ಈಡೇರಿಸಿದ್ದಕ್ಕೆ ಧನ್ಯವಾದ ಹೇಳಿದರು ಎಂದು ಮೂಲಗಳು ಹೇಳಿವೆ.

ಯಡಿಯೂರಪ್ಪ ಅವಧಿಯಲ್ಲಿ ರಮೇಂದ್ರ ಅವರಿಗೆ ಯಾವುದೇ ಹುದ್ದೆ ತೋರಿಸದೇ ಹಾಗೇ ಉಳಿಸಲಾಗಿತ್ತು. ಇದಕ್ಕೆ ಯಡಿಯೂರಪ್ಪ ಅವರ ಪುತ್ರ ವಿಜಯೇಂದ್ರ ಅವರೇ ಕಾರಣ ಎಂದು ಭಾವಿಸಿದ್ದ ವಿಶ್ವನಾಥ್, ಅವರ ವಿರುದ್ಧ ಕಿಡಿ ಕಾರುತ್ತಿದ್ದರು.

'ಸರ್ಕಾರಿ ಜಮೀನಲ್ಲಿ ವಾಣಿಜ್ಯ ಕಟ್ಟಡ ನಿರ್ಮಿಸಿಲ್ಲ'

ಬೆಂಗಳೂರು: 'ಹೆಸರಘಟ್ಟ ಹೋಬಳಿಯ ಶ್ಯಾನುಭೋಗನಹಳ್ಳಿಯ ಸರ್ವೆ ಸಂಖ್ಯೆ 109ರಲ್ಲಿ ಇರುವ ಜಮೀನು ಸರ್ಕಾರಕ್ಕೆ ಸೇರಿರುವ ಜಾಗವಲ್ಲ. ಅದು ವೈಯಕ್ತಿಕ ಸಾಗುವಳಿ ಜಮೀನು' ಎಂದು ಯಲಹಂಕ ತಹಶೀಲ್ದಾರ್ ಅವರು ಬೆಂಗಳೂರು ನಗರ ಜಿಲ್ಲಾಧಿಕಾರಿಯವರಿಗೆ ಬುಧವಾರ ವರದಿ ಸಲ್ಲಿಸಿದ್ದಾರೆ.

'ಈ ಜಾಗವನ್ನು ದಾನಪತ್ರದ ಮೂಲಕ ಪಡೆದಿದ್ದು, ಕಾನೂನು ಉಲ್ಲಂಘಿಸಿ ಅಕ್ರಮವಾಗಿ ವಾಣಿಜ್ಯ ಕಟ್ಟಡ ನಿರ್ಮಿಸಲಾಗಿದೆ' ಎಂದು ಗ್ರಾಮದ ನಿವಾಸಿ ಎಸ್.ಆರ್. ರಾಜಣ್ಣ ಸಲ್ಲಿಸಿದ ದೂರಿಗೆ ಸಂಬಂಧಿಸಿದಂತೆ ತಹಶೀಲ್ದಾರ್ ಈ ವರದಿ ನೀಡಿದ್ದಾರೆ.

'ದೂರಿನ ನಂತರ ಪರಿಶೀಲನೆ ನಡೆಸಲಾಗಿ, ಈ ಜಾಗವು ಮೂಲತಃ ಸರ್ಕಾರಿ ಜಮೀನಾಗಿತ್ತು. ಆದರೆ, 1994ರ ಡಿಸೆಂಬರ್ 30ರಂದು ಸರ್ಕಾರದಿಂದ ನಮೂನೆ–7ರಲ್ಲಿ ಸಾಗುವಳಿ ಚೀಟಿಯನ್ನು ಕೊಡುವ ಬಗೆಗಿನ ಪ್ರಮಾಣಪತ್ರ ನೀಡಲಾಗಿದೆ. ಶ್ಯಾನುಭೋಗನಹಳ್ಳಿ ಗ್ರಾಮದ ಹಳೇ ಸರ್ವೆ ನಂಬರ್ 14ರಿಂದ ಪೋಡಿಯಾಗಿ ಹೊಸ ಸರ್ವೆ ಸಂಖ್ಯೆ 109/1ರಲ್ಲಿ ವಿಸ್ತೀರ್ಣ 0–32 ಗುಂಟೆಗೆ ಹಾಲಿ ಖಾತೆದಾರರಾದ ರಾಮಯ್ಯ ಬಿನ್ ಹನುಮಯ್ಯ ಅವರ ಅನುಭವದಲ್ಲಿದೆ. ಈಗ ಇದು ಸರ್ಕಾರಿ ಜಮೀನಾಗಿಲ್ಲ' ಎಂದು ವರದಿಯಲ್ಲಿ ಉಲ್ಲೇಖಿಸಿದ್ದಾರೆ.

'ಸರ್ಕಾರಿ ಜಾಗದಲ್ಲಿ ವಾಣಿಜ್ಯ ಕಟ್ಟಡ: ಗ್ರಾಮಸ್ಥರ ದೂರು' ಶೀರ್ಷಿಕೆಯಡಿ 'ಪ್ರಜಾವಾಣಿ'ಯಲ್ಲಿ ಬುಧವಾರ ವರದಿ ಪ್ರಕಟವಾಗಿತ್ತು.

ದುರುದ್ದೇಶಪೂರಿತ: 'ರಾಜಣ್ಣ ಅವರ ದೂರು ದುರುದ್ದೇಶಪೂರಿತವಾಗಿದೆ. ವೈಯಕ್ತಿಕ ದ್ವೇಷದ ಕಾರಣ ಅವರು ಪತ್ರಿಕೆಗೆ ತಪ್ಪು ಮಾಹಿತಿ ನೀಡಿದ್ದಾರೆ' ಎಂದು ರಾಮಯ್ಯ ಮತ್ತು ಶಾನುಭೋಗನಹಳ್ಳಿಯ ಕೆಲವು ಗ್ರಾಮಸ್ಥರು ಹೇಳಿದರು.

'ನಾನು ಭೂಪರಿವರ್ತನೆಗೆ ಈಗಾಗಲೇ ಅರ್ಜಿ ಸಲ್ಲಿಸಿದ್ದು, ದಾಖಲೆಯೂ ಪರಿಶೀಲನೆಯಲ್ಲಿದೆ. ಆದ್ದರಿಂದ ನಾನು ಇಲ್ಲಿ ಮನೆ ನಿರ್ಮಿಸಲು ಮುಂದಾಗಿದ್ದೇನೆ. ಇದರಿಂದ ಗ್ರಾಮಸ್ಥರಿಗಾಗಲಿ, ಸುತ್ತಲಿನ ನಿವಾಸಿಗಳಿಗಾಗಲಿ ತೊಂದರೆಯಾಗಿಲ್ಲ' ಎಂದು ರಾಮಯ್ಯ ಸ್ಪಷ್ಟಪಡಿಸಿದರು. 'ಸರ್ಕಾರಿ ಹಳ್ಳ ಮುಚ್ಚಿ ಕಾಂಕ್ರೀಟ್ ರಸ್ತೆ ನಿರ್ಮಾಣ ಮಾಡಲಾಗಿದೆ ಎಂಬ ಮಾಹಿತಿಯೂ ತಪ್ಪು. ಕಾಲುವೆ ದಾಟಲು ಸಹಾಯವಾಗುವ ಉದ್ದೇಶದಿಂದ ಮಾತ್ರ 24 ಅಡಿ ರಿಂಗ್ ಹಾಕಿ ರಸ್ತೆ ಮಾಡಲಾಗಿದೆ' ಎಂದೂ ಅವರು ಹೇಳಿದರು.

CONNECT ಕ್ಲಾಸಿಫೈಡ್ಸ್

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

RENTAL PROPERTIES

Accommodation Available

Commercial

6000 SQFT With /Without Fit-Out at SR Complex, 2nd Floor, Tavarekere Main Road, SG Palya, Near Forum Mall. Contact : 9880448321, 080 - 41290053

JOB OPPORTUNITIES

Teachers/ Professors

MAX MULLER PUBLIC SCHOOL
BEML Layout, Basaveshwara Nagar Bengaluru-560079 Ph: 080-23233455.
REQUIRED
M.Sc or B.Sc, B.Ed Candidate to take 10th Physics and 9th Maths.
Required Kannada, Hindi Typist.

WANTED TRAINED LADY TEACHERS to teach ENGLISH, EVS and MATHS in English Medium Primary and ENGLISH in High School. Walk-in Interview on 27-8-2021 between 11.30AM and 1.30PM at 'PRATHIBHA SHIKSHANA SAMITHI', #9, 18th Main, BSK II Stage, Bangalore-70. Phone: 080-26710170/ 74833-77387

Marketing & Sales

WANTED 200 candidates for field cum sales executive and tele-callers for dry fruits B2B whole sale company in Bangalore. 6366283318

Part-Time Jobs

LIMITED MNC COMPANY Lost Job, Provide Work From Home Earn 30K to35K: 7019215243/ 9886641282

PUBLIC NOTICE

ELCITA
TENDERS INVITED BY ELECTRONICS CITY INDUSTRIAL TOWNSHIP AUTHORITY (ELCITA), BANGALORE

ELECTRONICS CITY INDUSTRIAL TOWNSHIP AUTHORITY (ELCITA), having its office at Sy. No. 7 (P), West Phase, Electronics City, Bangalore: 560 100 has invited tenders as detailed below:

Sl.No	Tender name	Tender number	Last date to apply	Closing timings
1	Procurement of Trailer mounted jetting Machine of capacity 3000 litre for Electronics City Industrial Township Area.	ELCITA/UDD/ 2021-22/ WORK_ INDENT 1333	31/08/ 2021	5:00 PM
2	Tender for Procurement of Sweeping machine of capacity 300cum AND Suitable tractor For ELCTRONICS CITY INDUSTRIAL TOWNSHIP AUTHORITY, Electronics City -560100, Bangalore,	ELCITA/UDD/ 2021-22/ OW / WORK_ INDENT 1366	08/09/ 2021	5:00 PM
3	Request for Proposal for selection of Partner for Providing a 3D digital model of the Electronic City Township, GIS platform	ELCITA/UDD/ 2021-22/ OW / WORK_ INDENT 1367	22/09/ 2021	5:00 PM
4	Providing and fixing of bull nosed kerbstone flush in tree pit as protection boundary, West Phase, Electronics City, Bangalore - 560 100.	ELCITA/UDD/ 2021-22/ OW / WORK_ INDENT 1383	11/09/ 2021	5:00 PM
5	Providing and Fixing MS Gratings for shoulder drains in East and West Phase, Electronics City, Bangalore-560100.	ELCITA/UDD/ 2021-22/ OW / WORK_ INDENT 1384	11/09/ 2021	5:00 PM

Details of the Tenders can be downloaded from the e-procurement **website: eproc.karnataka.gov.in** under Urban Development Department-Electronics city Industrial Township Authority. Also details are available in write to : **www.elcita.in**
For queries Contact : 080-4660 2222 / write to : project.mgr@elcita.in
Chief Executive Officer
Electronics City Industrial Township Authority (ELCITA)
7 (P), West Phase, Electronics City, Bangalore : 560 100
Website : www.elcita.in
Phone : 080-4660 2222

PUBLIC NOTICE

The Immovable Property being Land with building thereon now bearing **Corporation No.60, C.K.Garden (Chikka Kadirappa), Maruthi Seva Nagar Ward, Bangalore (PID No. 86-15-60)** Bounded on **East by :** Road, **West by :** Private Property, **North by :** Private Property bearing No. 61, **South by :** Private Property bearing No. 59, measuring on the East by 30 Feet, West by 30 Feet North by 47 Feet and South by 48 feet totally measuring 1425 Sq.Ft, belongs to Mr. William Pinto and his Mrs. Mary Elfrida Pinto (Owners), both residing at No.60, C.K.Garden, Bangalore having purchased the same under a Sale deed dated 20th October 1986, registered as No.1962/86-87, in Book I, Volume 2544 page 123-127 in the office of the Sub-Registrar, Shivajinagar, Bangalore. The owners represent that they have lost/misplaced the above sale deed. The Owners have obtained a certified copy of the above sale deed and necessary missing report in the Fraser Town police station dated 2/8/96 has been lodged and paper publication dated 18/8/1996 has been published in this behalf.

My client have negotiated with the said owners for the purchase of the said property. Any person or persons having/asserting any right, title or interest/claims or intending to oppose the said purchase in any manner may file their objections to the undersigned within **15 Days** from the date of publication of this notice hereof with documentary proof where after no such claims will be entertained and my clients will proceed with the purchase of the said property on the basis of the Certified copy produced.

(Syed Masood Ahmed)
Advocate & Notary
No.14, Wellington Street, Richmond Town. Bangalore-25.

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

OTHERS

Medical

HOME NURSES available for HOME/ HOSPITAL/ PATIENT CARE 24/7. MAJ Gandhinagar, Bangalore. Contact: 7022399993, 6366883838

BUSINESS

Business Offers

Finance

NRI'S INVESTMENT And Finance AvailableOn LowInterest AgainstProperties, Land& Building,Sites,Flats, Converted& AgricultureLandsCall: 7411265189

Business to Business

Finance

COMPREHENSIVE NPA Revival solutions, which Includes Saving of Property, OTS settlement and NPA funding for NPA categorised businesses. Visit and Apply at www.nparevival.com

PERSONAL

Change of Name

I, SMT. Archana Murthy W/o.Sri.Murthy C.S.P., #1674, 4th Main 2nd Stage, HMT Layout, Nagasandra, T.Dasarahalli, Doddabidarakallu, Bengaluru-73 have changed my name from Miss Archana R.A. @ Archana Raju to Smt. Archana Murthy with immediate effect, vide Affidavit dated 25-08-2021 sworn before Notary Lakshminarayana, Bangalore.

FARAH RAISA, Wife/o, 14840163N, HAV/MT, MD HASIM ABDUL HALIM, Vill-SARMASTAPUR, KANDI, MURSHIDABAD, WEST BENGAL, have changed my name from FARAH RAISA to FARHA RAISA, 24/08/2021, Notary K.V. Mani, Bangalore

I, AFEEFA have changed my name to UMA GIRI vide affidavit dated 25.08.2021 sworn before M.Devaraja, Notary, Bangalore.

I, RAJU S/o. Late. Manjunatha, R/a#405, 9th D-Main, Srinivasanagar, Bangalore- 560050 Declared That RAJSHEKAR, RAJSHEKAR SHETTY and RAJU are One and The Same Person, i.e. Myself Only. Henceforth, I Known as RAJU Vide Affidavit Dated: 23.08.2021 Before Notary H.G.Venkataramu, Bangalore-50.

I, AKASH Kumar S/o. A.K. Lahiri residing at No.228, Bhirdi colony, Ghorabandha, P.S.Govindpur, Town Jamshedpur, Dist. East Singhbhum, Jharkhand-831004, Have changed my name from Akash Lahiri to AKASH KUMAR vide affidavit dated 19/11/2020 before notary Pramod Kumar Bhagat, Jharkhand, JSR (India)

TUSIYA DEVI, Wife/o, 14826941H, HAV/MT, VIKASH KUMAR, Vill-SAHAVAJPUR, SERTHUA, KAKO, JEHANABAD, BIHAR have changed my name from TUSIYA DEVI to MALTI DEVI, 24/08/2021, Notary K.V. Mani, Bangalore

ಎಐಸಿಸಿ ವಕ್ತಾರ ಬ್ರಿಜೇಶ್ ಕಾಳಪ್ಪ ಟೀಕೆ

‘ರವಿ ನಿರಾಸೆಯಿಂದ ಮಾತನಾಡುತ್ತಿದ್ದಾರೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮುಖ್ಯಮಂತ್ರಿ ಪಟ್ಟದ ಕನಸು ಕಾಣುತ್ತಿದ್ದ ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ. ರವಿ ಅವರಿಗೆ ನಿರಾಸೆಯಾಗಿದೆ. ಅದಕ್ಕಾಗಿಯೇ ಈಗ ಕೀಳುಮಟ್ಟದ ಟೀಕೆಗೆ ಇಳಿದಿದ್ದಾರೆ’ ಎಂದು ಎಐಸಿಸಿ ವಕ್ತಾರ ಬ್ರಿಜೇಶ್ ಕಾಳಪ್ಪ ಹೇಳಿದರು.



ಕ್ವೀನ್ಸ್ ರಸ್ತೆಯ ಕೆಪಿಸಿಸಿ ಕಚೇರಿಯಲ್ಲಿ ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಬ್ರಿಜೇಶ್ ಕಾಳಪ್ಪ ‘ಯಡಿಯೂರಪ್ಪ ಅವರನ್ನು ಮುಖ್ಯಮಂತ್ರಿ ಸ್ಥಾನದಿಂದ ಕೆಳಗಿಳಿಸುವ ಸಂದರ್ಭದಲ್ಲಿ ಸಿ.ಟಿ. ರವಿ, ಬಸನಗೌಡ ಪಾಟೀಲ ಯತ್ನಾಳ, ಕೆ.ಎಸ್. ಈಶ್ವರಪ್ಪ ಸ್ಥಾನದ ಮೇಲೆ ಕಣ್ಣಿಟ್ಟಿದ್ದರು. ಬಸವರಾಜ ಬೊಮ್ಮಾಯಿ ಮುಖ್ಯಮಂತ್ರಿಯಾದ ಬಳಿಕ ಎಲ್ಲರೂ ಕಾಂಗ್ರೆಸ್ ವಿರುದ್ಧ ಕೀಳುಮಟ್ಟದ ಟೀಕೆ ಮಾಡುತ್ತಿದ್ದಾರೆ’ ಎಂದರು.

ಸಿ.ಟಿ. ರವಿ ಮೊದಲು ಇಂದಿರಾ ಗಾಂಧಿಯವರನ್ನು ಟೀಕಿಸಿದರು. ನಂತರ ನೆಹರೂ ವಿರುದ್ಧ ಟೀಕೆ ಮಾಡಿದರು. ಈಗ ವಿನಯ ಕುಲಕರ್ಣಿ ವಿರುದ್ಧ ಮಾತನಾಡಿದ್ದಾರೆ. ಲಕ್ಷ್ಮಣ ಸವದಿ ಚುನಾವಣೆಯಲ್ಲಿ ಸೋತಿದ್ದರು. ಆದರೂ, ಯಾವ ಘನ ಕಾರ್ಯ ಮಾಡಿದ್ದರು ಎಂಬ ಕಾರಣಕ್ಕಾಗಿ ಅವರಿಗೆ ಉಪ ಮುಖ್ಯಮಂತ್ರಿ ಹುದ್ದೆ ನೀಡಲಾಗಿತ್ತು ಎಂಬುದನ್ನು ಹೇಳಲಿ ಎಂದು ಪ್ರಶ್ನಿಸಿದರು.

‘ರಾಜ್ಯದಲ್ಲಿ ಹಿಂದಿನ ಬಿಜೆಪಿ ಸರ್ಕಾರದಲ್ಲಿ ಸಚಿವರಾಗಿದ್ದ ಅರ್ಧದಷ್ಟು ಮಂದಿ ಜೈಲು ಸೇರಿದ್ದರು. ಕೇಂದ್ರ ಗೃಹ ಸಚಿವ ಸಮಿತ್ ಶಾ ವಿರುದ್ಧವೇ 17 ಜನರನ್ನು ನಕಲಿ ಎನ್‌ಕೌಂಟರ್‌ನಲ್ಲಿ ಹತ್ಯೆ ಮಾಡಿಸಿದ ಆರೋಪವಿದೆ. ಅವರೂ ಜೈಲು ಸೇರಿದ್ದರು. ಹೀಗಿರುವಾಗ ವಿನಯ ಕುಲಕರ್ಣಿ ಅವರನ್ನು ಯಾವ ಆಧಾರದಲ್ಲಿ ಟೀಕಿಸುತ್ತಾರೆ’ ಎಂದು ಕೇಳಿದರು.

‘ರವಿ ಅವರು ಒಂದು ಕಾಲದಲ್ಲಿ ಬಡತನದಲ್ಲಿ ಇದ್ದರು. ಈಗ ಅವರನ್ನು ಚಿಕ್ಕಮಗಳೂರಿನ ಜನರು ಲೂಟಿ ರವಿ ಎಂದು ಕರೆಯುತ್ತಾರೆ. ರವಿ ಅವರಿಗೆ ಸಾವಿರ ಕೋಟಿ ರೂಪಾಯಿ ಸಂಪತ್ತು ಎಲ್ಲಿಂದ ಬಂದಿದೆ? ಅದಕ್ಕೆ ಲೆಕ್ಕ ಎಲ್ಲಿದೆ’ ಎಂದು ಪ್ರಶ್ನಿಸಿದರು.

‘ಕ್ಯಾಂಟೀನ್ ಹೆಸರು ಬದಲಾದರೆ ಅನ್ನ ಇಳಿಯಲ್ಲವೇ?’

ಮಂಡ್ಯ: ‘ಇಂದಿರಾ ಕ್ಯಾಂಟೀನ್ ಹೆಸರು ಬದಲಾಯಿಸುವುದು ಬಿಜೆಪಿಯ ಚುನಾವಣಾ ಪ್ರಣಾಳಿಕೆ. ಅನ್ನಪೂರ್ಣೇಶ್ವರಿ ಎಂದು ಹೆಸರಿಟ್ಟರೆ ಅನ್ನ ಗಂಟಲಲ್ಲಿ ಇಳಿಯುವುದಿಲ್ಲವೇ’ ಎಂದು ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ.ರವಿ ಬುಧವಾರ ಪ್ರಶ್ನಿಸಿದರು.

ಮಾಧ್ಯಮ ಸಂವಾದದಲ್ಲಿ ಮಾತನಾಡಿದ ಅವರು ‘ಇಂದಿರಾಗಾಂಧಿ ಭಾವಚಿತ್ರ ವಿರುವುದರಿಂದ ಅದನ್ನು ಬದಲಾಯಿಸಿ ಅನ್ನಪೂರ್ಣೇಶ್ವರಿ ಕ್ಯಾಂಟೀನ್ ಎಂದು ಹೆಸರಿಡುವ ಬಗ್ಗೆ ಮಾತನಾಡಿದ್ದೇನೆ. ಅನ್ನಪೂರ್ಣೇಶ್ವರಿ ಪಾರ್ವತಿಯ ಅಂಶ. ಹೆಸರು ಬದಲಾದರೂ ಅನ್ನ ನೀಡುವ ಸೇವೆ ಮುಂದುವರಿಯಲಿದೆ. ಈ ಕುರಿತು ಪಕ್ಷದ ವೇದಿಕೆಯಲ್ಲಿ ಚರ್ಚಿಸಿ ನಿರ್ಧರಿಸಲಾಗುವುದು’ ಎಂದರು.

‘ನೆಹರೂ ಕುಟುಂಬದ ಸದಸ್ಯರು ನೂರಾರು ಯೋಜನೆಗಳಗೆ ತಮ್ಮದೇ ಹೆಸರಿಟ್ಟು ಕೊಂಡಿದ್ದಾರೆ. ಜವಹರಲಾಲ್ ನೆಹರೂ, ಇಂದಿರಾಗಾಂಧಿ ತಮಗೆ ತಾವೇ ಭಾರತ ರತ್ನ ಕೊಟ್ಟುಕೊಂಡಿ ದ್ದಾರೆ. ಬಿಜೆಪಿ ಬೆಂಬಲದೊಂದಿಗೆ ರಚನೆಯಾಗಿದ್ದ ವಿ.ಪಿ.ಸಿಂಗ್ ನೇತೃತ್ವದ ಸರ್ಕಾರದಲ್ಲಿ ಅಟಲ್ ಬಿಹಾರಿ ವಾಜಪೇಯಿ ಅವರ ಪ್ರಸ್ತಾವದ ಮೇರೆಗೆ ಅಂಬೇಡ್ಕರ್‌ಗೆ ಭಾರತರತ್ನ ನೀಡಲಾಯಿತು’ ಎಂದರು.



ಸಿ.ಟಿ.ರವಿ

‘ಮೇಕೆದಾಟು ಯೋಜನೆ ಜಾರಿ ವಿಚಾರವನ್ನು ಸರ್ಕಾರ ನಿರ್ಲಕ್ಷ್ಯಿಸಿಲ್ಲ. ಕಾವೇರಿ ಅಂತಿಮ ತೀರ್ಪು ಬಂದಿದ್ದು ನೀರು ಹಂಚಿಕೆಯಾಗಿದೆ. ನಮ್ಮ ಪಾಲಿನ ನೀರಿನಲ್ಲಿ ನಾವು ಯಾವುದೇ ಯೋಜನೆಯನ್ನು ಜಾರಿಗೊಳಿಸಬಹುದು. ಆ ಬಗ್ಗೆ ತಮಿಳುನಾಡು ಜನರಿಗಿರುವ ಆತಂಕವನ್ನು ನಿವಾರಿಸಲಾಗುವುದು. ಕುಡಿಯುವ ನೀರಿನ ಯೋಜನೆಗೆ ಅಡ್ಡಿಯಾಗದು’ ಎಂದರು.

‘ಬಿಳಿಯಾನೆಯಾಗಿರುವ ಸಾರ್ವಜನಿಕ ಸಂಸ್ಥೆಗಳನ್ನು ಸಾಕುವುದು ಕಷ್ಟ. ಅವುಗಳ ಉತ್ಪಾದನಾ ಸಾಮರ್ಥ್ಯವನ್ನು ಹೆಚ್ಚಿಸಲು ಆಸ್ತಿ ನಗದೀಕರಣ ಯೋಜನೆಯನ್ನು ಜಾರಿಗೊಳಿಸಲಾಗುತ್ತಿದೆ. ಖಾಸಗಿ ಗುತ್ತಿಗೆ ಪ್ರಕ್ರಿಯೆ ಇಂದು ನಿನ್ನೆಯದಲ್ಲ, 1991ರಿಂದಲೂ ಸಾರ್ವಜನಿಕ ಸಂಸ್ಥೆಗಳನ್ನು ಖಾಸಗಿ ನಿರ್ವಹಣೆಗೆ ಒಳಪಡಿಸಲಾಗುತ್ತಿದೆ’ ಎಂದರು.

ಯತ್ನಾಳ ವಿರುದ್ಧ ಕ್ರಮಕ್ಕೆ ಸಲೀಂ ಅಹ್ಮದ್ ಆಗ್ರಹ

ಬೆಂಗಳೂರು: ಕಾಂಗ್ರೆಸ್ ನಾಯಕರ ವಿರುದ್ಧ ಅವಹೇಳನಕಾರಿಯಾಗಿ ಮಾತನಾಡುತ್ತಿರುವ ಬಿಜೆಪಿ ಶಾಸಕ ಬಸನಗೌಡಸ ಪಾಟೀಲ ಯತ್ನಾಳ ವಿರುದ್ಧ ಕಾನೂನು ಕ್ರಮ ಜರುಗಿಸಬೇಕು ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ ಸಲೀಂ ಅಹ್ಮದ್ ಆಗ್ರಹಿಸಿದರು.

ಯತ್ನಾಳ ವಿರುದ್ಧ ಪ್ರತಿಭಟನೆ ನಡೆಸಿದ ಕಾಂಗ್ರೆಸ್ ಕಾರ್ಯಕರ್ತರನ್ನು ವಿಧಾನಸೌಧ ಠಾಣೆಯ ಪೊಲೀಸರು ವಶಕ್ಕೆ ಪಡೆದಿದ್ದರು. ಬುಧವಾರ ಪೊಲೀಸ್ ಠಾಣೆಗೆ ಭೇಟಿನೀಡಿದ ಬಳಿಕ ಅವರು ಸುದ್ದಿಗಾರರ ಜತೆ ಮಾತನಾಡಿದರು.

‘ಯತ್ನಾಳ ಅವರು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ, ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ವಿರುದ್ಧ ಅವಹೇಳನಕಾರಿಯಾಗಿ ಮಾತನಾಡಿದ್ದರು. ಈ ಕಾರಣದಿಂದ ಯತ್ನಾಳ ವಿರುದ್ಧ ಪ್ರತಿಭಟನೆಗೆ ಕಾಂಗ್ರೆಸ್ ಕಾರ್ಯಕರ್ತರು ಯತ್ನಿಸಿದ್ದರು’ ಎಂದರು.



ಕಲಾಕ್ಷಿತಿ ಸ್ಕೂಲ್ ಆಫ್ ಫೈನ್ ಆರ್ಟ್ ಸಂಸ್ಥೆಯು ನಗರದಲ್ಲಿ ಆಯೋಜಿಸಿದ ಭರತನಾಟ್ಯ ರಂಗಪ್ರವೇಶ ಕಾರ್ಯಕ್ರಮದಲ್ಲಿ ಡಾ.ಎಂ.ಆರ್.ಕೃಷ್ಣಮೂರ್ತಿ ಅವರ ಶಿಷ್ಯೆ ಜಾಜಿ ರಾಜು ಭರತನಾಟ್ಯ ಪ್ರಸ್ತುತಪಡಿಸಿದರು.

ಬ್ಯಾಂಕ್ವೆಟ್ ಹಾಲ್‌ನಲ್ಲಿ ಮಾಜಿ ಸಿಎಂಗಳ ಭಾವಚಿತ್ರ ಹಾಕಿ: ಹೊರಟ್ಟಿ

ಬೆಂಗಳೂರು: ರಾಜ್ಯದ ಅಭಿವೃದ್ಧಿಗೆ ಬಹುವಾಗಿ ಶ್ರಮಿಸಿದ ಮಾಜಿ ಮುಖ್ಯಮಂತ್ರಿಗಳ ಭಾವಚಿತ್ರಗಳನ್ನು ಬ್ಯಾಂಕ್ವೆಟ್ ಹಾಲ್‌ನಲ್ಲಿ ಹಾಕಿ ಅವರಿಗೆ ಗೌರವ ಸಲ್ಲಿಸುವ ಕೆಲಸ ಮಾಡಬೇಕು ಎಂದು ವಿಧಾನಪರಿಷತ್ತಿನ ಸಭಾಪತಿ ಬಸವರಾಜ ಹೊರಟ್ಟಿ ಅವರು ಮುಖ್ಯಮಂತ್ರಿಗೆ ಮನವಿ ಮಾಡಿದ್ದಾರೆ.

ಈ ಬಗ್ಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಪತ್ರ ಬರೆದಿರುವ ಹೊರಟ್ಟಿ, ಮಾಜಿ ಮುಖ್ಯಮಂತ್ರಿಗಳ ಜನ್ಮ ದಿನ ಹಾಗೂ ನಿಧನರಾದ ದಿನಗಳಲ್ಲಿ ಅವರ ಪ್ರತಿಮೆಗಳು ಇಲ್ಲದ ಕಾರಣ, ಯಾವುದೇ ರೀತಿಯ ಗೌರವ ಸಲ್ಲಿಸುವಂತಹ ವ್ಯವಸ್ಥೆಗಳಿರುವುದಿಲ್ಲ. ಹೀಗಾಗಿ, ಕಡಿದಾಳ ಮಂಜಪ್ಪ,ಎಸ್. ಆರ್.ಕಂಠಿ, ಬಿ.ಡಿ.ಜತ್ತಿ, ಆರ್. ಗುಂಡೂರಾವ್, ವೀರೇಂದ್ರ ಪಾಟೀಲ, ಎಸ್. ಬಂಗಾರಪ್ಪ, ರಾಮಕೃಷ್ಣ ಹೆಗಡೆ, ಎಸ್.ಆರ್.ಬೊಮ್ಮಾಯಿ, ಜೆ.ಎಚ್. ಪಟೇಲ ಅವರಿಗೆ ಇಂತಹ ಗೌರವಗಳು ಸಿಗುತ್ತಿಲ್ಲ ಎಂದು ಹೇಳಿದ್ದಾರೆ.

ದಿವಂಗತರಾಗಿರುವ ಎಲ್ಲ ಮಾಜಿ ಮುಖ್ಯಮಂತ್ರಿಗಳಿಗೂ ಸಮಾನ ಗೌರವ ನೀಡುವ ಉದ್ದೇಶದಿಂದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಅವರೆಲ್ಲರ ಪೂರ್ಣ ಪ್ರಮಾಣದ ಭಾವ ಚಿತ್ರಗಳನ್ನು ಅವರ ಅಧಿಕಾರದ ಅವಧಿ ನಮೂದಿಸಿ, ಗೌರವ ಸಲ್ಲಿಸುವ ಕೆಲಸ ಮಾಡಬೇಕು. ಇದೇ 29ರಂದು ರಾಮಕೃಷ್ಣ ಹೆಗಡೆಯವರ ಹುಟ್ಟುಹಬ್ಬದ ದಿನದಂದು ಈ ಯೋಜನೆಗೆ ನಾಂದಿ ಹಾಡಲಿ ಎಂದು ಅವರು ಪತ್ರದಲ್ಲಿ ವಿನಂತಿಸಿದ್ದಾರೆ.


ರಾಜಕೀಯೇತರ ವಿಷಯಗಳ ಬಗ್ಗೆ ಚರ್ಚೆ: ಮುಖ್ಯಮಂತ್ರಿ

ಶಾ ಭೇಟಿಯಾದ ಬೊಮ್ಮಾಯಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಬುಧವಾರ ಇಲ್ಲಿ ಭೇಟಿಯಾದರು.

ಜಲಸಂಪನ್ಮೂಲ ಸಚಿವ ಗೋವಿಂದ ಕಾರಜೋಳ ಅವರೊಂದಿಗೆ ಬೊಮ್ಮಾಯಿ ಅವರು ಶಾ ಅವರ ಜತೆ ಸುಮಾರು ಒಂದು ಗಂಟೆ ಸಮಾಲೋಚನೆ ನಡೆಸಿದರು.



ಬೊಮ್ಮಾಯಿ



ಅಮಿತ್ ಶಾ

’ಅಮಿತ್ ಶಾ ಅವರ ಜತೆ ರಾಜಕೀಯೇತರ ವಿಷಯಗಳ ಬಗ್ಗೆ ಚರ್ಚಿಸಲಾಯಿತು. ಕೇವಲ ಅಭಿವೃದ್ಧಿ ವಿಷಯಗಳ ಬಗ್ಗೆ ಮಾತ್ರ ಅವರು ಚರ್ಚಿಸಿದರು. ರಾಜ್ಯದಲ್ಲಿ ಕೈಗೊಂಡಿರುವ ಕೆಲವು ಯೋಜನೆಗಳಿಗೆ ಸಲಹೆ ನೀಡಿದ್ದಾರೆ. ಸೆಪ್ಟೆಂಬರ್ 2ರಂದು ಶಾ ಅವರು ಹುಬ್ಬಳ್ಳಿಗೆ ಭೇಟಿ ನೀಡಲಿದ್ದಾರೆ. ಈ ಸಂದರ್ಭದಲ್ಲಿ ರಾಜ್ಯ ಸರ್ಕಾರದ ಕೆಲವು ಅಭಿವೃದ್ಧಿ ಕಾರ್ಯಕ್ರಮಗಳಲ್ಲಿಯೂ ಪಾಲ್ಗೊಳ್ಳುವಂತೆ ಕೋರಿದ್ದೇನೆ’ ಎಂದು ಬೊಮ್ಮಾಯಿ ಅವರು ಸುದ್ದಿಗಾರರಿಗೆ ತಿಳಿಸಿದರು.

‘ರಾಜ್ಯದಲ್ಲಿನ ರಾಜಕೀಯ ವಿಷಯಗಳ ಬಗ್ಗೆ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ಅವರ ಜತೆ ಸಮಾಲೋಚನೆ ನಡೆಸುವಂತೆ ಶಾ ತಿಳಿಸಿದ್ದಾರೆ. ಆದರೆ, ನಡ್ಡಾ ಅವರು ತಮ್ಮ ಪೂರ್ವನಿಗದಿತ ಕಾರ್ಯಕ್ರಮಗಳಲ್ಲಿ ಭಾಗಿಯಾಗಿದ್ದರಿಂದ ಭೇಟಿಯಾಗಲು ಸಾಧ್ಯವಾಗಲಿಲ್ಲ’ ಎಂದು ತಿಳಿಸಿದರು.

ಸಚಿವ ಸಂಪುಟ ವಿಸ್ತರಣೆ ಕುರಿತ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ’ಹಲವರು ತಮ್ಮ ಬೇಡಿಕೆಗಳನ್ನಿಟ್ಟಿದ್ದಾರೆ. ಇದು ತಪ್ಪು ಅಲ್ಲ. ನಡ್ಡಾ ಅವರ ಜತೆ ಚರ್ಚಿಸಿ, ಈ ಬಗ್ಗೆ ಅಂತಿಮ ನಿರ್ಧಾರ ಕೈಗೊಳ್ಳಲಾಗುವುದು. ಆದರೆ, ಯಾವಾಗ ಸಂಪುಟ ವಿಸ್ತರಣೆ ನಡೆಯುತ್ತದೆ ಎಂದು ಈಗ ಹೇಳಲು ಸಾಧ್ಯವಿಲ್ಲ’ ಎಂದರು.

‘ಮೀಸಲಾತಿಯ ಸಾಧಕ–ಬಾಧಕಗಳ ಚರ್ಚೆ’

ಲಿಂಗಾಯತ ಪಂಚಮಸಾಲಿ ಸಮುದಾಯಕ್ಕೆ 2ಎ ಮೀಸಲಾತಿ ನೀಡುವ ಕುರಿತು ಪ್ರತಿಕ್ರಿಯಿಸಿದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು, ’ಹಲವು ನಾಯಕರು, ಸ್ವಾಮೀಜಿಗಳು ಈ ವಿಷಯದ ಬಗ್ಗೆ ನನ್ನ ಜತೆ ಚರ್ಚಿಸಿದ್ದಾರೆ. ಯಾವುದೇ ನಿರ್ಧಾರ ಕೈಗೊಳ್ಳುವ ಮುನ್ನ ಅದರ ಸಾಧಕ–ಬಾಧಕಗಳ ಬಗ್ಗೆ ಪರಿಶೀಲಿಸಬೇಕು ಎಂದು ತಿಳಿಸಿದ್ದೇನೆ. ಸಮುದಾಯದ ಎಲ್ಲ ನಾಯಕರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಕಾನೂನಿನ ವ್ಯಾಪ್ತಿಯಲ್ಲಿ ಈ ಬಗ್ಗೆ ನಿರ್ಧಾರ ಕೈಗೊಳ್ಳಲಾಗುವುದು’ ಎಂದು ತಿಳಿಸಿದ್ದಾರೆ.

ಸಿ.ಎಂ. ಜತೆ ಚರ್ಚೆ

ರಾಜಧಾನಿಗೆ ಬಂದಿರುವ ಶಾಸಕರಾದ ರಮೇಶ ಜಾರಕಿಹೊಳಿ, ಶ್ರೀಮಂತ ಪಾಟೀಲ್ ಮತ್ತು ಮಹೇಶ ಕುಮಠಳ್ಳಿ ಅವರು ಸಹ ಮುಖ್ಯಮಂತ್ರಿ ಅವರನ್ನು ಭೇಟಿಯಾಗಿ ಸಚಿವ ಸಂಪುಟಕ್ಕೆ ಸೇರಿಸಿಕೊಳ್ಳುವಂತೆ ಆಗ್ರಹಿಸಿದರು. ಕೆಎಂಎಫ್ ಅಧ್ಯಕ್ಷ ಬಾಲಚಂದ್ರ ಜಾರಕಿಹೊಳಿ ಸಹ ಈ ಸಂದರ್ಭದಲ್ಲಿ ಇದ್ದರು.

ಸೋನು ಸೂದ್ ಸನ್‌ಪ್ಯೂರ್ ಬ್ರ್ಯಾಂಡ್ ರಾಯಭಾರಿ



ಬೆಂಗಳೂರು: ನಟ ಹಾಗೂ ಸಾಮಾಜಿಕ ಕಾರ್ಯಕರ್ತ ಸೋನು ಸೂದ್ ಅವರನ್ನು ತನ್ನ ಬ್ರ್ಯಾಂಡ್ ರಾಯಭಾರಿ ಆಗಿ ನೇಮಿಸಿರುವುದಾಗಿ ಅಡುಗೆ ಎಣ್ಣೆಯ ಬ್ರ್ಯಾಂಡ್ ಆಗಿರುವ ಸನ್‌ಪ್ಯೂರ್ ಹೇಳಿದೆ.

‘ಸೋನು ಸೂದ್ ತಮ್ಮ ನಿಸ್ವಾರ್ಥ ಸೇವೆಯ ಕಾರಣಕ್ಕೆ ಈಗ ಸನ್‌ಪ್ಯೂರ್‌ನ ವಿಶ್ವಾಸಾರ್ಹ ಪ್ರತಿನಿಧಿಯಾಗಿ ಆಯ್ಕೆಯಾಗಿದ್ದು, ಅವರ ಬದ್ಧತೆಯಿಂದ ಧನಾತ್ಮಕ ಬದಲಾವಣೆ, ಆರೋಗ್ಯಕರ ಪರಿಸರ ನಿರ್ಮಾಣ ಸಾಧ್ಯವಾಗಲಿದೆ’ ಎಂದು ಕಂಪನಿಯು ಪ್ರಕಟಣೆಯಲ್ಲಿ ಹೇಳಿದೆ.

‘ಸೋನು ಸೂದ್ ನಮ್ಮ ಬ್ರ್ಯಾಂಡ್ ಅಂಬಾಸಿಡರ್ ಆಗಿರುವುದು ನಮಗೆ ಗೌರವ ತಂದಿದೆ ಹಾಗೂ ಖುಷಿ ನೀಡಿದೆ. ಜನರಿಂದ ಏನನ್ನೂ ನಿರೀಕ್ಷಿಸದೆ, ಪ್ರತಿಫಲಾಪೇಕ್ಷೆಯಿಲ್ಲದೆ ಕೆಲಸ ಮಾಡಿದ ಅವರ ಬದ್ಧತೆ ನಮ್ಮ ಬ್ರ್ಯಾಂಡ್ ಅನ್ನು ಮತ್ತಷ್ಟು ಗಟ್ಟಿಗೊಳಿಸಲು ನೆರವಾಗುತ್ತದೆ’ ಎಂದು ಸನ್‌ಪ್ಯೂರ್‌ನ ಮಾರಾಟ ಮತ್ತು ಮಾರುಕಟ್ಟೆ ನಿರ್ದೇಶಕ ಮನ್ನನ್ ಖಾನ್ ಹೇಳಿದ್ದಾರೆ.

ಅಪರಾಧ ಪ್ರಕರಣಗಳಲ್ಲಿ ಸಾಕ್ಷ್ಯಗಳನ್ನು ವೈಜ್ಞಾನಿಕವಾಗಿ ಪರೀಕ್ಷಿಸಲು ಅನುಕೂಲ

‘ಸಂಚಾರಿ ಪ್ರಯೋಗಾಲಯ’ ವಾಹನಗಳು ಸೇವೆಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಪರಾಧ ಪ್ರಕರಣಗಳಲ್ಲಿ ಸಾಕ್ಷ್ಯಗಳನ್ನು ವೈಜ್ಞಾನಿಕವಾಗಿ ಪರೀಕ್ಷಿಸಲು ಅನುಕೂಲವಾಗುವಂತೆ ‘ಸಂಚಾರಿ ಪ್ರಯೋಗಾಲಯ’ ವಾಹನಗಳನ್ನು ಪರಿಚಯಿಸಲಾಗಿದ್ದು, ಈ ವಾಹನಗಳ ಸೇವೆಗೆ ಗೃಹ ಸಚಿವ ಆರಗ ಜ್ಞಾನೇಂದ್ರ ಅವರು ಬುಧವಾರ ಚಾಲನೆ ನೀಡಿದರು.

ಕೋರಮಂಗಲದಲ್ಲಿರುವ ಕರ್ನಾಟಕ ಮೀಸಲು ಪೊಲೀಸ್ ಪಡೆಯ (ಕೆಎಸ್‌ಆರ್‌ಪಿ) ಮೈದಾನದಲ್ಲಿ ಕಾರ್ಯಕ್ರಮ ಆಯೋಜಿಸಲಾಗಿತ್ತು. ಆಡುಗೋಡಿಯಲ್ಲಿ ನಿರ್ಮಿಸಿರುವ ಪೊಲೀಸ್ ಪಬ್ಲಿಕ್ ಶಾಲೆಯ ಶಿಶುವಿಹಾರ, ಆಡಳಿತ ಕಚೇರಿ ಕಟ್ಟಡ ಹಾಗೂ ಕೆಎಸ್‌ಆರ್‌ಪಿ ಕ್ರೀಡಾಂಗಣ ಮತ್ತು ವಿಧಿವಿಜ್ಞಾನ ಪ್ರಯೋಗಾಲಯದ ನವೀಕೃತ ಕಟ್ಟಡಗಳನ್ನೂ ಜ್ಞಾನೇಂದ್ರ ಉದ್ಘಾಟಿಸಿದರು.



‘ಸಂಚಾರಿ ಪ್ರಯೋಗಾಲಯ’ ವಾಹನಗಳು

ಅಪರಾಧ ಪ್ರಕರಣಗಳಲ್ಲಿ ಪೊಲೀಸರು ಜಪ್ತಿ ಮಾಡಿದ ಸಾಕ್ಷ್ಯಗಳನ್ನು ಪರೀಕ್ಷೆಗೆಂದು ಮಡಿವಾಳದ ವಿಧಿವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಲಾಗುತ್ತದೆ. ಸಾಕ್ಷ್ಯಗಳ ಸಂಖ್ಯೆ ಹೆಚ್ಚಿದ್ದರಿಂದ ಪರೀಕ್ಷೆ ವರದಿ ಸಿದ್ಧಪಡಿಸುವುದು ವಿಳಂಬವಾಗುತ್ತಿದೆ. ಇದೇ ಕಾರಣಕ್ಕೆ ‘ಸಂಚಾರಿ ಪ್ರಯೋಗಾಲಯ’ ವಾಹನಗಳನ್ನು ಸಿದ್ಧಪಡಿಸಲಾಗಿದೆ.

ವಾಹನದಲ್ಲಿ ತಜ್ಞರು ಇರಲಿದ್ದಾರೆ. ನಗರದ ವಿಭಾಗ ಹಾಗೂ ಹೊರ ಜಿಲ್ಲೆಗಳಿಗೂ ವಾಹನಗಳು ತೆರಳಿವೆ. ಸ್ಥಳದಲ್ಲೇ ಸಾಕ್ಷ್ಯಗಳನ್ನು ಪರೀಕ್ಷಿಸಿ ತ್ವರಿತವಾಗಿ ವರದಿ ನೀಡಲು ತಜ್ಞರು ಕ್ರಮ ಕೈಗೊಳ್ಳಲಿದ್ದಾರೆ.

ಕಾರ್ಯಕ್ರಮದಲ್ಲಿ ಮಾತನಾಡಿದ ಆರಗ ಜ್ಞಾನೇಂದ್ರ, ‘ಪ್ರಕರಣಗಳಲ್ಲಿ ಆರೋಪಿಗಳಿಗೆ ಶಿಕ್ಷೆ ಕೊಡಿಸಲು ಪ್ರಯೋಗಾಲಯಗಳ ಪಾತ್ರ ಮಹತ್ವದ್ದು. ಹೀಗಾಗಿ, ಸಂಚಾರಿ ಪ್ರಯೋಗಾಲಯ ವಾಹನ ಪರಿಚಯಿಸಲಾಗಿದೆ’ ಎಂದರು.

‘ಪೊಲೀಸರ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ನೀಡಲು ಪಬ್ಲಿಕ್ ಶಾಲೆ ಪ್ರಾರಂಭಿಸಲಾಗಿದೆ. ಪ್ರತಿಯೊಬ್ಬ ಪೊಲೀಸರು ತಮ್ಮ ಮಕ್ಕಳನ್ನು ವಿದ್ಯಾವಂತರನ್ನಾಗಿ ಮಾಡಿ ಸಮಾಜದ ಆಸ್ತಿಯನ್ನಾಗಿ ಮಾಡಬೇಕು’ ಎಂದೂ ಹೇಳಿದರು.

ಶಾಸಕ ರಾಮಲಿಂಗಾರೆಡ್ಡಿ, ಗೃಹ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ರಜನೀಶ್ ಗೋಯೆಲ್, ರಾಜ್ಯ ಪೊಲೀಸ್ ಮಹಾನಿರ್ದೇಶಕ ಪ್ರವೀಣ್ ಸೂದ್, ಎಡಿಜಿಪಿಗಳಾದ ಅಲೋಕ್ ಕುಮಾರ್, ಎ.ಎಸ್.ಎನ್. ಮೂರ್ತಿ ಹಾಗೂ ಇತರರು ಇದ್ದರು.

18 ಸಾವಿರಕ್ಕೂ ಅಧಿಕ ಅಭ್ಯರ್ಥಿಗಳು ಪರೀಕ್ಷೆಯಲ್ಲಿ ಭಾಗಿ

ಪಿಸ್ಯಾಟ್: ರ‍್ಯಾಂಕ್ ಪಟ್ಟಿ ಬಿಡುಗಡೆ

ಪ್ರಜಾವಾಣಿ ವಾರ್ತೆ



‘ಪಿಸ್ಯಾಟ್2021’ ಪರೀಕ್ಷೆಯಲ್ಲಿ ಮೊದಲ ಐದು ಸ್ಥಾನ ಪಡೆದ ಶ್ರೀಕರ ಎ., ಆದಿತ್ಯ ಪ್ರಭಾಶ್, ಅರ್ನವ್ ಅರವಿಂದ್, ಯಶಸ್ ಎಂ. ಸಾಲಿಯಾನ್ ಹಾಗೂ ವಿದ್ಯಾ ಸಾಗರ್ ಜಿ. ಅವರನ್ನು ಎಂ.ಆರ್. ದೊರೆಸ್ವಾಮಿ ಅಭಿನಂದಿಸಿದರು. ವಿಶ್ವವಿದ್ಯಾಲಯದ ಕುಲಪತಿ ಡಾ. ಸೂರ್ಯಪ್ರಸಾದ್ ಜಿ. ಇದ್ದರು.

ಬೆಂಗಳೂರು: ಬಿ.ಟೆಕ್ ಕೋರ್ಸ್‌ಗಳ ಪ್ರವೇಶಕ್ಕೆ ಪಿಇಎಸ್ ವಿಶ್ವವಿದ್ಯಾಲಯ ನಡೆಸಿದ ‘ಪಿಸ್ಯಾಟ್-2021’ ಪರೀಕ್ಷೆಯನ್ನು 18 ಸಾವಿರಕ್ಕೂ ಅಧಿಕ ಅಭ್ಯರ್ಥಿಗಳು ಎದುರಿಸಿದ್ದು, ಇವರಲ್ಲಿ ಮೊದಲ ಐದು ಸ್ಥಾನವನ್ನು ನಗರದ ಅಭ್ಯರ್ಥಿಗಳೇ ಪಡೆದುಕೊಂಡಿದ್ದಾರೆ.

ಬುಧವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ವಿಶ್ವವಿದ್ಯಾಲಯದ ಕುಲಾಧಿಪತಿ ಎಂ. ಆರ್. ದೊರೆಸ್ವಾಮಿ ಅವರು ‘ಪಿಸ್ಯಾಟ್-2021’ ಪರೀಕ್ಷೆಯ ರ‍್ಯಾಂಕ್ ಪಟ್ಟಿ ಬಿಡುಗಡೆ ಮಾಡಿ, ಮೊದಲ ಐದು ಸ್ಥಾನ ಪಡೆದ ಅಭ್ಯರ್ಥಿಗಳನ್ನು ಅಭಿನಂದಿಸಿದರು.

‘ಕೋವಿಡ್ ನಡುವೆಯೂ ದೇಶದಾದ್ಯಂತ 43 ಕೇಂದ್ರಗಳಲ್ಲಿ ಈ ಪರೀಕ್ಷೆ ನಡೆಸಲಾಗಿತ್ತು. ಪರೀಕ್ಷೆಗೆ ಅರ್ಜಿ ಸಲ್ಲಿಸುವ ಅಭ್ಯರ್ಥಿಗಳ ಸಂಖ್ಯೆ ವರ್ಷದಿಂದ ವರ್ಷಕ್ಕೆ ಹೆಚ್ಚಳವಾಗುತ್ತಿದೆ. ಶ್ರೀಕರ ಎ. ಮೊದಲ ರ‍್ಯಾಂಕ್, ಆದಿತ್ಯ ಪ್ರಭಾಶ್ ದ್ವಿತೀಯ ರ‍್ಯಾಂಕ್, ಅರ್ನವ್ ಅರವಿಂದ್ ತೃತೀಯ ರ‍್ಯಾಂಕ್, ಯಶಸ್ ಎಂ. ಸಾಲಿಯಾನ್ ನಾಲ್ಕನೇ ರ‍್ಯಾಂಕ್ ಹಾಗೂ ವಿದ್ಯಾ ಸಾಗರ್ ಜಿ. ಐದನೇ ರ‍್ಯಾಂಕ್ ಪಡೆದಿದ್ದಾರೆ. ಪರೀಕ್ಷೆ ಎದುರಿಸಿದ ಎಲ್ಲ ವಿದ್ಯಾರ್ಥಿಗಳಿಗೂ ರ‍್ಯಾಂಕ್ ನೀಡಲಿದ್ದು, ಕೌನ್ಸೆಲಿಂಗ್‌ನಲ್ಲಿ ಭಾಗವಹಿಸಲು ಅರ್ಹತೆ ಪಡೆದಿದ್ದಾರೆ. ಪಿಸ್ಯಾಟ್ ಮೊದಲ ಸುತ್ತಿನ ಕೌನ್ಸೆಲಿಂಗ್ ಸೆ.4 ಮತ್ತು ಸೆ.5ರಂದು ನಡೆಯಲಿದೆ’ ಎಂದು ತಿಳಿಸಿದರು.

‘ವಿಶ್ವವಿದ್ಯಾಲಯದಿಂದ ನವೋದ್ಯಮಿಗಳನ್ನು ಪ್ರೋತ್ಸಾಹಿಸುವ ಉದ್ದೇಶದಿಂದ ಪಿಇಎಸ್ ವೆಂಚರ್ ಲ್ಯಾಬ್ಸ್ (ಅನ್ವೇಷಣೆ ಪ್ರಯೋಗಾಲಯ) ಅನ್ನು ಕೋ-ಕ್ರಿಯೇಟ್ ವೆಂಚರ್ ಸಹಯೋಗದೊಂದಿಗೆ ತೆರೆಯಲಾಗಿದೆ. 7 ಕಂಪನಿಗಳು ನಮ್ಮ ಪ್ರಯೋಗಾಲಯದ ಸಹಾಯ ಕೋರಿವೆ. ವಿದ್ಯಾರ್ಥಿಗಳ ಹೊಸ ಆಲೋಚನೆ ಹಾಗೂ ಯೋಜನೆಗಳಿಗೆ ಇದು ಸಹಕಾರಿಯಾಗಲಿದ್ದು, ಆರ್ಥಿಕ ನೆರವನ್ನು ನೀಡಲಾಗುತ್ತದೆ’ ಎಂದು ಅವರು ವಿವರಿಸಿದರು.

100 ವಿದ್ಯಾರ್ಥಿಗಳಿಗೆ ಉದ್ಯೋಗ: ‘ವಿಶ್ವವಿದ್ಯಾಲಯದಲ್ಲಿ ಉದ್ಯೋಗ ನೇಮಕಾತಿ ಪ್ರಕ್ರಿಯೆ ಇದೇ 15ರಿಂದ ಪ್ರಾರಂಭವಾಗಿದೆ. ಈ ಬಾರಿ ಬಿ.ಟೆಕ್‌ನಲ್ಲಿ 1,456 ಅಭ್ಯರ್ಥಿಗಳು ಉದ್ಯೋಗಾವಕಾಶ ಪಡೆಯಲು ಅರ್ಹರಾಗಿದ್ದಾರೆ. ಈಗಾಗಲೇ 8 ಕಂಪನಿಗಳು ಭೇಟಿ ನೀಡಿದ್ದು, 91 ಅಭ್ಯರ್ಥಿಗಳಿಗೆ ಉದ್ಯೋಗ ದೊರೆತಿದೆ. 79 ವಿದ್ಯಾರ್ಥಿಗಳಿಗೆ ಇಂಟರ್ನ್‌ಶಿಪ್ ಅವಕಾಶ ಲಭ್ಯವಾಗಿದೆ. 61 ಕಂಪನಿಗಳು ವಿವಿಗೆ ಭೇಟಿ ನೀಡಲು ಹೆಸರು ನೋಂದಾಯಿಸಿಕೊಂಡಿವೆ. ಈ ಬಾರಿ ಈಗಾಗಲೇ ಉದ್ಯೋಗಾವಕಾಶ ಪಡೆದವರಲ್ಲಿ ಕನಿಷ್ಠ ₹ 28 ಲಕ್ಷ ಹಾಗೂ ಗರಿಷ್ಠ ₹ 40 ಲಕ್ಷ ವಾರ್ಷಿಕ ಪ್ಯಾಕೇಜ್ ಪಡೆದಿದ್ದಾರೆ’ എಂದು ತಿಳಿಸಿದರು.

‘ಕುಲಪತಿ ನೇಮಕದಲ್ಲಿ ಪಾರದರ್ಶಕತೆ ಇರಲಿ’

‘ಕುಲಪತಿ ಆಯ್ಕೆಯಲ್ಲಿ ಪಾರದರ್ಶಕತೆ ಮರೆಯಾಗಿದೆ. ಸರ್ಕಾರವು ಕುಲಪತಿಯನ್ನು ಆಯ್ಕೆ ಮಾಡಲು ರಚಿಸುವ ಶೋಧನಾ ಸಮಿತಿಗೆ ಹಾಲಿ ಕುಲಪತಿಯನ್ನು ನೇಮಿಸಲಾಗುತ್ತದೆ. ಅವರಿಂದ ಪಾರದರ್ಶಕ ಆಯ್ಕೆಯನ್ನು ನಿರೀಕ್ಷಿಸಲು ಸಾಧ್ಯವಿಲ್ಲ. ಹಾಗಾಗಿ, ಈ ಆಯ್ಕೆಗೆ ಶಿಕ್ಷಣ ತಜ್ಞರನ್ನು ಒಳಗೊಂಡ ಸಮಿತಿ ರಚಿಸಬೇಕು’ ಎಂದು ಎಂ.ಆರ್. ದೊರೆಸ್ವಾಮಿ ತಿಳಿಸಿದರು.

‘ಆತ್ಮಾವಲೋಕನ ಸಭೆ’ಯಲ್ಲಿ ಮುಖಂಡರ ಸಹಮತ

ಅಶಿಸ್ತು ತೋರಿದವರ ವಿರುದ್ಧ ಕ್ರಮ ಅನಿವಾರ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನಸಭೆಯ ಕಲಾಪದಲ್ಲಿ ಗದ್ದಲ ಸೃಷ್ಟಿಸುವ ಮತ್ತು ಅಶಿಸ್ತು ತೋರುವ ಸದಸ್ಯರ ವಿರುದ್ಧ ಕಠಿಣ ಕ್ರಮ ಜರುಗಿಸಿದರೆ ಮಾತ್ರ ಅಂತಹ ಘಟನೆಗಳನ್ನು ತಡೆಯಲು ಸಾಧ್ಯ ಎಂಬ ಒಮ್ಮತದ ಅಭಿಪ್ರಾಯವನ್ನು ವಿಧಾನಸಭೆ ಅಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಅಧ್ಯಕ್ಷತೆಯಲ್ಲಿ ಬುಧವಾರ ನಡೆದ ‘ಆತ್ಮಾವಲೋಕನ ಸಭೆ’ಯಲ್ಲಿ ಪಾಲ್ಗೊಂಡಿದ್ದ ವಿವಿಧ ರಾಜಕೀಯ ಪಕ್ಷಗಳ ಮುಖಂಡರು ವ್ಯಕ್ತಪಡಿಸಿದ್ದಾರೆ.

‘ವಿಧಾನಮಂಡಲ ಅಧಿವೇಶನ ಆರಂಭಕ್ಕೂ ಮುನ್ನ ಎಲ್ಲ ಪಕ್ಷಗಳೂ ತಮ್ಮ ಸದಸ್ಯರ ಸಭೆ ನಡೆಸಿ, ಅಗತ್ಯ ಸಲಹೆ ಮತ್ತು ಸೂಚನೆಗಳನ್ನು ನೀಡಬೇಕು. ಸದನದ ಕಲಾಪದಲ್ಲಿ ಶಿಸ್ತಿನಿಂದ ವರ್ತಿಸುವಂತೆ ಮತ್ತು ಘನತೆಯ ನಡವಳಿಕೆ ಪ್ರದರ್ಶಿಸುವಂತೆ ತಮ್ಮ ಸದಸ್ಯರನ್ನು ತಯಾರು ಮಾಡುವುದು ಎಲ್ಲ ರಾಜಕೀಯ ಪಕ್ಷಗಳ ಜವಾಬ್ದಾರಿ’ ಎಂಬ ಅಭಿಪ್ರಾಯ ಸಭೆಯಲ್ಲಿ ವ್ಯಕ್ತವಾಗಿದೆ ಎಂದು ವಿಧಾನಸಭಾಧ್ಯಕ್ಷರ ಕಚೇರಿಯ ಪ್ರಕಟಣೆ ತಿಳಿಸಿದೆ.

‘ಸದನದ ಘನತೆ ಹೆಚ್ಚಿಸಲು ಮತ್ತು ಸಂಸದೀಯ ಮೌಲ್ಯಗಳ ಕುಸಿತ ತಡೆಯಲು ಸಭಾಧ್ಯಕ್ಷರು ತಮ್ಮ ಪ್ರಯತ್ನವನ್ನು ಮುಂದುವರಿಸಬೇಕು ಎಂದು ಸಭೆಯಲ್ಲಿದ್ದ ಮುಖಂಡರು ಹೇಳಿದರು. ಸದನದಲ್ಲಿ ಅಶಿಸ್ತಿನಿಂದ ವರ್ತಿಸಿ, ಗದ್ದಲ ಸೃಷ್ಟಿಸುವವರನ್ನು ಅಧಿವೇಶನದ ಉಳಿದ ಅವಧಿಗೆ ಅಮಾನತು ಮಾಡಬೇಕು ಎಂಬ ಅಭಿಪ್ರಾಯವನ್ನು ಎಲ್ಲರೂ ವ್ಯಕ್ತಪಡಿಸಿದರು’ ಎಂದು ಸಭಾಧ್ಯಕ್ಷರು ತಿಳಿಸಿದ್ದಾರೆ.

ಗೌರವವಿಲ್ಲದ ಮತ್ತು ಸ್ವೀಕಾರಾರ್ಹವಲ್ಲದ ನಡವಳಿಕೆಯು ಶಾಸಕಾಂಗದ ಘನತೆಯನ್ನು ತಗ್ಗಿಸುತ್ತದೆ. ಅದನ್ನು ತಪ್ಪಿಸಲು ಅಗತ್ಯವಿದ್ದರೆ ನಿಯಮಗಳಿಗೆ ಸೂಕ್ತ ತಿದ್ದುಪಡಿಗಳನ್ನು ತರಬೇಕು ಎಂಬ ಸಲಹೆಯೂ ಬಂದಿದೆ ಎಂದು ಮಾಹಿತಿ ನೀಡಿದ್ದಾರೆ.

‘ಕಡ್ಡಾಯ ಆರ್‌ಟಿ–ಪಿಸಿಆರ್ ವರದಿ ಬೇಡ’

ಪ್ರಜಾವಾಣಿ ವಾರ್ತೆ

ನವದೆಹಲಿ: ಕೋವಿಡ್–19 ವಿರುದ್ಧ ಎರಡು ಡೋಸ್ ಲಸಿಕೆಗಳನ್ನು ಪಡೆದಿರುವ ಮತ್ತು ರೋಗ ಲಕ್ಷಣಗಳು ಇಲ್ಲದ ವ್ಯಕ್ತಿಗಳಿಂದ ‘ನೆಗೆಟಿವ್ ಆರ್‌ಟಿ–ಪಿಸಿಆರ್’ ವರದಿ ನೀಡುವಂತೆ ಒತ್ತಾಯಿಸಬಾರದು ಎಂದು ಕೇಂದ್ರ ಆರೋಗ್ಯ ಸಚಿವಾಲಯವು ಬುಧವಾರ ರಾಜ್ಯ ಸರ್ಕಾರಗಳಿಗೆ ಸೂಚಿಸಿದೆ.

ಆದರೆ, 2ನೇ ಡೋಸ್ ಪಡೆದು 15 ದಿನಗಳಾಗಿರಬೇಕು ಮತ್ತು ಲಸಿಕೆ ಹಾಕಿಸಿಕೊಂಡ ಬಗ್ಗೆ ಕೋವಿನ್ ಪೋರ್ಟಲ್‌ನಿಂದ ಪಡೆದಿರುವ ಪ್ರಮಾಣ ಪತ್ರ ಹೊಂದಿರಬೇಕು ಎಂದು ಸೂಚಿಸಲಾಗಿದೆ. ‘ಇಂತಹ ವ್ಯಕ್ತಿಗಳು ವಿಮಾನ ಪ್ರಯಾಣ, ರೈಲು, ಜಲ ಮತ್ತು ರಸ್ತೆ ಮೂಲಕ ಸಂಚರಿಸಲು ಯಾವುದೇ ರೀತಿಯ ನಿರ್ಬಂಧಗಳನ್ನು ಹೇರಬಾರದು’ ಎಂದು ತಿಳಿಸಿದೆ.

ಐಬಿಎಸ್: 3 ಹೊಸ ಕೋರ್ಸ್ ಆರಂಭ

ಪ್ರಜಾವಾಣಿ ವಾರ್ತೆ



ಪ್ರೊ.ಎಸ್. ರಘುನಾಥ್ (ಮಧ್ಯ) ವಿವಿಧ ಪದವಿ ಕೋರ್ಸ್‌ಗಳ ಪೋಸ್ಟರ್ ಬಿಡುಗಡೆ ಮಾಡಿದರು. ಪ್ರೊ. ಸಿ.ಎಸ್.ಶೈಲಜನ್ ಮತ್ತು ಪ್ರೊ.ವೇದ್ ಪುರೀಶ್ವರ್ ಇದ್ದರು
– ಪ್ರಜಾವಾಣಿ ಚಿತ್ರ

ಬೆಂಗಳೂರು: ನಗರದ ಮೈಸೂರು ರಸ್ತೆಯ ಬಳಿಯಲ್ಲಿರುವ ಐಬಿಎಸ್ ಬಿಸಿನೆಸ್ ಸ್ಕೂಲ್ 2021–22ನೇ ಶೈಕ್ಷಣಿಕ ವರ್ಷದಿಂದ ಹೊಸದಾಗಿ ಮೂರು ಪದವಿ ಕೋರ್ಸ್‌ಗಳನ್ನು ಪರಿಚಯಿಸಿದೆ.

‘ಬಿಬಿಎ-ಎಂಬಿಎ, ಬಿಕಾಂ-ಎಂಬಿಎ ಮತ್ತು ಬಿಎಸ್ಸಿ- ಡೇಟಾ ಅನಾಲಿಟಿಕ್ಸ್ ಎಂಬ ಮೂರು ಕೋರ್ಸ್‌ಗಳನ್ನು ಪ್ರಾರಂಭಿಸಲಾಗಿದ್ದು, ದ್ವಿತೀಯ ಪಿಯುಸಿಯಲ್ಲಿ ಶೇ 50ಕ್ಕಿಂತ ಹೆಚ್ಚಿನ ಅಂಕಗಳಿಸಿದ ವಿದ್ಯಾರ್ಥಿಗಳು ಪ್ರವೇಶ ಲಭ್ಯ’ ಎಂದು ಐಸಿಎಫ್ಎಐ ಫೌಂಡೇಷನ್ ಫಾರ್ ಹೈಯರ್ ಎಜುಕೇಷನ್ ಕುಲಪತಿ ಪ್ರೊ.ಜೆ.ಮಹೇಂದರ್ ರೆಡ್ಡಿ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

‘ಹೈದರಾಬಾದ್ ಕ್ಯಾಂಪಸ್‌ನಲ್ಲಿ ಈಗಾಗಲೇ ಈ ಪದವಿ ಕೋರ್ಸ್‌ಗಳನ್ನು ಪರಿಚಯಿಸಲಾಗಿದ್ದು, ಸಾಕಷ್ಟು ಬೇಡಿಕೆ ಇದೆ. ಪ್ರಸಕ್ತ ವರ್ಷದಲ್ಲಿ ಐಬಿಎಸ್ ಸ್ಕೂಲ್ ಕ್ಯಾಂಪಸ್‌ನಲ್ಲಿಯೂ ಕೋರ್ಸ್‌ಗಳನ್ನು ಪರಿಚಯಿಸಲಾಗುತ್ತಿದ್ದು, ಬೆಂಗಳೂರಿನ ವಿದ್ಯಾರ್ಥಿಗಳಿಗೆ ಅನುಕೂಲ ಆಗಲಿದೆ. ಉದ್ಯೋಗಾವಕಾಶಗಳ ದೃಷ್ಟಿಯಿಂದಲೂ ಇವು ಉತ್ತಮ ಕೋರ್ಸ್‌ಗಳಾಗಿವೆ’ ಎಂದು ಹೇಳಿದರು.

ಭಾರತೀಯ ನಿರ್ವಹಣಾ ಸಂಸ್ಥೆಯ (ಐಐಎಂ) ಪ್ರೊ.ಎಸ್. ರಘುನಾಥ್, ‘ಎಂಬಿಎ ಮತ್ತು ದತ್ತಾಂಶ ವಿಶ್ಲೇಷಣೆ (ಡೇಟಾ ಅನಾಲಿಟಿಕ್ಸ್) ಕೋರ್ಸ್‌ಗೆ ಉದ್ಯೋಗ ಮಾರುಕಟ್ಟೆಯಲ್ಲಿ ಹೆಚ್ಚು ಬೇಡಿಕೆ ಇದೆ. ಕೋರ್ಸ್ ಮುಗಿಸಿದ ವಿದ್ಯಾರ್ಥಿಗಳಿಗೆ ಕ್ಯಾಂಪಸ್ ಸಂದರ್ಶನದಲ್ಲೇ ಉದ್ಯೋಗ ದೊರೆಯಲಿದೆ’ ಎಂದು ಅವರು ಹೇಳಿದರು.

‘ಕೋರ್ಸ್ ಪ್ರವೇಶ ಪ್ರಕ್ರಿಯೆ ಆರಂಭವಾಗಿದ್ದು, ಸೆ. 2ನೇ ವಾರದವರೆಗೆ ಅರ್ಜಿ ಸಲ್ಲಿಸಬಹುದು. ಅಕ್ಟೋಬರ್‌ನಿಂದ ತರಗತಿಗಳನ್ನು ಆರಂಭಿಸಲು ನಿರ್ಧರಿಸಲಾಗಿದೆ. ಸದ್ಯ ಈ ಐಬಿಎಸ್ ಕ್ಯಾಂಪಸ್‌ನಲ್ಲಿ ಸ್ನಾತಕೋತ್ತರ ಡಿಪ್ಲೊಮಾ ಕೋರ್ಸ್‌ಗಳನ್ನು ನಡೆಸಲಾಗುತ್ತಿತ್ತು. 20 ಎಕರೆ ವಿಶಾಲ ಪ್ರದೇಶದಲ್ಲಿ ಕ್ಯಾಂಪಸ್ ತಲೆ ಎತ್ತಿದೆ’ ಎಂದು ಅವರು ಹೇಳಿದರು.

ಐಸಿಎಫ್ಎಐ ಸಮೂಹ ಸಲಹೆಗಾರ ಪ್ರೊ.ಎ.ವಿ.ವೇದ್‌ಪುರೀಶ್ವರ್, ಪ್ರೊ. ಸಿ.ಎಸ್.ಶೈಲಜನ್ ಇದ್ದರು.

ಮೇಕೆದಾಟು: ಶೀಘ್ರ ಅನುಮೋದನೆ– ಕೇಂದ್ರ

ಪ್ರಜಾವಾಣಿ ವಾರ್ತೆ



ನವದೆಹಲಿ: ‘ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರದ ಮುಂದಿನ ಸಭೆಯ ಕಾರ್ಯಸೂಚಿಯಲ್ಲಿ ಮೇಕೆದಾಟು ಕುರಿತಾದ ವಿಸ್ತೃತ ಯೋಜನಾ ವರದಿಯನ್ನು(ಡಿಪಿಆರ್) ಸೇರಿಸುವುದಾಗಿ ಕೇಂದ್ರ ಜಲ ಶಕ್ತಿ ಸಚಿವ ಗಜೇಂದ್ರ ಸಿಂಗ್ ಶೇಖಾವತ್ ಭರವಸೆ ನೀಡಿದ್ದಾರೆ’ ಎಂದು ಮುಖ್ಯಮಂತ್ರಿ ಬಸವರಾಜ್ ಬೊಮ್ಮಾಯಿ ಬುಧವಾರ ತಿಳಿಸಿದ್ದಾರೆ.

ಈ ವಿಷಯದ ಬಗ್ಗೆ ಎರಡು ಗಂಟೆಗಳ ಕಾಲ ಶೇಖಾವತ್ ಅವರ ಜತೆ ಚರ್ಚಿಸಿದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಕುಡಿಯುವ ನೀರಿನ ಯೋಜನೆಯ ಅಗತ್ಯದ ಬಗ್ಗೆ ಅವರಿಗೆ ವಿವರಿಸಿದ್ದು, ಶೀಘ್ರ ಡಿಪಿಆರ್‌ಗೆ ಅನುಮೋದನೆ ನೀಡುವಂತೆ ಕೋರಿದ್ದೇನೆ. ಸಚಿವರು ರಾಜ್ಯದ ಮನವಿಗೆ ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ’ ಎಂದು ತಿಳಿಸಿದ್ದಾರೆ.

‘ಕೇಂದ್ರ ಸರ್ಕಾರ ಶೀಘ್ರ ಯೋಜನೆಗೆ ಅನುಮೋದನೆ ನೀಡುವ ಭರವಸೆ ಇದೆ’ ಎಂದು ಅವರು ತಿಳಿಸಿದ್ದಾರೆ.

ಮೇಕೆದಾಟು ಯೋಜನೆಯು ಅಂತರರಾಜ್ಯ ನದಿ ವ್ಯಾಪ್ತಿಯಲ್ಲಿ ಇರುವುದರಿಂದ ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರದ ಅನುಮತಿ ಅಗತ್ಯ ಎಂದು ಶೇಖಾವತ್ ಅವರು ಇತ್ತೀಚೆಗೆ ಸಂಸತ್‌ನಲ್ಲಿ ಹೇಳಿಕೆ ನೀಡಿದ್ದರು.

‘ಶೇಖಾವತ್ ಅವರನ್ನು ಭೇಟಿಯಾದ ಸಂದರ್ಭದಲ್ಲಿ ತಮಿಳುನಾಡಿನ ಕಾವೇರಿ–ವೈಗೈ–ಗುಂಡಾರು ನದಿ ಜೋಡಣೆಯ ಯೋಜನೆಗೆ ಆಕ್ಷೇಪ ವ್ಯಕ್ತಪಡಿಸಲಾಗಿದೆ’ ಎಂದು ಮುಖ್ಯಮಂತ್ರಿ ಬೊಮ್ಮಾಯಿ ಅವರು ತಿಳಿಸಿದ್ದಾರೆ.

‘ಭದ್ರಾ ಮೇಲ್ದಂಡೆ ಯೋಜನೆಗೆ ರಾಷ್ಟ್ರೀಯ ಯೋಜನೆಯ ಸ್ಥಾನಮಾನ ನೀಡುವ ಬೇಡಿಕೆಗೆ ಶೀಘ್ರ ಅನುಮೋದನೆ ದೊರಕಿಸಿಕೊಡಲು ಪ್ರಯತ್ನಿಸಲಾಗುವುದು. ಕೇಂದ್ರ ಹಣಕಾಸು ಸಚಿವಾಲಯದಿಂದ ಅನುಮೋದನೆ ದೊರೆತ ಬಳಿಕ ಕೇಂದ್ರ ಸಚಿವ ಸಂಪುಟದಲ್ಲಿ ಈ ವಿಷಯ ಮಂಡನೆಯಾಗಲಿದೆ’ ಎಂದು ವಿವರಿಸಿದ್ದಾರೆ.

ಹೆಬ್ಬಾಳ ಶಾಸಕ ಬೈರತಿ ಸುರೇಶ್ ಅಸಮಾಧಾನ

‘ಸರ್ಕಾರದ ನೀತಿಯಿಂದ ಬಡವರಿಗೆ ತೊಂದರೆ’

ಪ್ರಜಾವಾಣಿ ವಾರ್ತೆ



ಶಾಸಕ ಬೈರತಿ ಸುರೇಶ್ ಮಾತನಾಡಿದರು. ಬಿಬಿಎಂಪಿ ಮಾಜಿ ಉಪಮೇಯರ್‌ಗಳಾದ ಎಂ.ಆನಂದ್, ವಿಜಯಕುಮಾರ್, ಪಾಲಿಕೆಯ ಮಾಜಿ ಸದಸ್ಯರಾದ ಪಿ.ವಿ. ಮಂಜುನಾಥಬಾಬು, ಕೆ.ಎಂ.ಚೇತನ್, ಮುಖಂಡರಾದ ಕೆ.ಗೌರೀಶ್, ಮಂಜುನಾಥ್, ಬಸವರಾಜು ಇತರರು ಇದ್ದರು

ಯಲಹಂಕ: ‘ಬಿಜೆಪಿ ಸರ್ಕಾರದ ಕೆಲವು ನೀತಿಗಳಿಂದ ಕೊರೊನಾ ಸಂದರ್ಭದಲ್ಲಿ ಎಲ್ಲ ಜಾತಿಯ ಬಡಜನರು ಬಹಳ ತೊಂದರೆ ಅನುಭವಿಸಿದ್ದಾರೆ. ಏನೂ ಪ್ರಶ್ನಿಸದ ಅಸಹಾಯಕ ಸ್ಥಿತಿಯಲ್ಲಿರುವ ಜನರು, ಸೂಕ್ತ ಸಮಯದಲ್ಲಿ ಬಿಜೆಪಿಗೆ ತಕ್ಕಪಾಠ ಕಲಿಸಲಿದ್ದಾರೆ’ ಎಂದು ಹೆಬ್ಬಾಳ ಶಾಸಕ ಬೈರತಿ ಸುರೇಶ್ ಹೇಳಿದರು.

ಬಾಗಲೂರು ರಸ್ತೆಯ ಕಣ್ಣೂರು ಸಮೀಪದಲ್ಲಿ ಆಯೋಜಿಸಿದ್ದ ಬ್ಯಾಟರಾಯನಪುರ ವಿಧಾನಸಭಾ ಕ್ಷೇತ್ರದ ಕುರುಬ ಸಮಾಜದ ಮುಖಂಡರು ಹಾಗೂ ಕಾರ್ಯಕರ್ತರ ಸಭೆಯಲ್ಲಿ ಮಾತನಾಡಿದ ಅವರು, ‘ಕುರುಬ ಜನಾಂಗದ ಬಂಧುಗಳು ತಮ್ಮಲ್ಲಿರುವ ಒಳಜಗಳಗಳನ್ನು ತೊರೆದು, ಎಲ್ಲರೂ ಒಗ್ಗಟ್ಟಾಗುವ ಮೂಲಕ ಮುಂಬರುವ ಚುನಾವಣೆಗಳಲ್ಲಿ ಒಳ್ಳೆಯ ವ್ಯಕ್ತಿಗಳಿಗೆ ಬೆಂಬಲ ನೀಡಬೇಕು’ ಎಂದರು.

‘ಅಂಬೇಡ್ಕರ್ ಪ್ರತಿಪಾದಿಸಿದ ಸಾಮಾಜಿಕ ನ್ಯಾಯ ಸಿಗಬೇಕಾದರೆ ಶಿಕ್ಷಣವೊಂದೇ ಪ್ರಮುಖ ಅಸ್ತ್ರವಾಗಿದೆ’ ಎಂದು ತಿಳಿಸಿದರು.

ಕೋವಿಡ್: ಶಾಂತಿನಗರದ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಕುಟುಂಬವೊಂದರ ಅನುಭವ

ಲಸಿಕೆ ಪಡೆಯಲು ಬಂದವರಿಗೆ ಬಲವಂತದಿಂದ ಪರೀಕ್ಷೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ನಿತ್ಯ ಹೆಚ್ಚೂ ಕಡಿಮೆ 52 ಸಾವಿರದಿಂದ 63 ಸಾವಿರ ಮಂದಿಯನ್ನು ಕೋವಿಡ್ ಪರೀಕ್ಷೆಗೆ ಒಳಪಡಿಸಲಾಗುತ್ತಿದೆ. ಕೆಲವು ಸರ್ಕಾರಿ ಕೇಂದ್ರಗಳಲ್ಲಿ ಕೋವಿಡ್ ಲಸಿಕೆ ಪಡೆಯಲು ಬಂದವರನ್ನು ಬಲವಂತದಿಂದ ಕೋವಿಡ್ ಪರೀಕ್ಷೆಗೆ ಒಳಪಡಿಸುತ್ತಿರುವುದರಿಂದ ಇಷ್ಟೊಂದು ಸಂಖ್ಯೆಯ ಪರೀಕ್ಷೆಗಳು ಸಾಧ್ಯವಾಗುತ್ತಿವೆ ಎಂದು ಮೂಲಗಳು ತಿಳಿಸಿವೆ.

ಬಿಬಿಎಂಪಿ ಮೂಲಗಳ ಪ್ರಕಾರ, ಪೂರ್ವ ವಲಯದಲ್ಲಿ ಕೋವಿಡ್ ಪರೀಕ್ಷೆಗೆ ಒಳಪಡುವ ಪ್ರತಿ 10 ಮಂದಿಯಲ್ಲಿ ಮೂವರು ಲಸಿಕೆ ಪಡೆಯಲು ಬಂದವರೇ ಆಗಿದ್ದಾರೆ. ಅವರನ್ನು ಒತ್ತಾಯಪೂರ್ವಕವಾಗಿ ಪರೀಕ್ಷೆಗೆ ಒಳಪಡಿಸಲಾಗಿದೆ. ಶಾಂತಿನಗರದಲ್ಲಿರುವ ನಗರ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಲಸಿಕೆ ಪಡೆಯಲು ತೆರಳಿದ್ದ ಐವರು



ಸಾಂದರ್ಭಿಕ ಚಿತ್ರ

ಸದಸ್ಯರ ಕುಟುಂಬವೊಂದು ತನಗಾದ ಅನುಭವವನ್ನು ಹಂಚಿಕೊಂಡಿದೆ.

'ಲಸಿಕೆಯ ನೀಡುವುದಕ್ಕೆ ಮುನ್ನ ಆರ್‌ಟಿಪಿಸಿಆರ್ ಪರೀಕ್ಷೆಗಾಗಿ ಗಂಟಲ ದ್ರವದ ಮಾದರಿಯನ್ನು ನೀಡಬೇಕಾಗುತ್ತದೆ ಎಂದು ಹೇಳಿದರು' ಎಂಬುದಾಗಿ 48 ವರ್ಷದ ಮಹಿಳೆಯೊಬ್ಬರು ತಿಳಿಸಿದರು. ಅವರಿಗೆ ಕೋವಿಡ್ ಇರುವುದು ಪರೀಕ್ಷೆಯಲ್ಲಿ ದೃಢಪಟ್ಟಿತ್ತು. ಸೋಂಕಿನ ಯಾವುದೇ ಲಕ್ಷಣ ಹೊಂದಿಲ್ಲದ ಆ ಮಹಿಳೆಯು ಈಗ ಆತಂಕಕ್ಕೆ ಒಳಗಾಗಿದ್ದಾರೆ.

'ಬಿಬಿಎಂಪಿಯು ರ್‍ಯಾಪಿಡ್ ಆ್ಯಂಟಿಜೆನ್ ಪರೀಕ್ಷೆಯನ್ನು ಮಾಡುತ್ತಿದ್ದರೆ, ಸೋಂಕು ಹೊಂದಿರುವವರಿಗೆ ಲಸಿಕೆ ನೀಡಬಾರದು ಎಂಬ ಕಾರಣಕ್ಕೆ ಪರೀಕ್ಷೆ ಮಾಡಿದ್ದಾರೆ ಎಂದು ಭಾವಿಸಬಹುದಿತ್ತು. ಆದರೆ, ಅವರು ಆರ್‌ಟಿಪಿಸಿಆರ್ ಪರೀಕ್ಷೆ ನಡೆಸಿ, ಅದರ ಫಲಿತಾಂಶಕ್ಕೂ ಕಾಯದೆಯೇ ಕೋವಿಡ್ ಲಸಿಕೆಯನ್ನು ನೀಡುವುದು ಅರ್ಥವಿಲ್ಲದ ನಡೆ' ಎಂದು ಅವರು ತಿಳಿಸಿದರು.

ಬಿಬಿಎಂಪಿ ಪೂರ್ವ ವಲಯದ ಅಧಿಕಾರಿಯೊಬ್ಬರು, 'ಈ ವಿಚಾರ ತಿಳಿದಿಲ್ಲ' ಎಂದು ಪ್ರತಿಕ್ರಿಯಿಸಿದರು.

'ಐಸಿಎಂಆರ್ ನಿಯಮಗಳ ಪ್ರಕಾರ ಕೊರೋನಾ ಸೋಂಕು ಪತ್ತೆಯಾದ ವ್ಯಕ್ತಿ ಗುಣಮುಖರಾಗಿ 3 ತಿಂಗಳು ಕಳೆಯುವವರೆಗೆ ಅವರಿಗೆ ಲಸಿಕೆ ನೀಡುವಂತಿಲ್ಲ. ಆದರೆ, ಕೆಲವು ಬಿಬಿಎಂಪಿ ತಂಡಗಳು ಉದ್ದೇಶಪೂರ್ವಕವಾಗಿ ಈ ನಿಯಮವನ್ನು ಉಲ್ಲಂಘಿಸುತ್ತಿವೆ. ಅವರಿಗೆ ದೈನಂದಿನ ಗುರಿ ಸಾಧನೆಯಷ್ಟೇ ಮುಖ್ಯ' ಎಂದು ಅಧಿಕಾರಿಯೊಬ್ಬರು ತಿಳಿಸಿದರು.

ಅಶೋಕ ವಿಶ್ವವಿದ್ಯಾಲಯದ ತ್ರಿವೇದಿ ಸ್ಕೂಲ್ ಆಫ್ ಬಯೊಸೈನ್ಸಸ್‌ನ ವೈರಾಣು ತಜ್ಞ ಡಾ.ಶಾಹಿದ್ ಜಮೀಲ್, 'ಕೊರೊನಾ ಸೋಂಕು ಇರುವಾಗ ಲಸಿಕೆ ಪಡೆದರೆ, ಆರೋಗ್ಯದ ಮೇಲೆ ಯಾವುದೇ ನೇರ ಪರಿಣಾಮ ಉಂಟಾಗದು. ಆದರೆ, ಲಸಿಕೆಯ ಡೋಸ್ ವ್ಯರ್ಥವಾಗುತ್ತದೆ ಅಷ್ಟೇ' ಎಂದರು.

'ಕೊರೊನಾ ಸೋಂಕು ಹೊಂದಿರುವ ವ್ಯಕ್ತಿಯಲ್ಲಿ ಭಾರಿ ಪ್ರಮಾಣದಲ್ಲಿ ಪ್ರತಿಕಾಯಗಳು ಉತ್ಪತ್ತಿಯಾಗಿರುತ್ತವೆ. ಅವರಲ್ಲಿ ಪ್ರತಿಕಾಯಗಳು ಸ್ಥಿರೀಕರಣಗೊಳ್ಳಬೇಕಾದರೆ, ಲಸಿಕೆ ನೀಡುವುದಕ್ಕೆ ಮುನ್ನ ಅವರ ರೋಗ ನಿರೋಧಕತೆಯ ನಿರ್ದಿಷ್ಟ ಮಟ್ಟಕ್ಕೆ ತಗ್ಗಬೇಕು. ಈ ಕಾರಣಕ್ಕಾಗಿಯೇ ಕೇಂದ್ರ ಸರ್ಕಾರವು, ಕೋವಿಡ್‌ನಿಂದ ಗುಣಮುಖರಾದವರು ಮೂರು ತಿಂಗಳು ಕಳೆದ ಬಳಿಕ ಲಸಿಕೆ ಪಡೆಯಬೇಕು ಎಂದು ಸಮಯ ನಿಗದಿ ಪಡಿಸಿದೆ' ಎಂದು ಅವರು ವಿವರಿಸಿದರು.

'ಕೋವಿಡ್ ಇರುವಾಗಲೇ ಲಸಿಕೆ ಪಡೆದಿರುವ ಮಹಿಳೆ ಮುಂದೆ ಲಸಿಕೆಯ ಎರಡನೇ ಡೋಸ್ ಪಡೆದರೂ ಅದು ಮೊದಲ ಡೋಸ್ ಪಡೆದ ಹಾಗೆ' ಎಂದು ಅವರು ತಿಳಿಸಿದರು.

ಗುರಿ ಸಾಧನೆಗೆ ಕೋವಿಡ್ ಪರೀಕ್ಷೆ: ಬಿಬಿಎಂಪಿ ನಿರಾಕರಣೆ

ಲಸಿಕೆ ಪಡೆಯುವವರನ್ನು ಆರ್‌ಟಿಪಿಸಿಆರ್ ಪರೀಕ್ಷೆಗೆ ಒಳಪಡಿಸುವುದು ಶಿಷ್ಟಾಚಾರಕ್ಕೆ ವಿರುದ್ಧವಾದುದು ಎಂಬುದನ್ನು ಪೂರ್ವ ವಲಯದ ಅಧಿಕಾರಿ ಡಾ.ಶ್ರೀನಿವಾಸ್ ಒಪ್ಪಿಕೊಂಡರು. 'ಸೋಂಕಿನ ಲಕ್ಷಣ ಇರುವವರನ್ನು ರ್‍ಯಾಟ್ ಪರೀಕ್ಷೆಗೆ ಒಳಪಡಿಸಬಹುದು' ಎಂದು ಅವರು ಅಭಿಪ್ರಾಯಪಟ್ಟರು. ಲಸಿಕೆ ಪಡೆಯಲು ಬಂದವರನ್ನು ಪಿಎಚ್‌ಸಿಗಳಲ್ಲಿ ಕೋವಿಡ್ ಪರೀಕ್ಷೆಗೆ ನಿಗದಿಪಡಿಸಿದ ದೈನಂದಿನ ಗುರಿ ಸಾಧನೆ ಸಲುವಾಗಿ ಕೋವಿಡ್ ಪರೀಕ್ಷೆಗೆ ಒಳಪಡಿಸಲಾಗುತ್ತಿದೆ ಎಂಬುದನ್ನು ಅವರು ಅಲ್ಲಗಳೆದರು.

ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ, 'ನಗರದ ಎಲ್ಲ ಪಿಎಚ್‌ಸಿಗಳ ಸಿಬ್ಬಂದಿಗೆ ಈ ವಿಚಾರವಾಗಿ ಎಚ್ಚರಿಕೆ ನೀಡುತ್ತೇವೆ. ಈ ಬಗ್ಗೆ ಸಲಹೆಗಳನ್ನೂ ನೀಡಲಿದ್ದೇವೆ' ಎಂದು ತಿಳಿಸಿದರು.

ಕೋವಿಡ್ ಅಂಕಿ–ಅಂಶ

ಆಧಾರ: ಕೋವಿಡ್19 ಇಂಡಿಯಾ, ಒಆರ್‌ಜಿ

	ವಿಶ್ವ	ಭಾರತ
ಒಟ್ಟು ಪ್ರಕರಣ	21.43 ಕೋಟಿ ▲	3.25 ಕೋಟಿ ▲
ಸಕ್ರಿಯ ಪ್ರಕರಣ	1.80 ಕೋಟಿ ▲	3.27 ಲಕ್ಷ ▲
ಗುಣಮುಖ	19.18 ಕೋಟಿ ▲	3.17 ಕೋಟಿ ▲
ಸಾವು	44.71 ಲಕ್ಷ ▲	4.36 ಲಕ್ಷ ▲

ದಿನದ ಮಾಹಿತಿ

	ವಿಶ್ವ	ಭಾರತ
ಹೊಸ ಪ್ರಕರಣ	6.64 ಲಕ್ಷ ▲	46,227 ▲
ಗುಣಮುಖ	6.26 ಲಕ್ಷ ▲	34,091 ▲
ಸಾವು	10,483 ▲	605 ▼

ಎಲ್ಲಿ ಹೆಚ್ಚು ಪ್ರಕರಣ (ಹಿಂದಿನ 24 ಗಂಟೆಗಳಲ್ಲಿ)

ಅಮೆರಿಕ	1.47 ಲಕ್ಷ ▲
ಇರಾನ್	40,623 ▲
ಬ್ರೆಜಿಲ್	31,014 ▲

ಎಲ್ಲಿ ಹೆಚ್ಚು ಸಕ್ರಿಯ ಪ್ರಕರಣಗಳು (ಲಕ್ಷಗಳಲ್ಲಿ)

ಅಮೆರಿಕ	77.02 ▲
ಬ್ರಿಟನ್	12.77 ▼
ಇರಾನ್	6.52 ▲

(*ರಾತ್ರಿ 12 ಗಂಟೆಯ ವರೆಗಿನ ಮಾಹಿತಿ)

ಎಲ್ಲಿ ಹೆಚ್ಚು ಸಾವು

ಮಹಾರಾಷ್ಟ್ರ	1.36 ಲಕ್ಷ ▲
ತಮಿಳುನಾಡು	34,788 ▲
ದೆಹಲಿ	25,080 ▲

ಎಲ್ಲಿ ಹೆಚ್ಚು ಪ್ರಕರಣ (ಲಕ್ಷಗಳಲ್ಲಿ)

ಮಹಾರಾಷ್ಟ್ರ	64.37 ▲
ಕೇರಳ	38.83 ▲
ತಮಿಳುನಾಡು	26.05 ▲

ಪ್ರಜಾವಾಣಿ ಗ್ರಾಫಿಕ್ಸ್

ಬೆಂಗಳೂರು ನಗರ ಜಿಲ್ಲೆಯ ಕುರಿತು ಮಾಹಿತಿ ನೀಡಿದ ಜಿಲ್ಲಾಧಿಕಾರಿ

1 ಕೋಟಿ ಮಂದಿಗೆ ಕೋವಿಡ್ ಲಸಿಕೆ ವಿತರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ನಗರ ಜಿಲ್ಲೆಯಲ್ಲಿ 1 ಕೋಟಿಗೂ ಅಧಿಕ ಮಂದಿಗೆ ಕೋವಿಡ್ ಲಸಿಕೆ ನೀಡಲಾಗಿದೆ.

ನಗರದ ವಿವಿಧ ಲಸಿಕಾ ಕೇಂದ್ರಗಳಲ್ಲಿ ಕೋವಿಡ್ ಲಸಿಕೆ ಪಡೆದವರ ಒಟ್ಟು ಸಂಖ್ಯೆ ಬುಧವಾರ ಸಂಜೆ ವೇಳೆ 1 ಕೋಟಿಯ ಗಡಿ ದಾಡಿತು.

ನಗರ ಜಿಲ್ಲೆಯಲ್ಲಿ ಇದುವರೆಗೆ ಒಟ್ಟು 1,00,34,598 ಮಂದಿ ಲಸಿಕೆ ಪಡೆದಿದ್ದಾರೆ. ಇವರಲ್ಲಿ ಲಸಿಕೆಯ ಎರಡೂ ಡೋಸ್‌ಗಳನ್ನು ಪಡೆದವರು 24,43,914 ಮಂದಿ ಹಾಗೂ ಒಂದು ಡೋಸ್ ಮಾತ್ರ ಪಡೆದವರ ಸಂಖ್ಯೆ 75,90,684.

'ಬೆಂಗಳೂರು ನಗರ ಜಿಲ್ಲೆಯ 5 ತಾಲ್ಲೂಕುಗಳು, ಬಿಬಿಎಂಪಿಯ 198 ವಾರ್ಡ್‌ಗಳು, 6 ಪುರಸಭೆಗಳು, 1 ನಗರಸಭೆ, 87 ಗ್ರಾಮ ಪಂಚಾಯಿತಿಗಳ 1038 ಗ್ರಾಮಗಳಲ್ಲಿ ಈ ಲಸಿಕೆಗಳನ್ನು ನೀಡಲಾಗಿದೆ.



ಕೋವಿಡ್ ಮೂರನೇ ಅಲೆ ನಿಯಂತ್ರಣಕ್ಕೆ ಲಸಿಕೆ ನೀಡುವುದೇ ಪ್ರಮುಖ ಅಸ್ತ್ರ. ಎಲ್ಲರ ಸಾಂಘಿಕ ಪ್ರಯತ್ನದಿಂದ ಈ ಸಾಧನೆ ಸಾಧ್ಯವಾಗಿದೆ

ಜೆ.ಮಂಜುನಾಥ್, ಜಿಲ್ಲಾಧಿಕಾರಿ, ಬೆಂಗಳೂರು ನಗರ ಜಿಲ್ಲೆ

ಜಿಲ್ಲೆಯಲ್ಲಿ ಬಿಬಿಎಂಪಿ ಹೊರತುಪಡಿಸಿ ಉಳಿದ ಕಡೆ ಲಸಿಕೆ ವಿತರಣೆಯಲ್ಲಿ ಶೇ 90 ಗುರಿಸಾಧನೆ ಆಗಿದೆ. ಬಿಬಿಎಂಪಿ ವ್ಯಾಪ್ತಿಯಲ್ಲಿ ಶೇ 70 ರಷ್ಟು ಮಂದಿ ಕನಿಷ್ಠ ಪಕ್ಷ ಒಂದು ಡೋಸ್ ಲಸಿಕೆ ಪಡೆದಿದ್ದಾರೆ. ಲಸಿಕೆ ಪಡೆದವರಲ್ಲಿ ಗಂಭಿರ ಸ್ವರೂಪದ ಅಡ್ಡ ಪರಿಣಾಮ ಉಂಟಾದ ಯಾವುದೇ ದೂರು ದಾಖಲಾಗಿಲ್ಲ ಅನ್ನುವುದು ಸಂತಸದ ವಿಚಾರ' ಎಂದು ಜಿಲ್ಲಾಧಿಕಾರಿ ಜೆ.ಮಂಜುನಾಥ್ 'ಪ್ರಜಾವಾಣಿ'ಗೆ ತಿಳಿಸಿದರು.

'2021ರ ಜನವರಿ16ರಂದು ಆರೋಗ್ಯ ಕಾರ್ಯಕರ್ತರಿಗೆ ಕೋವಿಡ್ ಲಸಿಕೆ ನೀಡುವ ಮೂಲಕ ನಗರದಲ್ಲೂ ಲಸಿಕಾ ಅಭಿಯಾನ ಆರಂಭಗೊಂಡಿತ್ತು. ಕೋವಿಡ್ ನಿಯಂತ್ರಣ ಕಾರ್ಯದ ಮುಂಚೂಣಿ ಕಾರ್ಯಕರ್ತರಿಗೆ ಲಸಿಕೆ ನೀಡುವ ಕಾರ್ಯ ಫೆ.8ರಿಂದ ಆರಂಭವಾಗಿತ್ತು. ಸರ್ಕಾರಿ ನೌಕರರು ಈ ಹಂತದಲ್ಲಿ ಲಸಿಕೆ ಪಡೆದಿದ್ದರು. 45 ವರ್ಷ ಮೇಲ್ಪಟ್ಟವರಿಗೆ ಮಾರ್ಚ್ 1ರಿಂದ ಲಸಿಕೆ ನೀಡಲಾಗಿದೆ. 18 ವರ್ಷ ಮೇಲ್ಪಟ್ಟವರಿಗೆ ಮೇ 10ರಿಂದ ಲಸಿಕೆ ನೀಡಲಾಗಿದೆ' ಎಂದು ಅವರು ತಿಳಿಸಿದರು.

'ಅಂಗವಿಕಲರು ಸೇರಿದಂತೆ ಕೆಲವು ವಿಶೇಷ ವರ್ಗಗಳಿಗೆ ಲಸಿಕೆ ಪಡೆಯಲು ಉಚಿತ ವಾಹನ ಸೌಲಭ್ಯ ಒದಗಿಸಲಾಗಿದೆ. ಉದ್ದಿಮೆಗಳಿರುವಲ್ಲಿಗೆ ತೆರಳಿ ಲಸಿಕೆ ವಿತರಣೆಗೆ ವಿಶೇಷ ಅಭಿಯಾನ ಹಮ್ಮಿಕೊಳ್ಳಲಾಗಿದೆ' ಎಂದು ಅವರು ತಿಳಿಸಿದರು.

ಸಿಬ್ಬಂದಿಗೆ ಕೃತಜ್ಞತೆ ಸಲ್ಲಿಕೆ: 'ಬಿಬಿಎಂಪಿ, ಜಿಲ್ಲಾಡಳಿತ, ಜನಪ್ರತಿನಿಧಿಗಳು, ಸಂಘ ಸಂಸ್ಥೆಗಳೆಲ್ಲ ಸೇರಿ ಕೆಲಸ ಮಾಡುವ ಮೂಲಕ ನಾವಿದ್ದನ್ನು ಸಾಧಿಸಿದ್ದೇವೆ. ಸಾರ್ವಜನಿಕರು ಕೂಡಾ ಉತ್ಸಾಹದಿಂದ ಲಸಿಕೆ ಪಡೆದಿದ್ದಾರೆ. ಲಸಿಕೆ ವಿತರಣೆಯ ಉಸ್ತುವಾರಿ ನೋಡಿಕೊಂಡ ವೈದ್ಯರಿಗೆ ಹಾಗೂ ಲಸಿಕೆ ನೀಡಿದ ಆರೋಗ್ಯ ಸಿಬ್ಬಂದಿಗೆ ಕೃತಜ್ಞತೆ ಸಲ್ಲಿಸುತ್ತೇನೆ' ಎಂದು ಜಿಲ್ಲಾಧಿಕಾರಿ ಜೆ. ಮಂಜುನಾಥ್ ತಿಳಿಸಿದರು.

ಲಸಿಕೆ ಪಡೆದವರ ವಿವರ (ಲಕ್ಷಗಳಲ್ಲಿ)	
18–45 ವರ್ಷದೊಳಗಿನವರು	50.6
45 ವರ್ಷ ಮೇಲ್ಪಟ್ಟವರು	39.7
ಮುಂಚೂಣಿ ಕಾರ್ಯಕರ್ತರು	5.7
ಆರೋಗ್ಯ ಕಾರ್ಯಕರ್ತರು	4.1

ಕೇಬಲ್ ಅಳವಡಿಕೆ: ವಿದ್ಯುತ್ ವ್ಯತ್ಯಯ

ಬೆಂಗಳೂರು: ನಗರದಲ್ಲಿ ಭೂಗತ ಕೇಬಲ್ ಅಳವಡಿಕೆ ಕಾರ್ಯ ಕೈಗೆತ್ತಿಕೊಳ್ಳುತ್ತಿರುವುದರಿಂದ ಇದೇ 26ರಿಂದ 29ರವರೆಗೆ ಬೆಳಿಗ್ಗೆ 10ರಿಂದ ಸಂಜೆ 5.30ರ ತನಕ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಬೆಸ್ಕಾಂ ಹೇಳಿದೆ.

ಗಂಗೊಂಡನಹಳ್ಳಿ ಸೇತುವೆ, ನಾಯಂಡಹಳ್ಳಿ, ಸೌತ್ ಎಂಡ್ ರಸ್ತೆ, ಪಟಾಲಮ್ಮ ರಸ್ತೆ, ಸುಣ್ಣಕಲ್ಲುಪಾಳ್ಯ, ಹೊಯ್ಸಳ ವೃತ್ತ, ಅಪೂರ್ವ ಬಡಾವಣೆ, ಸರ್.ಎಂ.ವಿ. ಬಡಾವಣೆ, ಟೆಲಿಕಾಂ ಬಡಾವಣೆ, ಸರ್ ಎಂ.ವಿ. ಬಡಾವಣೆ, ಪೊಲೀಸ್ ಚೌಕ್, ಮಾರುತಿ ನಗರ ಮತ್ತು ಸುತ್ತ ಮುತ್ತಲಿನ ಪ್ರದೇಶಗಳು.

27ರಿಂದ 29: ಆದರ್ಶ ಟೆಕ್ ಪಾರ್ಕ್, ಜೆ.ಕೆ. ಹೋಟೆಲ್, ಕ್ವಾಲ್ಕಂ ಎಂಟರ್‌ಪ್ರೈಸಸ್, ವಿ.ಕೆ. ಟೆಕ್ ಪಾರ್ಕ್, ನಲ್ಲೂರಹಳ್ಳಿ, ರಾಮಗೊಂಡನಹಳ್ಳಿ, ಬೋರ್‌ವೆಲ್ ರಸ್ತೆ, ಶ್ರೀ ಚೈತನ್ಯ ಪ್ರಾಪರ್ಟೀಸ್, ಟ್ರಾಕ್ ಅಂಡ್ ಸರ್ವೀಸ್, ಮೈಂಡ್ ಟ್ರೀ, ಜಿಂಜರ್ ಹೋಟೆಲ್, ವೈದೇಹಿ ಆಸ್ಪತ್ರೆ, ಎಸ್.ಜೆ.ಆರ್. ಟೆಕ್ ಪಾರ್ಕ್, ಶೈಲೇಂದ್ರ ಟೆಕ್ ಪಾರ್ಕ್, ಬಿ.ಎಂ.ಟಿ.ಸಿ, ವೈಟ್‌ಫೀಲ್ಡ್ ಮುಖ್ಯರಸ್ತೆ, ರಾಮಗೊಂಡನಹಳ್ಳಿ, ಗುಂಜೂರು, ಹೊಸಹಳ್ಳಿ, ಕಾಚಮಾರನಹಳ್ಳಿ, ವಿನಾಯಕ ಚಿತ್ರಮಂದಿರ.

ವಿನಾಯಕ ಬಡಾವಣೆ, ವರ್ತೂರು ಮುಖ್ಯರಸ್ತೆ, ಬಳಗೆರೆ ರಸ್ತೆ, ಪೊಲೀಸ್ ಠಾಣೆ, ವರ್ತೂರು, ಗಾಂಧಿ ವೃತ್ತ, ಪ್ರಕಾಶ್ ಬಡಾವಣೆ, ಮಧುರಾನಗರ, ವಾಲೆಪುರ, ಬೆಳ್ತೂರು, ಅಯ್ಯಪ್ಪ ಸ್ವಾಮಿ ದೇವಸ್ಥಾನದ ರಸ್ತೆ, ಕಾಡುಗೋಡಿ, ಪಟ್ಟಂದೂರು ಬಡಾವಣೆ, ಸಿದ್ಧಾರ್ಥ್ ಬಡಾವಣೆ, ಚನ್ನಸಂದ್ರ, ಸಪ್ತಗಿರಿ ಬಡಾವಣೆ, ಕಾಡುಗೋಡಿ ಹಳೇ ಗ್ರಾಮ, ಗಾಂಧೀಪುರ, ವಿಜ್ಞಾನ ನಗರ, ನಾಗೊಂಡನಹಳ್ಳಿ, ಪ್ರಶಾಂತ್ ಬಡಾವಣೆ, ಅಂಬೇಡ್ಕರ್ ನಗರ, ವರ್ತೂರು ಕೋಡಿ, ಐ.ಟಿ.ಪಿ.ಎಲ್.ಮುಖ್ಯರಸ್ತೆ, ಫೋರಂ ಮಾಲ್, ಕೊಡಿಗೇಹಳ್ಳಿ, ಸಾದರಮಂಗಲ ರಸ್ತೆ, ಕೊಡಿಗೇಹಳ್ಳಿ ಮುಖ್ಯರಸ್ತೆ.

ಆಗಸ್ಟ್ 27: ವಿದ್ಯಾರಣ್ಯಪುರ, ಅಟ್ಟೂರು ಬಡಾವಣೆ, ಸಂತೋಷ ನಗರ, ಮುನೇಶ್ವರ ಬಡಾವಣೆ, ವೀರಸಾಗರ, ಕೆಂಪನಹಳ್ಳಿ, ಶಾಮರಾಜಪುರ, ನಂಜಪ್ಪ ವೃತ್ತ, ವೆಂಕಟೇಶ್ವರ ಬಡಾವಣೆ, ಗುರುದರ್ಶನ್ ಬಡಾವಣೆ, ಗಣೇಶ್ವರ ಬಡಾವಣೆ, ಸಪ್ತಗಿರಿ ಬಡಾವಣೆ, ತಿಂಡ್ಲು ಗ್ರಾಮ, ಬಾಲಾಜಿ ಬಡಾವಣೆ, ರಾಘವೇಂದ್ರ ಕಾಲೊನಿ, ಕೆಎಂಎಫ್, ಶೇಷಾದ್ರಿಪುರ ಕಾಲೇಜು ರಸ್ತೆ ಮತ್ತು ಸುತ್ತಮುತ್ತಲಿನ ಪ್ರದೇಶಗಳು.



ರಸ್ತೆ ಅವ್ಯವಸ್ಥೆ ನಗರದ ನೆಲಗೆದರನಹಳ್ಳಿಯ ಮುಖ್ಯರಸ್ತೆಯು ಹಾಳಾಗಿದ್ದು, ಕಲ್ಲು ಗುಂಡಿಗಳ ನಡುವೆಯೇ ವಾಹನಗಳು ಸಂಚರಿಸಬೇಕಾದ ಅವ್ಯವಸ್ಥೆ ಉಂಟಾಗಿದೆ.
ಪ್ರಜಾವಾಣಿ ಚಿತ್ರ– ಬಿ.ಎಚ್. ಶಿವಕುಮಾರ್

ಕಿಟ್ ಖರೀದಿ ಅವ್ಯವಹಾರ: ತನಿಖೆಗೆ ಒತ್ತಾಯ

ಬೆಂಗಳೂರು: ರ್‍ಯಾಪಿಡ್ ಆ್ಯಂಟಿಜೆನ್ ಕಿಟ್(ಆರ್‌ಎಟಿ) ಖರೀದಿಯಲ್ಲಿ ಭಾರಿ ಅಕ್ರಮ ನಡೆದಿದ್ದು, ವಿಧಾನ ಮಂಡಲದ ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿಯನ್ನೇ ಅಧಿಕಾರಿಗಳು ದಿಕ್ಕು ತಪ್ಪಿಸಿದ್ದಾರೆ ಎಂದು ಕರ್ನಾಟಕ ರಾಷ್ಟ್ರ ಸಮಿತಿ ಪಕ್ಷ ಆರೋಪಿಸಿದೆ.

ಈ ರೀತಿಯ ತಪ್ಪು ಮಾಹಿತಿ ನೀಡಿರುವ ಅಧಿಕಾರಿಗಳ ವಿರುದ್ಧ ಸದನ ಸಮಿತಿ ಹಕ್ಕುಚ್ಯುತಿ ಮಂಡಿಸಬೇಕು ಎಂದು ಪಕ್ಷದ ರಾಜ್ಯ ಕಾರ್ಯದರ್ಶಿ ಮಲ್ಲಿಕಾರ್ಜುನ ಭಟ್ಟರಹಳ್ಳಿ ಸುದ್ದಿಗೋಷ್ಠಿಯಲ್ಲಿ ಒತ್ತಾಯಿಸಿದರು.

'ಕರ್ನಾಟಕ ವೈದ್ಯಕೀಯ ಸರಬರಾಜು ನಿಗಮದ ಮೂಲಕ ಕಿಟ್ ಖರೀದಿಸಲಾಗಿದೆ. ಮೊದಲ ಬಾರಿಗೆ ದರ ಪಟ್ಟಿ ಆಹ್ವಾನಿಸಿದ್ದಾಗ ಕಿಟ್‌ವೊಂದಕ್ಕೆ ₹34.60 ದರ ನಮೂದಿಸಿದ್ದ ಟ್ರಿವಿಟ್ರಾನ್ ಕಂಪನಿ ಎರಡನೇ ಬಾರಿಗೆ ಅದನ್ನು ₹83.77 ಏರಿಕೆ ಮಾಡಿತ್ತು. ಕಡಿಮೆ ದರ ನಿಗದಿ ಮಾಡಿದ್ದ ಎರಡನೇ ಕಂಪನಿ ಇದಾಗಿದ್ದರೂ, ಒಂದನೇ ಕಂಪನಿಯನ್ನು ಬಿಟ್ಟು ಈ ಕಂಪನಿಯಿಂದಲೇ ಕಿಟ್ ಖರೀದಿಸಲಾಗಿದೆ' ಎಂದು ಆರೋಪಿಸಿದರು.

ಮೊದಲ ದರಪಟ್ಟಿಯನ್ನು ಪರಿಗಣಿಸದೆ ಎರಡನೇ ಬಾರಿಗೆ ಆಹ್ವಾನ ಮಾಡಲು ಆದ ವಿಳಂಬದಿಂದ ದರ ಹೆಚ್ಚಳವಾಗಿದೆ. ₹10.38 ಕೋಟಿಯಲ್ಲಿ 30 ಲಕ್ಷ ಕಿಟ್‌ಗಳನ್ನು ಖರೀದಿ ಮಾಡಬಹುದಿತ್ತು. ಆದರೆ, ₹25.13 ಕೋಟಿ ಪಾವತಿಸಲಾಗಿದೆ. ಇದರಿಂದ ಸರ್ಕಾರಕ್ಕೆ ₹14.75 ಕೋಟಿ ನಷ್ಟವಾಗಿದೆ ಎಂದು ದೂರಿದರು.

ಉನ್ನತ ಶಿಕ್ಷಣ ಸಚಿವ ಸಿ.ಎನ್. ಅಶ್ವತ್ಥನಾರಾಯಣ, ಆರೋಗ್ಯ ಸಚಿವ ಕೆ. ಸುಧಾಕರ ಮತ್ತು ಶಿಕ್ಷಣ ಸಚಿವರಾಗಿದ್ದ ಎಸ್. ಸುರೇಶ್‌ಕುಮಾರ್ ಅವರನ್ನು ಒಳಗಂಡ ಸಮಿತಿಗೆ ಒಂದು ರೀತಿಯ ಮಾಹಿತಿಯನ್ನು ನೀಡಿದ್ದರೆ, ಸದನ ಸಮಿತಿಗೆ ಮತ್ತೊಂದು ರೀತಿಯ ಮಾಹಿತಿಯನ್ನು ಅಧಿಕಾರಿಗಳು ನೀಡಿದ್ದಾರೆ. ಸಭೆ ನಡೆಸಿದ ದಿನಾಂಕಗಳನ್ನೇ ಬದಲು ಮಾಡಿದ್ದಾರೆ ಎಂದು ದೂರಿದರು.

'ಎಲ್ಲ ದಾಖಲೆಗಳನ್ನು ಒಳಗೊಂಡ ದೂರನ್ನು ಸದನ ಸಮಿತಿಗೆ ನೀಡಿದ್ದೇವೆ. ಸದನದಲ್ಲಿ ಈ ವಿಷಯವನ್ನು ಸಮಿತಿ ಪ್ರಸ್ತಾಪಿಸಬೇಕು. ಕರ್ನಾಟಕ ವೈದ್ಯಕೀಯ ಸರಬರಾಜು ನಿಗಮದ ವ್ಯವಸ್ಥಾಪಕ ನಿರ್ದೇಶಕರನ್ನು ಬದಲಾಯಿಸಬೇಕು. ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಮೂಲಕ ತನಿಖೆ ನಡೆಸಬೇಕು' ಎಂದರು.

'ಬಿಜೆಪಿ ಸರ್ಕಾರ ಭ್ರಷ್ಟಾಚಾರದ ಕೂಪ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯದಲ್ಲಿ ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದ ದಿನದಿಂದಲೂ ಭ್ರಷ್ಟಾಚಾರ ತಾಂಡವವಾಡುತ್ತಿದೆ. ಈ ಸರ್ಕಾರ ಭ್ರಷ್ಟಾಚಾರದ ಕೂಪದಂತಿದೆ' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಟೀಕಿಸಿದರು.

ಸುದ್ದಿಗಾರರ ಜತೆ ಬುಧವಾರ ಮಾತನಾಡಿದ ಅವರು, 'ಕೋವಿಡ್ ಸಂಕಷ್ಟದ ಕಾಲದಲ್ಲಿ ಬಿಜೆಪಿ ಸರ್ಕಾರದಲ್ಲಿದ್ದವರು ಆಂಬುಲೆನ್ಸ್, ಹಾಸಿಗೆ, ಔಷಧಿ, ವೆಂಟಿಲೇಟರ್ ಖರೀದಿಯಲ್ಲಿ ಭ್ರಷ್ಟಾಚಾರ ನಡೆಸಿದ್ದರು. ಈಗ ಮಕ್ಕಳಿಗೆ ಸ್ವೆಟರ್ ನೀಡುವ ಯೋಜನೆಯಲ್ಲೂ ಹಗರಣ ನಡೆದಿರುವುದು ನಾಚಿಕೆಗೇಡಿನ ಸಂಗತಿ' ಎಂದರು.


ಡಿ.ಕೆ. ಶಿವಕುಮಾರ್

ಕೋವಿಡ್ ಕಾರಣದಿಂದ ಮಕ್ಕಳು ಶಾಲೆಗಳಿಗೆ ಹೋಗುತ್ತಿರಲಿಲ್ಲ. ಆ ಅವಧಿಯಲ್ಲಿ ಸ್ವೆಟರ್ ವಿತರಣೆ ಮಾಡಲಾಗಿದೆ ಎಂಬ ದಾಖಲೆ ಸೃಷ್ಟಿಸಿ ಹಣ ಲೂಟಿ ಮಾಡಲಾಗಿದೆ. ಬಿಬಿಎಂಪಿ ವ್ಯಾಪ್ತಿಯಲ್ಲಿ ಮಕ್ಕಳಿಗೆ ನೀಡಿದ್ದ ಸ್ವೆಟರ್‌ಗಳು ಎಲ್ಲಿವೆ? ಯಾವಾಗ ಅವುಗಳನ್ನು ವಿತರಣೆ ಮಾಡಲಾಗಿದೆ ಎಂಬುದನ್ನು ಸರ್ಕಾರ ತಿಳಿಸಬೇಕು ಎಂದು ಆಗ್ರಹಿಸಿದರು.

ಸ್ವೆಟರ್ ವಿತರಣೆ ಅಕ್ರಮದ ವಿಚಾರದಲ್ಲಿ ಪ್ರತಿಭಟನೆ ನಡೆಸದಂತೆ ಬಿಬಿಎಂಪಿ ಮುಖ್ಯ ಆಯುಕ್ತರೇ ಸಂಧಾನಕ್ಕೆ ಯತ್ನಿಸಿದ್ದಾರೆ. ಈ ಮಟ್ಟಕ್ಕೆ ಪಾಲಿಕೆ ಆಯುಕ್ತರು ಇಳಿಯಬಾರದು. ಎಲ್ಲವೂ ನ್ಯಾಯಸಮ್ಮತವಾಗಿ ನಡೆದಿದ್ದರೆ ಸಂಧಾನ ಏಕೆ ಬೇಕು? ಎಂದು ಪ್ರಶ್ನಿಸಿದರು.

ಬಿಜೆಪಿ ಸರ್ಕಾರವು ದೇಶದಲ್ಲೇ ಅತ್ಯಂತ ಭ್ರಷ್ಟ ಸರ್ಕಾರ. ಕೇಂದ್ರ ಸರ್ಕಾರ ₹ 4 ಕೋಟಿಗೆ ಖರೀದಿಸಿದ್ದ ವೈದ್ಯಕೀಯ ಉಪಕರಣಗಳನ್ನು ರಾಜ್ಯ ಸರ್ಕಾರ ₹ 22 ಕೋಟಿ ನೀಡಿ ಖರೀದಿಸಿರುವುದು ಇದಕ್ಕೆ ಸಾಕ್ಷಿ ಎಂದು ಆರೋಪಿಸಿದರು.

ಕೋವಿಡ್: ಪರೀಕ್ಷೆ ಹೆಚ್ಚಳಕ್ಕೆ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ದಿನವೊಂದಕ್ಕೆ ನಡೆಸುವ ಕೋವಿಡ್ ಪರೀಕ್ಷೆಗಳಲ್ಲಿ ಶೇ 70ರಷ್ಟು ಆರ್‌ಟಿ–ಪಿಸಿಆರ್ ಹಾಗೂ ಶೇ 30ರಷ್ಟು ರ್‍ಯಾಟ್ ವಿಧಾನದ ಮೂಲಕ ನಡೆಸಬೇಕು ಎಂದು ರಾಷ್ಟ್ರೀಯ ಆರೋಗ್ಯ ಅಭಿಯಾನದ ನಿರ್ದೇಶಕಿ ಅರುಂಧತಿ ಚಂದ್ರಶೇಖರ್ ಸೂಚಿಸಿದ್ದಾರೆ.

ಈ ಬಗ್ಗೆ ಅವರು ಸುತ್ತೋಲೆ ಹೊರಡಿಸಿದ್ದಾರೆ. 'ಜಿಲ್ಲಾವಾರು ನಡೆಸಲಾಗುವ ಪರೀಕ್ಷೆಯ ಪ್ರಮಾಣವನ್ನು ಪರಿಷ್ಕರಿಸಲಾಗಿದೆ. ದಿನಕ್ಕೆ 1.75 ಲಕ್ಷ ಪರೀಕ್ಷೆಗಳನ್ನು ನಡೆಸಬೇಕು. ಕೇರಳದ ಗಡಿಯಲ್ಲಿರುವ ಜಿಲ್ಲೆಗಳಲ್ಲಿ ಹಾಗೂ ಅಂತರರಾಜ್ಯ ಗಡಿಗಳಿಂದ ನಿಯಮಿತವಾಗಿ ಭೇಟಿ ನೀಡುವ ಗ್ರಾಮಗಳಲ್ಲಿ ಪರೀಕ್ಷೆಗಳ ಸಂಖ್ಯೆಯನ್ನು ಹೆಚ್ಚಳ ಮಾಡಬೇಕು' ಎಂದು ತಿಳಿಸಿದ್ದಾರೆ.

'ಶಾಲಾ–ಕಾಲೇಜು ಆರಂಭವಾಗಿರುವುದರಿಂದ ಮತ್ತು 18 ವರ್ಷದೊಳಗಿನವರಿಗೆ ಲಸಿಕೆ ಲಭ್ಯ ಇರದಿರುವುದರಿಂದ ಶೇ 10ರಷ್ಟು ಪರೀಕ್ಷೆಗಳನ್ನು ಮಕ್ಕಳಿಗೆ ನಡೆಸಬೇಕು' ಎಂದು ಅವರು ಹೇಳಿದ್ದಾರೆ.

ಬೆಂಗಳೂರು ನಗರದ ಕೋವಿಡ್ ಅಂಕಿ–ಅಂಶ

12,35,910 ▲ ಒಟ್ಟು ಸೋಂಕಿತರು
(12,35,601 ನಿನ್ನೆಯ ವಿವರ)

ಸಕ್ರಿಯ ಪ್ರಕರಣ	ಗುಣಮುಖ ಆದವರು	ಒಟ್ಟು ಸಾವು
7,231 ▼	12,12,705 ▲	15,973 ▲

ದಿನದ ಏರಿಕೆ

ಹೊಸ ಪ್ರಕರಣ	309 ▲
ಗುಣಮುಖ	657 ▲
ಸಾವು	03 ▼

ಆಧಾರ: ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ರಘು ವಿರುದ್ಧ ಮಾನನಷ್ಟ ಮೊಕದ್ದಮೆ: ಜಗ್ಗೇಶ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬಿಬಿಎಂಪಿಯ ಸ್ವೆಟರ್ ಹಗರಣದಲ್ಲಿ ಅನಗತ್ಯವಾಗಿ ನನ್ನ ಹೆಸರು ಎಳೆದು ತಂದಿರುವ ಜಗ್ಗೇಶ್ ದಲಿತ ಸಂಘರ್ಷ ಸಮಿತಿಯ ರಘು ವಿರುದ್ಧ ಮಾನನಷ್ಟ ಮೊಕದ್ದಮೆ ಹೂಡುತ್ತೇನೆ' ಎಂದು ಬಿಜೆಪಿ ವಕ್ತಾರ ಹಾಗೂ ನಟ ಜಗ್ಗೇಶ್ ಟ್ವೀಟ್ ಮಾಡಿದ್ದಾರೆ.



'ಸತ್ಯಾಸತ್ಯತೆ ಬಗ್ಗೆ ಅರಿಯದೇ ನನ್ನ ತೇಜೋವಧೆ ಮಾಡಲಾಗಿದೆ. ನಾನು ತಪ್ಪು ಮಾಡಿಲ್ಲ ಮಾಡುವುದೂ ಇಲ್ಲ. ಆದ್ದರಿಂದ ಕಾನೂನು ಪ್ರಕ್ರಿಯೆ ಆರಂಭಿಸುತ್ತೇನೆ. ಅಲ್ಲೇ ಉತ್ತರಿಸಿ' ಎಂದು ಅವರು ಹೇಳಿದ್ದಾರೆ.

'ಎಲ್ಲೋ ಯಾರೋ ಮಾಡಿದ ವಿಷಯಕ್ಕೆ ನನ್ನ ಹೆಸರನ್ನು ಏಕೆ ತಂದಿದ್ದೀರಿ. ನೀವು ನ್ಯಾಯಪರವಾದ ಹೋರಾಟ ಮಾಡಿದರೆ ನನ್ನ ಬೆಂಬಲ ಇದೆ. ಆದರೆ, ನನಗೂ ಅದಕ್ಕೂ ಸಂಬಂಧವಿಲ್ಲ. ನಾನು ತಪ್ಪು ಮಾಡಿಲ್ಲ ಮತ್ತು ತಲೆ ಬಾಗಿಸುವುದಿಲ್ಲ' ಎಂದು ಜಗ್ಗೇಶ್ ಕಿಡಿ ಕಾರಿದ್ದಾರೆ.

'ಬಿಬಿಎಂಪಿ ಶಾಲಾ ಕಾಲೇಜುಗಳ ವಿದ್ಯಾರ್ಥಿಗಳಿಗೆ ಸ್ವೆಟರ್ ವಿತರಿಸುವಲ್ಲಿ ಅಕ್ರಮ ನಡೆದಿದೆ ಎಂದು ಆರೋಪಿಸಿ ಕರ್ನಾಟಕ ದಲಿತ ಸಂಘರ್ಷ ಸಮಿತಿ ಮಂಗಳವಾರ ಪಾಲಿಕೆ ಕೇಂದ್ರ ಕಚೇರಿ ಬಳಿ ಪ್ರತಿಭಟನೆ ನಡೆಸಿತ್ತು. 'ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮದ (ಕೆಎಚ್‌ಡಿಸಿ) ಮೂಲಕ ಬಿಬಿಎಂಪಿ ಶಾಲಾ ಕಾಲೇಜುಗಳಿಗೆ ಸ್ವೆಟರ್ ಪೂರೈಕೆಯಲ್ಲಿ ಚಿತ್ರ ನಟ ಕೋಮಲ್ ಶಾಮೀಲಾಗಿದ್ದಾರೆ. ಪಾವತಿ ವಿಳಂಬವಾದ ಬಗ್ಗೆ ಅವರ ಸಹೋದರ ಜಗ್ಗೇಶ್ ಸಾಮಾಜಿಕ ಜಾಲತಾಣಗಳ ಮೂಲಕ ಆಕ್ರೋಶ ವ್ಯಕ್ತಪಡಿಸಿದ್ದರು. ಒತ್ತಡ ತಂತ್ರ ಅನುಸರಿಸಿ ಬಿಲ್ ಪಾವತಿ ಮಾಡಲಾಗಿದೆ' ಎಂದು ಸಮಿತಿಯ ಅಧ್ಯಕ್ಷ ರಘು ಅವರು ಪ್ರತಿಭಟನೆ ವೇಳೆ ಆರೋಪಿಸಿದ್ದರು.

ವಿದ್ಯಾರ್ಥಿಗಳಿಗೆ ಸ್ವೆಟರ್ ಪೂರೈಕೆಯಲ್ಲಿ ಅಕ್ರಮ ನಡೆದಿಲ್ಲ ಎಂದು ಬಿಬಿಎಂಪಿ ಶಿಕ್ಷಣ ವಿಭಾಗವು ಸ್ಪಷ್ಟಪಡಿಸಿದೆ.


ಮುಖ್ಯಾಂಶಗಳು
- ಸ್ವೆಟರ್ ಹಗರಣದಲ್ಲಿ ಹೆಸರು ಬಳಕೆಗೆ ಆಕ್ಷೇಪ
- ಕಾನೂನು ಪ್ರಕ್ರಿಯೆ ಆರಂಭಿಸುವೆ–ಎಚ್ಚರಿಕೆ

ನಿವೃತ್ತ ನ್ಯಾ. ಎಚ್.ಎನ್. ನಾಗಮೋಹನ್ ದಾಸ್ ಸಲಹೆ

'ಸಂವಿಧಾನದ ಓದು ಹಿನ್ನೋಟ–ಮುನ್ನೋಟ' ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು

'ಸಂವಿಧಾನ ಪ್ರಜ್ಞೆ ಹೆಚ್ಚಲಿ'

ಬೆಂಗಳೂರು: 'ನ್ಯಾಯಾಂಗದ ಮೇಲೆ ಹೆಚ್ಚುತ್ತಿರುವ ಒತ್ತಡ, ಯುಎಪಿಎ ಕಾನೂನುಗಳ ದುರ್ಬಳಕೆ, ಪೆಗಾಸಿಸ್ ಗೂಢಚರ್ಯೆ ಸೇರಿದಂತೆ ಮೂಲಭೂತ ಹಕ್ಕುಗಳ ಉಲ್ಲಂಘನೆ ದೇಶದಲ್ಲಿ ಹೆಚ್ಚುತ್ತಿದೆ. ರಾಷ್ಟ್ರದ ಜನರಲ್ಲಿ ಸಂವಿಧಾನ ಪ್ರಜ್ಞೆ ಬೆಳೆಸುವ ಅಗತ್ಯವನ್ನು ಇದು ಒತ್ತಿ ಹೇಳುತ್ತಿದೆ' ಎಂದು ನಿವೃತ್ತ ನ್ಯಾಯಮೂರ್ತಿ ಎಚ್.ಎನ್.ನಾಗಮೋಹನ್ ದಾಸ್ ಹೇಳಿದರು.


ನಾಗಮೋಹನ್ ದಾಸ್

ಸಮುದಾಯ -ಸಹಯಾನ-ಚಿಂತನ ಸಹಯೋಗದಲ್ಲಿ 'ಸಂವಿಧಾನ ಓದು ಹಿನ್ನೋಟ ಮತ್ತು ಮುನ್ನೋಟ' ಕುರಿತು ಬುಧವಾರ ಆನ್‌ಲೈನ್‌ನಲ್ಲಿ ಆಯೋಜಿಸಲಾಗಿದ್ದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 'ಈ ಹಿಂದೆ, ಬ್ರಿಟಿಷರ ವಿರುದ್ಧ ಭಾರತ ಬಿಟ್ಟು ತೊಲಗಿ ಘೋಷಣೆ ಮೊಳಗಿಸಿದ್ದರೆ ಈಗ ಭಾರತ ಉಳಿಸಿ, ಸಂವಿಧಾನ ಉಳಿಸಿ ಎಂಬ ಘೋಷಣೆ ಎಲ್ಲೆಡೆ ಕೇಳಿಬರುತ್ತಿದೆ' ಎಂದರು.

ಚಿಂತಕ ಎಂ.ಜಿ ಹೆಗಡೆ, 'ರಾಜ್ಯಶಾಸ್ತ್ರ ವಿಷಯವನ್ನು ಪಠ್ಯವಾಗಿ ಮಾತ್ರ ಗ್ರಹಿಸಲಾಗಿತ್ತು. ಆದರೆ, ಸಂವಿಧಾನವನ್ನು ಒಂದು ಜೀವನ ತತ್ವವಾಗಿ ಹಾಗೂ ಸಾಂಸ್ಕೃತಿಕ ಪಠ್ಯವಾಗಿ ಜನರ ಮುಂದೆ ಸಂವಿಧಾನ ಓದು ಅಭಿಯಾನ ತೋರ್ಪಡಿಸಿದೆ' ಎಂದರು.

ಸಮುದಾಯದ ಕೆ.ಎಸ್. ವಿಮಲಾ, 'ಕೋವಿಡ್ ಸಂದರ್ಭದಲ್ಲೂ ಕೂಡ ಆನ್‌ಲೈನ್ ವೆಬಿನಾರ್ ಮೂಲಕ ಸಂವಿಧಾನ ಅಭಿಯಾನ ಮುಂದುವರಿದಿದೆ' ಎಂದರು.

'ನಗರದ ಸ್ವಚ್ಛತೆಗಾಗಿ ನಾಗರಿಕರ ಸಹಭಾಗಿತ್ವ' ಕಾರ್ಯಕ್ರಮಕ್ಕೆ ನಿವೃತ್ತ ನ್ಯಾ. ಸುಭಾಷ್ ಬಿ. ಅಡಿ ಚಾಲನೆ

'ಆಯಾ ವಾರ್ಡ್‌ನ ಕಸ ಅಲ್ಲೇ ಸಂಸ್ಕರಣೆಯಾಗಲಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಆಯಾ ವಾರ್ಡ್ ಮಟ್ಟದಲ್ಲಿ ಉತ್ಪತ್ತಿಯಾಗುವ ಕಸವನ್ನು ಅಲ್ಲೇ ಸಂಸ್ಕರಣೆ ಮಾಡುವ ಮೂಲಕ ಉದ್ಯಾನ ನಗರಿಯನ್ನು ಸ್ವಚ್ಛ ನಗರಿಯನ್ನಾಗಿಸಬೇಕು. ಒಣ ಕಸ, ಹಸಿ ಕಸ ಹಾಗೂ ನೈರ್ಮಲ್ಯ ಕಸಗಳನ್ನು ಮೂಲದಲ್ಲೇ ಪ್ರತ್ಯೇಕಪಡಿಸಿ ನೀಡುವುದನ್ನು ಕಡ್ಡಾಯಗೊಳಿಸಬೇಕು' ಎಂದು ರಾಜ್ಯಮಟ್ಟದ ಕಸ ನಿರ್ವಹಣೆ ಉಸ್ತುವಾರಿ ಸಮಿತಿಯ ಅಧ್ಯಕ್ಷ ನ್ಯಾ. ಸುಭಾಷ್ ಬಿ.ಅಡಿ ಹೇಳಿದರು.

ಬಿಬಿಎಂಪಿಯ 'ನಗರದ ಸ್ವಚ್ಛತೆಗಾಗಿ ನಾಗರಿಕರ ಸಹಭಾಗಿತ್ವ' ಕಾರ್ಯಕ್ರಮದ ಉದ್ಘಾಟನಾ ಸಮಾರಂಭದಲ್ಲಿ ಅವರು ಬುಧವಾರ ಮಾತನಾಡಿದರು.

'ರಾಜ್ಯದಲ್ಲಿ ಉತ್ಪಾದನೆಯಾಗುವ ಒಟ್ಟು ಕಸದಲ್ಲಿ ಅರ್ಧದಷ್ಟು ಕಸ ಬೆಂಗಳೂರು ನಗರವೊಂದರಲ್ಲೇ ಉತ್ಪಾದನೆಯಾಗುತ್ತದೆ. ಈ ನಗರದ ಸ್ವಚ್ಛತೆ ಕಾಪಾಡುವುದು ಎಲ್ಲರ ಜವಾಬ್ದಾರಿ. 'ನಮ್ಮ ಕಸ ನಮ್ಮ ಜವಾಬ್ದಾರಿ' ಧ್ಯೇಯವಾಕ್ಯದಡಿ ತಳ ಮಟ್ಟದಲ್ಲಿ ಜನಪ್ರತಿನಿಧಿಗಳು, ಪಾಲಿಕೆ ಅಧಿಕಾರಿಗಳು ಹಾಗೂ ನಾಗರಿಕರೆಲ್ಲ ಸೇರಿಕೊಂಡು ಸ್ವಚ್ಛ ನಗರವನ್ನು ನಿರ್ಮಿಸಬೇಕು' ಎಂದರು.


'ನಗರದ ಸ್ವಚ್ಛತೆಗಾಗಿ ನಾಗರಿಕರ ಸಹಭಾಗಿತ್ವ' ಕಾರ್ಯಕ್ರಮಕ್ಕೆ ನಿವೃತ್ತ ನ್ಯಾ. ಸುಭಾಷ್ ಬಿ.ಅಡಿ ಅವರು ಗಿಡಕ್ಕೆ ನೀರೆರೆಯುವ ಮೂಲಕ ಬುಧವಾರ ಚಾಲನೆ ನೀಡಿದರು. ಗೌರವ್ ಗುಪ್ತ, ಪಾಲಿಕೆಯ ವಿಶೇಷ ಆಯುಕ್ತ ಡಾ.ಕೆ.ಹರೀಶ್ ಕುಮಾರ್ ಹಾಗೂ ಇತರರು ಇದ್ದಾರೆ

ಕಾರ್ಯಕ್ರಮದ ರೂಪುರೇಷೆ ವಿವರಿಸಿದ ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ, 'ಆಯಾ ವಲಯ, ವಿಭಾಗ ಹಾಗೂ ವಾರ್ಡ್ ಮಟ್ಟಗಳಲ್ಲಿ ಸಂಯೋಜಕರು, ಬ್ಲಾಕ್ ಮಟ್ಟದಲ್ಲಿ ಶುಚಿ ಮಿತ್ರರು ಹಾಗೂ ಬೀದಿಗಳ ಹಂತದಲ್ಲಿ ಸ್ವಯಂಸೇವಕರು ಜನರ ಜೊತೆ ಸೇರಿ ನಗರದ ಸ್ವಚ್ಛತೆ ನಿರ್ವಹಣೆಗಾಗಿ ಕಾರ್ಯನಿರ್ವಹಿಸಲಿದ್ದಾರೆ' ಎಂದರು.

'ನಗರದ ಸ್ವಚ್ಛತೆಗಾಗಿ ನಾಗರೀಕರ ಸಹಭಾಗಿತ್ವ' ಕಾರ್ಯಕ್ರಮದಡಿ ನಗರದ ಪ್ರತಿಯೊಂದು ಬೀದಿಗೂ ಸ್ವಯಂಸೇವಕರನ್ನು, ಪ್ರತಿ ಬ್ಲಾಕ್‌ಗೂ ಶುಚಿ ಮಿತ್ರ ಅವರನ್ನು, ವಾರ್ಡ್ ಮತ್ತು ವಿಭಾಗೀಯ ಮಟ್ಟದಲ್ಲಿ ಸಂಯೋಜಕರನ್ನು ಹಾಗೂ ವಲಯ ಮಟ್ಟದಲ್ಲಿ ಅಪೆಕ್ಸ್ ಸಂಯೋಜಕರನ್ನು ನಿಯೋಜಿಸಲಾಗುತ್ತದೆ. ಕಸ ನಿರ್ವಹಣೆ ವಿಚಾರದಲ್ಲಿ ಇವರು ಪಾಲಿಕೆಯ ಅಧಿಕಾರಿಗಳೊಂದಿಗೆ ಸಮನ್ವಯ ಸಾಧಿಸಲಿದ್ದಾರೆ. ನಗರದ ಸ್ವಚ್ಛತೆ ಸಲುವಾಗಿ ಜನಜಾಗೃತಿಯನ್ನು ಮೂಡಿಸಲಿದ್ದಾರೆ. ಸಮಸ್ಯೆಗಳನ್ನು ತಳ ಹಂತದಲ್ಲೇ ಬಗೆಹರಿಸಲು ನೆರವಾಗಲಿದ್ದಾರೆ.

ನಗರ ಸ್ವಚ್ಛತೆ: ಯಾರಿಗೆ ಏನು ಜವಾಬ್ದಾರಿ?

ಸಂಯೋಜಕರು
- ವಲಯ ಮಟ್ಟ, ವಿಭಾಗೀಯ ಮಟ್ಟ, ವಾರ್ಡ್ ಮಟ್ಟ ಹಾಗೂ ಬ್ಲಾಕ್ ಮಟ್ಟದ ಸ್ವಯಂಸೇವಕರ ಬೆಂಬಲ ಪಡೆಯುವುದು ಮತ್ತು ವಾರ್ಡ್ ಮಟ್ಟದ ಕಸ ನಿರ್ವಹಣೆಗೆ ಅಧಿಕಾರಿಗಳೊಂದಿಗೆ ಕೆಲಸ ಮಾಡುವುದು.
- ಕಸವನ್ನು ಪ್ರತ್ಯೇಕಿಸುವಿಕೆ ಕುರಿತು ಬ್ಲಾಕ್ ಹಂತದ ಕಾರ್ಯಾಚರಣೆಯ ಪ್ರಗತಿಯನ್ನು ಗುರುತಿಸುವುದು.
- 'ಸಹಾಯ' ಆ್ಯಪ್ ಮೂಲಕ ದಾಖಲಾಗುವ ದೂರುಗಳ ಪ್ರಗತಿಯನ್ನು ಗುರುತಿಸುವುದು.
- ದಂಡ ವಿಧಿಸಿದ ಪ್ರಕರಣಗಳ ಬಗ್ಗೆ ಅವಲೋಕಿಸುವುದು
- ವಾರ್ಡಿನಲ್ಲಿರುವ ಕಸ ನಿರ್ವಹಣೆ ಘಟಕಗಳ ಕಾರ್ಯಾಚರಣೆ ಬಗ್ಗೆ ನಿಗಾ ಇಡುವುದು. ಗುರಿ ಮತ್ತು ಅನುಷ್ಠಾನದಲ್ಲಿ ಅಂತರವನ್ನು ಗುರುತಿಸುವುದು
- ವಾರ್ಡ್ ಮಟ್ಟದಲ್ಲಿ ಸಿಟಿಜನ್ ಪಾರ್ಟಿಸಿಪೇಷನ್ ಪ್ರೋಗ್ರಾಮಿನ ಜವಾಬ್ದಾರಿಯನ್ನು ಹೊರುವುದು.

ಶುಚಿ ಮಿತ್ರ: (ಬ್ಲಾಕ್‌ಮಟ್ಟ)
- ಬೀದಿ ಸ್ವಯಂಸೇವಕರಿಂದ ಮಾಹಿತಿ ಪಡೆಯುವುದು ಮತ್ತು ಆಟೋಟಿಪ್ಪರ್ ಚಾಲಕರು, ಮೇಲ್ವಿಚಾರಕರು, ಸಂಪರ್ಕ ಕಾರ್ಯಕರ್ತೆಯರ ಜೊತೆ ಕೆಲಸ ಮಾಡುವುದು.
- ಮನೆ-ಮನೆಯಿಂದ ಕಸ ಸಂಗ್ರಹಣೆ ಮತ್ತು ಬೀದಿ ಗುಡಿಸುವಿಕೆ ಕುರಿತು ನಿಗಾ ಇಡುವುದು, ಈ ಕುರಿತು ಅಧಿಕಾರಿಗಳಿಗೆ ವರದಿ ಮಾಡುವುದು.
- ಮೂಲದಲ್ಲಿಯೇ ಕಸವನ್ನು ಮೂರು ಬಗೆಯಾಗಿ ಪ್ರತ್ಯೇಕಿಸುವುದರ ಕುರಿತು ಮಾಹಿತಿ, ಅರಿವು ತರಬೇತಿಗಳನ್ನು ನಡೆಸುವುದು.
- ಕಸ ರಾಶಿ ಹಾಕುವ ತಾಣ (ಬ್ಲ್ಯಾಕ್ ಸ್ಪಾಟ್) ಗುರುತಿಸುವುದು

ಸ್ವಯಂಸೇವಕರು (ಬೀದಿ ಹಂತ)
- ಬ್ಲಾಕ್ ಹಂತದ ಸ್ವಯಂಸೇವಕರಿಗೆ ಮಾಹಿತಿ ನೀಡುವುದು.
- ಮನೆ-ಮನೆಯಿಂದ ಕಸ ಸಂಗ್ರಹಣೆ ಮೇಲೆ ನಿಗಾ ಇಡುವುದು ಅಧಿಕಾರಿಗಳಿಗೆ ವರದಿ ನೀಡುವುದು
- ಕಸವನ್ನು ಮೂರು ಬಗೆಯನ್ನಾಗಿ ಪ್ರತ್ಯೇಕಿಸುವುದನ್ನು ಉತ್ತೇಜಿಸುವುದು

ಚಿಕ್ಕಬಳ್ಳಾಪುರ ಜಿಲ್ಲೆಯಾದ್ಯಂತ ಭಾರಿ ಮಳೆ; ಮೈದುಂಬಿದ ಉತ್ತರ ಪಿನಾಕಿನಿ

ದಿಬ್ಬ ಕುಸಿತ: ನಂದಿಗಿರಿಧಾಮ ಪ್ರವೇಶ ಬಂದ್

ಪ್ರಜಾವಾಣಿ ವಾರ್ತೆ


ನಂದಿಬೆಟ್ಟದಲ್ಲಿ ದಿಬ್ಬ ಕುಸಿದಿರುವುದು


ಶಿಡ್ಲಘಟ್ಟ ತಾಲ್ಲೂಕಿನ ಭಕ್ತರಹಳ್ಳಿಯ ಬಳಿ ರೈತರ ತೋಟಕ್ಕೆ ನುಗ್ಗಿರುವ ಮಳೆ ನೀರು

ಚಿಕ್ಕಬಳ್ಳಾಪುರ: ಜಿಲ್ಲೆಯಾದ್ಯಂತ ಮಂಗಳವಾರ ನಡುರಾತ್ರಿಯಿಂದ ಬುಧವಾರ ಬೆಳಗಿನ ಜಾವದವರೆಗೂ ಸುರಿದ ಭಾರಿ ಮಳೆಗೆ ಕೆರೆ, ಕಟ್ಟೆ, ಜಲಾಶಯಗಳು ಭರ್ತಿಯಾಗಿದ್ದು, ಪ್ರಸಿದ್ಧ ನಂದಿಗಿರಿಧಾಮ ರಸ್ತೆಯ ಮೇಲೆ ದಿಬ್ಬ ಕುಸಿದಿದೆ.

ದಿಬ್ಬ ಕುಸಿತದಿಂದ ಬೃಹತ್ ಮರಗಳು ರಸ್ತೆಗೆ ಅಡ್ಡಲಾಗಿ ಬಿದ್ದಿದ್ದು, ರಸ್ತೆ ಸಂಪೂರ್ಣವಾಗಿ ಅಧ್ವಾನವಾಗಿದೆ. ಈ ರಸ್ತೆಯಲ್ಲಿ ಸಂಚಾರವನ್ನು ಪೂರ್ಣ ಸ್ಥಗಿತಗೊಳಿಸಲಾಗಿದೆ.

ಗಿರಿಧಾಮದ ವಸತಿಗೃಹಗಳಲ್ಲಿದ್ದ 15ಕ್ಕೂ ಹೆಚ್ಚು ಪ್ರವಾಸಿಗರನ್ನು ಸುಲ್ತಾನ್‌ಪೇಟೆವರೆಗಿರುವ ಮೆಟ್ಟಿಲುಗಳ ಮೂಲಕ ಕೆಳಗೆ ಕರೆತರಲಾಗಿದೆ. ಬಳಿಕ ಅವರನ್ನು ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮದ ವಾಹನಗಳಲ್ಲಿಸ್ಥಳಾಂತರಿಸಲಾಗಿದೆ.

ನಂದಿಗಿರಿಧಾಮ ಹಾಗೂ ನಂದಿಕ್ರಾಸ್ ಸುತ್ತಮುತ್ತ ವ್ಯಾಪಕ ಮಳೆಯಾಗಿದ್ದು, ನಂದಿಕ್ರಾಸ್‌ನಲ್ಲಿ ಬಸ್‌ವೊಂದು ನೀರಿನಲ್ಲಿ ಸಿಲುಕಿತ್ತು. ಈ ಮಾರ್ಗದಲ್ಲಿ ಸಂಚರಿಸಬೇಕಾದ ಬಸ್‌ಗಳು ಬದಲಿ ಮಾರ್ಗ ಹಿಡಿದವು. ದಿಬ್ಬ ಕುಸಿತದಿಂದ ಸಂಚಾರ ಸ್ಥಗಿತಗೊಂಡ ಕಾರಣ 20ಕ್ಕೂ ಹೆಚ್ಚು ವಾಹನಗಳು ಇನ್ನೂ ಬೆಟ್ಟದ ಮೇಲೆಯೇ ಸಿಲುಕಿವೆ.

ಪ್ರವಾಸಿಗರ ಪ್ರವೇಶ ನಿರ್ಬಂಧ: ಜಿಲ್ಲಾಧಿಕಾರಿ ಆರ್.ಲತಾ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದ್ದಾರೆ. ರಸ್ತೆ ದುರಸ್ತಿ ಮತ್ತು ರಸ್ತೆ ಬದಿ ತಡೆಗೋಡೆ ನಿರ್ಮಾಣವಾಗುವವರೆಗೆ ನಂದಿಬೆಟ್ಟಕ್ಕೆ ಕನಿಷ್ಠ 20 ದಿನ ಪ್ರವಾಸಿಗರ ಪ್ರವೇಶ ನಿರ್ಬಂಧಿಸಲಾಗುವುದು ಎಂದು ಅವರು ತಿಳಿಸಿದ್ದಾರೆ.

ಜಕ್ಕಲಮಡುಗು ಜಲಾಶಯ ತುಂಬಿ ಕೋಡಿ ಹರಿಯುತ್ತಿದೆ. ಚಿತ್ರಾವತಿ ಜಲಾಶಯಕ್ಕೂ ಅಪಾರ ಪ್ರಮಾಣದಲ್ಲಿ ನೀರು ಹರಿದು ಬರುತ್ತಿದೆ. ಚಿಕ್ಕಬಳ್ಳಾಪುರ ತಾಲ್ಲೂಕಿನ ಬೀಡಗಾನಹಳ್ಳಿಯಲ್ಲಿ ಮನೆಯೊಂದು ಕುಸಿದು ಬಿದ್ದಿದೆ. ಜಿಲ್ಲೆಯ ಗ್ರಾಮೀಣ ಭಾಗಗಳಲ್ಲಿ ಎಲ್ಲಿ ನೋಡಿದರೂ ಮಳೆ ನೀರು ತುಂಬಿ ಹರಿಯುತ್ತಿದೆ. ಟೊಮೆಟೊ, ದ್ರಾಕ್ಷಿ, ರೇಷ್ಮೆ ಸೇರಿದಂತೆ ಸಾಕಷ್ಟು ಪ್ರಮಾಣದಲ್ಲಿ ಬೆಳೆಗಳು ನಷ್ಟಕ್ಕೀಡಾಗಿವೆ.

ಗೌರಿಬಿದನೂರು ತಾಲ್ಲೂಕಿನಲ್ಲಿ ಉತ್ತರಪಿನಾಕಿನಿ ನದಿ ಹಾಗೂ ಶಿಡ್ಲಘಟ್ಟ ತಾಲ್ಲೂಕಿನಲ್ಲಿ ದಕ್ಷಿಣ ಪಿನಾಕಿನ ನದಿ ಮೈದುಂಬಿ ಹರಿಯುತ್ತಿವೆ. ಗೌರಿಬಿದನೂರು ತಾಲ್ಲೂಕಿನ ತೊಂಡೇಬಾವಿಯಲ್ಲಿ 13 ಸೆಂ.ಮೀ ಮಳೆಯಾಗಿದ್ದು ಇದು ಜಿಲ್ಲೆಯಲ್ಲಿ 24 ಗಂಟೆಯಲ್ಲಿ ಸುರಿದ ಗರಿಷ್ಠ ಮಳೆಯಾಗಿದೆ.

ಗುಡಿಬಂಡೆ, ಬಾಗೇಪಲ್ಲಿ ತಾಲ್ಲೂಕಿನ ಬಹಳಷ್ಟು ಕೆರೆಗಳು ತುಂಬಿ ತುಳುಕುತ್ತಿವೆ. ಹೊಲ, ತೋಟಗಳು ಜಲಾವೃತವಾಗಿವೆ.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು	ಹೊರಹರಿವು
			(ಕ್ಯುಸೆಕ್‌ಗಳಲ್ಲಿ)	
ಕೆ ಆರ್ ಎಸ್*	124.80	119.78	4,062	8,613
ಹಾರಂಗಿ	2,859	2,857.84	1,500	1,750
ಕಬಿನಿ	2284.00	2,282.96	3,592	3,667
ಹೇಮಾವತಿ	2,922	2,918.49	1,866	4,920
ಲಿಂಗನಮಕ್ಕಿ	1,819	1,812.65	5,444	5,264
ಸೂಪಾ (ಮೀ)	564	554.80	3,383	1,661
ಮಾಣಿ	594	585.74	315	-
ತುಂಗಭದ್ರಾ	1,633	1,632.76	11,143	14,111
ಮಲಪ್ರಭಾ	2079.5	2,078.20	2,080	494
ಘಟಪ್ರಭಾ	2175	2,175.00	2,463	2,463
ಭದ್ರಾ	186	185.1	4085	3483
ಆಲಮಟ್ಟಿ (ಮೀ)	519.6	519.60	12,344	12,344
ನಾರಾಯಣಪುರ (ಮೀ)	492.25	492.15	2,800	3,000

* ನೆಲಮಟ್ಟದಿಂದ

ಬಿಎಸ್‌ವೈಗೆ ತಪ್ಪು ಮಾಹಿತಿ ನೀಡಿದ್ದ ಮಗ: ಬಸವ ಜಯಮೃತ್ಯುಂಜಯ ಶ್ರೀ

ಪಂಚಮಸಾಲಿ ಪಂಚಾಯತ್ ಪ್ರತಿಜ್ಞಾ ಅಭಿಯಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲಿಂಗಾಯತ ಪಂಚಮಸಾಲಿ ಸಮುದಾಯಕ್ಕೆ 2ಎ ಮೀಸಲಾತಿ ನೀಡಲು ರಾಜ್ಯ ಸರ್ಕಾರ ನೀಡಿದ್ದ ಗಡುವು ನೆನಪಿಸಲು ಇದೇ 26ರಿಂದ ಪಂಚಮಸಾಲಿ ಪಂಚಾಯತ್ ಪ್ರತಿಜ್ಞಾ ಅಭಿಯಾನವು ಕೂಡಲಸಂಗಮ ಪೀಠದ ಬಸವ ಜಯಮೃತ್ಯುಂಜಯ ಸ್ವಾಮೀಜಿ ನೇತೃತ್ವದಲ್ಲಿ ರಾಜ್ಯದಾದ್ಯಂತ ನಡೆಯಲಿದೆ.

ನಗರದಲ್ಲಿ ಸುದ್ದಿಗಾರರೊಂದಿಗೆ ಬುಧವಾರ ಮಾತನಾಡಿದ ಸ್ವಾಮೀಜಿ, 'ಮೀಸಲಾತಿ ನೀಡಲು ರಾಜ್ಯ ಸರ್ಕಾರ ತೆಗೆದುಕೊಂಡಿದ್ದ ಸಮಯ ಸೆ. 16ಕ್ಕೆ ಮುಗಿಯಲಿದೆ. ಈ ಸರ್ಕಾರವು ಮೀಸಲಾತಿ ನೀಡುತ್ತದೆ ಎಂಬ ವಿಶ್ವಾಸದೊಂದಿಗೆ ಅಭಿಯಾನ ಆರಂಭವಾಗಲಿದೆ' ಎಂದರು.


ಬೆಂಗಳೂರಿನ ಚಾಲುಕ್ಯ ವೃತ್ತದಲ್ಲಿನ ಬಸವೇಶ್ವರ ಪ್ರತಿಮೆಗೆ ಬುಧವಾರ ಮಾಲಾರ್ಪಣೆ ಮಾಡಿದ ಬಸವ ಜಯಮೃತ್ಯುಂಜಯ ಸ್ವಾಮೀಜಿ, ಅಭಿಯಾನದ ಜಯಘೋಷ ಕೂಗಿದರು. ವಿನಯ ಕುಲಕರ್ಣಿ, ವಿಜಯಾನಂದ ಕಾಶಪ್ಪನವರ ಮತ್ತಿತರರು ಇದ್ದರು– ಪ್ರಜಾವಾಣಿ ವಾರ್ತೆ

'ಬಿ.ಎಸ್. ಯಡಿಯೂರಪ್ಪನವರು ಮುಖ್ಯಮಂತ್ರಿಯಾಗಿದ್ದಾಗ ಅವರ ಮಗ, ಸ್ವಾಮೀಜಿ ಪಾದಯಾತ್ರೆ ಮಾಡುವುದಿಲ್ಲ ಎಂದು ಅವರಿಗೆ ತಪ್ಪು ಮಾಹಿತಿ ನೀಡಿದ್ದರು. ಬೇಡಿಕೆ ಈಡೇರದೇ ಇದ್ದುದಕ್ಕೆ ಇದೂ ಕಾರಣ. ಈಗಿನ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ನಮ್ಮ ಹೋರಾಟ ಮತ್ತು ಬೇಡಿಕೆಯ ಸಂಪೂರ್ಣ ಅರಿವು ಇದೆ. ಅವರು ಸಮುದಾಯದ ಬಗ್ಗೆ ತಿಳಿದುಕೊಂಡಿದ್ದಾರೆ. ಹೀಗಾಗಿ, ಬೇಡಿಕೆ ಈಡೇರುವ ವಿಶ್ವಾಸವಿದೆ' ಎಂದರು.

'ಈ ಅಭಿಯಾನವು ಚಾಮರಾಜನಗರದ ಮಲೆಮಹದೇಶ್ವರ ಬೆಟ್ಟದ ಶಕ್ತಿಪೀಠದಿಂದ ಆರಂಭವಾಗಿ ಮೈಸೂರು, ಕಿತ್ತೂರು ಕರ್ನಾಟಕ, ಕಲ್ಯಾಣ ಕರ್ನಾಟಕ ಮೂಲಕ ಬೆಂಗಳೂರಿನ ವಿಧಾನಸೌಧದವರೆಗೂ ನಡೆಯಲಿದೆ' ಎಂದರು.

ಅಖಿಲ ಭಾರತ ಲಿಂಗಾಯತ ಪಂಚಮಸಾಲಿ ರಾಷ್ಟ್ರೀಯ ಘಟಕದ ಅಧ್ಯಕ್ಷ ವಿಜಯಾನಂದ ಕಾಶಪ್ಪನವರ, 'ಸೆ.16 ರೊಳಗೆ ಮೀಸಲಾತಿ ನೀಡದಿದ್ದರೆ, ಅಕ್ಟೋಬರ್ 1ರಿಂದ ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಧರಣಿ ನಡೆಸಲಾಗುವುದು' ಎಂದರು.

ಕಾಂಗ್ರೆಸ್ ಮುಖಂಡ ವಿನಯ ಕುಲಕರ್ಣಿ, 'ಮೀಸಲಾತಿ ಹೋರಾಟಕ್ಕೆ ಸಂಪೂರ್ಣ ಬೆಂಬಲವಿದ್ದು, ಸ್ವಾಮೀಜಿಯವರ ಜೊತೆಗೆ ನಿಲ್ಲುತ್ತೇನೆ' ಎಂದರು.

ಮುಸ್ಲಿಂ ಮಹಿಳೆಯರಿಗೆ ಸಹಾಯಧನ ಯೋಜನೆ ಹಿಂಪಡೆಯಿರಿ: ಯತ್ನಾಳ

ವಿಜಯಪುರ: 'ಕ್ಯಾನ್ಸರ್ ಪೀಡಿತ ಮುಸ್ಲಿಂ ಮಹಿಳೆಯರಿಗೆ ರಾಜ್ಯ ಸರ್ಕಾರದಿಂದ ನೀಡಲಾಗುವ ₹ 1 ಲಕ್ಷ ಸಹಾಯಧನ ಯೋಜನೆ ಹಿಂಪಡೆದು, ಎಲ್ಲ ಜಾತಿ, ಜನಾಂಗ, ಧರ್ಮದವರಿಗೆ ಈ ಯೋಜನೆಯನ್ನು ಜಾರಿಗೆ ತರಬೇಕು' ಎಂದು ವಿಜಯಪುರ ನಗರ ಬಿಜೆಪಿ ಶಾಸಕ ಬಸನಗೌಡ ಪಾಟೀಲ ಯತ್ನಾಳ ಒತ್ತಾಯಿಸಿದ್ದಾರೆ.

ಈ ಸಂಬಂಧ ಮುಖ್ಯಮಂತ್ರಿ ಹಾಗೂ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರಿಗೆ ಪತ್ರ ಬರೆದಿರುವ ಅವರು, 'ನಮ್ಮ ಬಿಜೆಪಿ ಸರ್ಕಾರ ಈ ರೀತಿಯ ಮುಸ್ಲಿಂ ತುಷ್ಟೀಕರಣ, ತಾರತಮ್ಯ ಮಾಡುವುದು ಸರಿಯಲ್ಲ' ಎಂದು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

'ಕ್ಯಾನ್ಸರ್ ಯಾವುದೇ ಜಾತಿ ನೋಡಿ ಬರುವುದಿಲ್ಲ. ಇದು ಎಲ್ಲ ಬಡ ಜಾತಿ, ಜನಾಂಗ, ಧರ್ಮದವರಿಗೂ ಬರುತ್ತದೆ. ಇದರಿಂದ ಬಿಪಿಎಲ್ ಕಾರ್ಡ್ ಹೊಂದಿದ ಬಡ ಜನರಿಗೆ ಸರ್ಕಾರದ ಸೌಲಭ್ಯ ದೊರಕಿಸಿ ಕೊಡಬೇಕು' ಎಂದಿದ್ದಾರೆ.

'ತರಬೇತಿ ಅವಧಿಯ ಸಿಬ್ಬಂದಿ ನೌಕರ ಅಲ್ಲ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೈಗಾರಿಕಾ ಕಾಯ್ದೆ ಪ್ರಕಾರ ಯಾವುದೇ ಸಂಸ್ಥೆಯ ತರಬೇತಿ ಅವಧಿಯ ಸಿಬ್ಬಂದಿಯನ್ನು ಕಾಯಂ ನೌಕರ ಎಂದು ಪರಿಗಣಿಸಲು ಆಗುವುದಿಲ್ಲ ಎಂದು ಹೈಕೋರ್ಟ್ ಅಭಿಪ್ರಾಯಪಟ್ಟಿದೆ.

ವಾಯವ್ಯ ಕರ್ನಾಟಕ ಸಾರಿಗೆ ಸಂಸ್ಥೆಯಲ್ಲಿ ತರಬೇತಿ ಅವಧಿಯ ನಿರ್ವಾಹಕರಾಗಿ ಸೇವೆ ಸಲ್ಲಿಸಿದ್ದ ಸಿಬ್ಬಂದಿಯನ್ನು ವಜಾಗೊಳಿಸಿದ ಆದೇಶ ಪ್ರಶ್ನಿಸಿ ಸಲ್ಲಿಕೆಯಾಗಿದ್ದ ಮೇಲ್ಮನವಿ ತಿರಸ್ಕರಿಸಿದ ನ್ಯಾಯಮೂರ್ತಿ ಬಿ.ವೀರಪ್ಪ ನೇತೃತ್ವದ ವಿಭಾಗೀಯ ಪೀಠ, ಈ ಅಭಿಪ್ರಾಯಪಟ್ಟಿತು.

14 ಪ್ರಯಾಣಿಕರಿಗೆ ಟಿಕೆಟ್ ನೀಡದಿರುವ ಆರೋಪದ ಮೇಲೆ ತರಬೇತಿ ಅವಧಿ ಸಿಬ್ಬಂದಿಯೊಬ್ಬರನ್ನು 2001ರಲ್ಲಿ ವಾಯವ್ಯ ಕರ್ನಾಟಕ ಸಾರಿಗೆ ಸಂಸ್ಥೆ ವಜಾಗೊಳಿಸಿತ್ತು. ಬಾಕಿ ವೇತನದ ಜೊತೆಗೆ ಅವರನ್ನು ಸೇವೆಗೆ ಮರಳಿ ಸೇರಿಸಿಕೊಳ್ಳಲು ಕಾರ್ಮಿಕ ನ್ಯಾಯಾಲಯ ಆದೇಶಿಸಿತ್ತು. ಆದರೆ, ಸೇವೆಯಿಂದ ವಜಾಗೊಳಿಸಿದ ಆದೇಶವನ್ನು ಹೈಕೋರ್ಟ್ ಏಕ ಸದಸ್ಯ ಪೀಠ ಎತ್ತಿ ಹಿಡಿದಿತ್ತು.

'ವಜಾಗೊಳಿಸುವ ಸಂದರ್ಭದಲ್ಲಿ 240 ದಿನಗಳನ್ನು ಪೂರೈಸಿದ್ದರೂ ತರಬೇತಿ ಅವಧಿಯ ಸಿಬ್ಬಂದಿ ಎಂದೇ ಹೇಳಲಾಗುತ್ತಿದೆ. ಕಾಯಂ ನೌಕರ ಎಂದು ಪರಿಗಣಿಸಬೇಕು' ಎಂದು ಅರ್ಜಿದಾರರು ಮನವಿ ಮಾಡಿದ್ದರು. ಪ್ರಯಾಣಿಕರಿಗೆ ಟಿಕೆಟ್ ವಿತರಿಸದ ಇದೇ ರೀತಿಯ 32 ಪ್ರಕರಣಗಳು ಅರ್ಜಿದಾರರ ವಿರುದ್ಧ ದಾಖಲಾಗಿವೆ ಎಂದು ನಿಗಮ ಆಕ್ಷೇಪ ಸಲ್ಲಿಸಿತ್ತು.

'ಮೊದಲಿಗೆ ತರಬೇತಿ ಅವಧಿಯ ಅವಕಾಶ ನೀಡಿ ಕೆಲವು ಷರತ್ತುಗಳನ್ನು ವಿಧಿಸಲಾಗುತ್ತದೆ. ತರಬೇತಿ ಅವಧಿಯನ್ನು ತೃಪ್ತಿಕರವಾಗಿ ಪೂರೈಸಿದರೆ ಮಾತ್ರ ಅವರನ್ನು ಕಾಯಂ ನೌಕರ ಎಂದು ಪರಿಗಣಿಸಲಾಗುತ್ತದೆ. ಅಲ್ಲಿಯ ತನಕ ಅವರು ಕಾಯಂ ನೌಕರ ಆಗುವುದಿಲ್ಲ' ಎಂದು ಪೀಠ ಹೇಳಿತು.

ಕೊಂಕಣ ರೈಲ್ವೆ ನಿಗಮಕ್ಕೆ ನೋಟಿಸ್

ಬೆಂಗಳೂರು: ರೈಲ್ವೆ ನಿಲ್ದಾಣಗಳಲ್ಲಿ ಅಂಗವಿಕಲರು ಓಡಾಡಲು ಪ್ರತ್ಯೇಕ ಇಳಿಜಾರು ಪಥ ನಿರ್ಮಿಸುವಂತೆ ಕೋರಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಆಧರಿಸಿ ಕೊಂಕಣ ರೈಲ್ವೆ ನಿಗಮಕ್ಕೆ (ಕೆಆರ್‌ಸಿಎಲ್) ನೋಟಿಸ್ ನೀಡಲು ಹೈಕೋರ್ಟ್ ಆದೇಶಿಸಿದೆ.

ಕಾರವಾರದ ರೈಲ್ವೆ ಯಾತ್ರಿ ಸಮಿತಿ ಅಧ್ಯಕ್ಷ ಜಾರ್ಜ್ ಫರ್ನಾಂಡೀಸ್ ಮತ್ತು ಇತರರು ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಸತೀಶ್‌ಚಂದ್ರ ಶರ್ಮಾ ನೇತೃತ್ವದ ವಿಭಾಗೀಯ ಪೀಠ, ಈ ಆದೇಶ ನೀಡಿತು.

ಪ್ರಜಾವಾಣಿ ಶೈಕ್ಷಣಿಕ ನೆರವು ನಿಧಿ

ಬಡ ವಿದ್ಯಾರ್ಥಿಗಳಿಗೆ ಉದಾರ ಕೊಡುಗೆ ನೀಡಿ

ಪ್ರಜಾವಾಣಿ- ಡೆಕ್ಕನ್ ಹೆರಾಲ್ಡ್ ಮಾತೃ ಸಂಸ್ಥೆ ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿಮಿಟೆಡ್ ಸ್ಥಾಪಿಸಿರುವ ಟ್ರಸ್ಟ್, ಎಸ್‌ಎಸ್‌ಎಲ್‌ಸಿಯಲ್ಲಿ ಉತ್ತೀರ್ಣರಾದ ಅರ್ಹ ಬಡ ವಿದ್ಯಾರ್ಥಿಗಳಿಗೆ ಮುಂದಿನ ಶಿಕ್ಷಣಕ್ಕಾಗಿ ಧನ ಸಹಾಯ ಮಾಡುತ್ತಾ ಬಂದಿದೆ. ಸಾರ್ವಜನಿಕರು ಮತ್ತು ದಾನಿಗಳು ಸಂಸ್ಥೆಯ ಈ ಉದ್ದೇಶಕ್ಕೆ ನೆರವಾಗಬೇಕೆಂದು ಕೋರುತ್ತೇವೆ. ಚೆಕ್ ಅಥವಾ ಡಿ.ಡಿ. ರೂಪದಲ್ಲಿ ಹಣವನ್ನು 'Deccan Herald-Prajavani Relief Trust' ಹೆಸರಿಗೆ ಕಳುಹಿಸಬಹುದು.

ಆನ್‌ಲೈನ್ ಅಥವಾ ಚೆಕ್ ಮೂಲಕವೂ ಹಣ ವರ್ಗಾಯಿಸುವ ಸೌಲಭ್ಯ ಇದೆ. (ವಿವರ ಕೆಳಗೆ ಕೊಡಲಾಗಿದೆ) ಒಂದು ಸಾವಿರ ರೂಪಾಯಿಗಿಂತ ಹೆಚ್ಚು ಹಣ ನೀಡುವವರ ಹೆಸರನ್ನು ಪ್ರಜಾವಾಣಿ ಮತ್ತು ಡೆಕ್ಕನ್ ಹೆರಾಲ್ಡ್ ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದು. ಈ ದೇಣಿಗೆಗೆ ಆದಾಯ ತೆರಿಗೆ ಸೆಕ್ಷನ್ 80 ಜಿ ಅನ್ವಯ ಶೇ 50 ರಷ್ಟು ಆದಾಯ ತೆರಿಗೆ ವಿನಾಯಿತಿ ಇದೆ.

ಆನ್‌ಲೈನ್‌ನಲ್ಲಿ ಹಣ ಸಂದಾಯ ಮಾಡುವವರು ಕೆಳಗಿನ ಕೋಡ್ ಸ್ಕ್ಯಾನ್ ಮಾಡಿ ಅಥವಾ ಲಿಂಕ್ ಬಳಸಿ

https://bit.ly/3xFpoz4

ಬ್ಯಾಂಕ್‌ಗೆ ನೇರವಾಗಿ ಹಣ ಸಂದಾಯ ಮಾಡುವವರು ಕೆಳಗಿನ ವಿವರ ಬಳಸಿ

'Deccan Herald-Prajavani Relief Trust'
Canara Bank, Cantonment Branch
A/c no. - 0404101200385
IFSC code - CNRB0000404
MICR Code - 560015009

ಸೂಚನೆ: ದೇಣಿಗೆ ನೀಡುವವರು ಲಕೋಟೆ ಮೇಲೆ 'ಶೈಕ್ಷಣಿಕ ನೆರವಿಗೆ ಕೊಡುಗೆ' ಎಂದು ನಮೂದಿಸಲು ಮನವಿ.

ವಿಳಾಸ: ಮ್ಯಾನೇಜರ್, ಡೆಕ್ಕನ್ ಹೆರಾಲ್ಡ್–ಪ್ರಜಾವಾಣಿ ಪರಿಹಾರ ಟ್ರಸ್ಟ್, ನಂ. 75, ಮಹಾತ್ಮಗಾಂಧಿ ರಸ್ತೆ, ಬೆಂಗಳೂರು – 560001

ಅರ್ಹ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನ

2021ರ ಎಸ್‌ಎಸ್‌ಎಲ್‌ಸಿಯಲ್ಲಿ ಅಧಿಕ ಅಂಕ ಗಳಿಸಿದ ಸಾಮಾಜಿಕ ಮತ್ತು ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿ–ವಿದ್ಯಾರ್ಥಿನಿಯರು ಮಾತ್ರ ಈ ನೆರವು ಕೋರಿ ಅರ್ಜಿ ಸಲ್ಲಿಸಬಹುದು. ಅರ್ಜಿಯಲ್ಲಿ ವಿಳಾಸ, ಮೊಬೈಲ್ ಸಂಖ್ಯೆ ಮತ್ತಿತರ ವಿವರಗಳಿರಬೇಕು. ಲಕೋಟೆ ಮೇಲೆ 'ಶೈಕ್ಷಣಿಕ ನೆರವಿಗೆ ಅರ್ಜಿ' ಎಂದು ಬರೆಯಬೇಕು. ಅರ್ಜಿಯ ಜೊತೆ ಖಾತೆ ಸಂಖ್ಯೆ, ಐಎಫ್‌ಎಸ್‌ಸಿ ನಂಬರ್ ಉಳ್ಳ ಬ್ಯಾಂಕ್ ಪಾಸ್‌ಬುಕ್ ಪುಟದ ಪ್ರತಿಯನ್ನು ಸಲ್ಲಿಸಬೇಕು.

ವಿದ್ಯಾರ್ಥಿಗಳ ಅನಿಸಿಕೆ

ಸಿಇಟಿ, ನೀಟ್ ಪುಸ್ತಕ ಖರೀದಿಸಿದೆ



ಸಿಇಟಿ, ನೀಟ್ ಪರೀಕ್ಷೆಯ ಪುಸ್ತಕಗಳು ಬಹಳ ದುಬಾರಿಯಾಗಿದ್ದರಿಂದ ಖರೀದಿಸಲಾಗಿರಲಿಲ್ಲ. 'ಪ್ರಜಾವಾಣಿ' ನೀಡಿದ ಸ್ಕಾಲರ್‌ಶಿಪ್ ಹಣದಿಂದ ಸಿಇಟಿ ಹಾಗೂ ನೀಟ್ ಪರೀಕ್ಷೆಗೆ ಅಗತ್ಯವಿರುವ ಪುಸ್ತಕಗಳನ್ನು ಖರೀದಿಸಿದೆ. ಸ್ಕಾಲರ್‌ಶಿಪ್ ಹಣದಿಂದ ತುಂಬಾ ಅನುಕೂಲವಾಯಿತು.

ಜನನಿ ಆರ್., ಓಬಳಾಪುರ, ಹಿರಿಯೂರು, ಚಿತ್ರದುರ್ಗ ಜಿಲ್ಲೆ

ಸಕಾಲಕ್ಕೆ ನೆರವಾದ 'ಪ್ರಜಾವಾಣಿ'



ಪ್ರಜಾವಾಣಿ'ಯು ಸಕಾಲಕ್ಕೆ ಆರ್ಥಿಕ ನೆರವು ನೀಡಿತು. ಆ ಹಣದ ಒಂದು ಭಾಗವನ್ನು ಕಾಲೇಜು ಪ್ರವೇಶ ಶುಲ್ಕ ಪಾವತಿಸಲು ಬಳಸಿದೆ. ಉಳಿದಿದ್ದರಲ್ಲಿ ಒಂದಿಷ್ಟು ಪುಸ್ತಕಗಳನ್ನು ಖರೀದಿಸಿದೆ. ನೆರವು ನೀಡಿದ 'ಪ್ರಜಾವಾಣಿ'ಗೆ ಧನ್ಯವಾದಗಳು.

ರೋಹಿತ್ ಚಂದ್ರಶೇಖರ ಕುಪ್ಪೆಲೂರು, ಹುಬ್ಬಳ್ಳಿ

ಮೈಸೂರು ಪಾಲಿಕೆಗೆ ಬಿಜೆಪಿಯ ಮೊದಲ ಮೇಯರ್

ಮೈಸೂರು: ಇಲ್ಲಿನ ಮಹಾನಗರ ಪಾಲಿಕೆಯಲ್ಲಿ ಕಾಂಗ್ರೆಸ್ - ಜೆಡಿಎಸ್ ಮೈತ್ರಿ ಮುರಿದು ಬಿದ್ದಿದ್ದು, ಬುಧವಾರ ನಡೆದ ಚುನಾವಣೆಯಲ್ಲಿ ಬಿಜೆಪಿಯ ಸುನಂದಾ ಫಾಲನೇತ್ರ ಮೇಯರ್ ಆಗಿ ಆಯ್ಕೆಯಾದರು. ಪಾಲಿಕೆ ಇತಿಹಾಸದಲ್ಲಿ ಮೊದಲ ಬಾರಿಗೆ ಬಿಜೆಪಿಗೆ ಮೇಯರ್ ಸ್ಥಾನ ದೊರಕಿದೆ.

ಚಲಾವಣೆಯಾದ 70 ಮತಗಳ ಪೈಕಿ ಸುನಂದಾ 26 ಮತ ಪಡೆದರೆ, ಜೆಡಿಎಸ್‌ನ ಅಶ್ವಿನಿ ಅನಂತು ಹಾಗೂ ಕಾಂಗ್ರೆಸ್‌ನ ಎಚ್.ಎಂ. ಶಾಂತಕುಮಾರಿ ತಲಾ 22 ಮತ ಗಳಿಸಿದರು.


ಸುನಂದಾ ಫಾಲನೇತ್ರ

ಎರಡೂವರೆ ವರ್ಷದಿಂದ ಮೈತ್ರಿ ಆಡಳಿತ ನಡೆಸಿದ ಕಾಂಗ್ರೆಸ್–ಜೆಡಿಎಸ್ ಮೇಯರ್ ಸ್ಥಾನ ತಮಗೇ ಬೇಕು ಎಂದು ಪಟ್ಟುಹಿಡಿದು ಅಭ್ಯರ್ಥಿಗಳನ್ನು ಕಣಕ್ಕಿಳಿಸಿದ್ದು ಬಿಜೆಪಿಗೆ ಅವಕಾಶದ ಬಾಗಿಲು ತೆರೆಯಿತು.

ಕೋವಿಡ್: ಬಡ ವಿದ್ಯಾರ್ಥಿಗಳ ಓದಿಗೆ ಹಲವಾರು ಸಂಕಷ್ಟ

ಮೊಬೈಲೂ ಇಲ್ಲ; ಟಿವಿಯೂ ಇಲ್ಲ

• ಬಸವರಾಜ ಹವಾಲ್ದಾರ

ಹುಬ್ಬಳ್ಳಿ: ಕೋವಿಡ್‌ನಿಂದಾಗಿ ಶಾಲೆಗಳು ಮಕ್ಕಳ ಭೌತಿಕ ಹಾಜರಾತಿಗೆ ಪರ್ಯಾಯವಾಗಿ ಆನ್‌ಲೈನ್‌ನಲ್ಲಿ ತರಗತಿಗಳು ನಡೆಯುತ್ತಿವೆ. ಆದರೆ, ಧಾರವಾಡ ಜಿಲ್ಲೆಯಲ್ಲಿ 23,724 ವಿದ್ಯಾರ್ಥಿಗಳು ಮನೆಯಲ್ಲಿ ಮೊಬೈಲ್, ಟಿವಿ ಹೊಂದಿಲ್ಲ. ಅವರ ಶೈಕ್ಷಣಿಕ ಪ್ರಗತಿ ಕುಂಠಿತವಾಗಿದೆ.

ಶಿಕ್ಷಣ ಇಲಾಖೆ ನಡೆಸಿದ ಪರ್ಯಾಯ ಶಿಕ್ಷಣಕ್ಕೆ ಹೊಂದಿರುವ ಸೌಲಭ್ಯಗಳ ಸರ್ವೆಯಲ್ಲಿ 60 ಸಾವಿರಕ್ಕೂ ಹೆಚ್ಚು ಮಕ್ಕಳ ಮನೆಯಲ್ಲಿ ಕೀಪ್ಯಾಡ್ ಮೊಬೈಲ್ ಮಾತ್ರ ಹೊಂದಿರುವುದು ಗೊತ್ತಾಗಿದೆ. ಹಾಗಾಗಿ, ಆನ್‌ಲೈನ್‌ನಲ್ಲಿ ಪಾಠ ಕೇಳಲಾಗುತ್ತಿಲ್ಲ. ಹಲವಾರು ಮನೆಗಳಲ್ಲಿ ಪೋಷಕರು ಸ್ಮಾರ್ಟ್ ಫೋನ್ ಹೊಂದಿದ್ದರೂ, ಮಕ್ಕಳ ತರಗತಿಗೆ ಫೋನ್ ಕೊಡಲು ಸಾಧ್ಯವಿಲ್ಲದಂತಹ ಪರಿಸ್ಥಿತಿ ಎದುರಿಸುತ್ತಿದ್ದಾರೆ.

ಸರ್ಕಾರಿ ಶಾಲೆಗಳ ಮಕ್ಕಳ ಮನೆಗಳಲ್ಲಷ್ಟೇ ಟಿವಿ, ಮೊಬೈಲ್ ಹೊಂದಿಲ್ಲ ಎನ್ನುವಂತಿಲ್ಲ. ಅನುದಾನಿತ, ಅನುದಾನ ರಹಿತ ಶಾಲೆಗಳ ಮಕ್ಕಳೂ ಈ ಸೌಲಭ್ಯ ಹೊಂದಿಲ್ಲ ಎನ್ನುವುದು ಸರ್ವೆಯಲ್ಲಿ ತಿಳಿದು ಬಂದಿದೆ.

ಕೋವಿಡ್–19 ಒಂದನೇ ಅಲೆ ಆರಂಭವಾದಾಗಿನಿಂದ ಶಾಲೆಗಳು ಹೆಚ್ಚೂ- ಕಡಿಮೆ ಬಂದ್ ಆಗಿವೆ. ವಿದ್ಯಾರ್ಥಿಗಳು ಭೌತಿಕವಾಗಿ ತರಗತಿಗೆ ಹಾಜರಾಗುತ್ತಿಲ್ಲವಾದರೂ, ಆನ್‌ಲೈನ್‌ನಲ್ಲಿಯೇ ಪಾಠಗಳು ನಡೆಯುತ್ತಿವೆ. ಸೌಲಭ್ಯಗಳ ಕೊರತೆಯಿಂದ ಸಾವಿರಾರು ವಿದ್ಯಾರ್ಥಿಗಳಿಗೆ ಆನ್‌ಲೈನ್ ಪಾಠ ಕೇಳಲು ಆಗುತ್ತಿಲ್ಲ.

ಚಂದನ ವಾಹಿನಿಯಲ್ಲಿ ಮಕ್ಕಳಿಗೆ ಪಾಠ ಮಾಡಲಾಗುತ್ತಿದೆ. ಅದನ್ನು ಕೇಳಲು ಲಕ್ಷಾಂತರ ವಿದ್ಯಾರ್ಥಿಗಳ ಮನೆಯಲ್ಲಿ ಟಿವಿಯೂ ಇಲ್ಲವಾಗಿದೆ. ಅವರು ಪಾಠ ಕೇಳಲು ಅಕ್ಕ–ಪಕ್ಕದ ಮನೆಗಳವರನ್ನೇ ಆಶ್ರಯಿಸಬೇಕಾಗಿದೆ. ಕೋವಿಡ್‌ನಿಂದಾಗಿ ಕೆಲವರು ವಿದ್ಯಾರ್ಥಿಗಳನ್ನು ಮನೆಗೆ ಸೇರಿಸಿಕೊಳ್ಳಲು ಹಿಂದೇಟು ಹಾಕುತ್ತಿದ್ದಾರೆ.

ಈಗ 9 ಹಾಗೂ 10ನೇ ತರಗತಿ ವಿದ್ಯಾರ್ಥಿಗಳಿಗೆ ಶಾಲೆ ಆರಂಭಿಸಲಾಗಿದೆ. ಆದರೆ, ಹಾಜರಾತಿ ಕಡ್ಡಾಯಗೊಳಿಸಿಲ್ಲ. ಆನ್‌ಲೈನ್‌ನಲ್ಲಿಯೂ ಶಿಕ್ಷಣ ಮುಂದುವರಿಸಬಹುದು ಎಂದು ಹೇಳಲಾಗಿದೆ. ಎರಡೂ ಕಡೆ ಬೋಧಿಸಬೇಕಾದ ಒತ್ತಡಕ್ಕೆ ಶಿಕ್ಷಕರು ಒಳಗಾಗಿದ್ದಾರೆ. ಶೇ 50ರಷ್ಟು ವಿದ್ಯಾರ್ಥಿಗಳು ಭೌತಿಕ ತರಗತಿಗಳಿಗೆ ಹಾಜರಾಗುತ್ತಿದ್ದಾರೆ. ಮಕ್ಕಳನ್ನು ಶಾಲೆಗೆ ಕಳುಹಿಸಬೇಕೇ? ಬೇಡವೇ ಎಂಬ ಗೊಂದಲದಲ್ಲಿದ್ದಾರೆ ಪೋಷಕರು.

'ಆನ್‌ಲೈನ್ ಪಾಠಗಳು ನಡೆಯುತ್ತಿವೆ. ಆನ್‌ಲೈನ್ ಪಡೆಯಲು ಸಾಧ್ಯವಾಗದ ಮಕ್ಕಳ ಪೋಷಕರ ಮೊಬೈಲ್‌ಗಳಿಗೆ ಪಾಠದ ವಿಡಿಯೊ ಹಾಗೂ ನೋಟ್ಸ್‌ಗಳನ್ನು ಕಳುಹಿಸಲಾಗುತ್ತಿದೆ' ಎನ್ನುತ್ತಾರೆ ಸಾರ್ವಜನಿಕ ಶಿಕ್ಷಣ ಇಲಾಖೆಯ ಧಾರವಾಡ ಜಿಲ್ಲೆ ಉಪನಿರ್ದೇಶಕ ಮೋಹನ ಹಂಚಾಟೆ.

ಪರ್ಯಾಯ ಶಿಕ್ಷಣಕ್ಕೆ ಹೊಂದಿದ ಸೌಲಭ್ಯಗಳ ವಿವರ

ಸೌಲಭ್ಯ	ಸರ್ಕಾರಿ	ಅನುದಾನಿತ	ಅನುದಾನ ರಹಿತ
ಟಿವಿ, ಮೊಬೈಲ್ ಹೊಂದಿಲ್ಲದವರು	14,630	3,571	5,523
ಕೀಪ್ಯಾಡ್ ಮೊಬೈಲ್ ಹೊಂದಿದವರು	33,263	9,493	19,979
ಟಿವಿ ಹೊಂದಿದವರು	38,879	14,328	33,541
ಟಿವಿ, ಇಂಟರ್‌ನೆಟ್ ಹೊಂದಿರುವವರು	51,,857	20,560	71,976

ಪೋಷಕರ ಮೂಲಕವೂ ಮಕ್ಕಳೊಂದಿಗೆ ಶಿಕ್ಷಕರು ಸಂಪರ್ಕ ಹೊಂದಿದ್ದಾರೆ. ಲಿಖಿತ ನೋಟ್ಸ್ ನೀಡುವ ಮೂಲಕ ಶೈಕ್ಷಣಿಕ ಪ್ರಗತಿಗೆ ನೆರವಾಗುತ್ತಿದ್ದಾರೆ

ಮೋಹನ ಹಂಚಾಟೆ, ಉಪನಿರ್ದೇಶಕ, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ

ಅಂಕಿ-ಅಂಶಗಳು

3,17,610 1ರಿಂದ10ನೇ ತರಗತಿಯ ಒಟ್ಟು ವಿದ್ಯಾರ್ಥಿಗಳು

1,44,395 ಟಿವಿ, ಇಂಟರ್‌ನೆಟ್ ಸೌಲಭ್ಯ ಹೊಂದಿದ ಮಕ್ಕಳು

86,747 ಮನೆಯಲ್ಲಿ ಟಿವಿ ಹೊಂದಿದವರು

67,735 ಕೀಪ್ಯಾಡ್ ಮೊಬೈಲ್ ಹೊಂದಿದವರು

ಸೆ.15ರೊಳಗೆ ಪಠ್ಯ ಪುಸ್ತಕ ಪೂರೈಕೆ: ನಾಗೇಶ್

ಪ್ರಜಾವಾಣಿ ವಾರ್ತೆ



ಬಿ.ಸಿ.ನಾಗೇಶ್

ಬೆಂಗಳೂರು: ರಾಜ್ಯದ ಎಲ್ಲ ಸರ್ಕಾರಿ ಶಾಲೆಗಳಿಗೆ ಸೆಪ್ಟೆಂಬರ್ 15ರೊಳಗೆ ಪಠ್ಯ ಪುಸ್ತಕ ಪೂರೈಕೆಗೆ ಕ್ರಮ ಕೈಗೊಳ್ಳಲಾಗುವುದು ಎಂದು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಬಿ.ಸಿ. ನಾಗೇಶ್ ತಿಳಿಸಿದರು.

ಸುದ್ದಿಗಾರರ ಜತೆ ಬುಧವಾರ ಮಾತನಾಡಿದ ಅವರು, 'ಕೋವಿಡ್ ಕಾರಣದಿಂದ ಸರ್ಕಾರಿ ಮುದ್ರಣಾಲಯಗಳಲ್ಲಿ ಪೂರ್ಣ ಪ್ರಮಾಣದ ಚಟುವಟಿಕೆ ನಡೆದಿರಲಿಲ್ಲ. ಆದರೂ, ಈಗಾಗಲೇ ಶೇಕಡ 50 ಕ್ಕಿಂತ ಹೆಚ್ಚು ಶಾಲೆಗಳಿಗೆ ಪಠ್ಯ ಪುಸ್ತಕಗಳನ್ನು ಪೂರೈಸಲಾಗಿದೆ. ಈವರೆಗೆ ಶೇ 70 ಕ್ಕಿಂತ ಹೆಚ್ಚು ಪುಸ್ತಕಗಳ ಮುದ್ರಣ ಮುಗಿದಿದೆ. ಸೆ.15ರೊಳಗೆ ಎಲ್ಲ ಶಾಲೆಗಳಿಗೂ ಪಠ್ಯ ಪುಸ್ತಕಗಳನ್ನು ಪೂರೈಸುವ ಗುರಿ ಹೊಂದಲಾಗಿದೆ' ಎಂದರು.

ಉಚಿತ ವಿತರಣೆ ಮತ್ತು ಮಾರಾಟಕ್ಕಾಗಿ 5.34 ಕೋಟಿ ಪಠ್ಯ ಪುಸ್ತಕಗಳು ಬೇಕಿವೆ. ಈಗಾಗಲೇ 3.78 ಕೋಟಿ ಪುಸ್ತಕಗಳ ಮುದ್ರಣ ಮುಗಿದಿದ್ದು, 2.92 ಕೋಟಿ ಪುಸ್ತಕಗಳನ್ನು ಶಾಲೆಗಳಿಗೆ ಪೂರೈಸಲಾಗಿದೆ. ಉಳಿದ ಪುಸ್ತಕಗಳ ಮುದ್ರಣವನ್ನು ತ್ವರಿತವಾಗಿ ಪೂರ್ಣಗೊಳಿಸಲು ಸೂಚಿಸಲಾಗಿದೆ ಎಂದು ವಿವರಿಸಿದರು.

ಆನ್‌ಲೈನ್ ತರಗತಿಗಳಿಗೆ ಪೂರಕವಾಗಿ ಪಠ್ಯ ಸಿದ್ಧಪಡಿಸಿ ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡಲಾಗಿದೆ. ಆ ಪಠ್ಯಗಳನ್ನು ಡೌನ್‌ಲೋಡ್ ಮಾಡಿಕೊಳ್ಳುವಂತೆ ವಿದ್ಯಾರ್ಥಿಗಳು ಮತ್ತು ಪೋಷಕರಿಗೆ ತಿಳಿಸಲಾಗಿತ್ತು. ಹೆಚ್ಚಿನ ವಿದ್ಯಾರ್ಥಿಗಳು ಆನ್‌ಲೈನ್ ಮೂಲಕ ಪಠ್ಯ ಪುಸ್ತಕ ಡೌನ್‌ಲೋಡ್ ಮಾಡಿಕೊಂಡಿರುವ ಮಾಹಿತಿ ಇದೆ. ಈ ವಿಷಯದಲ್ಲಿ ವಿದ್ಯಾರ್ಥಿಗಳಿಗೆ ಅಗತ್ಯ ಸಹಕಾರ ನೀಡುವಂತೆ ಮುಖ್ಯ ಶಿಕ್ಷಕರು, ಶಾಲಾ ಆಡಳಿತ ಮಂಡಳಿಗಳಿಗೆ ಸೂಚನೆ ನೀಡಲಾಗಿದೆ ಎಂದರು.

ಮಂತ್ರಾಲಯ: ಮಹಾರಥೋತ್ಸವ ಸಂಭ್ರಮ

ಪ್ರಜಾವಾಣಿ ವಾರ್ತೆ

ಮಂತ್ರಾಲಯ (ರಾಯಚೂರು): ರಾಘವೇಂದ್ರ ಸ್ವಾಮಿಗಳ 350ನೇ ಆರಾಧನಾ ಮಹೋತ್ಸವದ ಕೊನೆಯ ದಿನವಾದ ಬುಧವಾರ ಮಹಾರಥೋತ್ಸವವು ಸಂಭ್ರಮದಿಂದ ನೆರವೇರಿತು.

ವಿವಿಧ ರಾಜ್ಯಗಳ ಭಕ್ತರು ಪಾಲ್ಗೊಂಡಿದ್ದರು.

'ಭಕ್ತರು ನಿರೀಕ್ಷೆಗೂ ಮೀರಿ ಮಹಾರಥೋತ್ಸವದಲ್ಲಿ ಪಾಲ್ಗೊಂಡಿದ್ದಾರೆ' ಎಂದು ಮಠದ ಪೀಠಾಧಿಪತಿ ಸುಬುಧೇಂದ್ರ ತೀರ್ಥರು ಅನುಗ್ರಹ ಸಂದೇಶದಲ್ಲಿ ತಿಳಿಸಿದರು.

ರಾಘವೇಂದ್ರ ವೃತ್ತದವರೆಗೂ ರಥೋತ್ಸವ ನಡೆಯಿತು. ಶ್ರೀಗಳು ಹೆಲಿಕಾಪ್ಟರ್ ಮೂಲಕ ಪುಷ್ಪವೃಷ್ಟಿ ಮಾಡಿದರು.

ಕೋವಿಡ್ ನಿಯಮ ಪಾಲನೆಗೆ ಸೂಚಿಸಿದರೂ ಅನೇಕ ಭಕ್ತರು ನಿಯಮ ಉಲ್ಲಂಘಿಸಿ ಪಾಲ್ಗೊಂಡಿದ್ದರು.



ಮಂತ್ರಾಲಯದಲ್ಲಿ ರಾಯರ ಆರಾಧನೆಯ ಕೊನೆಯ ದಿನವಾದ ಬುಧವಾರ, ಮಠದ ಹೊರಭಾಗದಲ್ಲಿ ಮಹಾರಥೋತ್ಸವ ಸಂಭ್ರಮದಿಂದ ನಡೆಯಿತು ಪ್ರಜಾವಾಣಿ ಚಿತ್ರ: ಶ್ರೀನಿವಾಸ ಇನಾಮದಾರ

ಸುರಪುರ: ಬುದ್ಧನ ಮೂರ್ತಿ ಧ್ವಂಸ

ಸುರಪುರ (ಯಾದಗಿರಿ ಜಿಲ್ಲೆ): ಇಲ್ಲಿಯ ಬುದ್ಧ ವಿಹಾರದ ಆವರಣದಲ್ಲಿಯ ಗೌತಮ ಬುದ್ಧನ ಮೂರ್ತಿಯನ್ನು ಕಿಡಿಗೇಡಿಗಳು ಧ್ವಂಸಗೊಳಿಸಿದ್ದು, ಕೂಡಲೇ ಆರೋಪಿಗಳನ್ನು ಬಂಧಿಸುವಂತೆ ಹಲವು ದಲಿತಪರ ಸಂಘಟನೆಗಳ ಮುಖಂಡರು ಒತ್ತಾಯಿಸಿದ್ದಾರೆ.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಸಿ.ಬಿ. ವೇದಮೂರ್ತಿ ಹಾಗೂ ಇತರ ಅಧಿಕಾರಿಗಳು ಭೇಟಿ ನೀಡಿ ಪರಿಶೀಲಿಸಿದರು.

'ಸ್ಥಳೀಯ ಆಡಳಿತ ಆಗಸ್ಟ್ 30ರ ಒಳಗೆ ಬುದ್ಧನ ಮೂರ್ತಿಯನ್ನು ಪ್ರತಿಷ್ಠಾಪಿಸಬೇಕು. ಈ ಕಾರ್ಯ ವಿಳಂಬವಾದರೆ ಸೆ.1ರಂದು ಸುರಪುರ ಬಂದ್‌ಗೆ ಕರೆ ನೀಡಲಾಗುವುದು' ಎಂದು ಮುಖಂಡ ಮಾನಪ್ಪ ಕಟ್ಟಿಮನಿ ಎಚ್ಚರಿಕೆ ನೀಡಿದರು.

ಹಿರಿಯ ಅಧಿಕಾರಿಗಳ ಜತೆ ಚರ್ಚಿಸಿ ಮೂರ್ತಿ ಪ್ರತಿಷ್ಠಾಪನೆಗೆ ಕ್ರಮ ಕೈಗೊಳ್ಳುವುದಾಗಿ ತಹಶೀಲ್ದಾರ್ ಸುಬ್ಬಣ್ಣ ಜಮಖಂಡಿ ಭರವಸೆ ನೀಡಿದರು.

ಮಹಿಳೆ ಕೊಲೆ: ಅತ್ಯಾಚಾರ ಶಂಕೆ

ತುಮಕೂರು: ತಾಲ್ಲೂಕಿನ ಚಿಕ್ಕಹಳ್ಳಿ ಅರಣ್ಯ ಪ್ರದೇಶಕ್ಕೆ ದನ ಮೇಯಿಸಲು ಹೋಗಿದ್ದ ಮಹಿಳೆ ಕೊಲೆಯಾಗಿದ್ದು, ಅತ್ಯಾಚಾರ ಶಂಕೆ ವ್ಯಕ್ತವಾಗಿದೆ.

ತಾಲ್ಲೂಕಿನ ಹಿರೇಹಳ್ಳಿ ಸಮೀಪದ ಅರಣ್ಯ ಪ್ರದೇಶದಲ್ಲಿ ಮಂಗಳವಾರ ರಾತ್ರಿ ಪತ್ತೆಯಾಗಿದ್ದು, ಕತ್ತಿನಲ್ಲಿದ್ದ ಚಿನ್ನದ ತಾಳಿ ನಾಪತ್ತೆಯಾಗಿದೆ. ಮೂವರು ಸೇರಿಕೊಂಡು ಅತ್ಯಾಚಾರ ನಡೆಸಿರಬಹುದು ಎಂಬ ಶಂಕೆ ವ್ಯಕ್ತವಾಗಿದ್ದು, ಪೊಲೀಸರು ಖಚಿತಪಡಿಸಿಲ್ಲ.

'ಮಹಿಳೆ ಕೊಲೆಯಾಗಿದ್ದು, ತಾಳಿ ನಾಪತ್ತೆಯಾಗಿದೆ. ಅತ್ಯಾಚಾರ ನಡೆದಿರುವುದು ಖಚಿತಪಟ್ಟಿಲ್ಲ' ಎಂದು ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಉದೇಶ್ ಸ್ಪಷ್ಟಪಡಿಸಿದರು.

ಆಸ್ಪತ್ರೆಗೆ ದಾಖಲಾದ ನಟಿ ಸಂಜನಾ!

ಪ್ರಜಾವಾಣಿ ವಾರ್ತೆ



ಸಂಜನಾ ಗಲ್ರಾನಿ

ಬೆಂಗಳೂರು: ಅಂತರರಾಷ್ಟ್ರೀಯ ಡ್ರಗ್ಸ್ ಜಾಲ ಪ್ರಕರಣದಲ್ಲಿ ಮಾದಕ ವಸ್ತು ಸೇವನೆ ಮಾಡಿರುವುದು 'ಕೂದಲು ಪರೀಕ್ಷೆ'ಯಿಂದ ದೃಢಪಟ್ಟಿರುವ ಬೆನ್ನಲ್ಲೇ, ನಟಿ ಸಂಜನಾ ಗಲ್ರಾನಿ ಅವರು ಆಸ್ಪತ್ರೆಗೆ ದಾಖಲಾಗಿದ್ದಾರೆ.

ಈ ಮಾಹಿತಿಯನ್ನು ಸ್ವತಃ ಸಂಜನಾ ಅವರ ತಾಯಿ ರೇಷ್ಮಾ ಗಲ್ರಾನಿ ಅವರು ತಿಳಿಸಿದ್ದು, 'ದೇವರು ಇದ್ದಾನೆ. ನಾವೇನು ತಪ್ಪು ಮಾಡಿಲ್ಲ. ಭಗವಂತನಿದ್ದಾನೆ, ಅವನು ನಮ್ಮ ಕೈಬಿಡುವುದಿಲ್ಲ. ಸಂಜನಾಗೆ ಆರೋಗ್ಯ ಸರಿ ಇಲ್ಲ. ನಾವು ತುಂಬಾ ಬೇಸರದಲ್ಲಿ ಇದ್ದೇವೆ. ಮಾನಸಿಕವಾಗಿ ಸಂಜನಾ ತುಂಬಾ ಕುಗ್ಗಿ ಹೋಗಿದ್ದಾಳೆ. ಜೀವನದಲ್ಲಿ ಮುಂದೆ ಬರೋಣ ಎಂದು ಆಕೆ ಯೋಚಿಸುತ್ತಿದ್ದರೆ ಪದೇಪದೇ ಅದೇ ಮಾತುಗಳು ಕೇಳಿಬರುತ್ತಿವೆ. ಇದು ನಮ್ಮ ಗ್ರಹಚಾರವೋ ಏನೋ ಎಂದು ತಿಳಿದಿಲ್ಲ. ಸಂಜನಾ ಖಿನ್ನತೆಯಲ್ಲಿ ಇದ್ದಾಳೆ. ಅನಾರೋಗ್ಯದ ಕಾರಣ ಆಸ್ಪತ್ರೆಗೆ ದಾಖಲಾಗಿದ್ದಾಳೆ' ಎಂದು ತಿಳಿಸಿದ್ದಾರೆ.

ಆದರೆ, ಆಸ್ಪತ್ರೆಗೆ ದಾಖಲಾಗಿದ್ದಾರೆ ಎನ್ನಲಾಗಿರುವ ಸಂಜನಾ ಅವರು ಬುಧವಾರ ಮಧ್ಯಾಹ್ನ 12 ಗಂಟೆಯ ವೇಳೆಗೆ ಇನ್‌ಸ್ಟಾಗ್ರಾಂನಲ್ಲಿ ವಿಡಿಯೊ ಪೋಸ್ಟ್ ಶೇರ್ ಮಾಡಿದ್ದು, 'ರೀಲ್ಸ್ ಮಾಡಿ ವಿಡಿಯೊ ಶೇರ್ ಮಾಡುವುದೇ ನನ್ನ ಕೆಲಸ. ದಯವಿಟ್ಟು ಟ್ರೋಲ್ ಮಾಡಬೇಡಿ. ನನ್ನನ್ನು ಅಥವಾ ನನ್ನ ವ್ಯಕ್ತಿತ್ವ ಇಷ್ಟ ಪಡದೇ ಇದ್ದರೆ ಅನ್‌ಫಾಲೊ ಮಾಡಿ. ನನ್ನ ವಿರೋಧಿಗಳಿಗೆ ದೇವರು ಒಳ್ಳೆಯದು ಮಾಡಲಿ' ಎಂದು ಉಲ್ಲೇಖಿಸಿದ್ದಾರೆ.

ವಿದ್ಯಾರ್ಥಿನಿ ಮೇಲೆ ಸಾಮೂಹಿಕ ಅತ್ಯಾಚಾರ

ಒಂದನೇ ಪುಟದಿಂದ...

ಘಟನೆ ನಡೆದ ಸ್ಥಳಕ್ಕೆ ಡಿಸಿಪಿ ಪ್ರದೀಪ್ ಗುಂಟಿ ಹಾಗೂ ವಿಧಿ ವಿಜ್ಞಾನ ಪ್ರಯೋಗಾಲಯ ತಜ್ಞರು ಭೇಟಿ ನೀಡಿ ಪರಿಶೀಲಿಸಿದರು.

'ಪ್ರಕರಣದ ಮಾಹಿತಿ ದೊರೆತ ಕೂಡಲೇ ಪೊಲೀಸರು ಸ್ವಯಂ-ಪ್ರೇರಿತರಾಗಿ ಪ್ರಕರಣ ದಾಖಲಿಸದೆ ವಿಳಂಬ ಮಾಡಿರುವುದು ಅನುಮಾನ ಮೂಡಿಸಿದೆ' ಎಂದು ಕೆಪಿಸಿಸಿ ವಕ್ತಾರೆ ಮಂಜುಳಾ ಮಾನಸ ಆರೋಪಿಸಿದ್ದಾರೆ.

ಸಭೆ: ಪ್ರಕರಣದ ಹಿನ್ನೆಲೆಯಲ್ಲಿ ಪೊಲೀಸ್ ಅಧಿಕಾರಿಗಳೊಂದಿಗೆ ಸಭೆ ನಡೆಸಿದ ಸಚಿವ ಎಸ್.ಟಿ.ಸೋಮಶೇಖರ್, 'ನಗರದಲ್ಲಿ ಕೆಲವು ದಿನಗಳಿಂದ ಅಪರಾಧ ಪ್ರಕರಣಗಳು ಹೆಚ್ಚುತ್ತಿದ್ದು, ಕಾನೂನು ಸುವ್ಯವಸ್ಥೆ ಹದಗೆಡುತ್ತಿದೆ' ಎಂದು ಅಸಮಾಧಾನ ವ್ಯಕ್ತಪಡಿಸಿದರು. 'ಅತ್ಯಾಚಾರಿಗಳನ್ನು ಕೂಡಲೇ ಬಂಧಿಸಬೇಕು' ಎಂದು ಸೂಚಿಸಿದರು.

ಪ್ರತಿಭಟನೆ: ಘಟನೆಯನ್ನು ಖಂಡಿಸಿ ಎನ್‌ಎಸ್‌ಯುಐ ಕಾರ್ಯಕರ್ತರು ನಗರದ ಜಿಲ್ಲಾ ನ್ಯಾಯಾಲಯದ ಮುಂದೆ ಬುಧವಾರ ಸಂಜೆ ಪ್ರತಿಭಟನೆ ನಡೆಸಿದರು. ಘಟನೆ ಹಿನ್ನೆಲೆಯಲ್ಲೇ ಗೃಹ ಸಚಿವ ಅರಗ ಜ್ಞಾನೇಂದ್ರ ನಗರಕ್ಕೆ ಗುರುವಾರ ಸಂಜೆ ಭೇಟಿ ನೀಡಲಿದ್ದಾರೆ.

'ಮೈಸೂರಿನಲ್ಲಿ ಕಾನೂನು ಸುವ್ಯವಸ್ಥೆ ಕುಸಿದಿದೆ'

ಪ್ರಜಾವಾಣಿ ವಾರ್ತೆ



ಸಿದ್ದರಾಮಯ್ಯ

ಬೆಂಗಳೂರು: ಮೈಸೂರಿನಲ್ಲಿ ಕಾನೂನು ಸುವ್ಯವಸ್ಥೆ ಸಂಪೂರ್ಣವಾಗಿ ಕಣ್ಮರೆಯಾಗಿದೆ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಆರೋಪಿಸಿದ್ದಾರೆ.


ವಿದ್ಯಾರ್ಥಿನಿ ಮೇಲಿನ ಸಾಮೂಹಿಕ ಅತ್ಯಾಚಾರ ಪ್ರಕರಣ ಕುರಿತು ಬುಧವಾರ ಟ್ವಿಟರ್‌ನಲ್ಲಿ ಪ್ರತಿಕ್ರಿಯಿಸಿರುವ ಅವರು, 'ಯುವ ಜೋಡಿಯ ಮೇಲೆ ಹಲ್ಲೆ ನಡೆಸಿ, ವಿದ್ಯಾರ್ಥಿನಿ ಮೇಲೆ ಸಾಮೂಹಿಕ ಅತ್ಯಾಚಾರ ನಡೆಸಿರುವುದು ದುರದೃಷ್ಟಕರ ಘಟನೆ. ಇಂತಹ ಸಂಕಷ್ಟದ ಸಂದರ್ಭದಲ್ಲಿ ಸಂತ್ರಸ್ತೆ ಮತ್ತು ಆಕೆಯ ಕುಟುಂಬದ ಜತೆ ನಾವು ನಿಲ್ಲುತ್ತೇವೆ. ಸಂತ್ರಸ್ತೆಗೆ ನ್ಯಾಯ ದೊರಕಿಸುವ ಭರವಸೆಯನ್ನು ಗೃಹ ಸಚಿವ ಅರಗ ಜ್ಞಾನೇಂದ್ರ ಅವರು ನೀಡಬೇಕು' ಎಂದು ಆಗ್ರಹಿಸಿದ್ದಾರೆ.

ಮೈಸೂರಿನಲ್ಲಿ ಇತ್ತೀಚಿನ ದಿನಗಳಲ್ಲಿ ಅಪರಾಧ ಚಟುವಟಿಕೆಗಳು ಹೆಚ್ಚುತ್ತಿವೆ. ಲೂಟಿ, ಹಲ್ಲೆ, ಸರಗಳ್ಳತನ ಪ್ರಕರಣಗಳು ನಿರಂತರವಾಗಿ ನಡೆಯುತ್ತಿವೆ. ಜನರು ತಮ್ಮ ರಕ್ಷಣೆ ಮತ್ತು ಸುರಕ್ಷತೆಯ ಕುರಿತು ಆತಂಕಕ್ಕೆ ಒಳಗಾಗಿದ್ದಾರೆ. ಇಂತಹ ಸಂದರ್ಭದಲ್ಲಿ ಬಿಜೆಪಿ ನಾಯಕರು ಆಂತರಿಕ ಕಿತ್ತಾಟಗಳನ್ನು ಬದಿಗಿರಿಸಿ ಜನರ ರಕ್ಷಣೆಗೆ ಕ್ರಮ ಕೈಗೊಳ್ಳುವ ಕೆಲಸ ಮಾಡಬೇಕು ಎಂದು ಒತ್ತಾಯಿಸಿದ್ದಾರೆ.

ರೈತರ ಆದಾಯ ದ್ವಿಗುಣ: ಸಿ.ಎಂ ಬೊಮ್ಮಾಯಿ

'ಕಾರ್ಯತಂತ್ರಕ್ಕೆ ರೈತರ ಸಮಿತಿ ರಚನೆ'

ಪ್ರಜಾವಾಣಿ ವಾರ್ತೆ



ಬಸವರಾಜ ಬೊಮ್ಮಾಯಿ

ಬೆಂಗಳೂರು: ರಾಜ್ಯದ ರೈತರ ಆದಾಯ ದ್ವಿಗುಣಗೊಳಿಸಲು ಕೇಂದ್ರ ಸರ್ಕಾರದ ಸಹಯೋಗದೊಂದಿಗೆ ಹಮ್ಮಿಕೊಳ್ಳಬಹುದಾದ ಕಾರ್ಯತಂತ್ರಗಳ ಕುರಿತು ವರದಿ ಸಲ್ಲಿಸಲು ರೈತರನ್ನು ಒಳಗೊಂಡ ಸಮಿತಿ ರಚಿಸಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ಮುಖ್ಯಮಂತ್ರಿಯವರ ಗೃಹ ಕಚೇರಿ 'ಕೃಷ್ಣಾ'ದಲ್ಲಿ ಬುಧವಾರ ರೈತರ ಆದಾಯ ದ್ವಿಗುಣಗೊಳಿಸುವ ನಿಟ್ಟಿನಲ್ಲಿ ಕೇಂದ್ರ ಸರ್ಕಾರ ರಚಿಸಿರುವ ಉನ್ನತಾಧಿಕಾರ ಸಮಿತಿಯ ಅಧ್ಯಕ್ಷ ಅಶೋಕ್ ದಳವಾಯಿ ಅವರ ವರದಿಯ ಮುಖ್ಯಾಂಶಗಳ ಕುರಿತ ಪ್ರಾತ್ಯಕ್ಷಿಕೆ ಮತ್ತು ಚರ್ಚೆಯ ಬಳಿಕ ಬೊಮ್ಮಾಯಿ ಸುದ್ದಿಗಾರರಿಗೆ ಈ ವಿಷಯ ತಿಳಿಸಿದರು.

'ಈಗ ಕೃಷಿ ಪದ್ಧತಿ ಉತ್ಪಾದನಾ ಕೇಂದ್ರಿತವಾಗಿದ್ದು, ಅದನ್ನು ಆದಾಯ ಕೇಂದ್ರಿತವಾಗಿಸಬೇಕಿದೆ. ರೈತರ ಮನಸ್ಥಿತಿಯಲ್ಲಿ ಬದಲಾವಣೆಯಾಗಬೇಕಿದೆ. ಈ ನಿಟ್ಟಿನಲ್ಲಿ ಸಮಿತಿಯು ಕೇಂದ್ರ ಸರ್ಕಾರದ ಸಮಿತಿಯೊಂದಿಗೆ ನಿಕಟವಾಗಿ ಕಾರ್ಯ ನಿರ್ವಹಿಸಬೇಕು. ರಾಜ್ಯವು ಕೃಷಿ ಚಟುವಟಿಕೆ, ಹವಾಮಾನ, ಭೂಮಾಲೀಕತ್ವ ಮೊದಲಾದ ವಿಷಯಗಳಲ್ಲಿ ಅತ್ಯುತ್ತಮ ದತ್ತಾಂಶವನ್ನು ಹೊಂದಿದೆ. ಇದರ ಆಧಾರದಲ್ಲಿ ಕಾರ್ಯತಂತ್ರ ರೂಪಿಸುವ ಕುರಿತು ಸಮಿತಿಯು ವರದಿ ನೀಡಬೇಕು' ಎಂದು ಬೊಮ್ಮಾಯಿ ಹೇಳಿದರು.

ಕೃಷಿ ಸಚಿವರ ನೇತೃತ್ವದಲ್ಲಿ ಸಮಿತಿ: ರಾಜ್ಯದ ಕೃಷಿ ವಿಶ್ವವಿದ್ಯಾಲಯಗಳ ಸಂಶೋಧನೆಗಳು ರೈತರ ಸಮಸ್ಯೆಗಳಿಗೆ ಪರಿಹಾರ ಒದಗಿಸುವಂತಿರಬೇಕು. ಕೃಷಿ ವಲಯದಲ್ಲಿ ಬೀಜ, ಗೊಬ್ಬರ ಮತ್ತು ಕೀಟಗಳ ನಿರ್ವಹಣೆಗೆ ಕೃಷಿ ವಿಶ್ವವಿದ್ಯಾಲಯಗಳ ನೆರವಿನಿಂದ ಕ್ರಮವಹಿಸಲು, ಕೃಷಿ ಸಚಿವರ ಉನ್ನತಾಧಿಕಾರ ಸಮಿತಿಯನ್ನು ರಚಿಸಲಾಗುವುದು ಎಂದೂ ತಿಳಿಸಿದರು.

ಸಭೆಯಲ್ಲಿ ಕೃಷಿ ಸಚಿವ ಬಿ.ಸಿ. ಪಾಟೀಲ, ತೋಟಗಾರಿಕಾ ಸಚಿವ ಮುನಿರತ್ನ ಹಾಗೂ ಹಿರಿಯ ಅಧಿಕಾರಿಗಳು ಭಾಗವಹಿಸಿದ್ದರು.

ಪ್ರತ್ಯೇಕ ನಿರ್ದೇಶನಾಲಯ ಸ್ಥಾಪನೆ

ಕೃಷಿ, ತೋಟಗಾರಿಕೆ, ಡೇರಿ, ಪ್ರಾಣಿಜನ್ಯ ಉತ್ಪನ್ನಗಳ ಸಂಸ್ಕರಣೆ ಮತ್ತು ಗ್ರಾಮೀಣ ಗುಡಿ ಕೈಗಾರಿಕೆ ಮೂಲಕ ರೈತರಿಗೆ ಹೆಚ್ಚಿನ ಆದಾಯ ತರಲು ಮತ್ತು ಗ್ರಾಮೀಣ ಭಾಗದಲ್ಲಿ ಹೆಚ್ಚಿನ ಉದ್ಯೋಗ ಸೃಷ್ಟಿಸಲು ಪ್ರತ್ಯೇಕ (ಸೆಕೆಂಡರಿ ಅಗ್ರಿಕಲ್ಚರಲ್ ಡೈರೆಕ್ಟೊರೇಟ್) ನಿರ್ದೇಶನಾಲಯ ಸ್ಥಾಪಿಸಲಾಗುವುದು ಎಂದು ಬೊಮ್ಮಾಯಿ ಅವರು ತಿಳಿಸಿದರು.

ಕೃಷಿ ಉಪ ಉತ್ಪನ್ನಗಳ ತಯಾರಿಕೆ ಇದರಿಂದ ಸಹಾಯಕವಾಗುತ್ತದೆ. ಗ್ರಾಮೀಣ ಪ್ರದೇಶದಲ್ಲಿ ಉದ್ಯೋಗ ಸೃಷ್ಟಿ ಆಗುವುದರ ಜತೆಗೆ ರೈತರ ಆದಾಯವೂ ಹೆಚ್ಚುತ್ತದೆ ಎಂದು ಅವರು ಹೇಳಿದರು.

ಆರ್ಥಿಕವಾಗಿ ಹಿಂದುಳಿದ ಮಹಿಳೆಯರಿಗೆ ಶೇ.33.3ರಷ್ಟು ಮೀಸಲಾತಿ

ಹೈದರಾಬಾದ್: ಆರ್ಥಿಕವಾಗಿ ಹಿಂದುಳಿದ ವರ್ಗಗಳ (ಇ.ಡಬ್ಲ್ಯೂ.ಎಸ್) ಕೋಟಾದಡಿದಲ್ಲಿ ಸರ್ಕಾರಿ ಹುದ್ದೆ ಮತ್ತು ಸೇವೆಗಳಲ್ಲಿ ಮಹಿಳೆಯರಿಗೆ ಶೇ.33.3ರಷ್ಟು ಮೀಸಲಾತಿ ನೀಡಲು ತೆಲಂಗಾಣ ಸರ್ಕಾರ ನಿರ್ಧರಿಸಿದೆ.

ಇ.ಡಬ್ಲ್ಯೂ.ಎಸ್ ಮೀಸಲಾತಿಯನ್ನು ಅನುಷ್ಠಾನಗೊಳಿಸಲು ಮಂಗಳವಾರ ಅಲ್ಲಿನ ಸರ್ಕಾರ ಹೊಸ ಮಾರ್ಗಸೂಚಿಗಳನ್ನು ಹೊರಡಿಸಿದೆ.

‘ಆರ್ಥಿಕವಾಗಿ ಹಿಂದುಳಿದ ವರ್ಗಗಳ (ಇ.ಡಬ್ಲ್ಯೂ.ಎಸ್) ಕೋಟಾದಡಿಯಲ್ಲಿ ಮೀಸಲಾಗಿರುವ ಹುದ್ದೆಗಳು ಮತ್ತು ಸೇವೆಗಳ ಆರಂಭಿಕ ನೇಮಕಾತಿಯಲ್ಲಿ ಶೇ.33.3 ರಷ್ಟು ಮಹಿಳೆಯರಿಗೆ ಹಂಚಿಕೆಯಾಗಬೇಕು’ ಎಂದು ಮುಖ್ಯ ಕಾರ್ಯದರ್ಶಿ ಸೋಮೇಶ್ ಕುಮಾರ್ ತಿಳಿಸಿದ್ದಾರೆ.

ಆರ್ಥಿಕವಾಗಿ ಹಿಂದುಳಿದ ಮೇಲ್ಜಾತಿಯವರಿಗೆ ಕೇಂದ್ರ ಸರ್ಕಾರವು ಶಿಕ್ಷಣ ಮತ್ತು ಉದ್ಯೋಗದಲ್ಲಿ ಶೇ 10ರಷ್ಟು ಮೀಸಲಾತಿ ಕಲ್ಪಿಸಿದೆ. ಆದರಂತೆ ತೆಲಂಗಾಣ ಸರ್ಕಾರವೂ ಕೂಡ ಮೀಸಲಾತಿಯನ್ನು ಜಾರಿಗೆ ತಂದಿದೆ. ಇದರಿಂದ ವೈದ್ಯಕೀಯ ಕಾಲೇಜುಗಳಲ್ಲಿ ಪ್ರವೇಶಕ್ಕಾಗಿ ಒಬಿಸಿ ಮತ್ತು ಆರ್ಥಿಕವಾಗಿ ದುರ್ಬಲ ಮತ್ತು ಸಾಮಾನ್ಯ ವರ್ಗದ ವಿದ್ಯಾರ್ಥಿಗಳಿಗೆ ಹೆಚ್ಚು ಅನುಕೂಲವಾಗಲಿದೆ.

23.49 ಲಕ್ಷಕ್ಕೂ ಅಧಿಕ ಮಂದಿ ಸೋಂಕಿತರಿಗೆ ಆಪ್ತ ಸಮಾಲೋಚನೆ ಕರೆ

ಮಧ್ಯ ವಯಸ್ಕರಿಗೆ ‘ಕೋವಿಡ್’ ಮನೋವ್ಯಾಧಿ

• ವರುಣ ಹೆಗಡೆ

ಬೆಂಗಳೂರು: ಕೊರೊನಾ ಕಾಣಿಸಿಕೊಂಡು ಒಂದೂವರೆ ವರ್ಷ ಕಳೆದರೂ ಕೋವಿಡ್ ಬಗೆಗಿನ ಮನೋವ್ಯಾಧಿ ದೂರವಾಗಿಲ್ಲ. ಆರೋಗ್ಯ ಇಲಾಖೆಯ ಮಾನಸಿಕ ಆರೋಗ್ಯ ವಿಭಾಗವು ಈವರೆಗೆ 23.49 ಲಕ್ಷಕ್ಕೂ ಅಧಿಕ ಮಂದಿ ಸೋಂಕಿತರನ್ನು ಸಂಪರ್ಕಿಸಿದ್ದು, ಮಾನಸಿಕ ಸಮಸ್ಯೆಗಳನ್ನು ಎದುರಿಸಿದವರಲ್ಲಿ ಶೇ 50ಕ್ಕೂ ಅಧಿಕ ಮಂದಿ ಮಧ್ಯ ವಯಸ್ಕರಾಗಿದ್ದಾರೆ.

ರಾಜ್ಯದಲ್ಲಿ 29.41 ಲಕ್ಷಕ್ಕೂ ಅಧಿಕ ಮಂದಿ ಕೋವಿಡ್ ಪೀಡಿತರಾಗಿದ್ದಾರೆ. ಪ್ರಾರಂಭಿಕ ದಿನಗಳಲ್ಲಿ ಸೋಂಕಿತರಾದವರಲ್ಲಿ ಆತ್ಮಹತ್ಯೆ ಮಾಡಿಕೊಂಡ ಉದಾಹರಣೆಯೂ ಇದೆ. ಈವರೆಗೆ ಸೋಂಕಿತರಾಗಿ ಮೃತಪಟ್ಟವರಲ್ಲಿ 26 ಮಂದಿ ಅನ್ಯ ಕಾರಣಗಳಿಂದ ಸಾವಿಗೀಡಾಗಿದ್ದಾರೆ. ಕೋವಿಡ್ ಪೀಡಿತರಾದವರಿಗೆ ಮಾನಸಿಕ ಸ್ಥೈರ್ಯ ಹೆಚ್ಚಿಸಲು ಆಪ್ತ ಸಮಾಲೋಚನೆ ನೀಡಲು ಕರೆ ಮಾಡಲಾಗುತ್ತಿದೆ. ಈ ಮೂಲಕ ಸೋಂಕಿತರಲ್ಲಿನ ಭಯ, ಆತಂಕವನ್ನು ದೂರ ಮಾಡಲು ತರಬೇತಿ ಹೊಂದಿದ ಆರೋಗ್ಯ ಸಿಬ್ಬಂದಿ ಶ್ರಮಿಸುತ್ತಿದ್ದಾರೆ. 25ರಿಂದ 50 ವರ್ಷದೊಳಗಿನವರು ಹೆಚ್ಚಾಗಿ ಮಾನಸಿಕ ಸಮಸ್ಯೆಗಳಿಗೆ ಒಳಪಡುತ್ತಿರುವುದು ಆಪ್ತ ಸಮಾಲೋಚನಾ ಕರೆಗಳಿಂದ ದೃಢಪಟ್ಟಿದೆ.



ಸೋಂಕಿತರು ಅನವಶ್ಯಕವಾಗಿ ಆತಂಕಕ್ಕೆ ಒಳಗಾಗಬಾರದು. ಆದರೆ, ಎಚ್ಚರದಿಂದ ಇರಬೇಕು. ಮಾನಸಿಕ ಸ್ಥೈರ್ಯ ಕಳೆದುಕೊಂಡಲ್ಲಿ ರೋಗ ನಿರೋಧಕ ಶಕ್ತಿ ಕೂಡ ಕುಗ್ಗಲಿದೆ

ಡಾ. ರಜನಿ ಪಿ., ಆರೋಗ್ಯ ಇಲಾಖೆಯ ಮಾನಸಿಕ ಆರೋಗ್ಯ ವಿಭಾಗದ ಉಪನಿರ್ದೇಶಕಿ

20ರಿಂದ 50 ವರ್ಷದೊಳಗಿನವರಲ್ಲಿ 18 ಲಕ್ಷಕ್ಕೂ ಅಧಿಕ ಮಂದಿ ಕೋವಿಡ್ ಪೀಡಿತರಾಗಿದ್ದಾರೆ. ಸೋಂಕಿತರಾದ ಮಕ್ಕಳು ಹಾಗೂ ವೃದ್ಧರಿಗೆ ಸಹ ಆಪ್ತ ಸಮಾಲೋಚನಾ ಕರೆ ಮಾಡಲಾಗಿದೆ. ಕುಟುಂಬ ನಿರ್ವಹಣೆ ಸವಾಲು, ಜೀವಕ್ಕೆ ಅಪಾಯವಾಗುವ ಆತಂಕ, ಮನೆಯಲ್ಲಿನ ಮಕ್ಕಳು ಹಾಗೂ ವೃದ್ಧರಿಗೆ ಸೋಂಕು ತಗಲುವ ಭಯವೇ ಮಧ್ಯ ವಯಸ್ಕರು ಮಾನಸಿಕ ಸ್ಥೈರ್ಯ ಕಳೆದುಕೊಳ್ಳಲು ಪ್ರಮುಖ ಕಾರಣ ಎನ್ನುವುದು ಸಮಾಲೋಚನೆಯಿಂದ ತಿಳಿದುಬಂದಿದೆ.

ಮಕ್ಕಳಿಗೆ ಧೈರ್ಯ ಹೆಚ್ಚು: ಕೋವಿಡ್ ಎರಡನೇ ಅಲೆಯಲ್ಲಿ ಮಾರ್ಚ್ ನಂತರ ಸೋಂಕಿತರ ಸಂಖ್ಯೆ ಏರಿಕೆ ಕಂಡಿತ್ತು. ಆಪ್ತ ಸಮಾಲೋಚನೆ ಕರೆಗಳ ಸಂಖ್ಯೆಯನ್ನೂ ಹೆಚ್ಚಳ ಮಾಡಲಾಗಿತ್ತು. ದಿನವೊಂದಕ್ಕೆ 20 ಸಾವಿರಕ್ಕೂ ಅಧಿಕ ಮಂದಿಗೆ ಧೈರ್ಯ ತುಂಬಲಾಗುತ್ತಿತ್ತು. ಈಗ ಕೋವಿಡ್ ಪ್ರಕರಣಗಳ ಸಂಖ್ಯೆ ಇಳಿಕೆ ಕಂಡ ಕಾರಣ ದಿನವೊಂದಕ್ಕೆ ಮಾಡುವ ಕರೆಗಳ ಸಂಖ್ಯೆ 1,500ರ ಆಸುಪಾಸಿನಲ್ಲಿದೆ. ವೈದ್ಯರು, ಕಾರ್ಮಿಕರಿಗೆ ಕೂಡ ಮಾನಸಿಕ ಸಮಸ್ಯೆಗಳಿಗೆ ಕೌನ್ಸೆಲಿಂಗ್ ಮಾಡಲಾಗಿದೆ. ಕೊರೊನಾ ಸೋಂಕಿತರಾದವರಲ್ಲಿ ಮಕ್ಕಳು ಮಾನಸಿಕವಾಗಿ ಧೈರ್ಯದಿಂದ ಇರುವುದು ಈ ಕರೆಗಳಿಂದ ಗೊತ್ತಾಗಿದೆ.

‘ಸೋಂಕು ದೃಢಪಟ್ಟವರ ಮನಸ್ಥಿತಿಯನ್ನು ವಿಚಾರಿಸಿ, ಅಗತ್ಯ ಸಲಹೆ ಸೂಚನೆಗಳನ್ನು ನೀಡುತ್ತಿದ್ದೇವೆ. ಪ್ರೀತಿ ಪಾತ್ರರಿಂದ ದೂರವಾಗುತ್ತೇನೆ ಎಂಬ ಭ್ರಮೆ ಹಲವರಲ್ಲಿದೆ. ತುಂಬಾ ಮಾನಸಿಕ ಒತ್ತಡಕ್ಕೆ ಒಳಗಾದವರಿಗೆ ಕೋವಿಡ್ ಕಾಯಿಲೆ ವಾಸಿಯಾಗುವವರೆಗೂ ಕರೆ ಮಾಡುತ್ತೇವೆ. ಕೆಲವರ ಸ್ವಭಾವದಲ್ಲಿಯೇ ಆತಂಕ, ಭಯ ಇರುತ್ತದೆ. ಅಂತಹವರು ಹೆಚ್ಚು ಮಾನಸಿಕವಾಗಿ ಕುಗ್ಗುತ್ತಾರೆ’ ಎಂದು ಇಲಾಖೆಯ ಮಾನಸಿಕ ಆರೋಗ್ಯ ವಿಭಾಗದ ಉಪನಿರ್ದೇಶಕಿ ಡಾ. ರಜನಿ ಪಿ. ತಿಳಿಸಿದರು.

150 ಸಿಬ್ಬಂದಿ ಕಾರ್ಯನಿರ್ವಹಣೆ

ಕೋವಿಡ್ ಎರಡನೇ ಅಲೆಯಲ್ಲಿ ಸೋಂಕಿತರ ಸಂಖ್ಯೆ ಏರಿಕೆ ಕಂಡ ಬಳಿಕ ವರ್ಚುವಲ್ ವೇದಿಕೆಯ ಮೂಲಕ ಮನೆ ಆರೈಕೆಗೆ ಒಳಗಾದವರಿಗೆ ಅಗತ್ಯ ಸಲಹೆ ನೀಡಲಾಗಿತ್ತು. ಈ ಕಾರ್ಯಕ್ಕೆ ರಾಜೀವ್ ಗಾಂಧಿ ಆರೋಗ್ಯ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳನ್ನು ಬಳಸಿಕೊಳ್ಳಲಾಗಿತ್ತು. 5 ಸಾವಿರ ವಿದ್ಯಾರ್ಥಿಗಳು ಹಾಗೂ 100 ವೈದ್ಯರಿಗೆ ತರಬೇತಿ ನೀಡಲಾಗಿತ್ತು. ಮಾನಸಿಕ ಆರೋಗ್ಯ ವಿಭಾಗದಿಂದ ಸದ್ಯ 150 ಸಿಬ್ಬಂದಿ ಕಾರ್ಯನಿರ್ವಹಿಸುತ್ತಿದ್ದಾರೆ.

‘ಮನೆ ಆರೈಕೆಯಲ್ಲಿ ಇರುವ ಸೋಂಕಿತರು ಚೇತರಿಕೆ ಕಾಣುವ ಒಳಗೆ ನಾಲ್ಕು ಕರೆಗಳನ್ನು ಮಾಡಲಾಗುತ್ತದೆ. ಪ್ರತಿ ನಿತ್ಯ ದೂರವಾಣಿ ಸಂದೇಶಗಳನ್ನು ಕಳುಹಿಸಲಾಗುತ್ತದೆ. ಐವಿಆರ್‌ಎಸ್ ಕರೆಗಳು ಕೂಡ ಹೋಗುತ್ತವೆ. ಕೆಲವರು ತಪ್ಪಾದ ದೂರವಾಣಿ ಸಂಖ್ಯೆ ನೀಡಿರುತ್ತಾರೆ. ಅಂತಹವರನ್ನು ಸಂಪರ್ಕಿಸಲು ಸಾಧ್ಯವಾಗುವುದಿಲ್ಲ. ಕೋವಿಡ್ ಪ್ರಕರಣ ಇಳಿಕೆಯಾಗಿರುವುದರಿಂದ ಈಗ ನಮ್ಮ ಸಿಬ್ಬಂದಿಯೇ ಈ ವ್ಯವಸ್ಥೆಯನ್ನು ನಿರ್ವಹಿಸುತ್ತಿದ್ದಾರೆ’ ಎಂದು ಡಾ. ರಜನಿ ಪಿ. ವಿವರಿಸಿದರು.

ರಾಜ್ಯ ಕೋವಿಡ್ ಅಂಕಿ–ಅಂಶ

29,42,250 ▲ ಒಟ್ಟು ಸೋಂಕಿತರು (29,41,026 ನಿನ್ನೆಯ ವಿವರ)

19,318 ▼ ಸಕ್ರಿಯ ಪ್ರಕರಣಗಳು

28,85,700 ▲ ಗುಣಮುಖರಾದವರು

37,206 ▲ ಒಟ್ಟು ಸಾವು

ದಿನದ ಏರಿಕೆ

ಹೊಸ ಪ್ರಕರಣ	1,224 ▼
ಗುಣಮುಖ	1,668 ▼
ಸಾವು	22 ▼

ಆಧಾರ: ರಾಜ್ಯ ಆರೋಗ್ಯ ಇಲಾಖೆ ಪ್ರಜಾವಾಣಿ ಗ್ರಾಫಿಕ್ಸ್

ಸುದ್ದಿ 2 ನಿಮಿಷ

ಆಸ್ತಾನ ನೇಮಕ ಪ್ರಶ್ನಿಸಿ ಅರ್ಜಿ: ‘2 ವಾರಗಳಲ್ಲಿ ನಿರ್ಧಾರ ಪ್ರಕಟಿಸಿ’

ನವದೆಹಲಿ (ಪಿಟಿಐ): ದೆಹಲಿ ಪೊಲೀಸ್ ಕಮಿಷನರ್ ಆಗಿ ರಾಕೇಶ್ ಆಸ್ತಾನ ಅವರನ್ನು ನೇಮಕ ಮಾಡಿರುವುದನ್ನು ಪ್ರಶ್ನಿಸಿ ಸಲ್ಲಿಸಲಾಗಿರುವ ಅರ್ಜಿ ಕುರಿತು ಎರಡು ವಾರಗಳಲ್ಲಿ ನಿರ್ಧಾರ ಪ್ರಕಟಿಸುವಂತೆ ದೆಹಲಿ ಹೈಕೋರ್ಟ್‌ಗೆ ಸುಪ್ರೀಂಕೋರ್ಟ್ ಬುಧವಾರ ಸೂಚಿಸಿದೆ.

‘ಸೆಂಟರ್ ಫಾರ್ ಪಬ್ಲಿಕ್ ಇಂಟರೆಸ್ಟ್ ಲಿಟಿಗೇಷನ್’ (ಸಿಪಿಐಎಲ್) ಈ ಸಂಬಂಧ ಸಲ್ಲಿಸಿದ್ದ ಅರ್ಜಿಯ ವಿಚಾರಣೆಯನ್ನು ಮುಖ್ಯನ್ಯಾಯಮೂರ್ತಿ ಎನ್.ವಿ.ರಮಣ, ನ್ಯಾಯಮೂರ್ತಿಗಳಾದ ಡಿ.ವೈ.ಚಂದ್ರಚೂಡ್ ಹಾಗೂ ಸೂರ್ಯಕಾಂತ ಅವರಿರುವ ನ್ಯಾಯಪೀಠ ನಡೆಸಿತು.

ಆಸ್ತಾನ ಅವರ ನೇಮಕ ಪ್ರಶ್ನಿಸಿ ದೆಹಲಿ ಹೈಕೋರ್ಟ್‌ನಲ್ಲಿ ಸಲ್ಲಿಸಲಾಗಿರುವ ಅರ್ಜಿಯ ವಿಚಾರಣೆ ಬಾಕಿ ಇದೆ. ಇದೇ ವಿಷಯವಾಗಿ ದೆಹಲಿ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಲು ಸಿಪಿಐಎಲ್‌ಗೆ ನ್ಯಾಯಪೀಠ ಅನುಮತಿಯನ್ನೂ ನೀಡಿತು. 1984ನೇ ಬ್ಯಾಚ್‌ನ, ಗುಜರಾತ್ ಕೇಡರ್ ಐಪಿಎಸ್ ಅಧಿಕಾರಿಯಾಗಿರುವ ರಾಕೇಶ್ ಆಸ್ತಾನ ಅವರನ್ನು ದೆಹಲಿ ಪೊಲೀಸ್ ಕಮಿಷನರ್ ಆಗಿ ಜುಲೈ 27ರಂದು ನೇಮಕ ಮಾಡಲಾಗಿದೆ.



ಕೇರಳದಲ್ಲಿ ಕೋವಿಡ್ ಪ್ರಕರಣಗಳ ಭಾರಿ ಏರಿಕೆ

ತಿರುವನಂತಪುರ: ಕೇರಳದಲ್ಲಿ ಕೋವಿಡ್ ಪ್ರಕರಣ ಬುಧವಾರ ಭಾರಿ ಏರಿಕೆ ಕಂಡಿದ್ದು, ಒಂದೇ ದಿನ 31,445 ಮಂದಿಗೆ ಸೋಂಕು ತಗುಲಿರುವುದು ದೃಢಪಟ್ಟಿದೆ. 215 ಸೋಂಕಿತರು ಮೃತಪಟ್ಟಿದ್ದಾರೆ. ಪಾಸಿಟಿವಿಟಿ ದರ ಶೇ 19 ದಾಟಿದೆ ಎಂದು ಕೇರಳ ಆರೋಗ್ಯ ಸಚಿವಾಲಯ ತಿಳಿಸಿದೆ.

ಇದರೊಂದಿಗೆ ರಾಜ್ಯದಲ್ಲಿ ಈವರೆಗೆ ಸೋಂಕಿತರಾದವರ ಸಂಖ್ಯೆ 38,83,429 ತಲುಪಿದೆ. ಇಂದಿನ ವರೆಗೆ 19,972 ಸೋಂಕಿತರು ಅಸುನೀಗಿದ್ದಾರೆ. ಈ ಹಿಂದೆ ಮೇ 20ರಂದು ಕೇರಳದಲ್ಲಿ ದೈನಂದಿನ ಸೋಂಕಿತರ ಸಂಖ್ಯೆ 30 ಸಾವಿರ ದಾಟಿತ್ತು.

ಓಣಂ ಹಬ್ಬದ ಬಳಿಕ ಪಾಸಿಟಿವಿಟಿ ದರ ಶೇ 20 ದಾಟಬಹುದು ಎಂದು ವೈದ್ಯಕೀಯ ತಜ್ಞರು ಅಭಿಪ್ರಾಯಪಟ್ಟಿದ್ದರು.



ಗಣೇಶನಿಗೆ ಬಣ್ಣ

ಗಣೇಶ ಹಬ್ಬ ಸಮೀಪಿಸುತ್ತಿರುವ ಕಾರಣ ಜಲಂಧರ್‌ನಲ್ಲಿ ಕಲಾವಿದರೊಬ್ಬರು ವಿಘ್ನೇಶ್ವರನ ಮೂರ್ತಿಗಳಿಗೆ ಅಂತಿಮ ಸ್ಪರ್ಶ ನೀಡುತ್ತಿರುವುದು ಬುಧವಾರ ಕಂಡು ಬಂತು – ಪಿಟಿಐ ಚಿತ್ರ

24 ಗಂಟೆಗಳ ಅವಧಿಯಲ್ಲಿ 1,224 ಮಂದಿಗೆ ಸೋಂಕು

ಏರುಗತಿ ಪಡೆದ ಕೋವಿಡ್ ಪರೀಕ್ಷೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಕೋವಿಡ್ ಪರೀಕ್ಷೆಗಳ ಸಂಖ್ಯೆ ಏರುಗತಿ ಪಡೆದಿದ್ದು, ದಿನವೊಂದಕ್ಕೆ 1.95 ಲಕ್ಷ ಮಾದರಿಗಳನ್ನು ಪರೀಕ್ಷೆ ಮಾಡಲಾಗಿದೆ. ಇವು ಒಂದು ದಿನದ ಅವಧಿಯಲ್ಲಿ ನಡೆಸಲಾದ ಗರಿಷ್ಠ ಪರೀಕ್ಷೆಗಳಾಗಿವೆ.

ಎರಡು ದಿನಗಳಲ್ಲಿ 3.85 ಲಕ್ಷ ಮಾದರಿಗಳನ್ನು ಪರೀಕ್ಷಿಸಲಾಗಿದೆ. ರಾಜ್ಯದಲ್ಲಿ 1,224 ಮಂದಿ ಕೋವಿಡ್ ಪೀಡಿತರಾಗಿರುವುದು ಬುಧವಾರ ದೃಢಪಟ್ಟಿದೆ. ಈವರೆಗೆ ವರದಿಯಾದ ಕೋವಿಡ್ ಪ್ರಕರಣಗಳ ಒಟ್ಟು ಸಂಖ್ಯೆ 29.42 ಲಕ್ಷ ದಾಟಿದೆ. ಸೋಂಕು ದೃಢ ಪ್ರಮಾಣ ಶೇ 0.62 ರಷ್ಟು ವರದಿಯಾಗಿದೆ. 14 ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳ ಸಂಖ್ಯೆ ಎರಡಂಕಿ, 10 ಜಿಲ್ಲೆಗಳಲ್ಲಿ ಒಂದಂಕಿಯಲ್ಲಿದೆ. ಬೀದರ್ ಹಾಗೂ ಗದಗದಲ್ಲಿ ಹೊಸ ಪ್ರಕರಣ ವರದಿಯಾಗಿಲ್ಲ.

ಕೇರಳಕ್ಕೆ ಹೊಂದಿಕೊಂಡಿರುವ ಗಡಿ ಜಿಲ್ಲೆಗಳಾದ ದಕ್ಷಿಣ ಕನ್ನಡದಲ್ಲಿ 217, ಮೈಸೂರಿನಲ್ಲಿ 102 ಹಾಗೂ ಕೊಡಗಿನಲ್ಲಿ 41 ಪ್ರಕರಣಗಳು ಪತ್ತೆಯಾಗಿವೆ. ಬೆಂಗಳೂರಿನಲ್ಲಿ 309 ಹಾಗೂ ಉಡುಪಿಯಲ್ಲಿ 130 ಮಂದಿ ಸೋಂಕಿತರಾಗಿದ್ದಾರೆ. ಉಳಿದ ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳು 100ರ ಗಡಿಯೊಳಗೆ ಇವೆ.

ಕೋವಿಡ್ ಪೀಡಿತರಲ್ಲಿ 22 ಮಂದಿ ಮೃತಪಟ್ಟಿರುವುದು ದೃಢಪಟ್ಟಿದೆ. 11 ಜಿಲ್ಲೆಗಳಲ್ಲಿ ಹೊಸದಾಗಿ ಮರಣ ಪ್ರಕರಣಗಳು ವರದಿಯಾಗಿವೆ. ದಕ್ಷಿಣ ಕನ್ನಡದಲ್ಲಿ 6 ಮಂದಿ ಸಾವಿಗೀಡಾಗಿದ್ದಾರೆ. ಬೆಂಗಳೂರು ಹಾಗೂ ಉಡುಪಿಯಲ್ಲಿ ತಲಾ 3, ಬೆಂಗಳೂರು ಗ್ರಾಮಾಂತರ ಹಾಗೂ ಚಿಕ್ಕಬಳ್ಳಾಪುರದಲ್ಲಿ ತಲಾ ಇಬ್ಬರು ಮರಣ ಹೊಂದಿದ್ದಾರೆ. ಮೈಸೂರು ಸೇರಿದಂತೆ 6 ಜಿಲ್ಲೆಗಳಲ್ಲಿ ತಲಾ ಒಬ್ಬರು ಮೃತಪಟ್ಟಿದ್ದಾರೆ. ಮರಣ ಪ್ರಮಾಣ ದರವು ಶೇ 1.79 ರಷ್ಟು ವರದಿಯಾಗಿದೆ. ಕೋವಿಡ್‌ನಿಂದ ಮೃತಪಟ್ಟವರ ಒಟ್ಟು ಸಂಖ್ಯೆ 37,206ಕ್ಕೆ ತಲುಪಿದೆ.

ಸೋಂಕಿತರಲ್ಲಿ 1,668 ಮಂದಿ ಚೇತರಿಸಿಕೊಂಡಿದ್ದಾರೆ. ಗುಣಮುಖರಾದವರ ಒಟ್ಟು ಸಂಖ್ಯೆ 28.85 ಲಕ್ಷ ದಾಟಿದೆ. ಸಕ್ರಿಯ ಪ್ರಕರಣಗಳ ಸಂಖ್ಯೆ 19,318ಕ್ಕೆ ಇಳಿಕೆಯಾಗಿದೆ.

ಕೋವಿಡ್ ಸಾವು ಅ‘ಗಣಿತ’

ಒಂದನೇ ಪುಟದಿಂದ...

ಆ ವರ್ಷ ಸತ್ತವರ ಸಂಖ್ಯೆಗಿಂತ ನಂತರದ ವರ್ಷ ಅಂದರೆ 2019 ರಲ್ಲಿ ಮೃತರ ಸಂಖ್ಯೆಯಲ್ಲಿ 25,073 ಹೆಚ್ಚಳ ಕಂಡು ಬಂದಿದೆ. 2020 ರಲ್ಲಿ ಮೃತಪಟ್ಟವರ ಸಂಖ್ಯೆ (2019 ಕ್ಕೆ ಹೋಲಿಸಿದಾಗ) 43,224ದಷ್ಟು ಅಧಿಕವಾಗಿರುವುದು ಅಂಕಿಅಂಶಗಳಿಂದ ಗೊತ್ತಾಗಿದೆ.

ಕೋವಿಡ್ ಪೂರ್ವ ಮತ್ತು ನಂತರದ ವರ್ಷಗಳ ರಾಜ್ಯದಲ್ಲಿನ ಮರಣದ ಅಂಕಿಯನ್ನು ಸಾಂಖ್ಯಿಕ ನಿರ್ದೇಶನಾಲಯದ ಜನನ–ಮರಣಗಳ ಮುಖ್ಯ ನೋಂದಣಾಧಿಕಾರಿ ಅವರು ಸಾರ್ವಜನಿಕ ಲೆಕ್ಕಪತ್ರ ಸಮಿತಿಗೆ ಸಲ್ಲಿಸಿದ್ದಾರೆ. ಅದರ ಅನ್ವಯ ಕೋವಿಡ್ ಅವಧಿಯಲ್ಲಿ ರಾಜ್ಯದಲ್ಲಿ ಒಟ್ಟು 11,25,922 ಮಂದಿ ಸಾವಿಗೀಡಾಗಿದ್ದಾರೆ. 2019 ರಿಂದ 2022 ರ ಜುಲೈವರೆಗೆ ಮರಣ ಪ್ರಮಾಣದಲ್ಲಿ ಗಣನೀಯ ಏರಿಕೆ ಆಗಿದೆ. ಆ ಸಂದರ್ಭದಲ್ಲಿ ಲೆಕ್ಕವಿಲ್ಲದಷ್ಟು ಶವಗಳನ್ನು ಸುಡಲಾಗಿತ್ತು. ಬೆಂಗಳೂರಿನಲ್ಲಂತೂ ಚಿತಾಗಾರ, ಸ್ಮಶಾನಗಳಲ್ಲದೇ ಹೊರವಲಯದಲ್ಲೂ ತಾತ್ಕಾಲಿಕ ಚಿತಾಗಾರಗಳನ್ನು ನಿರ್ಮಿಸಲಾಗಿತ್ತು.

ಅಷ್ಟೂ ಸಾವುಗಳು ಕೋವಿಡ್‌ನಿಂದ ಸಂಭವಿಸಿದ್ದು ಅಲ್ಲದಿದ್ದರೂ, ಕೋವಿಡ್ ಸಾವಿನ ಸಂಖ್ಯೆ ಸರ್ಕಾರ ಹೇಳುತ್ತಿರುವುದಕ್ಕಿಂತ ಅಧಿಕ ಎಂಬುದನ್ನು ಈ ಅಂಕಿಅಂಶಗಳಿಂದ ಗೊತ್ತಾಗುತ್ತದೆ. ವಾಸ್ತವದ ಬಗ್ಗೆ ಸಾವಿನ ನಿಖರ ಲೆಕ್ಕ ಮುಂದಿಡಬೇಕು ಎಂದು ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿ ಅಧ್ಯಕ್ಷ ರಾಮಲಿಂಗಾರೆಡ್ಡಿ ಆಗ್ರಹಿಸಿದ್ದಾರೆ.

ಜಿಲ್ಲಾವಾರು ಮಾಹಿತಿ

ಜಿಲ್ಲೆ	2019	2020
ಬಾಗಲಕೋಟೆ	15,294	17,003
ಬೆಂಗಳೂರು(ಗ್ರಾ)	7,568	8,477
ಬೆಂಗಳೂರು ನಗರ	72,861	84,186
ಬೆಳಗಾವಿ	37,092	42,219
ಬಳ್ಳಾರಿ	23,144	25,520
ಬೀದರ್	11,826	12,789
ವಿಜಯಪುರ	17,565	18,938
ಚಾಮರಾಜನಗರ	9,988	9,802
ಚಿಕ್ಕಬಳ್ಳಾಪುರ	9,386	10,187
ಚಿಕ್ಕಮಗಳೂರು	9,549	9,823
ಚಿತ್ರದುರ್ಗ	15,071	15,542
ದಕ್ಷಿಣಕನ್ನಡ	21,221	21,463
ದಾವಣಗೆರೆ	15,587	17,358
ಧಾರವಾಡ	18,606	21,652
ಗದಗ	9,494	10,452
ಕಲಬುರ್ಗಿ	18,118	19,354
ಹಾಸನ	17,726	17,674
ಹಾವೇರಿ	11,414	13,584
ಕೊಡಗು	4,481	4,304
ಕೋಲಾರ	11,037	12,007
ಕೊಪ್ಪಳ	9,496	10,257
ಮಂಡ್ಯ	16,425	17,432
ಮೈಸೂರು	31,322	33,492
ರಾಯಚೂರು	12,062	12,831
ರಾಮನಗರ	9,840	12,094
ಶಿವಮೊಗ್ಗ	15,806	17,344
ತುಮಕೂರು	25,930	26,229
ಉಡುಪಿ	12,040	12,282
ಉತ್ತರಕನ್ನಡ	11,029	11,715
ಯಾದಗಿರಿ	7,599	7,598

‘ಅಂಕಿಅಂಶ ಮುಚ್ಚಿಡುವ ಉದ್ದೇಶ ಇಲ್ಲ’

ಒಂದನೇ ಪುಟದಿಂದ...

‘ಕೊರೊನಾ ಅಂಕಿಅಂಶಗಳನ್ನು ವಿವರವಾಗಿ ದಿನ ನಿತ್ಯ ಪ್ರಕಟ ಮಾಡಲಾಗುತ್ತಿದೆ. ಅಮೆರಿಕದ ಸ್ಟ್ಯಾನ್‌ಫೋರ್ಡ್ ವಿದ್ಯಾಲಯ ನಡೆಸಿರುವ ಅಧ್ಯಯನದ ಪ್ರಕಾರ, ಕೊರೊನಾ ಅಂಕಿಅಂಶ ಪ್ರಕಟಿಸುವಲ್ಲಿ ಕರ್ನಾಟಕ ಅತ್ಯಂತ ಪಾರದರ್ಶಕ ರಾಜ್ಯವಾಗಿದೆ. ದಿನವೂ ವಿವಿಧ ಜಿಲ್ಲೆಗಳಿಂದ ಬರುವ ಅಂಕಿಅಂಶಗಳನ್ನು ಸಂಗ್ರಹಿಸಿ ಬುಲೆಟಿನ್ ಪ್ರಕಟಿಸಲಾಗುತ್ತದೆ. ಆದ್ದರಿಂದ ಅಂಕಿಅಂಶ ಮುಚ್ಚಿಡುವ, ಮರೆಮಾಚುವ ಉದ್ದೇಶ ಸರ್ಕಾರಕ್ಕೆ ಇಲ್ಲ’ ಎಂದು ಸಚಿವ ಸುಧಾಕರ್ ಹೇಳಿದರು.

‘ಕೋವಿಡ್: ಹೊಸ ಪ್ರಕರಣಗಳಲ್ಲಿ ಸ್ಥಿರತೆ’

ಜಿನಿವಾ (ಎಪಿ): ಜಾಗತಿಕವಾಗಿ ಕಳೆದ ಎರಡು ತಿಂಗಳಿನಿಂದ ಹೊಸ ಕೋವಿಡ್–19 ಪ್ರಕರಣಗಳಲ್ಲಿ ಏರಿಕೆ ಕಂಡುಬಂದಿತ್ತು. ಈಗ ಸೋಂಕು ಪ್ರಸರಣದಲ್ಲಿ ಸ್ಥಿರತೆ ಕಂಡುಬರುತ್ತಿದೆ ಎಂದು ವಿಶ್ವ ಆರೋಗ್ಯ ಸಂಸ್ಥೆ ಅಭಿಪ್ರಾಯಪಟ್ಟಿದೆ.

ಕೋವಿಡ್–19 ಪಿಡುಗಿಗೆ ಸಂಬಂಧಿಸಿದ ಸಾಪ್ತಾಹಿಕ ವರದಿಯನ್ನು ವಿಶ್ವ ಆರೋಗ್ಯ ಸಂಸ್ಥೆ ಮಂಗಳವಾರ ಬಿಡುಗಡೆ ಮಾಡಿದೆ.

ಸದ್ಯ ಹೊಸ ಕೋವಿಡ್–19 ಪ್ರಕರಣಗಳ ಸಂಖ್ಯೆ 45 ಲಕ್ಷ ಆಸುಪಾಸಿನಲ್ಲಿದ್ದು, ಈ ಹಂತಕ್ಕೇ ಸ್ಥಿರತೆ ಕಾಯ್ದುಕೊಳ್ಳುವ ಸಾಧ್ಯತೆ ಇದೆ. ಪಶ್ಚಿಮ ಪೆಸಿಫಿಕ್ ಪ್ರದೇಶದಲ್ಲಿ ಶೇ 20ರಷ್ಟು ಹಾಗೂ ಅಮೆರಿಕದಲ್ಲಿ ಶೇ 8ರಷ್ಟು ಹೆಚ್ಚಳ ಕಂಡು ಬಂದಿದೆ ಎಂದು ವರದಿಯಲ್ಲಿ ವಿವರಿಸಲಾಗಿದೆ.

ಅಮೆರಿಕ, ಇರಾನ್, ಭಾರತ, ಬ್ರಿಟನ್ ಹಾಗೂ ಬ್ರೆಜಿಲ್‌ನಲ್ಲಿ ಹೊಸ ಪ್ರಕರಣಗಳ ಸಂಖ್ಯೆ ಗರಿಷ್ಠ ಪ್ರಮಾಣದಲ್ಲಿದೆ. ಕಳೆದ ವಾರದ ಅವಧಿಯಲ್ಲಿ ಜಾಗತಿಕವಾಗಿ 68,000 ಜನರು ಕೋವಿಡ್‌ನಿಂದ ಮೃತಪಟ್ಟಿದ್ದಾರೆ. ಅಮೆರಿಕ ಹಾಗೂ ಯುರೋಪ್‌ನಲ್ಲಿ ಮರಣ ಪ್ರಮಾಣದಲ್ಲಿ ಶೇ 10ರಷ್ಟು ಹೆಚ್ಚಳ ಕಂಡು ಬಂದಿದೆ ಎಂದೂ ವರದಿಯಲ್ಲಿ ವಿವರಿಸಲಾಗಿದೆ.

‘ಕೊರೊನಾ ವೈರಸ್ ಸೋಂಕಿನ ವಿರುದ್ಧ ಲಸಿಕೆಗಳು ರಕ್ಷಣೆ ನೀಡುತ್ತವೆ ಎಂಬುದು ಇತ್ತೀಚಿನ ಕೆಲ ಅಧ್ಯಯನಗಳಿಂದ ತಿಳಿದುಬಂದಿದೆ. ಆದರೆ, ರೂಪಾಂತರ ಡೆಲ್ಟಾ ತಳಿಯ ಸೋಂಕಿನ ವಿರುದ್ಧ ಈ ಲಸಿಕೆಗಳ ಪರಿಣಾಮ ಕಡಿಮೆ ಎಂಬುದು ಸಹ ತಿಳಿದುಬಂದಿದೆ ಎಂದು ಸಂಸ್ಥೆ ಹೇಳಿದೆ.

ಲಸಿಕೆಯಿಂದ ಸಿಗುವ ರಕ್ಷಣೆ 6 ತಿಂಗಳೊಳಗೆ ಕ್ಷೀಣಿಸಲು ಆರಂಭ

ಲಂಡನ್ (ರಾಯಿಟರ್ಸ್): ಫೈಜರ್ ಹಾಗೂ ಅಸ್ಟ್ರಾಜೆನೆಕಾ ಅಭಿವೃದ್ಧಿಪಡಿಸಿರುವ ಲಸಿಕೆಗಳು ಕೋವಿಡ್–19 ವಿರುದ್ಧ ನೀಡುವ ರಕ್ಷಣೆ ಆರು ತಿಂಗಳೊಳಗೆ ಕ್ಷೀಣಿಸಲು ಆರಂಭಿಸುತ್ತದೆ. ಹೀಗಾಗಿ ಬೂಸ್ಟರ್ ಡೋಸ್‌ಗಳನ್ನು ಪಡೆಯುವುದು ಅಗತ್ಯ ಎಂದು ಬ್ರಿಟನ್‌ನ ಸಂಶೋಧಕರು ಹೇಳಿದ್ದಾರೆ.

ಫೈಜರ್ ಲಸಿಕೆಯ ಎರಡನೇ ಡೋಸ್ ಪಡೆದು 5–6 ತಿಂಗಳ ನಂತರ ಕೋವಿಡ್–19 ವಿರುದ್ಧ ಸಿಗುವ ರಕ್ಷಣೆ ಪ್ರಮಾಣ ಶೇ 88ರಿಂದ ಶೇ 74ಕ್ಕೆ ಕುಸಿದಿರುವುದು ಕಂಡುಬಂದಿದೆ ಎಂದು ಝಡ್‌ಒಇ ಲಿಮಿಟೆಡ್ ಎಂಬ ಸಂಸ್ಥೆ ನಡೆಸಿರುವ ಅಧ್ಯಯನ ಹೇಳುತ್ತದೆ.

ಅಸ್ಟ್ರಾಜೆನೆಕಾ ಕಂಪನಿಯ ಲಸಿಕೆಯಿಂದ ಸಿಗುವ ರಕ್ಷಣೆ 4–5 ತಿಂಗಳ ನಂತರ ಕ್ಷೀಣಿಸುತ್ತದೆ. ಲಸಿಕೆಯ ಪರಿಣಾಮಕಾರಿತ್ವ ಶೇ 77ರಿಂದ ಶೇ 67ಕ್ಕೆ ಇಳಿದಿರುವುದು ಕಂಡು ಬಂದಿದೆ ಎಂದು ಸಂಸ್ಥೆಯ ಸಹ ಸಂಸ್ಥಾಪಕ ಹಾಗೂ ಪ್ರಧಾನ ಸಂಶೋಧಕ ಟಿಮ್ ಸ್ಪೆಕ್ಟರ್ ಹೇಳಿದ್ದಾರೆ.

‘ಚಳಿಗಾಲದ ವೇಳೆಗೆ ಈ ಲಸಿಕೆಗಳಿಂದ ಸಿಗುವ ರಕ್ಷಣೆ ಮತ್ತಷ್ಟೂ ಕುಸಿಯುವ ಸಾಧ್ಯತೆಗಳು ಹೆಚ್ಚು. ಅದರಲ್ಲೂ, ವೃದ್ಧರು ಹಾಗೂ ಆರೋಗ್ಯ ಕಾರ್ಯಕರ್ತರಲ್ಲಿ ಈ ಪ್ರಮಾಣ ಶೇ 50ಕ್ಕಿಂತಲೂ ಕಡಿಮೆಯಾಗಬಹುದು’ ಎಂದು ಸ್ಪೆಕ್ಟರ್ ಆತಂಕ ವ್ಯಕ್ತಪಡಿಸಿದ್ದಾರೆ.

ಎಐಸಿಸಿ ಉಸ್ತುವಾರಿ ಹರೀಶ್ ರಾವತ್ ಘೋಷಣೆ

ಪಂಜಾಬ್: ಅಮರಿಂದರ್ ಸಿಂಗ್ ನೇತೃತ್ವದಲ್ಲೇ ಮುಂದಿನ ಚುನಾವಣೆ

ಚಂಡೀಗಡ (ಪಿಟಿಐ): ಪಂಜಾಬ್ ವಿಧಾನಸಭೆಗೆ ಮುಂದಿನ ವರ್ಷ ನಡೆಯಲಿರುವ ಚುನಾವಣೆಯನ್ನು ಮುಖ್ಯಮಂತ್ರಿ ಅಮರಿಂದರ್ ಸಿಂಗ್ ಅವರ ನೇತೃತ್ವದಲ್ಲಿಯೇ ಎದುರಿಸಲಾಗುವುದು ಎಂದು ಎಐಸಿಸಿ ಪ್ರಧಾನ ಕಾರ್ಯದರ್ಶಿ ಹಾಗೂ ಪಂಜಾಬ್ ಉಸ್ತುವಾರಿ ಹರೀಶ್ ರಾವತ್ ಬುಧವಾರ ಹೇಳಿದ್ದಾರೆ.

ಆ ಮೂಲಕ ಅವರು, ಮುಖ್ಯಮಂತ್ರಿ ವಿರುದ್ಧ ಬಂಡಾಯ ಎದ್ದಿರುವ ಹಾಗೂ ಅವರನ್ನು ಆ ಸ್ಥಾನದಿಂದ ಇಳಿಸಲು ಪ್ರಯತ್ನಿಸುತ್ತಿರುವ ಕೆಲ ಶಾಸಕರು ಹಾಗೂ ಸಚಿವರಿಗೆ ಸ್ಪಷ್ಟ ಸಂದೇಶ ರವಾನಿಸಿದ್ದಾರೆ.



ಹರೀಶ್ ರಾವತ್

ಸಚಿವರಾದ ತೃಪ್ತ್ ರಾಜೀಂದರ್ ಸಿಂಗ್ ಬಜ್ವಾ, ಸುಖ್ಬಿಂದರ್ ಸಿಂಗ್ ಸರ್ಕಾರಿಯಾ, ಸುಖ್ಜಿಂದರ್ ಸಿಂಗ್ ರಂಧಾವಾ, ಚರಣ್‌ಜಿತ್ ಸಿಂಗ್ ಚನ್ನಿ ಹಾಗೂ ಕೆಲ ಶಾಸಕರು ಡೆಹ್ರಾಡೂನ್‌ನಲ್ಲಿ ತಮ್ಮನ್ನು ಭೇಟಿ ಮಾಡಿದ ನಂತರ ಹರೀಶ್ ರಾವತ್ ಅವರಿಂದ ಈ ಹೇಳಿಕೆ ಹೊರಬಿದ್ದಿದೆ. ಇದು ಬಂಡಾಯ ಶಾಸಕರಿಗೆ ಆಗಿರುವ ಹಿನ್ನಡೆ ಎಂದೇ ವಿಶ್ಲೇಷಿಸಲಾಗುತ್ತಿದೆ.

ಸುದ್ದಿಗಾರರೊಂದಿಗೆ ಮಾತನಾಡಿದ ರಾವತ್, ‘ಅಮರಿಂದರ್ ಸಿಂಗ್ ನೇತೃತ್ವದ ಸರ್ಕಾರಕ್ಕೆ ಯಾವುದೇ ಧಕ್ಕೆ ಇಲ್ಲ. ಅವರು ತಮ್ಮ ಅಧಿಕಾರಾವಧಿ ಪೂರ್ಣಗೊಳಿಸುವರು. ಮುಂದಿನ ವರ್ಷ ನಡೆಯುವ ವಿಧಾನಸಭೆ ಚುನಾವಣೆಯಲ್ಲೂ ಪಕ್ಷದ ಗೆಲುವಿನ ಮೇಲೆಯೂ ಈ ಬೆಳವಣಿಗೆ ಪರಿಣಾಮ ಬೀರುವುದಿಲ್ಲ’ ಎಂದರು.

ನಾಲ್ವರು ಸಚಿವರು, 25ಕ್ಕೂ ಅಧಿಕ ಬಂಡಾಯ ಶಾಸಕರು ಮಂಗಳವಾರ ಸಭೆ ನಡೆಸಿದ್ದರು. ಹಲವಾರು ಭರವಸೆಗಳನ್ನು ಈಡೇರಿಸುವಲ್ಲಿ ಮುಖ್ಯಮಂತ್ರಿ ವಿಫಲರಾಗಿದ್ದು, ಅವರಲ್ಲಿ ತಾವು ವಿಶ್ವಾಸ ಕಳೆದುಕೊಂಡಿದ್ದಾಗಿ ಶಾಸಕರು ಸಭೆಯಲ್ಲಿ ಹೇಳಿದ್ದರು. ಎಂದು ಮೂಲಗಳು ಹೇಳಿವೆ.

ತಬಲಾ ವಾದಕ ಪಂ.ಶುಭಂಕರ್ ಬ್ಯಾನರ್ಜಿ

ಕೋಲ್ಕತ್ತ: ಖ್ಯಾತ ತಬಲಾ ವಾದಕ ಪಂ.ಶುಭಂಕರ್ ಬ್ಯಾನರ್ಜಿ (54) ಅವರು ಇಲ್ಲಿ ಬುಧವಾರ ನಿಧನರಾದರು.




ಕಳೆದ ತಿಂಗಳು ಅವರಿಗೆ ಕೋವಿಡ್ ದೃಢಪಟ್ಟಿತ್ತು. ಕೋವಿಡೇತರ ತೊಂದರೆಗಳಿಂದಾಗಿ ಆರೋಗ್ಯ ಮತ್ತಷ್ಟೂ ಬಿಗಡಾಯಿಸಿದ್ದರಿಂದ ಅವರನ್ನು ಜುಲೈ 2ರಂದು ಇಲ್ಲಿನ ಮೆಡಿಕಾ ಸೂಪರ್‌ಸ್ಪೆಷಾಲಿಟಿ ಆಸ್ಪತ್ರೆಗೆ ದಾಖಲಿಸಿ, ಜೀವರಕ್ಷಕ ವ್ಯವಸ್ಥೆಯೊಂದಿಗೆ ಚಿಕಿತ್ಸೆ ಮುಂದುವರಿಸಲಾಗಿತ್ತು.

ಅವರು ‘ಸಂಗೀತ್ ಸಮ್ಮಾನ್’ ಹಾಗೂ ‘ಸಂಗೀತ್ ಮಹಾ ಸಮ್ಮಾನ್’ ಪ್ರಶಸ್ತಿಗೆ ಭಾಜನರಾಗಿದ್ದರು. ಬನಾರಸ್ ಘರಾಣದ ಪಂ.ಮಾಣಿಕ್ ದಾಸ್ ಅವರಲ್ಲಿ ಪ್ರಾಥಮಿಕ ಶಿಕ್ಷಣ ಪಡೆದ ಶುಭಂಕರ್ ಅವರು ನಂತರ ಪಂ.ಸ್ವಪನ್ ಶಿವ ಅವರ ಗರಡಿಯಲ್ಲಿ ಪಳಗಿದರು.

ಗೇಲ್ ಒಂವೆಡ್ತ್

ಪುಣೆ (ಪಿಟಿಐ): ಖ್ಯಾತ ಸಂಶೋಧಕಿ ಮತ್ತು ಶ್ರಮಿಕ್ ಮುಕ್ತಿ ದಳದ ಸಹ ಸಂಸ್ಥಾಪಕಿ ಡಾ.ಗೇಲ್ ಒಂವೆಡ್ತ್ (81) ಅವರು ದೀರ್ಘಕಾಲದ ಅನಾರೋಗ್ಯದಿಂದಾಗಿ ಮಹಾರಾಷ್ಟ್ರದ ಸಾಂಗ್ಲಿ ಜಿಲ್ಲೆಯ ಕಾಸೆಗಾಂವ್ ಗ್ರಾಮದಲ್ಲಿ ಬುಧವಾರ ನಿಧನರಾದರು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೃತರಿಗೆ ಪತಿ ಭರತ್ ಪಟ್ಟಾಗರ್, ಮಗಳು, ಅಳಿಯ ಮತ್ತು ಮೊಮ್ಮಗಳಿದ್ದಾರೆ.



ಅಮೆರಿಕ ಮೂಲದ ಗೇಲ್, ಅಲ್ಲಿ ಸ್ನಾತಕೋತ್ತರ ಪದವಿ ಪೂರೈಸಿದ ನಂತರ, ಪಿಎಚ್.ಡಿ ಅಧ್ಯಯನಕ್ಕಾಗಿ ಭಾರತಕ್ಕೆ ಬಂದರು. ಇಲ್ಲಿ ಹಲವು ಸಾಮಾಜಿಕ ಚಳವಳಿಗಳ ಮೇಲೆ ಅಧ್ಯಯನ ನಡೆಸಿದರು. ನಂತರ ಮಹಾತ್ಮ ಫುಲೆ ಅವರ ಕೆಲಸಗಳ ಮೇಲೂ ಅಧ್ಯಯನ ಕೈಗೊಂಡರು.

ಸಂಶೋಧನೆಯ ಅವಧಿಯಲ್ಲಿ ಗೇಲ್ ಅವರು ‘ಪಶ್ಚಿಮ ಭಾರತದಲ್ಲಿ ಬ್ರಾಹ್ಮಣೇತರ ಚಳವಳಿ’ ಕುರಿತು ಪ್ರಬಂಧ ರಚಿಸಿದರು. ಶ್ರಮಿಕ ಮುಕ್ತಿ ದಳದ ಸಹ ಸಂಸ್ಥಾಪಕರಾಗಿದ್ದ ಡಾ.ಗೇಲ್, ಪತಿ, ಹೋರಾಟಗಾರ ಭರತ್ ಪಟ್ಟಾಗರ್ ಜೊತೆಗೂಡಿ ತಮ್ಮ ಇಡೀ ಬದುಕನ್ನು ದಮನಿತ ಸಮುದಾಯಗಳ ಪರ ಹೋರಾಟಗಳಿಗೆ, ದಮನಿತ ಸಮುದಾಯಗಳ ಅಧ್ಯಯನಕ್ಕೆ ಮೀಸಲಿಟ್ಟರು. 1983ರಲ್ಲಿ ಭಾರತದ ಪೌರತ್ವ ಪಡೆದರು.

ಗೇಲ್ ಅವರು 25ಕ್ಕೂ ಹೆಚ್ಚು ಪುಸ್ತಕಗಳನ್ನು ರಚಿಸಿದ್ದಾರೆ.

ಚಿಕೂನ್‌ಗುನ್ಯಾ: ಲಸಿಕೆ ಕ್ಲಿನಿಕಲ್ ಟ್ರಯಲ್‌ಗೆ ಚಾಲನೆ

ಹೈದರಾಬಾದ್: ಚಿಕೂನ್‌ಗುನ್ಯಾ ವಿರುದ್ಧದ ಸಂಭಾವ್ಯ ಲಸಿಕೆಯ (ವ್ಯಾಕ್ಸಿನ್ ಕ್ಯಾಂಡಿಡೇಟ್) 2 ಹಾಗೂ 3ನೇ ಹಂತದ ಕ್ಲಿನಿಕಲ್ ಟ್ರಯಲ್ ಆರಂಭಿಸಿರುವುದಾಗಿ ಇಂಟರ್‌ನ್ಯಾಷನಲ್ ವ್ಯಾಕ್ಸಿನ್ ಇನ್‌ಸ್ಟಿಟ್ಯೂಟ್ (ಐವಿಐ) ಹಾಗೂ ಭಾರತ್ ಬಯೋಟೆಕ್ ಬುಧವಾರ ಘೋಷಿಸಿವೆ.

‘ಲಸಿಕೆಯ (ಬಿಬಿವಿ87) ಸುರಕ್ಷತೆ ಹಾಗೂ ಎಷ್ಟು ಪ್ರಮಾಣದಲ್ಲಿ ರೋಗ ನಿರೋಧಕ ಶಕ್ತಿ ವೃದ್ಧಿಸುವುದು ಎಂಬ ಬಗ್ಗೆ ಮೌಲ್ಯಮಾಪನ ನಡೆಯಲಿದೆ. ಐದು ದೇಶಗಳಲ್ಲಿ ಕ್ಲಿನಿಕಲ್ ಟ್ರಯಲ್ ನಡೆಯುತ್ತಿದೆ’ ಎಂದು ಕಂಪನಿಗಳು ತಿಳಿಸಿವೆ.

‘ಸೆಪ್ಟೆಂಬರ್‌ನಲ್ಲಿ ಪನಾಮಾ ಹಾಗೂ ಕೊಲಂಬಿಯಾ ದೇಶಗಳಲ್ಲಿ ಕ್ಲಿನಿಕಲ್ ಟ್ರಯಲ್ ಆರಂಭಿಸಲಾಗುವುದು. ನಂತರ ಥಾಯ್ಲೆಂಡ್ ಹಾಗೂ ಗ್ವಾಟೆಮಾಲಾದಲ್ಲಿಯೂ ಆರಂಭಿಸಲಾಗುವುದು’ ಎಂದು ಭಾರತ್ ಬಯೋಟೆಕ್‌ನ ಪ್ರಕಟಣೆ ತಿಳಿಸಿದೆ.

ಪೆಗಾಸಸ್ ತನಿಖೆಗೆ ಅವಸರ ಬೇಡ: ‘ಸುಪ್ರೀಂ’

ಪ್ರಜಾವಾಣಿ ವಾರ್ತೆ

ನವದೆಹಲಿ: ಪೆಗಾಸಸ್ ಕುತಂತ್ರಾಂಶ ಬಳಸಿ ಗೂಢಚಾರಿಕೆ ನಡೆದಿದೆ ಎನ್ನಲಾದ ಪ್ರಕರಣಕ್ಕೆ ಸಂಬಂಧಿಸಿದ ವಿಷಯವು ಸುಪ್ರೀಂ ಕೋರ್ಟ್ ಮುಂದಿರುವುದರಿಂದ, ಈ ಬಗ್ಗೆ ನ್ಯಾಯಮೂರ್ತಿ ಎಂ.ಬಿ ಲೋಕೂರ್ ನೇತೃತ್ವದ ತನಿಖಾ ಆಯೋಗವನ್ನು ರಚಿಸಿರುವ ಪಶ್ಚಿಮ ಬಂಗಾಳ ಸರ್ಕಾರವು ತುಸು ಸಂಯಮ ವಹಿಸುವಂತೆ ಸುಪ್ರೀಂ ಕೋರ್ಟ್ ಬುಧವಾರ ಹೇಳಿದೆ.

ಈ ವಿಚಾರವಾಗಿ, ಸುಪ್ರೀಂ ಕೋರ್ಟ್ ಮುಂದಿರುವ ಎಲ್ಲ ಅರ್ಜಿಗಳ ವಿಚಾರಣೆ ಮುಗಿಯುವವರೆಗೆ ಆಯೋಗವು ಕೂಡ ತನಿಖೆ ಆರಂಭಿಸುವುದಿಲ್ಲ ಎಂದು ಪಶ್ಚಿಮ ಬಂಗಾಳ ಸರ್ಕಾರ ನ್ಯಾಯಾಲಯಕ್ಕೆ ಭರವಸೆ ನೀಡಿತು.

ನ್ಯಾಯಾಂಗ ತನಿಖೆಗೆ ಮುಂದಾದ ಪಶ್ಚಿಮ ಬಂಗಾಳ ಸರ್ಕಾರದ ನಿರ್ಧಾರವನ್ನು ಪ್ರಶ್ನಿಸಿ, ಗ್ಲೋಬಲ್ ವಿಲೇಜ್ ಫೌಂಡೇಶನ್ ಪಬ್ಲಿಕ್ ಚಾರಿಟಬಲ್ ಟ್ರಸ್ಟ್ ಮನವಿ ಸಲ್ಲಿಸಿತ್ತು. ಈ ಅರ್ಜಿ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಎನ್.ವಿ.ರಮಣ ನೇತೃತ್ವದ ನ್ಯಾಯಪೀಠ, ಇದಕ್ಕೆ ಸಂಬಂಧಿಸಿದ ಎಲ್ಲ ಅರ್ಜಿಗಳನ್ನೂ ಮುಂದಿನ ವಾರ ವಿಚಾರಣೆ ನಡೆಸುವುದಾಗಿ ಹೇಳಿತು.

ಪಶ್ಚಿಮ ಬಂಗಾಳ ಸರ್ಕಾರದ ಪರವಾಗಿ ಹಾಜರಿದ್ದ ಹಿರಿಯ ವಕೀಲ ಅಭಿಷೇಕ್ ಮನು ಸಿಂಘ್ವಿ ಅವರಿಗೆ, ‘ಪ್ರಕರಣಕ್ಕೆ ಸಂಬಂಧಿಸಿದ ಹಲವಾರು ಅರ್ಜಿಗಳು ಸುಪ್ರೀಂ ಕೋರ್ಟ್ ಮುಂದಿದ್ದು, ತನಿಖೆಗೆ ಅವಸರ ಮಾಡುವುದು ಬೇಡ. ನಾವು ಈ ಬಗ್ಗೆ ವಿಚಾರಣೆ ನಡೆಸುತ್ತೇವೆ. ಮುಂದಿನ ವಾರ ಸಮಗ್ರವಾದ ಆದೇಶ ನೀಡುತ್ತೇವೆ. ಒಂದು ವೇಳೆ ಅಷ್ಟರೊಳಗಾಗಿ ನೀವು ತನಿಖೆ ಆರಂಭಿಸಿದರೆ, ಅದಕ್ಕೂ ನಾವು ಆದೇಶ ನೀಡುತ್ತೇವೆ’ ಎಂದು ನ್ಯಾಯಪೀಠ ಹೇಳಿತು.

ನ್ಯಾಯಾಲಯದ ಅಭಿಪ್ರಾಯವನ್ನು ರಾಜ್ಯ ಸರ್ಕಾರಕ್ಕೆ ಹಾಗೂ ತನಿಖಾ ಆಯೋಗಕ್ಕೆ ತಿಳಿಸುವುದಾಗಿ ಹೇಳಿದ ಸಿಂಘ್ವಿ, ‘ಒಂದೆರಡು ವಾರದಲ್ಲಿ ಏನೂ ಆಗದು. ನ್ಯಾಯಪೀಠವು ಯಾವುದೇ ನೋಟಿಸ್ ಹೊರಡಿಸಬಾರದು’ ಎಂದು ಮನವಿ ಮಾಡಿದರು.

ಏಕಕಾಲಕ್ಕೆ ಎರಡು ವಿಚಾರಣೆ ನಡೆಯುವುದಕ್ಕೆ ಆಕ್ಷೇಪ ವ್ಯಕ್ತಪಡಿಸಿ, ಅರ್ಜಿ ಸಲ್ಲಿಸಿದ್ದ ಗ್ಲೋಬಲ್ ವಿಲೇಜ್ ಫೌಂಡೇಷನ್ ಪಬ್ಲಿಕ್ ಚಾರಿಟಬಲ್ ಟ್ರಸ್ಟ್ ಪರವಾಗಿ ಹಿರಿಯ ವಕೀಲ ಹರೀಶ್ ಸಾಳ್ವೆ ಹಾಜರಿದ್ದರು.

ಕಲ್ಯಾಣ್ ಸಿಂಗ್‌ಗೆ ಸಂತಾಪ: ಅಲಿಗಡ ಮುಸ್ಲಿಂ ವಿ.ವಿ ಕುಲಪತಿ ವಿರುದ್ಧ ಆಕ್ಷೇಪ

ಲಖನೌ/ಅಲಿಗಡ: ಉತ್ತರಪ್ರದೇಶದ ಮಾಜಿ ಮುಖ್ಯಮಂತ್ರಿ ಕಲ್ಯಾಣ್ ಸಿಂಗ್ ಅವರ ನಿಧನಕ್ಕೆ ಸಂತಾಪ ಸೂಚಿಸಿರುವ ಅಲಿಗಡ ಮುಸ್ಲಿಂ ವಿಶ್ವವಿದ್ಯಾಲಯದ ಕುಲಪತಿ ಅವರ ವಿರುದ್ಧ ವಿಶ್ವವಿದ್ಯಾಲಯದ ಕ್ಯಾಂಪಸ್ಸಿನಲ್ಲೇ ಆಕ್ಷೇಪಾರ್ಹ ಪೋಸ್ಟರ್‌ಗಳು ಕಾಣಿಸಿಕೊಂಡಿವೆ.

ಈ ಕುರಿತು ತನಿಖೆಗೆ ಆದೇಶಿಸಿರುವ ಉತ್ತರಪ್ರದೇಶ ಸರ್ಕಾರವು, ‘ತಾಲಿಬಾನಿ ಚಿಂತನೆ’ ಹೊಂದಿರುವಂಥವರ ವಿರುದ್ಧ ಕಠಿಣ ಕ್ರಮ ಜರುಗಿಸುವುದಾಗಿ ಎಚ್ಚರಿಕೆ ನೀಡಿದೆ.

ಕ್ಯಾಂಪಸ್ಸಿನ ಗೋಡೆಗಳ ಮೇಲೆ ಕುಲಪತಿ ಅವರ ಕ್ರಮವನ್ನು ಖಂಡಿಸಿ ಬರೆದಿರುವ ಪೋಸ್ಟರ್‌ಗಳಲ್ಲಿ ‘ಅಲಿಗಡ ಮುಸ್ಲಿಂ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳು’ ಎಂದು ಬರೆಯಲಾಗಿದೆ. ‘ಅಪರಾಧಿಗಾಗಿ ಪ್ರಾರ್ಥಿಸುವುದು ಕ್ಷಮಿಸಲಾಗದ ಅಪರಾಧ’ ಎಂದೂ ಹೇಳಲಾಗಿದೆ.

‘ಕಲ್ಯಾಣ್ ಸಿಂಗ್ ಅವರ ನಿಧನಕ್ಕೆ ಕುಲಪತಿ ಸಂತಾಪದ ಮಾತುಗಳು ನಾಚಿಕೆಗೇಡಿನ ಸಂಗತಿ. ಇದು ನಮ್ಮ ಸಮುದಾಯದ ಧಾರ್ಮಿಕ ಭಾವನೆಗಳಿಗೆ ಧಕ್ಕೆ ತಂದಿದೆ. ಕಲ್ಯಾಣ್ ಸಿಂಗ್ ಬಾಬರಿ ಮಸೀದಿ ಧ್ವಂಸದ ಮುಖ್ಯ ಆರೋಪಿ ಮಾತ್ರವಲ್ಲದೆ ಸುಪ್ರೀಂಕೋರ್ಟ್ ಆದೇಶವನ್ನು ಪಾಲಿಸದ ಅಪರಾಧಿ ಕೂಡ’ ಎಂದೂ ಪೋಸ್ಟರ್‌ನಲ್ಲಿ ಬರೆಯಲಾಗಿದೆ.

ಅಲಿಗಡ ಮುಸ್ಲಿಂ ವಿಶ್ವವಿದ್ಯಾಲಯದ ಕುಲಪತಿಗಳಾಗಿ ತಾರೀಖ್ ಮನ್ಸೂರ್ ಕಾರ್ಯ ನಿರ್ವಹಿಸುತ್ತಿದ್ದಾರೆ.

ಈ ಬಗ್ಗೆ ತೀಕ್ಷ್ಣವಾಗಿ ಪ್ರತಿಕ್ರಿಯಿಸಿರುವ ಉತ್ತರಪ್ರದೇಶದ ಅಲ್ಪಸಂಖ್ಯಾತರ ಕಲ್ಯಾಣ, ಮುಸ್ಲಿಂ ವಕ್ಫ್ ಮತ್ತು ಹಜ್ ಸಚಿವ ಮೊಹ್ಸಿನ್ ರಜಾ ಅವರು, ‘ಕುಲಪತಿ ಅವರು ನಮ್ಮ ಸಂಸ್ಕೃತಿಗೆ ತಕ್ಕಂತೆ ನಡೆದುಕೊಂಡಿದ್ದಾರೆ. ಅವರ ವಿರುದ್ಧ ಪೋಸ್ಟರ್‌ಗಳನ್ನು ಹಾಕುವುದು ವಾತಾವರಣವನ್ನು ಹಾಳುಮಾಡುವ ಪ್ರಯತ್ನ. ಈ ವಿಶ್ವವಿದ್ಯಾಲಯವು ಹಿಂದೂಸ್ತಾನದ್ದು. ಇಲ್ಲಿ ತಾಲಿಬಾನ್ ಇಲ್ಲ. ತಾಲಿಬಾನಿ ಮನಸ್ಥಿತಿಯ ವ್ಯಕ್ತಿಗಳಿದ್ದರೆ ಅವರಿಗೆ ನಾವು ಸೂಕ್ತ ಚಿಕಿತ್ಸೆ ನೀಡುತ್ತೇವೆ. ಘಟನೆಯ ಕುರಿತು ತನಿಖೆಗೆ ಆದೇಶಿಸಲಾಗಿದೆ’ ಎಂದು ಹೇಳಿದ್ದಾರೆ.

ಈ ಬಗ್ಗೆ ವಿಶ್ವವಿದ್ಯಾಲಯದ ಕುಲಪತಿ ಪ್ರತಿಕ್ರಿಯೆಗೆ ಲಭ್ಯರಾಗಲಿಲ್ಲ.

‘ವೈದ್ಯಕೀಯ ಸೀಟು: ಇಡಬ್ಲ್ಯೂಎಸ್‌ಗೆ ಮೀಸಲಾತಿ ಒಪ್ಪಲಾಗದು’

ಚೆನ್ನೈ: ‘ಆರ್ಥಿಕವಾಗಿ ದುರ್ಬಲ ವರ್ಗದವರಿಗೆ (ಇಡಬ್ಲ್ಯೂಎಸ್) ವೈದ್ಯಕೀಯ ಸೀಟುಗಳ ಅಖಿಲ ಭಾರತ ಕೋಟಾದಲ್ಲಿ ಶೇ 10ರಷ್ಟು ಮೀಸಲಾತಿ ನೀಡುವ ಕೇಂದ್ರ ಸರ್ಕಾರದ ನಿರ್ಧಾರವನ್ನು ಒಪ್ಪಲಾಗದು. ಇಂಥ ನಿರ್ಧಾರಕ್ಕೆ ಸುಪ್ರೀಂಕೋರ್ಟ್‌ನ ಅನುಮೋದನೆ ಅಗತ್ಯ’ ಎಂದು ಮದ್ರಾಸ್ ಹೈಕೋರ್ಟ್ ಬುಧವಾರ ಹೇಳಿದೆ.

ಮುಖ್ಯನ್ಯಾಯಮೂರ್ತಿ ಸಂಜೀವ್ ಬ್ಯಾನರ್ಜಿ, ನ್ಯಾಯಮೂರ್ತಿ ಪಿ.ಡಿ.ಆದಿಕೇಶವಲು ಅವರಿರುವ ನ್ಯಾಯಪೀಠ ಈ ಅಭಿಪ್ರಾಯ ವ್ಯಕ್ತಪಡಿಸಿತು.

‘ಶೇ 10ರಷ್ಟು ಮೀಸಲಾತಿ ನೀಡಿ ಕೇಂದ್ರ ಸರ್ಕಾರ ಜುಲೈ 29ರಂದು ಅಧಿಸೂಚನೆ ಹೊರಡಿಸಿದೆ. ಆದರೆ, ಸುಪ್ರೀಂಕೋರ್ಟ್‌ನ ಅನುಮೋದನೆ ಪಡೆಯುವವರೆಗೆ ಈ ಮೀಸಲಾತಿಗೆ ಅನುಮತಿ ನೀಡಲಾಗಿಲ್ಲ ಎಂದೇ ಪರಿಗಣಿಸಬೇಕು’ ಎಂದು ನ್ಯಾಯಪೀಠ ಹೇಳಿತು.

ಅಖಿಲ ಭಾರತ ಕೋಟಾಕ್ಕಾಗಿ (ಎಐಕ್ಯೂ) ತಮಿಳುನಾಡು ಸರ್ಕಾರ ಬಿಟ್ಟುಕೊಟ್ಟಿದ್ದ ಸೀಟುಗಳಲ್ಲಿ ಒಬಿಸಿಗೆ ಶೇ 50ರಷ್ಟು ಮೀಸಲಾತಿ ನೀಡುವಂತೆ ಕೋರಿ ಡಿಎಂಕೆ ಸಲ್ಲಿಸಿದ್ದ ಅರ್ಜಿಯ ವಿಚಾರಣೆ ವೇಳೆ ನ್ಯಾಯಪೀಠ ಈ ರೀತಿಯ ಅಭಿಪ್ರಾಯ ವ್ಯಕ್ತಪಡಿಸಿತು.

ಮಾನಸಿಕ ಸಾಮರ್ಥ್ಯ ಮಾದರಿ ಪ್ರಶ್ನೋತ್ತರ

ಆನ್‌ಲೈನ್‌ನಲ್ಲಿ ಅಧ್ಯಯನ ಸಾಮಗ್ರಿ



ಹುಡುಕಾಟ ಬಲು ಸುಲಭ!

ಕೀರ್ತಿ ಟಿ.ಎಸ್.

ಸ್ಪರ್ಧಾತ್ಮಕ ಪರೀಕ್ಷೆಯೆಂದರೆ ಸ್ಪರ್ಧಾರ್ಥಿಯು ತನ್ನ ಜ್ಞಾನವನ್ನು ಹೇಗೆ ಪ್ರಾಯೋಗಿಕವಾಗಿ ಜಾರಿಗೊಳಿಸುತ್ತಾನೆ ಎಂಬುದನ್ನು ಪರೀಕ್ಷಿಸುವುದೇ ಹೊರತು ಥಿಯರಿಯನ್ನಲ್ಲ. ಹೀಗಾಗಿ ಅತ್ಯುತ್ತಮವಾದ ಅಧ್ಯಯನ ಸಾಮಗ್ರಿಯನ್ನು ಆಯ್ಕೆ ಮಾಡಿಕೊಳ್ಳುವ ಬಗ್ಗೆ ಗಮನ ಹರಿಸಬೇಕಾಗುತ್ತದೆ. ಅಧ್ಯಯನ ಸಾಮಗ್ರಿ ಚೆನ್ನಾಗಿ ಅರ್ಥ ಮಾಡಿಕೊಳ್ಳುವಂತಿರಬೇಕು; ಕಲಿಕಾಸ್ನೇಹಿಯಾಗಿರಬೇಕು. ಅಧ್ಯಯನ ಸಾಮಗ್ರಿಯಲ್ಲಿರುವ ವಿಷಯ ಇತ್ತೀಚಿನದಾಗಿದ್ದು, ಪರೀಕ್ಷೆಯಲ್ಲಿ ಉತ್ತಮ ಅಂಕ ಪಡೆಯಲು ಸಹಾಯಕವಾಗುವಂತಿರಬೇಕು.

> ಸ್ಪರ್ಧಾತ್ಮಕ ಪರೀಕ್ಷೆಗೆ ಓದುವಾಗ ಸೂಕ್ತವಾದ ಅಧ್ಯಯನ ಸಾಮಗ್ರಿ ಹುಡುಕಿಕೊಳ್ಳಬೇಕಾಗುತ್ತದೆ. ಇದನ್ನು ಆನ್‌ಲೈನ್‌ನಲ್ಲಿ ಕೂಡ ಹುಡುಕಿಕೊಂಡು ಡೌನ್‌ಲೋಡ್ ಮಾಡಿಕೊಳ್ಳಬಹುದು.

ಗುಣಮಟ್ಟದ ಅಧ್ಯಯನ ಸಾಮಗ್ರಿಯನ್ನು ಓದಿ

ಹೆಚ್ಚು ಓದುವುದಕ್ಕಿಂತ ಗುಣಮಟ್ಟಕ್ಕೆ ಒತ್ತು ಕೊಡಿ. ಒಂದಕ್ಕಿಂತ ಹೆಚ್ಚು ಪುಸ್ತಕಗಳನ್ನು ಓದುವುದಕ್ಕಿಂತ ಉತ್ತಮವಾದ ಒಂದೇ ಪುಸ್ತಕವನ್ನು ಹಲವು ಸಲ ಓದಿ. ಈ ವಿಧಾನ ಒಂದು ವಿಷಯದ ಬಗ್ಗೆ ನಿಮ್ಮಲ್ಲಿ ಸ್ಪಷ್ಟ ಅರಿವನ್ನು ಮೂಡಿಸುತ್ತದೆ. ಓದಿಕೊಂಡು ಚೆನ್ನಾಗಿ ಅರ್ಥ ಮಾಡಿಕೊಳ್ಳಿ. ಇದರಿಂದ ನೀವು ಓದಿದ ಅಂಶಗಳನ್ನು ಪರೀಕ್ಷೆಯಲ್ಲಿ ಸರಿಯಾಗಿ ಬರೆಯುವ ಮೂಲಕ ಒಳ್ಳೆಯ ಅಂಕಗಳನ್ನು ಗಳಿಸಬಹುದು. ಇದು ನಿಮ್ಮ ಸಿದ್ಧತೆಗೆ ಹಿಡಿದ ಕೈಗನ್ನಡಿ ಎನ್ನಬಹುದು.

ಹುಡುಕುವುದು ಹೇಗೆ?

ಈಗ ಅಂತರ್ಜಾಲ ಎಂಬುದು ಪ್ರತಿಯೊಬ್ಬ ಸ್ಪರ್ಧಾರ್ಥಿಯ ಜೇಬಿನಲ್ಲೇ ಇರುತ್ತದೆ ಎನ್ನಲಡ್ಡಿಯಿಲ್ಲ. ಹಾಗೆಯೇ ಅಧ್ಯಯನ ನಡೆಸಲು, ಒಳ್ಳೆಯ ಜ್ಞಾನ ಸಂಪಾದಿಸಲು ಇದೊಂದು ಅತ್ಯುತ್ತಮ ವೇದಿಕೆ. ತನಗೆ ಬೇಕಾದ ಅಧ್ಯಯನ ಸಾಮಗ್ರಿಯನ್ನು ಸ್ಪರ್ಧಾರ್ಥಿಯು ಆನ್‌ಲೈನ್‌ನಲ್ಲಿ ಸುಲಭವಾಗಿ ಹುಡುಕಿಕೊಳ್ಳಬಹುದು. ಕೆಲವು ಸಂಸ್ಥೆಗಳು ತಮ್ಮ ಅಧಿಕೃತ ವೆಬ್‌ಸೈಟ್‌ನಲ್ಲಿ ಇಂತಹ ಸಾಮಗ್ರಿಗಳನ್ನು ಒದಗಿಸುತ್ತವೆ.

ಕೆಲವೊಮ್ಮೆ ಆನ್‌ಲೈನ್‌ನಲ್ಲಿ ಹುಡುಕಾಟ ನಡೆಸುವುದು ಕಷ್ಟವಾಗಬಹುದು. ಅಂದರೆ ಅಗತ್ಯವಿರುವ ವಿಷಯಗಳನ್ನು ಹುಡುಕಾಡುವುದು ಸವಾಲಾಗಿಬಿಡುತ್ತದೆ. ಆಗ ಯಾವ ವೆಬ್‌ಸೈಟ್‌ಗಳಲ್ಲಿ ಉತ್ಕೃಷ್ಟ ಅಧ್ಯಯನ ಸಾಮಗ್ರಿ ಇರುತ್ತದೆ ಎಂಬುದನ್ನು ತಿಳಿಸುವ ಮೂಲಗಳನ್ನು ಕೂಡ ಅಂತರ್ಜಾಲದಲ್ಲೇ ಹುಡುಕಾಡಿ ಪಟ್ಟಿ ಮಾಡಿಕೊಳ್ಳಬಹುದು.

ಮೊದಲು ನಿಮಗೆ ಬೇಕಾದ ಪುಸ್ತಕಗಳನ್ನು ಪಟ್ಟಿ ಮಾಡಿಕೊಳ್ಳಿ. ಅಂದರೆ ನಿಮಗೆ ಬೇಕಾದ ವಿಷಯಗಳು ಯಾವ ಪುಸ್ತಕದಲ್ಲಿವೆ ಎಂಬುದನ್ನು ಗುರುತು ಹಾಕಿಕೊಳ್ಳಿ. ನಂತರ ಅದನ್ನು ಆನ್‌ಲೈನ್‌ನಲ್ಲಿ ಹುಡುಕಾಡಿ. ವೆಬ್‌ಸೈಟ್‌ನಲ್ಲಿ ಉಪಯುಕ್ತವಾದಂತಹ ವಿಷಯ ಗೋಚರಿಸುತ್ತದೆ. ಅವುಗಳನ್ನು ಬುಕ್‌ಮಾರ್ಕ್ ಮಾಡಿಕೊಳ್ಳಿ.

ಕೆಲವೊಂದು ವೆಬ್‌ಸೈಟ್‌ಗಳು, ಯೂಟ್ಯೂಬ್‌ಗಳು ಉಚಿತವಾಗಿ ಸಾಮಗ್ರಿ ಒದಗಿಸುತ್ತವೆ. ಇನ್ನು ಕೆಲವೊಂದು ಶುಲ್ಕ ವಿಧಿಸುತ್ತವೆ. ಹಾಗೆಯೇ ನಿಮಗೆ ಅಗತ್ಯವಿರುವ ಪುಸ್ತಕಗಳನ್ನು ಖರೀದಿಸಲು ಕೂಡ ಅಂತರ್ಜಾಲ ನೆರವಿಗೆ ಬರುತ್ತದೆ. ಆನ್‌ಲೈನ್‌ನಲ್ಲಿ ಇಂತಹ ಪುಸ್ತಕಗಳನ್ನು ಖರೀದಿಸಬಹುದು.

ಕೆಲವೊಮ್ಮೆ ನಿಮಗೆ ಬೇಕಾದಂತಹ ಲೇಖಕರ ಪುಸ್ತಕ ಸಿಗದೆ ಇರಬಹುದು. ಆಗ ಆ ಲೇಖಕ ಬರೆದಂತಹ ಲೇಖನಗಳನ್ನು ಹುಡುಕಿ. ಅಂದರೆ ಹೋಂಪೇಜ್‌ನಲ್ಲಿ ಹುಡುಕಿದರೆ ಖಂಡಿತ ನಿಮಗೆ ಬೇಕಾದಂತಹ ಪುಸ್ತಕ ಲಭ್ಯವಾಗುತ್ತದೆ. ಇದಲ್ಲದೇ ಲಿಂಕ್ಸ್ ಸೇವ್ ಮಾಡಿಟ್ಟುಕೊಳ್ಳಿ.

ಸ್ನೇಹಿತರ ಬಳಿ ಚರ್ಚೆ ಮಾಡಿ

ಗೂಗಲ್‌ನಲ್ಲಿ 'ಮೋಸ್ಟ್ ಸರ್ಚ್ಡ್' ಆಯ್ಕೆಯಲ್ಲಿಯೂ ನಿಮಗೆ ಬೇಕಾದಂತಹ ವಿಷಯ ಲಭ್ಯ. ಹೆಚ್ಚಿನ ವೆಬ್‌ಸೈಟ್‌ನಲ್ಲಿ ಡೌನ್‌ಲೋಡ್ ಆಯ್ಕೆ ನೀಡಿರುತ್ತಾರೆ. ಹಾಗೆಯೇ ವೆಬ್‌ಸೈಟ್‌ನಲ್ಲಿ ವಿಭಾಗಗಳಿದ್ದು, ಇವು ಕೂಡ ನಿಮಗೆ ಹುಡುಕಲು ಉಪಯುಕ್ತ. ನೀವು ಸ್ಪರ್ಧಾತ್ಮಕ ಪರೀಕ್ಷೆಗೆ ಓದುವಾಗ ಕೆಲವೊಮ್ಮೆ ಕೆಲವೊಂದು ಆನ್‌ಲೈನ್ ಅಧ್ಯಯನ ಸಾಮಗ್ರಿಯಲ್ಲಿ ತೊಡಕುಂಟಾಗಬಹುದು. ಹೀಗಾಗಿ ಆನ್‌ಲೈನ್ ಅಣಕು ಪರೀಕ್ಷೆ ತೆಗೆದುಕೊಂಡು ನಿಮ್ಮ ಸಾಮರ್ಥ್ಯವನ್ನು ಪರೀಕ್ಷಿಸಿಕೊಳ್ಳಿ.

ಪ್ರಜಾವಾಣಿ ಉದ್ಯೋಗ ವಾರ್ತೆ

ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾದಲ್ಲಿ ಹುದ್ದೆಗಳು

ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ 2020–21ನೇ ಸಾಲಿನ ನೇಮಕಾತಿಗೆ ಅರ್ಜಿಯನ್ನು ಆಹ್ವಾನಿಸಿದೆ. ಅರ್ಹ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಹುದು.

- **ಹುದ್ದೆ:** ಸ್ಪೆಷಲಿಸ್ಟ್ ಆಫೀಸರ್
- **ಸ್ಥಳ:** ಭಾರತದೆಲ್ಲೆಡೆ
- **ಹುದ್ದೆಗಳ ಸಂಖ್ಯೆ:** 347
- **ವಿದ್ಯಾರ್ಹತೆ:** ಈ ಹುದ್ದೆಗೆ ಅರ್ಜಿ ಸಲ್ಲಿಸ ಬಯಸುವ ಅಭ್ಯರ್ಥಿಗಳು ಮಾನ್ಯತೆ ಪಡೆದ ವಿಶ್ವವಿದ್ಯಾಲಯದಿಂದ ಶೇ 60 ಅಂಕಗಳೊಂದಿಗೆ ಪದವಿ ಮುಗಿಸಿರಬೇಕು.
- **ವಯೋಮಿತಿ:** ಕನಿಷ್ಠ 20 ಹಾಗೂ ಕನಿಷ್ಠ 35
- **ಅರ್ಜಿ ಶುಲ್ಕ:** ಸಾಮಾನ್ಯ ಹಾಗೂ ಒಬಿಸಿ ಅಭ್ಯರ್ಥಿಗಳು ₹ 850, ಎಸ್‌ಸಿ, ಎಸ್‌ಟಿ ಹಾಗೂ ಅಂಗವಿಕಲ ಅಭ್ಯರ್ಥಿಗಳಿಗೆ ಅರ್ಜಿ ಶುಲ್ಕವಿಲ್ಲ.
- **ಆಯ್ಕೆ ಪ್ರಕ್ರಿಯೆ:** ಲಿಖಿತ ಪರೀಕ್ಷೆ ಹಾಗೂ ಸಂದರ್ಶನದ ಮೂಲಕ
- **ಅರ್ಜಿ ಸಲ್ಲಿಕೆ ವಿಧಾನ:** ಆನ್‌ಲೈನ್ ಮೂಲಕ
- **ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ:** ಸೆಪ್ಟೆಂಬರ್ 3, 2021
- **ಹೆಚ್ಚಿನ ಮಾಹಿತಿಗೆ:** www.unionbankofindia.co.in

ಕೆ. ಎಚ್. ಮಂಜುನಾಥ್

ಎಫ್‌ಡಿಎ-ಎಸ್‌ಡಿಎ, ಕೆಎಎಸ್–ಐಎಎಸ್ ಪೂರ್ವಭಾವಿ ಪರೀಕ್ಷೆ, ಸ್ಟಾಫ್ ಸೆಲೆಕ್ಷನ್ ಕಮಿಷನ್ ಹಾಗೂ ರೈಲ್ವೆ, ಬ್ಯಾಂಕಿಂಗ್‌ನಂತಹ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಮಾನಸಿಕ ಸಾಮರ್ಥ್ಯ (ಮೆಂಟಲ್ ಎಬಿಲಿಟಿ)ಕ್ಕೆ ಸಂಬಂಧಿಸಿದ ಪ್ರಶ್ನೆಗಳನ್ನೂ ಕೇಳಲಾಗುತ್ತದೆ. ಅದರೊಂದಿಗೆ ಜಂಬಲ್ ಪದ, ವಾಕ್ಯ ಹಾಗೂ ಚಿತ್ರಗಳಿಗೆ ಸಂಬಂಧಿಸಿದ ಪ್ರಶ್ನೆಗಳು ಇರುತ್ತವೆ. ಹಾಗಾದರೆ ಜಂಬಲ್ ಪದ, ವಾಕ್ಯಕ್ಕೆ ಸಂಬಂಧಿಸಿದ ಪ್ರಶ್ನೆಗಳು ಹೇಗಿರುತ್ತವೆ?

ಕೆಪಿಎಸ್‌ಸಿ ಈ ಹಿಂದೆ ನಡೆಸಿದ ಎಫ್‌ಡಿಎ ಮತ್ತು ಎಸ್‌ಡಿಎ ಪರೀಕ್ಷೆಯಲ್ಲಿ ಈ ಕೆಳಗಿನ ರೀತಿಯ ಪ್ರಶ್ನೆಗಳನ್ನು ಸಾಮಾನ್ಯ ಕನ್ನಡ ಪತ್ರಿಕೆಯಲ್ಲಿ ಕೇಳಲಾಗಿತ್ತು. ಅವುಗಳನ್ನೊಮ್ಮೆ ಗಮನಿಸೋಣ. (ಸದ್ಯದಲ್ಲಿಯೇ ಅಂದರೆ ಬರುವ ಸೆಪ್ಟೆಂಬರ್ 18 ರಂದು ಕಡ್ಡಾಯ ಭಾಷಾ ಕನ್ನಡ ಪತ್ರಿಕೆ ನಡೆಯಲಿದೆ). ಹೀಗಾಗಿ ಈ ತರಹದ ಪ್ರಶ್ನೆಗಳತ್ತ ಗಮನ ಹರಿಸುವುದು ಉತ್ತಮ.

ಸೂಚನೆ:- ಮುಂದಿನ ವಾಕ್ಯಗಳು ಕ್ರಮಬದ್ಧವಾಗಿಲ್ಲ, ಅರ್ಥವುಂಟಾಗುವಂತೆ ಗೆರೆ ಹಾಕಿ ಸೂಚಿಸಿದ ಭಾಗಗಳನ್ನು ಪುನಃ ಜೋಡಿಸಿ, ಅವುಗಳ ಅನುಕ್ರಮವನ್ನು ಗುರುತು ಹಾಕಿ.

(1) ನಮ್ಮ ಜ್ಞಾನಾಭಿವೃದ್ಧಿಗೆ ಶಬ್ದಕೋಶಗಳು ಹಾಗೂ ಜ್ಞಾನ ಕೋಶಗಳು

P: ಅವುಗಳನ್ನು ಅರ್ಥೈಸಿಕೊಳ್ಳಲು ಪ್ರಯತ್ನಿಸಬೇಕು ಜೊತೆಗೆ

Q: ಉತ್ತಮ ಪರಿಕರಗಳಾಗಿವೆ. ಆದ್ದರಿಂದ ಪ್ರತಿಯೊಬ್ಬ ಜ್ಞಾನಾರ್ಥಿಯು ಅವುಗಳನ್ನು ಓದಬೇಕು

R: ದಿನಪತ್ರಿಕೆಗಳ ಮೂಲಕ ಪ್ರಚಲಿತ ವಿದ್ಯಮಾನಗಳನ್ನು ಸಂಗ್ರಹಿಸಬೇಕು. ಅವು ರಾಷ್ಟ್ರೀಯ ದಿನಪತ್ರಿಕೆಗಳಾದರೆ ಉತ್ತಮ. ಅದರೊಂದಿಗೆ ಸ್ಥಳೀಯ ದಿನಪತ್ರಿಕೆಗಳ ಮೂಲಕ ಸ್ಥಳೀಯ ಮಾಹಿತಿಗಳನ್ನು ಪಡೆಯುವಲ್ಲಿ ಹಿಂದೆ ಬೀಳಬಾರದು.

S

ಉತ್ತರ ಸಂಕೇತಗಳು

ಎ) QPRS ಬಿ) RQPS
ಸಿ) RSPQ ಡಿ) PRQS

(2) ಸೊಪ್ಪು ತರಕಾರಿಗಳು ನಮ್ಮ ಆರೋಗ್ಯವನ್ನು ಉತ್ತಮಗೊಳಿಸಲು ಬೇಕಾದ

P: ಅವಶ್ಯ ನೈಸರ್ಗಿಕ ಪರಿಕರಗಳಾಗಿವೆ

Q: ಈ ನೈಸರ್ಗಿಕ ಖಜಾನೆಗೆ ಹಾನಿಯುಂಟಾಗುತ್ತಿದೆ. ಜೊತೆಗೆ ಮಾನವನ ಆರೋಗ್ಯಕ್ಕೂ ತೊಂದರೆಯುಂಟಾಗುತ್ತಿದೆ.

R: ಆದರೆ ರಾಸಾಯನಿಕ ಗೊಬ್ಬರಗಳನ್ನು ಹೊಲಗಳಿಗೆ ಯಥೇಚ್ಛವಾಗಿ ಹಾಕುವುದರಿಂದಾಗಿ.

S

ಉತ್ತರ ಸಂಕೇತಗಳು

ಎ) QPRS ಬಿ) RQPS ಸಿ) RSPQ ಡಿ) PRQS

ಉತ್ತರ:-(1)ಡಿ (2)ಬಿ

ಇಲ್ಲಿ ನೀಡಲಾದ ಪ್ರಶ್ನೆಗಳಲ್ಲಿರುವ ನಾಲ್ಕು ವಾಕ್ಯಗಳನ್ನು ಗಮನವಿಟ್ಟು ಓದಿ. ಅದಾದ ಬಳಿಕ ಆ ನಾಲ್ಕೂ ವಾಕ್ಯಗಳು ಒಟ್ಟಾರೆ ಏನನ್ನು ಹೇಳಲು ಹೊರಟಿವೆ ಎಂಬುದನ್ನು ಗ್ರಹಿಸಬೇಕು. ಬಳಿಕವೇ ಉತ್ತರ ಹುಡುಕಬೇಕು.

ಹಾಂ! ಉತ್ತರವನ್ನು ಪ್ರಶ್ನೆಯ ಕೆಳಗೆ ನೀಡಲಾದ ನಾಲ್ಕು ಉತ್ತರ ಸಂಕೇತಗಳಿಂದಲೇ ಸರಿಯಾಗಿರುವುದನ್ನು ಆರಿಸಬೇಕು. ಇಂಥಹ ಪ್ರಶ್ನೆಗಳನ್ನು ಬಿಡಿಸಲು ಯಾವುದೋ ಪುಸ್ತಕ ಸಹಾಯಕ್ಕೆ ಬರುವ ಸಾಧ್ಯತೆ ಕಡಿಮೆ, ಹೀಗಾಗಿ ಪುಸ್ತಕದ ಹುಳುವಾಗಿದ್ದರೆ ಕಷ್ಟ. ಇಂತಹ ಸಮಯದಲ್ಲಿ ಸಾಮಾನ್ಯಜ್ಞಾನವನ್ನು ಉಪಯೋಗಿಸಬೇಕು.

ಸೂಚನೆ:- ಈ ಕೆಳಗೆ ಕೊಡಲಾದ ಆರು ವಾಕ್ಯಗಳ ಭಾಗಗಳಲ್ಲಿ ಒಂದು ಮತ್ತು ಆರು ವಾಕ್ಯಗಳ ಭಾಗ ಸರಿಯಾಗಿವೆ. ನಡುವಿನ ನಾಲ್ಕು ವಾಕ್ಯಗಳು (PQRS) ಜಾಗ ಬದಲಾಯಿಸಿವೆ. ಅವುಗಳನ್ನು ಅರ್ಥಬರುವಂತೆ ಸರಿಯಾಗಿ ಹೊಂದಿಸಿ ಉತ್ತರ ಗುರುತಿಸಿ.

1. (1) ಒಂದು ಊರಿನಲ್ಲಿ ಒಬ್ಬ ದರ್ಜಿ ಇದ್ದ, ಆತ ಯಾವಾಗಲೂ

P - ಕಿಟಕಿಯ ಹತ್ತಿರ ಕೂತು ಬಟ್ಟೆ ಹೊಲಿಯುತ್ತಿದ್ದ

Q - ಒಂದು ದಿನ ಬೇಸತ್ತ ದರ್ಜಿ ಸೂಜಿಯಿಂದ ಸೊಂಡಿಲನ್ನು ಚುಚ್ಚಿದ

R - ಕೆರೆಗೆ ಹೋಗುತ್ತಿದ್ದ ಆನೆಯೊಂದು ಸೊಂಡಿಲಿನಿಂದ ಅವನನ್ನು ಆಶೀರ್ವದಿಸಿದಾಗ ಆತ ಪ್ರತಿಯಾಗಿ ಪ್ರೀತಿಯಿಂದ ಬಾಳೆಹಣ್ಣನ್ನು ತಿನ್ನಿಸುತ್ತಿದ್ದ.

S - ಆಗ ಮೌನದಿಂದ ಹೆಜ್ಜೆಯಿಟ್ಟ ಆನೆ, ಎರಡು ಕೊಡ ಕೆಸರು ನೀರನ್ನು ತಂದು ಅವನ ತಲೆಯ ಮೇಲೆ ಸುರಿದು ಬಿಟ್ಟಿತು

(6) ಪ್ರಾಣಿಗಳಿಗೂ ಆತ್ಮಾಭಿಮಾನ ಇರುವುದು ಸಹಜವಲ್ಲವೇ?

ಉತ್ತರ ಸಂಕೇತಗಳು:

ಎ) QSPR ಬಿ) QRPS ಸಿ) PRQS ಡಿ) PQSR

2. (1) ಜಾನಪದ ಕತೆಯ ಒಂದು ಪ್ರಸಂಗ


P – ರೈತನೊಬ್ಬನಿಗೆ ದಿನವೂ ರಾಗಿ ಮುದ್ದೆ ತಿಂದು ಬೇಸರವಾಯಿತು

Q – ದಾರಿಯಲ್ಲಿ ಹೆಂಡತಿ ಕೊಟ್ಟ ರಾಗಿರೊಟ್ಟಿಯನ್ನು ತಿಂದು ಅತ್ತೆ ಮನೆ ಸೇರಿದ

R – ಒಳ್ಳೆಯ ರುಚಿರುಚಿಯ ಊಟದ ಆಸೆಯಿಂದ ಅತ್ತೆ ಮನೆಗೆ ಹೊರಟ

S – ಮನೆಯಿಂದ ಬಂದ ಅಳಿಯನಿಗೆ ಸಂಭ್ರಮದಿಂದ ರಾಗಿ ಸೇವಿಗೆ ಮಾಡಿ ಅತ್ತೆ ಬಡಿಸಿದಳು.

(6) ಜಾಣ ರೈತ ಹಾಡಿಕೊಂಡು 'ಮನೆಯಲ್ಲಿದ್ರೆ ಲಿಂಗಾಕಾರ, ಪ್ರಯಾಣದಲ್ಲಿ ಚಕ್ರಾಕಾರ ಇಲ್ಲಿಗೂ ಬಂದ್ಯಾ ಜಡೆಶಂಕರ' ಎಂದ ಪಡೆದಷ್ಟನ್ನು ಅನುಭವಿಸಲೇಬೇಕು ಅಲ್ಲವೇ?



ಉತ್ತರ ಸಂಕೇತಗಳು:

ಎ) RSQP ಬಿ) QPSR
ಸಿ) PRQS ಡಿ) RPQS

3. (1) ಒಂದು ಊರಿಗೆ ಒಂದು ನರಿ ಬಂತು

P – ದ್ರಾಕ್ಷಿ ಗೊಂಚಲಿನತ್ತ ಹಾರಿ ಹಾರಿ ದ್ರಾಕ್ಷಿಯನ್ನು ತೆಗೆಯಲು ಪ್ರಯತ್ನಿಸಿತು

Q- ದ್ರಾಕ್ಷಿ ತುಂಬಾ ಹುಳಿಯಾಗಿರುತ್ತದೆ ಎಂದು ಬಯ್ಯುತ್ತಾ ಬಂದ ಜಾಗಕ್ಕೆ ಹಿಂತಿರುಗಿತು

R - ಬೆಳೆದ ದ್ರಾಕ್ಷಿ ನೋಡಿ ತಿನ್ನಲು ಹವಣಿಸಿತು

S - ಆದರೆ ದ್ರಾಕ್ಷಿ ಗೊಂಚಲು ಅದರ ಕೈಗೆ ಸಿಗಲೇ ಇಲ್ಲ

(6) ಕೈಲಾಗದವರು ಹಾಗೆಯೇ ಹೇಳುತ್ತಾರೆ ಅಲ್ಲವೇ?

ಉತ್ತರ ಸಂಕೇತಗಳು:

ಎ) QSPR ಬಿ) RPSQ ಸಿ) PRQS ಡಿ) PQSR

ಉತ್ತರಗಳು:-1)ಸಿ 2)ಸಿ 3)ಬಿ

ಇಲ್ಲಿ(ಮೇಲಿನ ಪ್ರಶ್ನೆಗಳಲ್ಲಿ) ನಾವು ಗಮನಿಸಬೇಕಾದ ಅಂಶವೆಂದರೆ ಮೊದಲ ಹಾಗೂ ಆರನೇ ವಾಕ್ಯವನ್ನು ಗಮನವಿಟ್ಟು ಓದಿ ನೆನಪಿನಲ್ಲಿಟ್ಟುಕೊಂಡಿರಬೇಕು. ನಂತರ ಮಧ್ಯದಲ್ಲಿ ಉಳಿದ ನಾಲ್ಕು ವಾಕ್ಯಗಳನ್ನು ಪುನರ್ ಜೋಡಿಸಬೇಕು. ಹಾಗೆ ಜೋಡಿಸುವಾಗ ಅವು ಏನನ್ನು ಹೇಳಲು ಹೊರಟಿವೆ ಎಂಬುದನ್ನು ಗ್ರಹಿಸಿ ಕೆಳಗೆ ಕೊಟ್ಟಿರುವ ಉತ್ತರ ಸಂಕೇತಗಳಲ್ಲಿ ಯಾವುದು ಸರಿಯಾಗುತ್ತದೆ ಎಂಬುದನ್ನು ಗುರುತಿಸಿ ಉತ್ತರವನ್ನು ಟಿಕ್ ಹಾಕಬೇಕು. ಒಟ್ಟಾರೆ ಆರು ವಾಕ್ಯಗಳು ಒಂದು ಕಥೆಯನ್ನೊ, ನೀತಿ ಸಂದೇಶವನ್ನೊ, ಘಟಿತ ಘಟನೆಯ ಬಗ್ಗೆ ಮಾಹಿತಿಯನ್ನೋ ತಿಳಿಸಲು ಹೊರಟಿರುತ್ತವೆ. ಇಂತಹ ಪ್ರಶ್ನೆಗಳನ್ನು ಬಿಡಿಸಲು ಯಾವುದೋ ಪುಸ್ತಕದ ಸಹಾಯ ಸಾಧ್ಯವಾಗದು; ನಮ್ಮಲ್ಲಿರುವ ಸಾಮಾನ್ಯಜ್ಞಾನ ಹೆಚ್ಚು ಸಹಾಯಕ್ಕೆ ಬರುತ್ತವೆ.

(ಲೇಖಕರು: ನಿರ್ದೇಶಕರು, ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ಕೇಂದ್ರ, ಬೆಂಗಳೂರು)

ಸಿಇಟಿ ದಿಕ್ಸೂಚಿ

Maths - Circles

1. The total number of common tangents of $x^2+y^2-6x-8y+9=0$ & $x^2+y^2=1$ is
(1) 4 (2) 2
(3) 3 (4) 1

2. The centre of a circle which cuts $x^2+y^2+6x-1=0, x^2+y^2-3y+2=0$ and $x^2+y^2+x+y-3=0$ orthogonally is
(1) $\left(\frac{1}{7},\frac{9}{7}\right)$ (2) $\left(-\frac{1}{7},-\frac{9}{7}\right)$
(3) $\left(\frac{1}{7},-\frac{9}{7}\right)$ (4) $\left(-\frac{1}{7},\frac{9}{7}\right)$

3. The length of the latus rectum of $3x^2-4y+6x-3=0$ is
(1) $\frac{3}{4}$ (2) $\frac{4}{3}$
(3) 2 (4) 3

4. The sum of the reciprocals of focal distances of a focal chord PQ of $y^2=4ax$ is
(1) $\frac{1}{a}$ (2) a
(3) 2a (4) $\frac{1}{2a}$

5. If the focii of $\frac{x^2}{16}+\frac{y^2}{4}=1$ & $\frac{x^2}{a^2}-\frac{y^2}{9}=1$ coincide, then the value of a is
(1) $\sqrt{3}$ (2) $\frac{1}{\sqrt{3}}$
(3) 2 (4) 1

6. The equation of a hyperbola whose asymptotes are $3x\pm5y=0$ and vertices are $(\pm5,0)$ is
(1) $3x^2-5y^2=25$
(2) $5x^2-3y^2=225$
(3) $25x^2-9y^2=225$
(4) $9x^2-25y^2=225$

7. If $x\cos\alpha+y\sin\alpha=4$ is tangent to $\frac{x^2}{25}+\frac{y^2}{9}=1$, then the value of α is
(1) $\tan^{-1}(3/7)$ (2) $\tan^{-1}(\sqrt{3}/7)$
(3) $\tan^{-1}(7/3)$ (4) $\tan^{-1}(3/\sqrt{7})$

8. If P is a point on $\frac{x^2}{a^2}+\frac{y^2}{b^2}=1$ with focii S and S' then the maximum value of $\Delta SPS'$ is
(1) ab (2) abe^2
(3) abe (4) ab/e

9. If the straight line $3x+4y=k$ touches the circle $x^2+y^2=16x$, then the value of k is
(1) 16, 64 (2) -16, -64
(3) -16, 64 (4) 16, -64

10. The locus of the point of intersection of perpendicular tangents to the ellipse is called
(1) hyperbola (2) ellipse
(3) auxiliary circle (4) director circle

11. The number of circles that touch the co-ordinate axes and the line whose slope is -1 andy-intercept is 1, is
(1) 1 (2) 4
(3) 2 (4) 3

12. The equations of the two tangents from (-5, -4) to the circle $x^2+y^2+4x+6y+8=0$ are
(1) $x+2y+13=0,\quad 2x-y+6=0$
(2) $2x+y+13=0,\quad x-2y=6$
(3) $3x+2y+23=0,\quad 2x-3y+4=0$
(4) $x-7y+23=0,\quad 6x+13y=4$

13. If $x=t^2+2$ and $y=2t$ represent the parametric equation of the parabola
(1) $x^2=4(y-2)$ (2) $(y-2)=4x$
(3) $y^2=4(x-2)$ (4) $(x-2)^2=4y$

14. A tangent is drawn to the circle $2x^2+2y^2-3x+4y=0$ at the point 'A' and it meets the line $x+y=3$ at B (2, 1), then AB=____
(1) $\sqrt{10}$ (2) 2
(3) $2\sqrt{2}$ (4) 0

15. The area of the circle having its centre at (3, 4) and touching the line $5x+12y-11=0$ is ____
(1) 16π sq. units (2) 4π sq. units
(3) 12π sq. units (4) 25π sq. units

ANSWERS

1. Answer (3)
Sol.: The given equation of circles
$x^2+y^2-6x-8y+9=0$ &
$x^2+y^2=1$
Radius and centre of both circles is
$C_1C_2=\sqrt{(3-0)^2+(4-0)^2}=\sqrt{9+16}=5$
$\because C_1C_2=R_1+R_2$
So, number of common tangents = 3.

2. Answer (4)
Sol.: The given circles
Let $S_1\equiv x^2+y^2+6x-1=0$,
Centre $C_1=(-3,0)$, Radius $R_1=\sqrt{10}$
$C_2=\left(0,\frac{3}{2}\right), R_2=\frac{1}{2}$
$C_3=\left(\frac{-1}{2},\frac{-1}{2}\right) R_3=\sqrt{\frac{7}{2}}$
Let $S\equiv x^2+y^2+2gx+2fy+c=0$ be equation of circle which cut orthogonal all three circles. Then, by condition of orthogonality.
$-2g(-3)+2(-f)(0)=c-1$
So, centre is $(-g,-f)=(-1/7,9/7)$

3. Answer (2)
Sol.: Given equation of conic
$3x^2-4y+6x-3=0$
$\Rightarrow (x+1)^2=\frac{4}{3}(y+3/2)$..........(i)
Let $X^2=\frac{4}{3}Y$............(ii)
Where $X=x+1$ & $Y=y+3/2$ & $4b=4/3\Rightarrow b=1/3$
So, now the length of latusrectum is 4/3.


4. Answer (1)
Sol.: Equation of parabola $y^2=4ax$
Total length of focal chord = 4a
and half length of focal chord = 2a
Now, sum of the reciprocals of focal distances
$=\frac{1}{2a}+\frac{1}{2a}=\frac{2}{2a}=\frac{1}{a}$

5. Answer (1)
Sol.: Equation of conics $\frac{x^2}{16}+\frac{y^2}{4}=1, \frac{x^2}{a^2}-\frac{y^2}{9}=1$
Focii of an ellipse $=(\pm ae,0)$
$=\left(\pm4.\frac{\sqrt{3}}{2},0\right)=(\pm2\sqrt{3},0)$
Equation of eccentricity of second conic (hyperbola) $b^2=a^2(e^2-1)$
$\Rightarrow b^2=a^2e^2-a^2$
$\Rightarrow a^2=3\Rightarrow a=\sqrt{3}$

6. Answer (4)
Sol.: The given equation of asymptotes of hyperbola is
$3x\pm5y=0$........(i)
The equation of hyperbola is
$9x^2-25y^2=\lambda$
$(\pm5,0)$ is the vertices of the hyperbola, then
$\lambda=225$

7. Answer (4)
Sol.: Given, $x\cos\alpha+y\sin\alpha=4$ is a tangent to $\frac{x^2}{25}+\frac{y^2}{9}=1$
$\Rightarrow y=-x\cot\alpha+4\operatorname{cosec}\alpha$
Here, $m=-\cot\alpha, c=4\operatorname{cosec}\alpha$ & $a^2=25, b^2=9$
Now, the condition of tangent to ellipse is
$c^2=a^2m^2+b^2$
$16\operatorname{cosec}^2\alpha=25\cot^2\alpha+9$
$\Rightarrow \alpha\tan^{-1}(3/\sqrt{7})$

8. Answer (3)
Sol.: Given equation of an ellipse
$\frac{x^2}{a^2}+\frac{y^2}{b^2}=1$.......(i) The area of
$$\Delta SPS'=\frac{1}{2}\begin{vmatrix} ae & 0 & 1 \\ a\cos\theta & b\sin\theta & 1 \\ -ae & 0 & 1 \end{vmatrix}$$
Expanding w.r.to C_2
$=\frac{1}{2}(b\sin\theta)(ae+ae)$
$=abe\sin\theta\,[\because -1\le\sin\theta\le1]$




Here, $S'\rightarrow(-ae,0)$, $S\rightarrow(ae,0)$
Now, maximum value of area
= abe (maximum value of $\sin\theta$)
= abe (1) = abe

9. Answer: (3)
Sol:- $x^2+y^2-16x=0$
Centre = (8, 0); radius = 8
Perpendicular distance from centre (8, 0) to the line $3x+4y-k=0$ is radius
$\therefore \left|\frac{24-k}{5}\right|=8\Rightarrow|24-k|=40$
$24-k=\pm40$
$\therefore k=-16, 64$

10. Answer: (4)
Sol:-Locus of point of intersection of perpendicular tangents to the conic is the director circle

11. Answer: (3)
Sol:-Number of circles = 4



12. Answer: (1)
Sol:- $SS_1=T^2$
$(x^2+y^2+4x+6y+8)(25+16-20-24+8)$
$=(-5x-4y+2(x-5)+3(y-4)+8)^2$
$\Rightarrow(x+2y+13)(2x-y+6)=0$
$\therefore x+2y+13=0, 2x-y+6=0$

13. Answer: (3)
Sol:- $t^2=x-2,\Rightarrow\frac{y^2}{4}=x-2\Rightarrow y^2=4(x-2)$

14. Answer : (2)
Sol : $S\equiv x^2+y^2-\frac{3}{2}x+2y=0$
Length of tangent $(AB)=\sqrt{4+1-\frac{3}{2}(2)+2(1)}=2$

15. Answer : (1)
Sol : Radius $=\frac{|15+48-11|}{\sqrt{169}}$
r = 4
Area $=\pi r^2=16\pi$

(ಪ್ರಶ್ನೋತ್ತರ ಸಂಯೋಜನೆ: ಆಕಾಶ್ ಇನ್‌ಸ್ಟಿಟ್ಯೂಟ್, ಬೆಂಗಳೂರು)

ಪೊಲೀಸ್ ಕಾನ್‌ಸ್ಟೇಬಲ್ ನೇಮಕಾತಿ ಪರೀಕ್ಷೆಯ ಮಾದರಿ ಪ್ರಶ್ನೆಗಳು

ಭಾಗ- 48

646. ಬಂಗಾಳಕೊಲ್ಲಿ ಎಲ್ಲಿದೆ?
ಎ) ಭಾರತದ ವಾಯುವ್ಯದಲ್ಲಿ
ಬಿ) ಭಾರತದ ಆಗ್ನೇಯದಲ್ಲಿ
ಸಿ) ಭಾರತದ ಈಶಾನ್ಯದಲ್ಲಿ
ಡಿ) ಭಾರತದ ನೈರುತ್ಯದಲ್ಲಿ

647. ಮನುಷ್ಯನ ಪ್ರತಿ ಜೀವಕೋಶದಲ್ಲಿರುವ ವರ್ಣತಂತುಗಳ ಸಂಖ್ಯೆ ಎಷ್ಟು?
ಎ) 43 ಬಿ) 23
ಸಿ) 46 ಡಿ) 33

648. ಕೈಬರಹದ ಕುರಿತ ಅಭ್ಯಾಸವನ್ನು ಏನೆಂದು ಕರೆಯುತ್ತಾರೆ?
ಎ) ಅನಾಟಮಿ
ಬಿ) ಅಗ್ರೋನಾಮಿ
ಸಿ) ಕ್ಯಾಲಿಗ್ರಫಿ
ಡಿ) ಎಥಾಲಾಜಿ

649. ವಾತಾವರಣದ ಒತ್ತಡವನ್ನು ಯಾವುದರಿಂದ ಅಳೆಯುತ್ತಾರೆ?
ಎ) ಹೈಡ್ರೋಮೀಟರ್
ಬಿ) ಅಲ್ಟಿಮೀಟರ್
ಸಿ) ಹೈಗ್ರೋಮೀಟರ್
ಡಿ) ಬ್ಯಾರೋಮೀಟರ್

650. 'ಖಡಕ್‌ನಾಥ' ಇದು ಯಾವುದರ ತಳಿ?
ಎ) ಆಕಳು ಬಿ) ಎಮ್ಮೆ
ಸಿ) ಎತ್ತು ಡಿ) ಕೋಳಿ

651. ಕೆಳಗಿನವುಗಳಲ್ಲಿ ಯಾವ ಕೃತಿಯನ್ನು ಕೃಷ್ಣದೇವರಾಯ ಬರೆದಿದ್ದಾನೆ?
ಎ) ಅಮುಕ್ತಮಾಲ್ಯದ
ಬಿ) ಜಾಂಬವತಿ ಕಲ್ಯಾಣ
ಸಿ) ಮಧುರಾವಿಜಯಂ
ಡಿ) (ಎ) ಮತ್ತು (ಬಿ) ಎರಡೂ

652. 'ಹರಿಕಥಾಪ್ರಸಂಗ' ಕನ್ನಡ ಚಲನಚಿತ್ರದ ನಿರ್ದೇಶಕರು ಯಾರು?
ಎ) ಗಿರೀಶ್ ಕಾಸರವಳ್ಳಿ
ಬಿ) ಅನನ್ಯಾ ಕಾಸರವಳ್ಳಿ
ಸಿ) ಬಿ.ಸುರೇಶ್
ಡಿ) ನಾಗತಿಹಳ್ಳಿ ಚಂದ್ರಶೇಖರ

653. ರಾಷ್ಟ್ರೀಯ ಯುವ ದಿನವನ್ನು ಯಾವಾಗ ಆಚರಿಸಲಾಗುತ್ತದೆ?
ಎ) ಜನವರಿ 10
ಬಿ) ಜನವರಿ 11
ಸಿ) ಜನವರಿ 12
ಡಿ) ಜನವರಿ 13

654. ರೀನಾಳ ವಯಸ್ಸು ಸುನೀತಾಳ ವಯಸ್ಸಿಗಿಂತ ಎರಡು ಪಟ್ಟು ಜಾಸ್ತಿ ಇದೆ. ಮೂರು ವರ್ಷಗಳ ಹಿಂದೆ, ಅವಳ ವಯಸ್ಸು ಸುನೀತಾಳ ವಯಸ್ಸಿನ ಮೂರು ಪಟ್ಟು ಜಾಸ್ತಿ ಇತ್ತು. ರೀನಾಳ ಈಗಿನ ವಯಸ್ಸು ಎಷ್ಟು?
ಎ) 6 ವರ್ಷ
ಬಿ) 7 ವರ್ಷ
ಸಿ) 8 ವರ್ಷ
ಡಿ) 12 ವರ್ಷ

655. ಒಬ್ಬ ವ್ಯಕ್ತಿಯು ಒಂದು ಕೆಲಸವನ್ನು 12 ದಿನಗಳಲ್ಲಿ ಮತ್ತು ಮತ್ತೊಬ್ಬ ವ್ಯಕ್ತಿಯು 24 ದಿನಗಳಲ್ಲಿ ಮಾಡಬಲ್ಲರು. ಇಬ್ಬರೂ ಜೊತೆಯಾದರೆ ಅದೇ ಕೆಲಸವನ್ನು ಎಷ್ಟು ದಿನಗಳಲ್ಲಿ ಮಾಡಬಹುದು?
ಎ) 8 ಬಿ) 12
ಸಿ) 20 ಡಿ) 15

656. 'ಕರ್ನಾಟಕ ವೈಭವ' ಕೃತಿಯ ಕರ್ತೃ ಯಾರು?
ಎ) ಆಲೂರು ವೆಂಕಟರಾಯರು
ಬಿ) ಬಿ.ಎಂ.ಶ್ರೀ
ಸಿ) ಕುವೆಂಪು
ಡಿ) ಗೋವಿಂದ ಪೈ

657. ಬಹುಮನಿ ಸಾಮ್ರಾಜ್ಯದ ಸ್ಥಾಪಕ ಯಾರು?
ಎ) ಅಲ್ಲಾವುದ್ದೀನ್ ಹಸನ್
ಬಿ) ಫಿರೋಜ್ ಷಾ
ಸಿ) ಅಹ್ಮದ್ ಷಾ
ಡಿ) ನಿಜಾಮ್ ಷಾ

658. ಕನ್ನಂಬಾಡಿ ಅಣೆಕಟ್ಟು ಯಾರ ಕಾಲದಲ್ಲಿ ನಿರ್ಮಾಣಗೊಂಡಿತು?
ಎ) ಚಿಕ್ಕದೇವರಾಯ ಒಡೆಯರ್
ಬಿ) ಕೃಷ್ಣರಾಜ ಒಡೆಯರ್- 4
ಸಿ) ದೊಡ್ಡದೇವರಾಯ ಒಡೆಯರ್
ಡಿ) ಕೃಷ್ಣರಾಜ ಒಡೆಯರ್-1

659. 'ಟೇಬಲ್ ಶುಗರ್' ಯಾವುದು?
ಎ) ಗ್ಲೂಕೋಸ್
ಬಿ) ಸುಕ್ರೋಸ್
ಸಿ) ಸೆಲ್ಯುಲೋಸ್
ಡಿ) ಫ್ರಕ್ಟೋಸ್

660. ಎಲುಬುಗಳ ಬಲವರ್ಧಿಸುವುದು ಯಾವುದು?
ಎ) ಕ್ಯಾಲ್ಸಿಯಂ
ಬಿ) ಪ್ಲಾಟಿನಂ
ಸಿ) ಸೋಡಿಯಂ
ಡಿ) ಯುರೇನಿಯಂ

(ಪ್ರಶ್ನೋತ್ತರ ಸಂಯೋಜನೆ: ಸ್ಲೇಟ್ ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿ ಕೇಂದ್ರ, ಧಾರವಾಡ)

ಭಾಗ- 47ರ ಉತ್ತರ: 629. ಡಿ, 630. ಎ, 631. ಸಿ, 632. ಬಿ, 633. ಡಿ, 634. ಬಿ, 635. ಸಿ, 636. ಎ, 637. ಬಿ, 638. ಬಿ, 639. ಬಿ, 640. ಸಿ, 641. ಬಿ, 642. ಡಿ, 643. ಸಿ, 644. ಬಿ, 645. ಎ

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in




ಸುಭಾಷಿತ

ಪೊರೆ ಕಳಚಿಕೊಳ್ಳಲಾಗದ ಹಾವು ಸಾಯುವುದು ಖಚಿತ. ಅಂತೆಯೇ ತಮ್ಮ ಅಭಿಪ್ರಾಯಗಳನ್ನು ಬದಲಿಸಿಕೊಳ್ಳಲಾರದ ಮನಸ್ಸುಗಳು ನಿಷ್ಕ್ರಿಯಗೊಂಡಂತೆಯೇ ಸರಿ.

–ಫ್ರೆಡರಿಕ್ ನೀಶೆ

ಶಾಲಾ ಮಕ್ಕಳಿಗೆ ಪಠ್ಯಪುಸ್ತಕ ತಕ್ಷಣ ಪೂರೈಸಲು ಕ್ರಮ ಕೈಗೊಳ್ಳಿ

ಕೊರೊನಾ ಬಿಕ್ಕಟ್ಟಿನ ಸಂದರ್ಭದಲ್ಲಿ ಶಾಲೆಗಳನ್ನು ಹಂತ ಹಂತವಾಗಿ ಪ್ರಾರಂಭಿಸುತ್ತಿರುವ ರಾಜ್ಯ ಸರ್ಕಾರದ ನಿರ್ಧಾರ ಸ್ವಾಗತಾರ್ಹ. ಆದರೆ, ಮಕ್ಕಳಿಗೆ ಪಠ್ಯಪುಸ್ತಕಗಳನ್ನು ನೀಡದೆಯೇ ಶಾಲೆ ಆರಂಭಿಸಿರುವುದು ಮಕ್ಕಳ ಕಲಿಕೆಯ ಬಗ್ಗೆ ಸರ್ಕಾರ ಎಷ್ಟರಮಟ್ಟಿಗೆ ಗಂಭೀರವಾಗಿದೆ ಎನ್ನುವುದನ್ನು ಸೂಚಿಸುವಂತಿದೆ. ತರಗತಿಗಳ ಆರಂಭದೊಂದಿಗೇ ಮಕ್ಕಳಿಗೆ ಪುಸ್ತಕ ನೀಡಬೇಕಿರುವ ಸರ್ಕಾರದ ಕಾರ್ಯವೈಖರಿ ಬಗ್ಗೆ ಹೈಕೋರ್ಟ್ ಅಸಮಾಧಾನ ವ್ಯಕ್ತಪಡಿಸಿರುವುದು ಸರಿಯಾಗಿದೆ. ಜೂನ್ ತಿಂಗಳಲ್ಲಿ ಪ್ರಾರಂಭವಾಗಬೇಕಿದ್ದ ಶಾಲೆಗಳು 9 ಮತ್ತು 10ನೇ ತರಗತಿಗಳನ್ನು ಆರಂಭಿಸುವ ಮೂಲಕ ಆಗಸ್ಟ್ 23ರಿಂದ ಕಾರ್ಯಾರಂಭ ಮಾಡಿವೆ. ಜೊತೆಗೆ ಪದವಿಪೂರ್ವ ತರಗತಿಗಳೂ ಶುರುವಾಗಿವೆ. ಕೆಲವೆಡೆ ಹೂವು ನೀಡುವ ಮೂಲಕ ಮಕ್ಕಳನ್ನು ಶಾಲೆಗಳಿಗೆ ಸ್ವಾಗತಿಸಲಾಗಿದೆ. ಹೂವಿನ ಜೊತೆಗೆ ಪುಸ್ತಕಗಳನ್ನೂ ನೀಡುವುದು ಸಾಧ್ಯವಾಗಿದ್ದಲ್ಲಿ ಶಾಲಾರಂಭ ಅರ್ಥಪೂರ್ಣವಾಗುತ್ತಿತ್ತು. ತರಗತಿಗಳನ್ನು ಆರಂಭಿಸಿದ ಮಾತ್ರಕ್ಕೆ ಸರ್ಕಾರದ ಜವಾಬ್ದಾರಿ ಮುಗಿಯುವುದಿಲ್ಲ. ಶಾಲೆ ತೆರೆಯುವುದರ ಜೊತೆಜೊತೆಗೆ ಮಕ್ಕಳ ಕೈಗೆ ಪುಸ್ತಕಗಳು ದೊರೆಯುವಂತೆ ನೋಡಿಕೊಳ್ಳುವುದು ಸರ್ಕಾರದ ಕರ್ತವ್ಯ. ಕೊರೊನಾ ಕಾರಣದಿಂದಾಗಿ ಪೂರ್ವ ಸಿದ್ಧತೆಗಳಿಗೆ ಬಹಳಷ್ಟು ಸಮಯ ದೊರೆತಿದ್ದರೂ ಪಠ್ಯಪುಸ್ತಕಗಳನ್ನು ಲಭ್ಯವಿರುವಂತೆ ನೋಡಿಕೊಳ್ಳುವುದು ಸರ್ಕಾರಕ್ಕೆ ಸಾಧ್ಯವಾಗಿಲ್ಲ. ಪಿಯು ಪರೀಕ್ಷೆಗಳು ರದ್ದಾದರೂ, ಮಕ್ಕಳ ಭವಿಷ್ಯದ ಕಾಳಜಿಯನ್ನು ಮುಂದಿಟ್ಟುಕೊಂಡು ಎಸ್ಎಸ್ಎಲ್‌ಸಿ ವಿದ್ಯಾರ್ಥಿಗಳಿಗೆ ಪರೀಕ್ಷೆ ನಡೆಸಲಾಯಿತು. ಇದೀಗ, ಹೊಸ ಶಿಕ್ಷಣ ನೀತಿಯನ್ನು ಅನುಷ್ಠಾನಗೊಳಿಸಿದ ಮೊದಲ ರಾಜ್ಯ ಎಂದು ರಾಜ್ಯ ಸರ್ಕಾರ ಬೀಗುತ್ತಿದೆ. ಆದರೆ, ಮಕ್ಕಳಿಗೆ ಪಠ್ಯಪುಸ್ತಕ ಒದಗಿಸುವ ಪ್ರಾಥಮಿಕ ಜವಾಬ್ದಾರಿಯಲ್ಲೇ ಸರ್ಕಾರ ಎಡವಿದೆ. ಪರೀಕ್ಷೆಗಳನ್ನು ನಡೆಸುವುದು ಅಥವಾ ಹೊಸ ನೀತಿಯನ್ನು ಜಾರಿಗೊಳಿಸುವುದಕ್ಕಿಂತಲೂ ಮುಖ್ಯವಾಗಿ, ಕಲಿಕೆಗೆ ಅಗತ್ಯವಾದ ಮೂಲಭೂತ ಸವಲತ್ತುಗಳನ್ನು ಶಾಲಾ ಮಕ್ಕಳಿಗೆ ಒದಗಿಸುವುದರಲ್ಲಿ ಶಿಕ್ಷಣ ಕ್ಷೇತ್ರದ ನಿಜವಾದ ಯಶಸ್ಸು ಅಡಗಿದೆ.



ಪಠ್ಯಪುಸ್ತಕಗಳ ಕೊರತೆಗೆ ಕೊರೊನಾ ಸಂದರ್ಭವನ್ನು ನೆಪ ಮಾಡದೆ, ಮಕ್ಕಳ ಕಲಿಕೆಗೆ ಅಗತ್ಯವಾದ ಆರೋಗ್ಯಕರ ಪರಿಸರ ನಿರ್ಮಿಸಲು ಸರ್ಕಾರ ಮುಂದಾಗಬೇಕು

ಪಠ್ಯಪುಸ್ತಕ ನೀಡಿದಾಗ ಮಾತ್ರ ವಿದ್ಯಾರ್ಥಿಗಳ ಹಾಜರಿ ಮತ್ತು ಸರ್ಕಾರ ನೀಡುತ್ತಿರುವ ಶಿಕ್ಷಣಕ್ಕೆ ಅರ್ಥ ಬರಲಿದೆ ಎಂದು ಅಭಿಪ್ರಾಯಪಟ್ಟಿರುವ ಹೈಕೋರ್ಟ್, 9 ಮತ್ತು 10ನೇ ತರಗತಿ ವಿದ್ಯಾರ್ಥಿಗಳಿಗೆ ಪಠ್ಯಪುಸ್ತಕ ಪೂರೈಸಲಾಗಿದೆಯೇ ಇಲ್ಲವೇ ಎನ್ನುವುದನ್ನು ಖಚಿತಪಡಿಸಿಕೊಳ್ಳುವಂತೆ ನೀಡಿರುವ ನಿರ್ದೇಶನವನ್ನು ರಾಜ್ಯ ಸರ್ಕಾರ ಗಂಭೀರವಾಗಿ ಪರಿಗಣಿಸಬೇಕು. ಪಿಯು ಪಠ್ಯಪುಸ್ತಕಗಳು ಪೇಟೆಯಲ್ಲಿ ದೊರೆಯುತ್ತವೆಯೇ ಎನ್ನುವುದನ್ನು ಖಚಿತಪಡಿಸುವಂತೆಯೂ ಹೈಕೋರ್ಟ್ ಹೇಳಿದೆ. ಇದೇ 30ರೊಳಗೆ ಪಠ್ಯಪುಸ್ತಕ ಲಭ್ಯತೆ ಕುರಿತ ಸ್ಥಿತಿಗತಿ ವರದಿ ಸಲ್ಲಿಸುವಂತೆ ಹೇಳಿದೆ. ಪಠ್ಯಪುಸ್ತಕಗಳನ್ನು ಹಂತ ಹಂತವಾಗಿ ವಿತರಿಸಲಾಗುತ್ತಿದ್ದು, ಸೆಪ್ಟೆಂಬರ್ ಕೊನೆಯ ವೇಳೆಗೆ ಎಲ್ಲ ಮಕ್ಕಳಿಗೂ ತಲುಪಿಸಲಾಗುತ್ತದೆ ಎನ್ನುವ ಸರ್ಕಾರದ ಹೇಳಿಕೆಯನ್ನು ಒಪ್ಪಲಾಗದು. ಶೈಕ್ಷಣಿಕ ವರ್ಷದ ಅರ್ಧ ಭಾಗ ಮುಗಿಯುತ್ತಾ ಬಂದಿದ್ದರೂ ಪಠ್ಯಪುಸ್ತಕ ಪೂರೈಸದಿರುವುದನ್ನು ಶಿಕ್ಷಣ ಇಲಾಖೆಯ ಲೋಪವೆಂದೇ ಹೇಳಬೇಕಾಗುತ್ತದೆ. ತಾಲ್ಲೂಕು ಮಟ್ಟದ ಅಧಿಕಾರಿಗಳು ಪಿಡಿಎಫ್ ರೂಪದ ಪುಸ್ತಕಗಳನ್ನು ಎಲ್ಲ ವಿದ್ಯಾರ್ಥಿಗಳಿಗೆ ಪೂರೈಸಿದ್ದೇವೆ ಎನ್ನುವ ಹೇಳಿಕೆಯು ಮಕ್ಕಳ ಕಲಿಕೆಯ ಬಗ್ಗೆ ಸರ್ಕಾರ ಹೊಂದಿರುವ ಕಾಳಜಿಯ ಬಗ್ಗೆ ಅನುಮಾನ ಮೂಡಿಸುವಂತಿದೆ. ಆನ್‌ಲೈನ್ ಶಿಕ್ಷಣ ವ್ಯವಸ್ಥೆಯು ಲಕ್ಷಾಂತರ ವಿದ್ಯಾರ್ಥಿಗಳಿಗೆ ದುಬಾರಿಯಾಗಿರುವಾಗ, ಎಳೆಯ ಮಕ್ಕಳು ಪಿಡಿಎಫ್ ರೂಪದಲ್ಲಿ ಪುಸ್ತಕಗಳನ್ನು ಓದಬೇಕೆಂದು ನಿರೀಕ್ಷಿಸುವುದು ಸರಿಯಲ್ಲ. ಡಿಜಿಟಲ್ ಪುಸ್ತಕಗಳನ್ನು ನೀಡುವುದು ಶಿಕ್ಷಣದಲ್ಲಿ ತರತಮ ಉಂಟುಮಾಡುವಂತಹದ್ದು. ಕೊರೊನಾ ಸಂದರ್ಭದಲ್ಲಿ ಪರೀಕ್ಷೆಗಳಿಲ್ಲದೆಯೇ ವಿದ್ಯಾರ್ಥಿಗಳನ್ನು ಮುಂದಿನ ತರಗತಿಗೆ ಉತ್ತೀರ್ಣಗೊಳಿಸುತ್ತಿರುವಂತೆ, ಈಗ ಪಠ್ಯಪುಸ್ತಕಗಳು ಇಲ್ಲದೆಯೇ ಶೈಕ್ಷಣಿಕ ವರ್ಷ ಮುಗಿಸಬಹುದೆಂದು ಸರ್ಕಾರ ಭಾವಿಸಿದಂತಿದೆ.

ಸೆಪ್ಟೆಂಬರ್‌ನಲ್ಲಿ 1ರಿಂದ 8ನೇ ತರಗತಿಯ ಮಕ್ಕಳನ್ನೂ ಶಾಲೆಗೆ ಕರೆಯುವ ನಿರೀಕ್ಷೆಯಿದೆ. ಆದರೆ, ಪ್ರಾಥಮಿಕ ಶಾಲಾ ಮಕ್ಕಳಿಗೆ ಪುಸ್ತಕಗಳನ್ನು ಈವರೆಗೂ ಒದಗಿಸಿಲ್ಲ. ಹೊಸ ಪಠ್ಯಪುಸ್ತಕಗಳು ಅಲಭ್ಯವಾದುದರಿಂದ, ವಿದ್ಯಾರ್ಥಿಗಳಿಂದ ಹಿಂದಿನ ವರ್ಷದ ಪಠ್ಯಪುಸ್ತಕಗಳನ್ನು ಪಡೆದು ಈ ವರ್ಷದ ಮಕ್ಕಳಿಗೆ ನೀಡುವ ಪ್ರಯತ್ನ ಕೆಲವು ಶಾಲೆಗಳಲ್ಲಿ ನಡೆಯುತ್ತಿದೆ. ಖಾಸಗಿ ಶಾಲೆಗಳ ಮಕ್ಕಳು ಹೊಸ ಪುಸ್ತಕಗಳನ್ನು ಹಿಡಿದು ಸಂಭ್ರಮದಿಂದ ಶಾಲೆಗೆ ಹೋಗುತ್ತಿದ್ದರೆ, ಸರ್ಕಾರಿ ಶಾಲೆಗಳ ಮಕ್ಕಳು ಹಳೆಯ ಪುಸ್ತಕಗಳ ಹುಡುಕಾಟದಲ್ಲಿ ತೊಡಗುವ ಸ್ಥಿತಿ ಎದುರಾಗಿದೆ. ಪಠ್ಯಪುಸ್ತಕಗಳ ಕೊರತೆಗೆ ಕೊರೊನಾ ಸಂದರ್ಭವನ್ನು ನೆಪ ಮಾಡುವಂತಿಲ್ಲ. ಏಕೆಂದರೆ, ಶೈಕ್ಷಣಿಕ ವರ್ಷದ ಆರಂಭದೊಂದಿಗೆ ಮಕ್ಕಳಿಗೆ ಪುಸ್ತಕಗಳನ್ನು ತಲುಪಿಸುವಲ್ಲಿ ಉಂಟಾಗುತ್ತಿರುವ ಲೋಪ ಸಾಮಾನ್ಯವಾಗಿ ಪ್ರತಿವರ್ಷವೂ ಪುನರಾವರ್ತನೆಗೊಳ್ಳುತ್ತಿದೆ. ಪ್ರಸ್ತುತ ಕೊರೊನಾ ಸಂದರ್ಭವು ಮಕ್ಕಳ ಕಲಿಕೆಯನ್ನು ಇನ್ನಷ್ಟು ಸಂಕೀರ್ಣವನ್ನಾಗಿಸಿದೆ. ದೀರ್ಘ ಕಾಲ ಶಾಲೆಯಿಂದ ದೂರ ಉಳಿದಿದ್ದರಿಂದಾಗಿ ಅನೇಕ ಮಕ್ಕಳು ಕಲಿಕೆಯ ಪ್ರಾಥಮಿಕ ಸಂಗತಿಗಳನ್ನೇ ಮರೆತಿದ್ದಾರೆ. ಆ ಮಕ್ಕಳನ್ನು ಮತ್ತೆ ಕಲಿಕೆಯ ಹಳಿಗೆ ತರಬೇಕಾದ ಸವಾಲು ಶಿಕ್ಷಣ ಇಲಾಖೆಯ ಮುಂದಿದೆ. ಕಲಿಕೆಗೆ ಯಾವುದೇ ತೊಂದರೆ ಉಂಟಾಗದಂತೆ ನೋಡಿಕೊಳ್ಳುವುದು ಸರ್ಕಾರದ ಕರ್ತವ್ಯ. ಪಠ್ಯಪುಸ್ತಕಗಳ ಸರಬರಾಜನ್ನು ಸರ್ಕಾರ ಅತ್ಯಂತ ಆದ್ಯತೆಯ ವಿಷಯವನ್ನಾಗಿ ಪರಿಗಣಿಸಬೇಕು. ದೀರ್ಘ ವಿರಾಮದ ಅವಧಿಯಲ್ಲಿ ನಿರ್ವಹಣೆಯ ಕೊರತೆಯಿಂದಾಗಿ ಕೆಲವು ಶಾಲೆಗಳ ಕಟ್ಟಡಗಳು ಊನಗೊಂಡಿವೆ, ಕಳಾಹೀನಗೊಂಡಿವೆ. ಅಂಥ ಕಟ್ಟಡಗಳನ್ನು ದುರಸ್ತಿಗೊಳಿಸುವ ಕೆಲಸ ವಿಳಂಬವಿಲ್ಲದೆ ನಡೆಯಬೇಕು. ಮಕ್ಕಳ ಕಲಿಕೆಗೆ ಅಗತ್ಯವಾದ ಆರೋಗ್ಯಕರ ಪರಿಸರ ಹಾಗೂ ಪುಸ್ತಕಗಳನ್ನು ತಕ್ಷಣ ಒದಗಿಸುವುದಕ್ಕೆ ಸಂಬಂಧಿಸಿದಂತೆ ಸರ್ಕಾರ ಯಾವುದೇ ನೆಪ ಹೇಳಬಾರದು.

ದಿನದ ಟ್ವೀಟ್



ಎಂಥ ಚೋದ್ಯದ ಸಂಗತಿ!

‘ನನ್ನ ಮಗನಿಗೆ ಟಿಕೆಟ್ ಕೊಡಿ, ನಾನು ಪಕ್ಷ ಸೇರುತ್ತೇನೆ’– ರಾಜಕೀಯವು ಲಾಭದಾಯಕ ವೃತ್ತಿ, ವ್ಯಾಪಾರವಾಗಿದೆಯೇ ವಿನಾ ನಿಸ್ವಾರ್ಥ ಸೇವೆಯಾಗಿ ಉಳಿದಿಲ್ಲ ಎಂಬುದಕ್ಕೆ ಇದಕ್ಕಿಂತ ಬೇರೆ ಪುರಾವೆ ಬೇಕೆ? ಯಾವುದೇ ಪಕ್ಷವು ತನ್ನಲ್ಲಿ ತತ್ವ, ನೈತಿಕತೆ ಮತ್ತು ಮೌಲ್ಯಪ್ರಜ್ಞೆ ಇದೆ ಎಂದು ಹೇಳಿಕೊಂಡರೆ ಒಮ್ಮೆ ಗಹಗಹಿಸಿ ನಕ್ಕುಬಿಡಿ. ಅದಕ್ಕಿಂತ ದೊಡ್ಡ ಚೋದ್ಯದ ಸಂಗತಿ ಬೇರೆ ಯಾವುದೂ ಇರಲಾರದು.

ರೋಹಿತ್ ಸಿಂಹ, ಎಂಜಿನಿಯರ್

ಕಿಡಿನುಡಿ

ವಿದ್ಯುತ್ ಚಾಲಿತ ಕಾರುಗಳನ್ನು ಲಕ್ಷಗಳ ಸಂಖ್ಯೆಯಲ್ಲಿ ಪ್ರತಿವರ್ಷ ಖರೀದಿಸುವಷ್ಟು ಗ್ರಾಹಕರು ಭಾರತದಲ್ಲಿ ಇದ್ದಾರೆ ಎಂಬುದು ನಮಗೆ ಖಚಿತವಾಗಿದೆಯೇ? ಆದಾಯವು ಅಷ್ಟೊಂದು ವೇಗವಾಗಿ ಹೆಚ್ಚಾಗುತ್ತ ಇದೆಯೇ? ಉದ್ಯೋಗಗಳು ಅಷ್ಟೊಂದು ಜಾಸ್ತಿ ಆಗುತ್ತಿವೆಯೇ? ನಾವು ಮುಂದೇನು ಮಾಡಬೇಕು ಎಂಬ ಯೋಜನೆಗಳನ್ನು ಸಿದ್ಧಪಡಿಸುವ ಸಂದರ್ಭದಲ್ಲಿ ಈ ಅಂಶಗಳನ್ನು ಸಾಮಾನ್ಯವಾಗಿ ಅಲಕ್ಷಿಸುತ್ತಿದ್ದೇವೆ.



ಆರ್.ಸಿ. ಭಾರ್ಗವ, ಮಾರುತಿ ಸುಜುಕಿ ಕಂಪನಿಯ ಅಧ್ಯಕ್ಷ

25 ವರ್ಷಗಳ ಹಿಂದೆ

ಸೋಮವಾರ, 26-8-1996

• ಆಲಮಟ್ಟಿ ವಿವಾದ: ಕೇಂದ್ರ ಸಂಪುಟಕ್ಕೆ ದೇಶಂ ಸಚಿವರ ರಾಜೀನಾಮೆ ಇಲ್ಲ

ಹೈದರಾಬಾದ್, ಆ. 25 (ಪಿಟಿಐ)– ಆಲಮಟ್ಟಿ ವಿವಾದದ ವಿಚಾರದಲ್ಲಿ ಎಚ್.ಡಿ.ದೇವೇಗೌಡ ಅವರ ಸಂಪುಟಕ್ಕೆ ತೆಲುಗುದೇಶಂ ಪಕ್ಷದ ಸಚಿವರ ರಾಜೀನಾಮೆ ಇಲ್ಲ. ಆದರೆ, ರಾಜ್ಯಕ್ಕೆ ನ್ಯಾಯ ಒದಗಿಸುವ ವಿಚಾರದಲ್ಲಿ ಸಂಧಾನದ ಪ್ರಯತ್ನ ಮುಂದುವರೆಸಲು ಸಂಯುಕ್ತ ರಂಗದಲ್ಲಿರುವ ಪ್ರಮುಖ ಪಕ್ಷವಾದ ತೆಲುಗುದೇಶಂ ಇಂದು ನಿರ್ಧರಿಸಿದೆ.

ಇಂದು ಇಲ್ಲಿ ನಡೆದ ತೆಲುಗುದೇಶಂ ಪಕ್ಷದ ಸಂಸತ್ ಸದಸ್ಯರ ಸಭೆಯಲ್ಲಿ ಅಂತರರಾಜ್ಯ ವಿವಾದ ಪ್ರಮುಖ ಚರ್ಚಿತ ವಿಷಯವಾಗಿದ್ದು, ಮುಖ್ಯಮಂತ್ರಿ ಎನ್. ಚಂದ್ರಬಾಬು ನಾಯ್ಡು ಅಧ್ಯಕ್ಷತೆ ವಹಿಸಿದ್ದರು.

50 ವರ್ಷಗಳ ಹಿಂದೆ

ಗುರುವಾರ, 26-8-1971

• ಹುಬ್ಬಳ್ಳಿಗೆ ವಿಮಾನ ನಿಲ್ದಾಣ ಯೋಜನೆಗೆ ನಾಂದಿ

ಹುಬ್ಬಳ್ಳಿ, ಆ. 25– ಹುಬ್ಬಳ್ಳಿ ವಿಮಾನ ನಿಲ್ದಾಣ ಸ್ಥಾಪನೆಗೆ ನಾಂದಿಯಾಗಿ ಇಂದು, ಗೋಕುಲದ ಸಮೀಪದಲ್ಲಿ ನಿಲ್ದಾಣ ಕೇಂದ್ರಕ್ಕೆ ಆಯ್ಕೆಯಾಗಿರುವ ನಿವೇಶನದ 235 ಎಕರೆ ಪ್ರದೇಶವನ್ನು ಹುಬ್ಬಳ್ಳಿ-ಧಾರವಾಡ ಕಾರ್ಪೊರೇಷನ್, ಕೇಂದ್ರ ವಿಮಾನೋಡ್ಡಾಣ ಶಾಖೆಗೆ ಔಪಚಾರಿಕವಾಗಿ ಒಪ್ಪಿಸಿ ಯೋಜನೆಯನ್ನು ಪ್ರಾರಂಭಿಸಲು ಹಸಿರುದೀಪ ತೋರಿಸಿತು.

• ಬಾಂಗ್ಲಾ ಬಗ್ಗೆ ಚೀನಿ ಮನ ತಿಳಿಯಲು ಪ್ರಯತ್ನ: ಚೌಗೆ ಇಂದಿರಾ ಪತ್ರ

ನವದೆಹಲಿ, ಆ. 25– ಬಾಂಗ್ಲಾ ದೇಶದಲ್ಲಿ ತಲೆ ಹಾಕಿರುವ ಪ್ರಕ್ಷುಬ್ಧ ಪರಿಸ್ಥಿತಿ ಕುರಿತು ಚೀನಿ ಪ್ರಧಾನಮಂತ್ರಿ ಚೌಎನ್‌ಲಾಯ್ ಅವರಿಗೆ ಪ್ರಧಾನಮಂತ್ರಿ ಇಂದಿರಾ ಗಾಂಧಿ ಅವರು ವೈಯಕ್ತಿಕವಾಗಿ ಪತ್ರ ಒಂದನ್ನು ಬರೆದಿದ್ದಾರೆ. ಆದರೆ ಈವರೆಗೆ ಯಾವುದೇ ಉತ್ತರವೂ ಬಂದಿಲ್ಲ.

ಮಾನ್ಸೂನ್ ಬದಲಾವಣೆಯ ವೇಗಕ್ಕೆ ತಕ್ಕಂತೆ ಅದರ ಮುನ್ಸೂಚನಾ ತಂತ್ರಜ್ಞಾನದ ಉನ್ನತೀಕರಣವಾಗಿಲ್ಲ

ಮಳೆ ಮುನ್ಸೂಚನೆ ತಂದಿತ್ತ ಪೀಕಲಾಟ



ವಿಶ್ಲೇಷಣೆ

ಡಾ. ಎಚ್.ಆರ್. ಕೃಷ್ಣಮೂರ್ತಿ

ಸುಮಾರು ಒಂದೂವರೆ ಶತಮಾನದಷ್ಟು ದೀರ್ಘ ಇತಿಹಾಸವಿರುವ ಭಾರತೀಯ ಪವನ ವಿಜ್ಞಾನ ಇಲಾಖೆ ಅಥವಾ ಹವಾಮಾನ ಇಲಾಖೆಗೆ ಇದೀಗ ಇರಿಸುಮುರಿಸಿನ, ಮುಜುಗರದ ಸಮಯ. ಕೃಷಿ, ಕೈಗಾರಿಕೆ, ವಾಯುಯಾನ ಮುಂತಾದ ಹಲವಾರು ಕ್ಷೇತ್ರಗಳ ಸುಮಾರು 70 ಕೋಟಿ ಬಳಕೆದಾರರಿಗೆ ಹವಾಮಾನ ಮಾಹಿತಿ, ಮಳೆಯ ಮುನ್ಸೂಚನೆಗಳನ್ನು ಒದಗಿಸುತ್ತ ಬಂದಿರುವ ಈ ಇಲಾಖೆಯ ವಿರುದ್ಧ ಸಾರ್ವಜನಿಕ ಹಿತಾಸಕ್ತಿ ಮೊಕದ್ದಮೆಯನ್ನು ಹೂಡುವುದಾಗಿ ಮಧ್ಯಪ್ರದೇಶದ ಭಾರತೀಯ ಕಿಸಾನ್ ಸಂಘ ಹೇಳಿದೆ. ಇಲಾಖೆ ನೀಡಿದ ಮುನ್ಸೂಚನೆ ಅನುಸರಿಸಿ ಕೃಷಿಕಾರ್ಯ ಕೈಗೊಂಡಿದ್ದರಿಂದ ಅನುಭವಿಸಿದ ತೀವ್ರ ನಷ್ಟದಿಂದ ಬೇಸತ್ತ ರೈತ ಸಂಘಟನೆ ಈ ಕ್ರಮಕ್ಕೆ ಮುಂದಾಗಿದೆ.

ಈ ವರ್ಷದ ಮಾನ್ಸೂನ್ ಮಳೆಯ ಮುನ್ಸೂಚನೆ ನೀಡುವಾಗ, ಹವಾಮಾನ ಇಲಾಖೆಯು ಜೂನ್ 20ರ ವೇಳೆಗೆ ಮಧ್ಯಪ್ರದೇಶದಲ್ಲಿ ಮಳೆ ಪ್ರಾರಂಭವಾಗುವುದಾಗಿ ತಿಳಿಸಿತ್ತು. ಮಧ್ಯಪ್ರದೇಶದ ಮುಖ್ಯವಾದ ಮುಂಗಾರು ಬೆಳೆಗಳೆಂದರೆ ಸೋಯಾಬೀನ್ಸ್, ಮುಸುಕಿನ ಜೋಳ ಮತ್ತು ಬೇಳೆಕಾಳುಗಳು. ಇಲಾಖೆ ನೀಡಿದ ಮುನ್ಸೂಚನೆಯನ್ನು ಆಧರಿಸಿ ಜೂನ್ 20- 25ರ ನಡುವೆ, ಸುಮಾರು 50 ಲಕ್ಷ ಹೆಕ್ಟೇರ್‌ಗಳಲ್ಲಿ ಬಿತ್ತನೆಯ ಕಾರ್ಯ ನಡೆಯಿತು. ಆದರೆ ಆ ಮುನ್ಸೂಚನೆಯಂತೆ ಮಳೆ ಬರಲೇ ಇಲ್ಲ. ನೀಡಿದ ಮುನ್ಸೂಚನೆಯನ್ನು ಮಾರ್ಪಡಿಸಿದ ಇಲಾಖೆಯು ಜುಲೈ ತಿಂಗಳ 12-15 ಮತ್ತು 19-20ರ ನಡುವೆ ಮಳೆಯಾಗಲಿದೆಯೆಂದು ತಿಳಿಸಿತು. ಆದರೆ ಜುಲೈ 25ರವರೆಗೂ ಮಳೆಯಾಗಲಿಲ್ಲ. ಹೀಗಾಗಿ ಬಿತ್ತನೆ ಬೀಜದ ಕೊರತೆಯ ನಡುವೆಯೇ ದುಬಾರಿ ಹಣ ನೀಡಿ ಖರೀದಿಸಿದ್ದ ಬೀಜಗಳೆಲ್ಲ ಹಾಳಾದವು. ಒಟ್ಟಾರೆಯಾಗಿ ಶೇ 40ರಷ್ಟು ಮುಂಗಾರಿನ ಬೆಳೆಗಳು ಕೈತಪ್ಪಿದವೆಂದು ರೈತ ಸಂಘಟನೆ ತಿಳಿಸಿದೆ.

‘ಮಳೆಯ ಮುನ್ಸೂಚನೆ ಶೇ 90ರಿಂದ 100ರಷ್ಟು ಸರಿಯಾಗಿರಬೇಕೆಂದು ನಾವು ನಿರೀಕ್ಷಿಸುವುದಿಲ್ಲ. ಆದರೆ ಅದು ಶೇ 60-70ಕ್ಕೆ ಇಳಿದರೆ, ಮಳೆಯನ್ನೇ ನಂಬಿ ಕೃಷಿ ಕಸುಬು ಮಾಡುವ ನಮ್ಮ ಪಾಡೇನು’ ಎಂಬುದು ಕಿಸಾನ್ ಸಂಘಟನೆಯ ಕಳಕಳಿಯ ಪ್ರಶ್ನೆ. ಇದು, ಬರೀ ಮಧ್ಯಪ್ರದೇಶದ ಪರಿಸ್ಥಿತಿಯಲ್ಲ. ಹವಾಮಾನ ಇಲಾಖೆ ನೀಡಿದ ಮುನ್ಸೂಚನೆಯಂತೆ ಮಾನ್ಸೂನ್ ಮಳೆಯು ರಾಜಸ್ಥಾನ, ದೆಹಲಿ, ಹರಿಯಾಣ, ಪಂಜಾಬ್ ಮತ್ತು ಉತ್ತರ ಪ್ರದೇಶದ ಪಶ್ಚಿಮ ಭಾಗವನ್ನು ಜೂನ್ 13ರ ಸುಮಾರಿಗೆ ಪ್ರವೇಶಿಸಬೇಕಿತ್ತು. ಆದರೆ ಅದು ಪ್ರಾರಂಭವಾದದ್ದು ಜುಲೈ 13ರ ಸುಮಾರಿಗೆ, ಒಂದು ತಿಂಗಳು ತಡವಾಗಿ.

ಹವಾಮಾನ ಇಲಾಖೆಯು ದೀರ್ಘಾವಧಿ (ಒಂದು ತಿಂಗಳು ಅಥವಾ ಇಡೀ ಮಳೆಗಾಲದ ಅವಧಿ), ವಿಸ್ತರಿತ ಅವಧಿ (ಹತ್ತು ದಿನಗಳಿಂದ ಒಂದು ತಿಂಗಳು), ಅಲ್ಪಾವಧಿ (ಮುಂದಿನ ಮೂರು ದಿನಗಳವರೆಗೆ) ಮತ್ತು ಅಲ್ಪ- ಮಧ್ಯಮಾವಧಿ (3ರಿಂದ 5 ದಿನಗಳವರೆಗೆ) ಮುನ್ಸೂಚನೆಯನ್ನು ನೀಡುತ್ತದೆ. ದೀರ್ಘಾವಧಿ ಮತ್ತು ಅಲ್ಪ- ಮಧ್ಯಮಾವಧಿಯ ನಿಖರತೆ ಉತ್ತಮವಾಗಿದೆ ಎಂದು ಇಲಾಖೆಯ ಜಾಲತಾಣ ತಿಳಿಸುತ್ತದೆ. ಆದರೆ ವಿಸ್ತರಿತ ಅವಧಿಯ ಮುನ್ಸೂಚನೆ ಸಮಸ್ಯಾತ್ಮಕವಾಗಿದ್ದು ಇಲಾಖೆಯ ಚಿಂತೆಗೆ ಕಾರಣವಾಗಿದೆ. ಈ ವಿಸ್ತರಿತ ಅವಧಿಯ ಮುನ್ಸೂಚನೆಯೇ ಎಲ್ಲ ಬಳಕೆದಾರರಿಗೆ ಅಗತ್ಯವಾಗಿ ಬೇಕಿರುವುದರಿಂದ, ಅದರಲ್ಲಾಗುವ ತಪ್ಪು ಇಲಾಖೆಗೆ ಮುಜುಗರ ಉಂಟುಮಾಡುತ್ತದೆ.

ನೈರುತ್ಯ ಮಳೆಯ ಮಾರುತದ ಮುನ್ಸೂಚನೆಯನ್ನು ನೀಡಲು ಹವಾಮಾನ ಇಲಾಖೆಯು 2017ರಿಂದ ‘ಮಾನ್ಸೂನ್ ಮಿಶನ್ ಕಪಲ್ಡ್ ಫೋರ್‌ಕಾಸ್ಟಿಂಗ್ ಸಿಸ್ಟಮ್’ ಎಂಬ ಮಾದರಿಯನ್ನು ಬಳಸುತ್ತಿದೆ. 1988- 2016ರ ನಡುವೆ, ದೀರ್ಘಾವಧಿ ಮುನ್ಸೂಚನೆ ಮತ್ತು ವಾಸ್ತವಿಕ ಮಳೆಯ ನಡುವೆ ಶೇ 7ರಷ್ಟು ವ್ಯತ್ಯಾಸವಿದ್ದರೆ, 2017ರಲ್ಲಿ ಉನ್ನತೀಕರಿಸಿದ ಹೊಸ ಮಾದರಿಯ ಬಳಕೆ ಪ್ರಾರಂಭವಾದ ನಂತರ ಈ ವ್ಯತ್ಯಾಸ ಶೇ 8ಕ್ಕೆ ಏರಿದೆ ಎಂಬುದು ತಜ್ಞರ ಅಭಿಪ್ರಾಯ.

ಮಾನ್ಸೂನ್ ಮಳೆಯ ಮುನ್ಸೂಚನೆಗೆ ಬಳಕೆಯಾಗುತ್ತಿರುವ ತಂತ್ರಜ್ಞಾನ ನಿರಂತರವಾಗಿ ಸುಧಾರಿಸುತ್ತಿದೆ. ಆದರೆ ಮಾನ್ಸೂನ್ ಸ್ವರೂಪ ಬದಲಾಗುತ್ತಿರುವ ವೇಗದಲ್ಲಿ ತಂತ್ರಜ್ಞಾನದ ಉನ್ನತೀಕರಣ ಸಾಧ್ಯವಾಗುತ್ತಿಲ್ಲ. ಈಗ ಬಳಕೆಯಾಗುತ್ತಿರುವ ಮಾದರಿಯಲ್ಲಿ ಉಳಿದವುಗಳಿಗಿಂತ ಹೆಚ್ಚಿನ ಹವಾಕಾರಕ ಅಂಶಗಳನ್ನು ಅಳವಡಿಸಿಕೊಳ್ಳಲು ಅವಕಾಶವಿದೆ. ಆದರೆ ಸ್ಥಳೀಯವಾಗಿ ರೂಪುಗೊಳ್ಳುವ ಚಂಡಮಾರುತ, ಒತ್ತಡ ಕುಸಿತ ಮುಂತಾದ ತಾತ್ಕಾಲಿಕ ಹವಾ ವಿದ್ಯಮಾನಗಳನ್ನು ಕಡೆಯ ಗಳಿಗೆಯಲ್ಲಿ ಈ ಮಾದರಿಯಲ್ಲಿ ಸೇರಿಸಲು ಸಾಧ್ಯವಾಗಿಲ್ಲ. ಹೀಗಾದಾಗ ಈ ವಿದ್ಯಮಾನಗಳ ಪರಿಣಾಮವನ್ನು ವೈಜ್ಞಾನಿಕ ವಿಧಾನಗಳಿಗಿಂತ ಹೆಚ್ಚಾಗಿ, ಹಿಂದಿನ ಅನುಭವಗಳ ಆಧಾರದ ಮೇಲೆ ನಿರ್ಧರಿಸುವುದರಿಂದ ಮುನ್ಸೂಚನೆಯಲ್ಲಿ ಏರುಪೇರಾಗುತ್ತದೆ ಎಂಬುದು ಹವಾಮಾನ ಇಲಾಖೆಯ ಅಳಲು.

ಐತಿಹಾಸಿಕವಾಗಿ ಮಳೆಗಾಲದ ಪ್ರಾರಂಭದಲ್ಲೇ ಚಂಡಮಾರುತಗಳು ಕಾಣಿಸಿಕೊಳ್ಳುವುದು ಬಹಳ ಅಪರೂಪ. ಆದರೆ ಈ ನಮೂನೆ ಕಳೆದ ಮೂರು ವರ್ಷಗಳಿಂದ ಸಂಪೂರ್ಣವಾಗಿ ಬದಲಾಗುತ್ತಿದೆ. 2019ರಲ್ಲಿ ‘ವಾಯು’ ಚಂಡಮಾರುತ, 2020ರಲ್ಲಿ ಬಂಗಾಳ ಕೊಲ್ಲಿಯಲ್ಲಿ ‘ಅಂಪನ್’ ಮತ್ತು ಅರಬ್ಬಿ ಸಮುದ್ರದಲ್ಲಿ ‘ನಿಸರ್ಗ’ ಚಂಡಮಾರುತಗಳು ಮಾನ್ಸೂನ್ ಮಳೆಗಾಲದ ಪ್ರಾರಂಭದಲ್ಲೇ ಕಾಣಿಸಿಕೊಂಡಿದ್ದವು. ಈ ವರ್ಷ ಒಂದರ ಹಿಂದೆ ಒಂದರಂತೆ, ಅರಬ್ಬಿ ಸಮುದ್ರದಲ್ಲಿ ‘ತೌಕ್ತೆ’ ಮತ್ತು ಬಂಗಾಳ ಕೊಲ್ಲಿಯಲ್ಲಿ ‘ಯಾಸ್’ ಚಂಡಮಾರುತಗಳು ರೂಪುಗೊಂಡು ಮುನ್ಸೂಚನೆಯಲ್ಲಿ ವ್ಯತ್ಯಯ ಉಂಟಾಗಲು ಕಾರಣವಾಗಿರಬಹುದೆಂಬ ಚಿಂತನೆ ನಡೆದಿದೆ.



ಜಾಗತಿಕ ತಾಪಮಾನದ ಏರಿಕೆಯಿಂದ ಸಾಗರದ ನೀರಿನ ಮೇಲ್ಮೈ ಉಷ್ಣತೆ ಹೆಚ್ಚುತ್ತಿದೆ. ಆದರೆ ಈ ಏರಿಕೆ ಮತ್ತು ಮಾನ್ಸೂನ್ ಮಾರುತ ವ್ಯವಸ್ಥೆಯ ನಡುವಿನ ಸಂಬಂಧ ವಿಜ್ಞಾನಿಗಳಿಗೆ ಸ್ಪಷ್ಟವಾಗಿ ಅರ್ಥವಾಗಿಲ್ಲ. ಈ ಕೊರತೆ ನೀಗಬೇಕಾದರೆ ವಾಯುಮಂಡಲ, ಸಾಗರದ ನೀರಿನ ಮೇಲ್ಮೈಗಳ ನಡುವಿನ ಸೀಮಾರೇಖೆ ಮತ್ತು ವಾಯುಮಂಡಲದ ಉನ್ನತ ಪದರಗಳ ಪರಿಸ್ಥಿತಿಗೆ ಸಂಬಂಧಿಸಿದಂತೆ ಹೆಚ್ಚಿನ ದತ್ತಾಂಶ ಅಗತ್ಯ.

ಜಾಗತಿಕ ವಾಯುಗುಣ ಬದಲಾವಣೆಯಿಂದ ಹವಾಮಾನದ ‘ತೀವ್ರ ವೈಪರೀತ್ಯ’ (ಎಕ್ಸ್‌ಟ್ರೀಮ್ ಈವೆಂಟ್ಸ್) ವಿದ್ಯಮಾನಗಳ ಸಂಖ್ಯೆ ಏರುತ್ತಿದ್ದು ಮುನ್ಸೂಚನೆಯ ನಿಖರತೆಯ ಮೇಲೆ ಪ್ರಭಾವ ಬೀರುತ್ತಿವೆ. ಜುಲೈ 19ರಂದು ಒಂದೇ ದಿನ ಮುಂಬೈನಲ್ಲಿ ಸುರಿದ ಮಳೆಯಿಂದ 30 ಮಂದಿ ಸಾವಿಗೀಡಾಗಿದ್ದರೆ, ರಾಜಸ್ಥಾನದಲ್ಲಿ ಒಂದೇ ದಿನ 38 ಮಂದಿ ಸಿಡಿಲಿಗೆ ಬಲಿಯಾಗಿದ್ದಾರೆ. ಜುಲೈ ತಿಂಗಳ ಮೊದಲ 19 ದಿನಗಳಲ್ಲಿ ಪ್ರಪಂಚದ 32 ದೇಶಗಳಲ್ಲಿ 50 ತೀವ್ರ ವೈಪರೀತ್ಯದ ಹವಾ ವಿದ್ಯಮಾನಗಳು ಸಂಭವಿಸಿವೆ. ಇದರಲ್ಲಿ 8 ವಿದ್ಯಮಾನಗಳಿಂದ ಭಾರತ ಎರಡನೆಯ ಸ್ಥಾನದಲ್ಲಿದೆ. ಕೃತಕ ಬುದ್ಧಿಮತ್ತೆ ಮತ್ತು ಮಶೀನ್ ಲರ್ನಿಂಗ್ ಕ್ಷೇತ್ರಗಳಲ್ಲಿ ನಡೆದಿರುವ ಮಹತ್ವದ ಬೆಳವಣಿಗೆಗಳಿಂದ ತೀವ್ರ ವೈಪರೀತ್ಯದ ಪರಿಸ್ಥಿತಿಯಲ್ಲೂ ಮುನ್ಸೂಚನೆಯ ನಿಖರತೆಯನ್ನು ಕಾಯ್ದುಕೊಳ್ಳುವುದು ಸಾಧ್ಯವಾಗಬಹುದೆಂಬ ನಿರೀಕ್ಷೆಯಿದೆ.

ಈ ಎಲ್ಲವೂ ಸರಿ. ಆದರೆ ಇದರಿಂದ ಕೃಷಿಕರು ಎದುರಿಸುತ್ತಿರುವ ವಿಫಲವಾದ ಮುನ್ಸೂಚನೆಯ ಪರಿಣಾಮಗಳು ಮಾತ್ರ ತಪ್ಪುವುದಿಲ್ಲ. ಕಿಸಾನ್ ಸಂಘವು ಸಾರ್ವಜನಿಕ ಹಿತಾಸಕ್ತಿ ಮೊಕದ್ದಮೆ ದಾಖಲಿಸಿದರೂ, ಭಾರತೀಯ ಪವನ ವಿಜ್ಞಾನ ಇಲಾಖೆ ತನಗಿರುವ ಇತಿಮಿತಿಗಳಲ್ಲೇ ತಾನು ನಡೆಸುತ್ತಿರುವ ಪ್ರಾಮಾಣಿಕ ಪ್ರಯತ್ನಗಳ ವಿವರಗಳನ್ನು ನ್ಯಾಯಾಲಯದ ಮುಂದೆ ಇಡುತ್ತದೆ. ಅಂತಹ ಪರಿಸ್ಥಿತಿಯಲ್ಲಿ ಇಲಾಖೆಯ ಪ್ರಯತ್ನಗಳನ್ನು ಮತ್ತಷ್ಟು ಬಲಗೊಳಿಸಲು ಅಗತ್ಯವಾದ ಸಂಪನ್ಮೂಲಗಳನ್ನು ಒದಗಿಸುವಂತೆ ಸರ್ಕಾರಕ್ಕೆ ನ್ಯಾಯಾಲಯ ಸೂಚನೆ ನೀಡಬಹುದು. ಇಲಾಖೆಯ ದೃಷ್ಟಿಯಿಂದಲೂ ಅದು ಸ್ವಾಗತಾರ್ಹ. ಮಳೆಯ ಮುನ್ಸೂಚನೆಯ ನಿಖರತೆ ಉತ್ತಮಗೊಳ್ಳುವವರೆಗೂ ಬೆಳೆ ವಿಮೆಯ ಸೌಲಭ್ಯವನ್ನು ಕಡ್ಡಾಯವಾಗಿ ಬಳಸಿಕೊಂಡು, ಕೈಕೊಟ್ಟ ಮಳೆಯಿಂದಾದ ನಷ್ಟವನ್ನು ತುಂಬಿಕೊಳ್ಳುವುದು ರೈತರ ಮುಂದಿರುವ ಒಂದು ಮಾರ್ಗ.

1972ರಿಂದಲೇ ನಮ್ಮ ದೇಶದಲ್ಲಿ ಬೆಳೆ ವಿಮಾ ಯೋಜನೆ ಅಸ್ತಿತ್ವದಲ್ಲಿದ್ದು, 2016ರಿಂದ ಅನೇಕ ಮಹತ್ವದ ಬದಲಾವಣೆಗಳು ಬಂದಿದ್ದರೂ ಪಾರದರ್ಶಕತೆಯ ಕೊರತೆ, ದುಬಾರಿ ಪ್ರೀಮಿಯಮ್, ಬೆಳೆ ನಷ್ಟದ ಸಂದರ್ಭದಲ್ಲಿ ಪರಿಶೀಲನೆ, ಪರಿಹಾರ ನೀಡುವುದರಲ್ಲಿ ಆಗುತ್ತಿರುವ ವಿಳಂಬ ಮುಂತಾದ ಸಮಸ್ಯೆಗಳನ್ನು ತ್ವರಿತಗತಿಯಲ್ಲಿ ಬಗೆಹರಿಸಿದರೆ, ಹವಾ ಮುನ್ಸೂಚನೆಯಲ್ಲಿನ ಏರುಪೇರುಗಳಿಂದಾಗುವ ತೊಂದರೆಗಳನ್ನು ಕಡಿಮೆ ಮಾಡಬಹುದು.

ಚುರುಮುರಿ



ತಿಂದಿದ್ದು ಸಾಕು?

• ಆನಂದ

‘ತಿಂದಿದ್ದು ಸಾಕು, ಕೆಲಸ ಮಾಡಿ’ ಎಂದು ಸೋಮಣ್ಣನವರು ಕರೆ ಕೊಟ್ಟಿರುವುದನ್ನು ಪೇಪರ್ ನೋಡಿ ಹೆಂಡತಿಗೆ ಹೇಳಿದೆ. ‘ಕರೇನೋ ವಾರ್ನಿಂಗೋ?’ ಎಂದ ಹೆಂಡತಿ ‘ಅದ್ಸರಿ, ಅವರು ಯಾರಿಗೆ ಹೇಳಿದ್ದು, ಮಂತ್ರಿಮಂಡಲದ ಸಹೋದ್ಯೋಗಿಗಳಿಗೆ ತಾನೆ?’ ಎಂದು ಸಪ್ಲಿಮೆಂಟರಿ ಕ್ವೆಶ್ಚನ್ ಹಾಕಿದಳು.

‘ಶಾಂತಂ ಪಾಪಂ. ಅವರು ಹೇಳಿದ್ದು ಸರ್ಕಾರಿ ನೌಕರರಿಗೆ’ ಎಂದು ಸ್ಪಷ್ಟೀಕರಣ ನೀಡಿದೆ.

‘ಅಂದ್ರೆ ಎಲ್ಲ ಸರ್ಕಾರಿ ನೌಕರರು ಈಗ ತಿಂದಿರುವುದು ಸಾಕು ಎಂದು ಅವರ ಅಭಿಪ್ರಾಯವೋ?’ ಎಂದು ಕೇಳಿದಳು. ‘ಅವರು ಒಂದಿಷ್ಟು ಸರ್ಕಾರಿ ನೌಕರರ ಬಗ್ಗೆ ಮಾತ್ರ ಹೇಳಿದ್ದು’ ಎಂದು ಇನ್ನೊಮ್ಮೆ ಕ್ಲಾರಿಫೈ ಮಾಡಿದೆ.

‘ಹಾಗಿದ್ದರೆ ಅವರು ಮಾತ್ರ ಸಾಕಷ್ಟು ತಿಂದಿದ್ದಾರೆ ಎಂದು ಸೋಮಣ್ಣನವರಿಗೆ ಹೇಗೆ ಗೊತ್ತು? ಲೆಕ್ಕ ಇಟ್ಟಿದ್ದಾರೆಯೆ?’ ಎಂದು ಬಾಣ ಬಿಟ್ಟಳು. ‘ಅಂದಾಜು ಮೇಲೆ ಹೇಳ್ತಿರ್ತಾರೆ...’ ಎಂದು ಸಮಾಧಾನ ಮಾಡಲು ನೋಡಿದೆ.

‘ಅದ್ಹೇಗ್ರೀ ಅಂದಾಜು ಮಾಡಲಿಕ್ಕೆ ಆಗುತ್ತೆ? ಇದೇನು ಕಟ್ಟಡ ನಿರ್ಮಾಣ ಕಾರ್ಯವೇ ಅಂದಾಜು ಮಾಡಲಿಕ್ಕೆ?’ ಎಂದು ಟಿ.ಎನ್. ಸೀತಾರಾಂ ತರಹ ಪಾಟೀಸವಾಲು ಹಾಕಿದಳು.

‘ಮತ್ತೆ ನಿನ್ನ ಪಾಯಿಂಟ್ ಏನು?’ ಎಂದೆ.

‘ಅಲ್ರೀ ಸೋಮಣ್ಣನವರು ಉದ್ದೇಶಿಸಿ ಹೇಳಿದ್ದ ನೌಕರರಿಗೆ ಇನ್ನೂ ತೃಪ್ತಿ ಆಗಿಲ್ಲದಿರಬಹುದು. ಆದರೆ ತಿಂದಿದ್ದು ಸಾಕು ಎಂದು ಇವರೇ ಅವರ ಇನಿಂಗ್ಸ್ ಕ್ಲೋಸ್ ಮಾಡಲಿಕ್ಕೆ ಹೊರಟಿದ್ದಾರೆ. ಅವರು ಬ್ಯಾಟಿಂಗ್ ಮುಂದುವರಿಸಲು ಪ್ಲಾನ್ ಹಾಕಿಕೊಂಡಿದ್ದಾರೋ ಏನೋ?’

‘ಇರಬಹುದು’ ಎಂದು ಒಪ್ಪಿಕೊಂಡೆ.

‘ಮತ್ತೆ ತಿಂದಿದ್ದು ಸಾಕು ಎಂದು ಸೋಮಣ್ಣನವರು ಹೇಗೆ ಹೇಳ್ತಾರೆ?’ ಎಂದು ಕೇಳಿದಳು. ಶಿ ಹ್ಯಾಸ್ ಎ ಪಾಯಿಂಟ್ ಎಂದೆನಿಸಿತು.

‘ಮತ್ತೆ ಸೋಮಣ್ಣ ಅವರು ಆ ಪಾರ್ಟಿ ಈ ಪಾರ್ಟಿ ಮಂದಿ ತಿನ್ನುವುದರ ಬಗ್ಗೆ ಏಕೆ ಮಾತನಾಡಬಾರದು?’ ಎಂದು ಕೇಳಿದಳು.

‘ಆದರೆ ಆ ಮಂದಿ ಎಷ್ಟು ತಿಂದರೆ ‘ಸಾಕಷ್ಟು’ ಎಂದು ಎಸ್ಟಿಮೇಟ್ ಮಾಡುವುದು ಕಷ್ಟ ಎನ್ನುವ ಕಾರಣಕ್ಕೆ ಇರಬಹುದು’ ಎಂದೆ. ‘ಪರವಾಗಿಲ್ಲವೇ, ನೀವೂ ಒಮ್ಮೊಮ್ಮೆ ಸರಿಯಾಗಿ ಮಾತಾಡ್ತೀರ’ ಎಂದಳು. ಭೇಷ್ ಎಂದುಕೊಂಡೆ.

ಸಂಗತ

ಭಾಷೆ: ‘ವ್ಯವಹಾರ’ದ ನಂಟಷ್ಟೇ ಸಾಕೆ?

ಜ್ಞಾನ ಸೃಷ್ಟಿಯಲ್ಲಿ ಭಾಷೆಗಳ ಮಹತ್ವವನ್ನು ನಾವು ಅರಿಯಬೇಕಿದೆ

• ಡಾ. ಜ್ಯೋತಿ

ಪ್ರಸಕ್ತ ಶೈಕ್ಷಣಿಕ ವರ್ಷದಲ್ಲಿ, ಮೊದಲ ಸೆಮಿಸ್ಟರಿನ ಪದವಿ ತರಗತಿಗಳಿಗೆ ಹೊಸ ರಾಷ್ಟ್ರೀಯ ಶಿಕ್ಷಣ ನೀತಿಗೆ ಅನುಸಾರವಾಗಿ ರಾಜ್ಯದಲ್ಲಿ ಪಠ್ಯಕ್ರಮಗಳು ಭರದಿಂದ ಸಿದ್ಧವಾಗುತ್ತಿವೆ. ಆದರೆ, ನಾವಿಲ್ಲಿ ಭಾಷೆಗಳನ್ನು ಅಳವಡಿಸುವ ವಿಚಾರದಲ್ಲಿ ಎರಡು ಪೂರ್ವಗ್ರಹಗಳನ್ನು ಸ್ಪಷ್ಟವಾಗಿ ಗುರುತಿಸಬಹುದು.

ಮೊದಲನೆಯದಾಗಿ, ಮೊದಲ ಎರಡು ವರ್ಷದ ಪಠ್ಯಕ್ರಮದಲ್ಲಿ ಕನ್ನಡವನ್ನು ಕಡ್ಡಾಯಗೊಳಿಸಿರುವುದು ಸ್ವಾಗತಾರ್ಹ ಕ್ರಮ. ಆದರೆ, ಇಲ್ಲಿಯವರೆಗೆ ಕಡ್ಡಾಯವಾಗಿದ್ದ ಇಂಗ್ಲಿಷ್ ಭಾಷೆಯನ್ನು ಒಂದು ಆಯ್ಕೆಯ ಭಾಷೆಯಾಗಿಯಷ್ಟೇ ಪರಿಗಣಿಸಿರುವುದು, ದೂರದೃಷ್ಟಿಯ ಕೊರತೆಯನ್ನು ಸೂಚಿಸುತ್ತದೆ.

ಎರಡನೆಯದಾಗಿ, ಎಲ್ಲ ಭಾಷೆಗಳ ವಿಚಾರದಲ್ಲಿ ಗಮನಿಸುವುದಾದರೆ, ಹೊಸ ಪಠ್ಯಕ್ರಮದಲ್ಲಿ ಭಾಷೆಯನ್ನು ಒಂದು ಜ್ಞಾನವಾಗಿ ಪರಿಗಣಿಸದೆ, ಕೇವಲ ದೈನಂದಿನ ವ್ಯವಹಾರಕ್ಕೆ ಅಗತ್ಯವಾದ ಸಂವಹನ ಕಲೆಯನ್ನು ಉದ್ದೀಪಿಸಲು ಬೇಕಾದ ವಿಷಯವಾಗಿ ಸರಳೀಕರಿಸಿರುವುದನ್ನು ಕಾಣಬಹುದು.

ಹೊಸ ಶಿಕ್ಷಣ ನೀತಿಗೆ ರಾಜ್ಯದಲ್ಲಿ ಹೆಚ್ಚಿನ ಪ್ರತಿಭಟನೆ ಬಂದಿರುವುದು ಕನ್ನಡ ವಿಭಾಗಗಳಿಂದ. ಹಾಗಾಗಿ, ಕನ್ನಡವನ್ನು ಕಡ್ಡಾಯಗೊಳಿಸಿದರೆ ಶಿಕ್ಷಣ ನೀತಿಯನ್ನು ಜಾರಿಗೆ ತರಲು ಸುಲಭವಾಗುತ್ತದೆ ಎನ್ನುವ ದೂರಾಲೋಚನೆ ಸಹಜ. ಆದರೆ, ಇದನ್ನು ಇಂಗ್ಲಿಷ್ ಮತ್ತು ಕನ್ನಡದ ನಡುವಿನ ಭಾಷೆಗಳ ತಿಕ್ಕಾಟಕ್ಕೆ ಸೀಮಿತಗೊಳಿಸದೆ ಸೂಕ್ಷ್ಮವಾಗಿ ಗಮನಿಸಿದರೆ, ಇಂಗ್ಲಿಷ್ ಅನ್ನು ಒಂದು ಆಯ್ಕೆಯ ಭಾಷೆಯನ್ನಾಗಿ ಪರಿಮಿತಿಗೊಳಿಸುವುದರಿಂದ ಮುಂದೆ ನಾವು ಬಹಳಷ್ಟು ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ ಎಂಬುದು ತಿಳಿಯುತ್ತದೆ.

ವಿಶೇಷವಾಗಿ, ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳು, ಇಲ್ಲಿಯವರೆಗೆ ಕಬ್ಬಿಣದ ಕಡಲೆಯಂತೆ ಕಾಣುತ್ತಿದ್ದ ಇಂಗ್ಲಿಷನ್ನು ಸಂಪೂರ್ಣವಾಗಿ ತ್ಯಜಿಸಿಬಿಡಬಹುದು. ನಗರಗಳ ಇಂಗ್ಲಿಷ್ ಮಾಧ್ಯಮ ವಿದ್ಯಾರ್ಥಿಗಳು, ನಮಗೆ ಹೇಗೂ ಇಂಗ್ಲಿಷ್ ಗೊತ್ತಿದೆ, ಬೇರೆ ಭಾಷೆ ಆಯ್ಕೆ ಮಾಡೋಣವೆಂದು ನಿರ್ಧರಿಸಬಹುದು. ಇದರಿಂದಾಗಿ, ನಿಧಾನವಾಗಿ ಇಂಗ್ಲಿಷ್ ಭಾಷಾ ವಿಭಾಗಗಳು ಮುಚ್ಚಿಹೋಗುವ ಸಾಧ್ಯತೆಯಿದೆ. ಆದರೆ, ಇದು ಕೇವಲ ಇಂಗ್ಲಿಷ್ ವಿಭಾಗದ ಅಸ್ತಿತ್ವದ ಪ್ರಶ್ನೆಯಲ್ಲ. ಇಲ್ಲಿಯವರೆಗೆ, ಇಷ್ಟವಿದ್ದೋ ಇಲ್ಲದೆಯೋ ಇಂಗ್ಲಿಷ್ ಅನ್ನು ಕಡ್ಡಾಯವಾಗಿ ಓದಿದ ವಿದ್ಯಾರ್ಥಿಗಳಿಗೆ ಅದರಿಂದ ಏನೂ ಉಪಯೋಗವಾಗಿಲ್ಲವೇ? ಜಾಗತಿಕ ಭಾಷೆಯಾಗಿರುವ ಇಂಗ್ಲಿಷನ್ನು ಕಷ್ಟವೆಂದು ಪರಿಗಣಿಸಿ ದೂರವಿರಿಸಿದರೆ, ನಷ್ಟ ಯಾರಿಗೆ?

ಇಂಗ್ಲಿಷ್ ಭಾಷೆಯು ಶಿಕ್ಷಣ ಮಾಧ್ಯಮವಾಗಬೇಕಾದ ಅಗತ್ಯವಿಲ್ಲ, ನಿಜ. ಆದರೆ, ಕನ್ನಡದ ಭಾಷೆ ಮತ್ತು ಸಾಹಿತ್ಯದ ಬೆಳವಣಿಗೆಗೆ ಇಂಗ್ಲಿಷ್ ಯಾವತ್ತೂ ಪೂರಕವಾಗಿಯೇ ಕೆಲಸ ಮಾಡಿದೆ. ಕನ್ನಡದ ಸಾಹಿತ್ಯ ಪ್ರಕಾರಗಳಿಗೆ, ವಿಮರ್ಶೆಗೆ, ಚಿಂತನ ಕ್ರಮಕ್ಕೆ ಇಂಗ್ಲಿಷಿನ ಕೊಡುಗೆಯನ್ನು ಅಲ್ಲಗಳೆಯುವಂತಿಲ್ಲ. ನಮ್ಮಲ್ಲಿ ಸಾಹಿತ್ಯ ಕೃಷಿ ಮಾಡುತ್ತಿರುವ ಹೆಚ್ಚಿನ ವಿದ್ವಾಂಸರು ಶೇಕ್ಸ್‌ಪಿಯರ್, ವರ್ಡ್ಸ್‌ವರ್ತ್, ಟಾಲ್‌ಸ್ಟಾಯ್ ಮುಂತಾದ ಸಾಹಿತಿಗಳಿಂದ ಗಾಢವಾಗಿ ಪ್ರಭಾವಿತರಾಗಿರುವುದನ್ನು ಉಲ್ಲೇಖಿಸುತ್ತಾರೆ. ಜೊತೆಗೆ, ಜಗತ್ತಿನ ಸಾಹಿತ್ಯ ಮತ್ತು ಜ್ಞಾನ ನಮಗೆ ಲಭ್ಯವಾಗುತ್ತಿರುವುದು ಇಂಗ್ಲಿಷಿನ ಮೂಲಕ. ಹಾಗಾಗಿ, ಅದನ್ನೊಂದು ಆಯ್ಕೆಯನ್ನಾಗಿಸುವುದೆಂದರೆ, ನಮ್ಮ ವಿದ್ಯಾರ್ಥಿಗಳ ಜ್ಞಾನ ವಿಕಸನವನ್ನು ಸೀಮಿತಗೊಳಿಸಿದಂತೆಯೇ.

ಹಾಗಾಗಿ, ಇಂಗ್ಲಿಷನ್ನು ಕೂಡ ಕನ್ನಡದಂತೆ ಕಡ್ಡಾಯ ಭಾಷೆಯಾಗಿ ಕಲಿಯುವುದು ವಿದ್ಯಾರ್ಥಿಗಳ ಭವಿಷ್ಯದ ದೃಷ್ಟಿಯಿಂದ ಹಿತ. ಅದರಂತೆ, ಭಾಷೆಯನ್ನು ಕೇವಲ ಎರಡು ವರ್ಷಕ್ಕಷ್ಟೇ ಸೀಮಿತಗೊಳಿಸದೆ, ಎಲ್ಲ ಹಂತದಲ್ಲೂ ಕಡ್ಡಾಯಗೊಳಿಸುವುದು ವರ್ತಮಾನದ ಸಮಾಜದಲ್ಲಿ ಬಹಳ ಅಗತ್ಯ, ವಿದ್ಯಾರ್ಥಿಯ ಪರಿಪೂರ್ಣ ವ್ಯಕ್ತಿತ್ವ ವಿಕಸನಕ್ಕೆ ಪೂರಕ. ಯಾಕೆಂದರೆ ಪ್ರಸಕ್ತ, ಹೆಚ್ಚಿನ ಮನೆಗಳಲ್ಲಿ ಮಕ್ಕಳಿಗೆ ಹಿತವಚನದ ಮೂಲಕ ಬದುಕುವ ಕಲೆಯನ್ನು ಕಲಿಸುವ ಹಿರಿಯರು ಇಲ್ಲದಿರುವಾಗ, ಹೆತ್ತವರು ಉದ್ಯೋಗನಿಮಿತ್ತ ಬ್ಯುಸಿಯಾಗಿರುವಾಗ, ಅಧ್ಯಾಪಕರು ಸಿಲೆಬಸ್ ಮುಗಿಸುವ ತರಾತುರಿಯಲ್ಲಿರುವಾಗ, ಸುಲಭವಾಗಿ ಕೈಗೆ ಸಿಗುವ ಅಂತರ್ಜಾಲ ಪ್ರಪಂಚ ಎಳೆ ಮನಸ್ಸುಗಳಲ್ಲಿ ಗೊಂದಲ ಸೃಷ್ಟಿಸುತ್ತಿರುವಾಗ, ಭಾಷೆಗಳ ಮೂಲಕ ಸಿಗುವ ಶ್ರೇಷ್ಠ ಸಾಹಿತ್ಯವೊಂದೇ ಮಕ್ಕಳಿಗೆ ದಾರಿದೀಪವಾಗಬಲ್ಲುದು, ಪರಿಪೂರ್ಣವಾಗಿ ಬದುಕಲು ತಿಳಿಹೇಳಬಲ್ಲುದು.



ಆದರೆ, ಭಾಷಾ ಕಲಿಕೆಯನ್ನು ನಾವು ಕೇವಲ ಸಂವಹನ ಮಾಧ್ಯಮದ ಸ್ಥಾನಕ್ಕೆ ತಂದಿರಿಸಿದ್ದೇವೆ. ಇಂಗ್ಲಿಷ್‌ನಿಂದ ಮೊದಲ್ಗೊಂಡು ಕನ್ನಡದಲ್ಲೂ ಸಾಹಿತ್ಯವನ್ನು ಕಡೆಗಣಿಸಿ, ಕೇವಲ ವ್ಯವಹಾರದ ಮಾತುಕತೆಗೆ ಬೇಕಾಗುವಷ್ಟು ಭಾಷೆಯನ್ನು ಕಲಿಸುವ ಪಠ್ಯಕ್ರಮಗಳ ಅಳವಡಿಕೆ ಹೆಚ್ಚಾಗುತ್ತಿದೆ. ಹೀಗಾಗಿ, ಭಾಷೆಯನ್ನು ಪ್ರೆಸೆಂಟೇಷನ್ ಕೊಡುವುದು, ಇ-ಮೇಲ್ ಮಾಡುವುದು ಅಥವಾ ರಿಪೋರ್ಟ್ ಬರೆಯುವಂತಹ ಕೌಶಲಗಳನ್ನು ಸಿದ್ಧಿಸಿಕೊಳ್ಳುವುದಕ್ಕಷ್ಟೇ ಸೀಮಿತಗೊಳಿಸುತ್ತಿದ್ದೇವೆ.

ಭಾಷೆಯನ್ನು ಇಷ್ಟು ಸುಲಭವಾಗಿ ಸರಳೀಕರಿಸಲು ಬರುವುದಿಲ್ಲ. ಯಾವುದೇ ಭಾಷೆಯಲ್ಲಿರುವ ಪ್ರತೀ ಶಬ್ದಕ್ಕೂ ಒಂದು ಹಿನ್ನೆಲೆಯಿದೆ, ಕಥೆಯಿದೆ, ಇತಿಹಾಸವಿದೆ, ಸಂಸ್ಕೃತಿಯಿದೆ. ವಾಕ್ಯಕ್ಕೆ ಅನುಸಾರವಾಗಿ ವಿಭಿನ್ನ ಅರ್ಥಗಳಿವೆ. ಇಂತಹ ಸೊಗಸಿನ ಭಾಷೆಯೊಂದನ್ನು, ಕೇವಲ ನಮ್ಮ ವ್ಯವಹಾರಕ್ಕೆ ಅನುಸಾರವಾಗಿ ಒಣ ವಾಕ್ಯ ಪ್ರಯೋಗಗಳ ಮೂಲಕ ಮುಂದಿನ ಪೀಳಿಗೆಗಳಿಗೆ ತಲುಪಿಸುವುದೆಂದರೆ, ಭಾಷೆಗಳಿಗೆ ಮಾಡುವ ದೊಡ್ಡ ಅಗೌರವವೇ ಸರಿ.

ಪ್ರಸಕ್ತ, ನಮ್ಮ ಹೆಚ್ಚಿನ ಮಾನವೀಯ ಸಂಬಂಧಗಳನ್ನು ತಕ್ಷಣದ ಲಾಭ- ನಷ್ಟದ ದೃಷ್ಟಿಯಿಂದ ನೋಡುತ್ತಿರುವುದರಿಂದ, ಭಾಷೆಗಳನ್ನಾದರೂ ಈ ವ್ಯವಹಾರದಿಂದ ದೂರವಿಡುವುದು ಬಹಳ ಅಗತ್ಯ. ವಿಶೇಷವಾಗಿ, ಈ ಹೊಸ ಶಿಕ್ಷಣ ನೀತಿ ಮುಂದಿನ ಪೀಳಿಗೆಗಳನ್ನು ರೂಪಿಸಲಿರುವುದರಿಂದ, ಭಾಷೆಗಳ ಜ್ಞಾನಸಂಪತ್ತಿನಿಂದ ಸಿಗುವ ದಾರಿದೀಪವು ಭವಿಷ್ಯದತ್ತ ದೃಢ ಹೆಜ್ಜೆಯಿಡಲು ಅವರಿಗೆ ಬಹಳ ಸಹಾಯಕ.

ವಾಚಕರ ವಾಣಿ

ಉಳಿದ ತರಗತಿಗಳೂ ಆರಂಭಗೊಳ್ಳಲಿ

ಒಂಬತ್ತರಿಂದ ಹನ್ನೆರಡನೆಯ ತರಗತಿವರೆಗಿನ ಶಾಲಾ ಕಾಲೇಜುಗಳನ್ನು ಆರಂಭಿಸಿ ಸರ್ಕಾರ ಸೂಕ್ತ ನಿರ್ಧಾರವನ್ನೇ ತೆಗೆದುಕೊಂಡಿದೆ. ಕೊರೊನಾ ಪರಿಣಾಮದಿಂದ ದಿಕ್ಕು ತೋರದಂತಾಗಿದ್ದ ಹೆಚ್ಚಿನ ಮಕ್ಕಳು, ಶಿಕ್ಷಕರು ಮತ್ತು ಪಾಲಕರಿಗೆ ದೊಡ್ಡ ನೆಮ್ಮದಿ ಉಂಟಾಗಿದೆ. ಶಾಲೆಗಳು ಆರಂಭಗೊಳ್ಳದೆ ಶಿಕ್ಷಕರು ಕೂಡ ಚಡಪಡಿಸುತ್ತಿದ್ದರು.

ಆರರಿಂದ ಎಂಟನೇ ತರಗತಿವರೆಗಿನ ಶಾಲೆಗಳನ್ನು ಕೂಡ ಸರ್ಕಾರ ಆರಂಭಿಸಬೇಕಿತ್ತು. ಗ್ರಾಮೀಣ ಮಕ್ಕಳು ಕಳೆದ ಒಂದು ವರ್ಷದ ಮೇಲೆ ಶಿಕ್ಷಣದಿಂದ ವಂಚಿತರೇ ಆದಂತಾಗಿದೆ. ಕೊರೊನಾ ಆತಂಕ ಒಂದೆಡೆ ಆದರೆ, ಮನೆ ಹಿಡಿದು ಕುಳಿತ ಅಥವಾ ಪಾಲಕರೊಂದಿಗೆ ಅನ್ಯ ಚಟುವಟಿಕೆಗಳಲ್ಲಿ ಅನಿವಾರ್ಯವಾಗಿ ತೊಡಗಿಕೊಳ್ಳುವಂತಾದ ಮಕ್ಕಳ ಸಂಕಷ್ಟ ಹೇಳತೀರದು. ಬೆಳೆಯಬೇಕಾದ ಮಕ್ಕಳ ದೈಹಿಕ ಮತ್ತು ಮಾನಸಿಕ ಸ್ಥಿತಿಯನ್ನೂ ಗಮನದಲ್ಲಿಟ್ಟುಕೊಂಡು ಆರರಿಂದ ಎಂಟನೆಯ ತರಗತಿಗಳನ್ನು ಕೂಡಲೇ ಆರಂಭಿಸಬೇಕು. ದೈಹಿಕ ಅಪೌಷ್ಟಿಕತೆ ಮತ್ತು ಮಾನಸಿಕ ಲವಲವಿಕೆ, ಆಟಪಾಠ ಇಲ್ಲದ ಮಕ್ಕಳು ಮತ್ತೊಂದು ರೀತಿಯ ಅಸ್ವಸ್ಥತೆಯನ್ನು ಅನುಭವಿಸುತ್ತಿದ್ದಾರೆ. ಪಾಠ ಪ್ರವಚನಗಳಿಲ್ಲದೆ ಮತ್ತು ಸರ್ಕಾರದ ಮೀನಮೇಷದ ನಡೆಯಿಂದ ಶಿಕ್ಷಕರು ಕೂಡ ನಿರುತ್ಸಾಹಗೊಂಡಿದ್ದಾರೆ. ಆದ್ದರಿಂದ ಕಿರಿಯ ಪ್ರಾಥಮಿಕ ಶಾಲೆಗಳ ಆರಂಭ ಕುರಿತು ಕೂಡ ಶೀಘ್ರ ಗಮನಹರಿಸಬೇಕು. ಕೊರೊನಾದೊಂದಿಗೆ ಏಗುತ್ತ, ಎಚ್ಚರಿಕೆ ವಹಿಸುತ್ತಲೇ ನಮ್ಮ ಮಕ್ಕಳ ಭವಿಷ್ಯವನ್ನು ಗಮನದಲ್ಲಿ ಇಟ್ಟುಕೊಂಡು ಶೀಘ್ರ ಕ್ರಮ ಕೈಗೊಳ್ಳುವುದು ಸೂಕ್ತ.

ವೆಂಕಟೇಶ ಮಾಚಕನೂರ, ಧಾರವಾಡ

ಇವರಿಗೆ ಇವರೇ ಮಾದರಿ!

‘ಹೊಸ ಪೀಳಿಗೆಗೆ ಹಳೆ ರಾಜಕೀಯ ಮಾದರಿ’ ಎಂಬ ಚಂದ್ರಕಾಂತ ವಡ್ಡು ಅವರ ಲೇಖನ (ಪ್ರ.ವಾ., ಆಗಸ್ಟ್ 23) ಇಂದಿನ ಸಾಮಾಜಿಕ ಮತ್ತು ರಾಜಕೀಯ ಮೇಲಾಟದ ಪರಿಸ್ಥಿತಿಯಲ್ಲಿ ಒಂದು ಚಾರಿತ್ರಿಕ ದಾಖಲೆ ಅಷ್ಟೇ ಮತ್ತು ಆಸಕ್ತರು ಓದುವುದಕ್ಕೆ ಮಾತ್ರ ಸೂಕ್ತ. ವೈರುಧ್ಯದ ವಿಷಯಗಳು ಬಂದಾಗ ಗಾಂಧಿ ಟೋಪಿ ಹಾಕಿಕೊಂಡು ಸಂಭಾವಿತರ ಹಾಗೆ ಪೋಸು ಕೊಟ್ಟು ಬಾಯಿಗೆ ಬಂದಂತೆ ಮಾತನಾಡುವ ಹುಂಬ ರಾಜಕಾರಣಿಗಳೆಲ್ಲಿ, ಹಲವು ಬಾರಿ ವಿಧಾನಮಂಡಲದ ಸದಸ್ಯರಾಗಿದ್ದೂ ಸಾಧಾರಣ ಜೀವನ ಸಾಗಿಸಿದ್ದ ಕೆ.ಚನ್ನಬಸವನಗೌಡರೆಲ್ಲಿ! ಇಂದಿನ ರಾಜಕಾರಣಿಗಳಿಗೆ ಅಂತಹವರು ಹೇಗೆ ಮಾದರಿಯಾದಾರು? ಸುಮ್ಮನೆ ಅಂತಹವರ ಹೆಸರು ಮತ್ತು ನಡಾವಳಿಗಳನ್ನು ಪ್ರಸ್ತುತದ ಅತ್ಯಂತ ಗೌರವಾನ್ವಿತ(?)ರ ನಡಾವಳಿಗಳಿಗೆ ಹೋಲಿಸಿ ತಾಳೆ ಹಾಕಿದರೆ ಆ ಸಂಭಾವಿತರಿಗೆ ಅವಮಾನ ಮಾಡಿದಂತೆ! ಅವರ ರಾಜಕಾರಣ ಮತ್ತು ಜೀವನಶೈಲಿಯೇ ಬೇರೆ ಈಗಿನವರದೇ ಬೇರೆ. ಎಷ್ಟು ಹೇಳಿದರೂ ಬರೆದರೂ ಇವರಂತೂ ಬದಲಾಗರು. ಇವರಿಗೆ ಇವರೇ ಮಾದರಿ!

ಬಿ.ರಮೇಶ್, ಬೆಂಗಳೂರು

ನೀರಾನೆ ನೆನಪು

‘ಲೈಂಗಿಕ ಕಿರುಕುಳ: ಪ್ರಿನ್ಸ್ ಆ್ಯಂಡ್ರೂ ವಿರುದ್ಧ ದೂರು: ಮೊಕದ್ದಮೆ ದಾಖಲು’ (ಪ್ರ.ವಾ., ಆ. 11). ಕಿರುಕುಳ ನಡೆದದ್ದು 20 ವರ್ಷಗಳ ಹಿಂದೆ! (‘ಆರೋಪಿ’ಗೆ ಈಗ 61 ವರ್ಷ)

ನನ್ನ ಗುರುಗಳಾದ ಡಾ. ಪ್ರಭುಶಂಕರ ಆಗಾಗ ಹೇಳುತ್ತಿದ್ದ ಒಂದು ‘ಜೋಕು’ ನೆನಪಾಗುತ್ತದೆ. ಮಹಿಳೆಯೊಬ್ಬಳು ಪುರುಷನೊಬ್ಬನ ವಿರುದ್ಧ ನ್ಯಾಯಾಲಯಕ್ಕೆ ದೂರು ಕೊಟ್ಟಳಂತೆ, ‘ಈತ ನನ್ನನ್ನು – ವರ್ಷಗಳ ಹಿಂದೆ ನೀರಾನೆ (ಹಿಪ್ಪೋಪೊಟಾಮಸ್) ಎಂದು ಕರೆದು ಅವಮಾನಿಸಿದ’ ಎಂದು. ನ್ಯಾಯಾಧೀಶರು ಕೇಳಿದರಂತೆ: ‘ಅಮ್ಮ, ನೀನು ಆಗಲೆ ಏಕೆ ದೂರು ಕೊಡಲಿಲ್ಲ?’ ಆಕೆ ಉತ್ತರಿಸಿದಳಂತೆ: ‘ಸ್ವಾಮಿ, ಆಗ ನಾನು ನೀರಾನೆಯನ್ನು ನೋಡಿರಲಿಲ್ಲ!’

ಸಿ.ಪಿ.ಕೆ., ಮೈಸೂರು

ಬಾಳ ಚೆಲುವ ಹರಡಿದವರು


ಕುವೆಂಪು, ಬೇಂದ್ರೆ, ಪುತಿನ, ಕೆಎಸ್‌ನ, ಅಡಿಗರು ಇವರೆಲ್ಲಾ ಕನ್ನಡದ ವಿವೇಕವನ್ನು ಕಟ್ಟಿದಂಥ ನಮ್ಮ ಪ್ರಜ್ಞೆಯ ಪ್ರಮುಖ ಕವಿಗಳು. ಕನ್ನಡದ ಬದುಕು ರೂಪಿಸಿಕೊಳ್ಳುತ್ತಲೇ ಬಂದ ಪರಂಪರೆ, ಸಂಸ್ಕೃತಿಯ ಎಲ್ಲ ಅವಯವಗಳ ಕುರಿತು ಅವರಿಗೆ ವಿಶಿಷ್ಟವಾದ ಜ್ಞಾನವಿತ್ತು. ಅಷ್ಟೇಅಲ್ಲ, ಅಲ್ಲಿರುವ ಊನಗಳ ಕುರಿತು ಕೂಡ ಅವರಿಗೆ ಕೆಲವು ಪ್ರಶ್ನೆಗಳಿದ್ದವು. ಆ ತಕರಾರುಗಳನ್ನು ಅವರು ತಮ್ಮ ಕಾವ್ಯದಲ್ಲಿಯೇ ಮೂಡಿಸಿದ್ದಾರೆ. ಇವರ ಬರಹಗಳಲ್ಲಿ ಭಾಷೆಯ ಚೆಲುವು, ಸೊಬಗು ಅಷ್ಟೇಅಲ್ಲ, ಸಂಸ್ಕೃತಿ, ಸಮುದಾಯಗಳ ಬಾಳ ಚೆಲುವು ಕೂಡ ಹರಡಿಕೊಂಡಿದೆ. ದುಡಿಯುವ ಸಂಸ್ಕೃತಿ, ಮಾನವನ ಅಭ್ಯುದಯ, ಮಾನವೀಯ ಗುಣಗಳ ಸಹಕಾರದ ಕುರಿತು ಅವರ ಕಾವ್ಯದ ತುಡಿತ ಇದೆ. ಇದೆಲ್ಲವನ್ನೂ ಬಿಟ್ಟು ಕವಿಯನ್ನು ಜಾತಿ, ವರ್ಗ, ವರ್ಣಕ್ಕೆ ಅನ್ವಯಿಸಿಕೊಂಡು ವಿಮರ್ಶಿಸುವಂತಹ ತಾಲಿಬಾನಿ ಗುಣವನ್ನು ರಘುನಾಥ ಚ.ಹ. ಅವರು ಸರಿಯಾಗಿ ಗುರುತಿಸಿ, ಚರ್ಚಿಸಿದ್ದಾರೆ (ಪ್ರ.ವಾ., ಆ. 25).

ಮತ್ತೆ ಮತ್ತೆ ಸ್ವಯಂಘೋಷಿತ ವಿಮರ್ಶಕರ ನ್ಯಾಯಾಲಯದ ಕಟಕಟೆಗೆ ಒಳಗಾಗುತ್ತಿರುವ ನಮ್ಮ ಬೇಂದ್ರೆಯವರಾಗಲೀ ಅಡಿಗರಾಗಲೀ ಇವರೆಲ್ಲ ನಮ್ಮ ಆಧುನಿಕ ಪೂರ್ವಸೂರಿಗಳೆ. ಇವರು ಕಟ್ಟಿದ್ದು ಕಾವ್ಯವನ್ನೇ. ಯಾವುದೇ ಜಾತಿ, ಗುಂಪು, ಸಿದ್ಧಾಂತ, ಪಂಥಗಳನ್ನಲ್ಲ. ವರ್ತಮಾನದ ಕನ್ನಡ ವಿಮರ್ಶೆಯನ್ನು ಆರೋಗ್ಯಕರವಾಗಿ ಬೆಳೆಸಬಹುದಾದ, ವಿವೇಕದಿಂದ ವಿಸ್ತರಿಸಬಹುದಾದ ನಮ್ಮ ತಲೆಮಾರಿನ ಹಲವು ವಿಮರ್ಶಕ ಗೆಳೆಯರೇ ಇಂಥದ್ದೊಂದು ವಿಮರ್ಶೆಯ ದುಸ್ಸಾಹಸಕ್ಕೆ ಸಾಮಾಜಿಕ ಜಾಲತಾಣಗಳಲ್ಲಿ ಕೈಹಾಕಿದ್ದಾರೆ. ಅದು ಖಂಡಿತ ಬೇಂದ್ರೆ, ಅಡಿಗರಂಥವರಿಗೆ ಕೇಡನ್ನು ಬಯಸಲಾರದು. ಆದರೆ, ನಮ್ಮ ಕನ್ನಡದ ಪ್ರಾಣವಾಯುವಿನಂತಹ ಕಾವ್ಯ ಪ್ರಕಾರಕ್ಕೆ ಖಂಡಿತ ಕಂಟಕವಾಗಬಲ್ಲದು. ಹೊಸ ತಲೆಮಾರಿಗೆ ಇಂತಹ ಸಾಮಾಜಿಕ ಜಾಲತಾಣದ ವಿಮರ್ಶೆಯನ್ನು ಆದರ್ಶವೆಂದು ನೀಡಿದರೆ, ಅವರ ಮಾನಸಿಕ ಸ್ಥಿತಿ ಮತ್ತು ಓದಿನ ಗ್ರಹಿಕೆಯು ಕವಿಯನ್ನು, ಆತನ ಕವಿತೆಗಳನ್ನು ನೋಡುವ ಕ್ರಮ, ದೃಷ್ಟಿಕೋನ ಎಲ್ಲವೂ ಪೂರ್ವಗ್ರಹಪೀಡಿತವೇ ಆಗಿ ಕಾಣಿಸಿಬಿಡಬಲ್ಲದು. ಈ ಕುರಿತು ಇನ್ನೂ ಆರೋಗ್ಯಕರ ಚರ್ಚೆಗಳಾಗಬೇಕು.

ಡಾ. ನಿಂಗಪ್ಪ ಮುದೇನೂರು, ಧಾರವಾಡ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಹಣಕ್ಕಾಗಿ ಆಸ್ತಿ ನಗದೀಕರಣ



ಹೊಸ ಆದಾಯದ ಮೂಲವೊಂದನ್ನು ಹುಡುಕುವ ಸಲುವಾಗಿ ಕೇಂದ್ರ ಸರ್ಕಾರವು 'ರಾಷ್ಟ್ರೀಯ ನಗದೀಕರಣ ಪೈಪ್‌ಲೈನ್ ಯೋಜನೆ' (ಎನ್‌ಎಂಪಿ) ಜಾರಿಗೆ ತಂದಿದೆ. ಮುಂದಿನ 4 ವರ್ಷಗಳಲ್ಲಿ ₹6 ಲಕ್ಷ ಕೋಟಿ ಹಣ ಸಂಗ್ರಹಿಸುವ ಯೋಜನೆಗೆ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಇತ್ತೀಚೆಗೆ ಚಾಲನೆ ನೀಡಿದ್ದಾರೆ. ದೇಶದ ಮೂಲಸೌಕರ್ಯ ಯೋಜನೆಗಳಿಗೆ ಅನುದಾನ ಒದಗಿಸಲು ಕೇಂದ್ರ ಸರ್ಕಾರವು ಈ ನಿರ್ಧಾರ ತೆಗೆದುಕೊಂಡಿದೆ.

ರಾಷ್ಟ್ರೀಯ ನಗದೀಕರಣ ಪೈಪ್‌ಲೈನ್ ಯೋಜನೆಯಡಿ 2022–2025ರ ಅವಧಿಯಲ್ಲಿ ದೇಶದ ರೈಲು ನಿಲ್ದಾಣಗಳು, ರಸ್ತೆಗಳು, ತೈಲ ಮತ್ತು ನೈಸರ್ಗಿಕ ಅನಿಲ ಸಾಗಣೆ ಕೊಳವೆ ಮಾರ್ಗಗಳು, ವಿದ್ಯುತ್ ವಲಯಗಳ ನಿರ್ವಹಣೆಯನ್ನು ಖಾಸಗಿ ಸಂಸ್ಥೆಗಳಿಗೆ ವಹಿಸಿ ಕೊಡುವುದು ಯೋಜನೆಯ ಉದ್ದೇಶ. ಯೋಜನೆಯಡಿ ನೀಡಲಾಗುವ ಆಸ್ತಿಗಳ ಮೇಲೆ ಸರ್ಕಾರದ ಒಡೆತನ ಇರಲಿದೆ. ಖಾಸಗಿಯವರು ನಿಗದಿತ ಸಮಯದ ನಂತರ ಸರ್ಕಾರಕ್ಕೆ ಆಸ್ತಿಗಳನ್ನು ಹಿಂತಿರುಗಿಸಬೇಕಾಗುತ್ತದೆ. ಆದರೆ, ಇದು ದೀರ್ಘಾವಧಿಯ ಗುತ್ತಿಗೆ ಆಗಿರುತ್ತದೆ.


ಉದ್ದೇಶ: ವಿವಿಧ ಇಲಾಖೆಗಳಲ್ಲಿ ಹೆಚ್ಚು ಬಳಕೆಯಾಗದೇ ಉಳಿದಿರುವ ಸರ್ಕಾರದ ಆಸ್ತಿಗಳನ್ನು ಆದಾಯ ಸಂಗ್ರಹದ ಮೂಲಗಳನ್ನಾಗಿ ಪರಿವರ್ತಿಸುವುದು ಯೋಜನೆಯ ಗುರಿ. ಸ್ವತ್ತುಗಳನ್ನು ಮಾರಾಟ ಮಾಡುವ, ಬಂಡವಾಳ ಹಿಂತೆಗೆದುಕೊಳ್ಳುವ ಅಥವಾ ಖಾಸಗೀಕರಣಕ್ಕೆ ಒಳಪಡಿಸುವ ಬದಲಾಗಿ, 'ರಚನಾತ್ಮಕ ಒಪ್ಪಂದದ ಪಾಲುದಾರಿಕೆ'ಯನ್ನು ಸೃಷ್ಟಿಸುವುದು ಸರ್ಕಾರದ ಉದ್ದೇಶ. ಮೂಲಸೌಕರ್ಯ ಉದ್ದೇಶದಿಂದ ನಿರ್ಮಿಸಿದ ಸರ್ಕಾರದ ವಿವಿಧ ಯೋಜನೆಗಳನ್ನು ಖಾಸಗಿಯವರು ನಿರ್ವಹಣೆ ಮಾಡಲಿದ್ದಾರೆ.







ಆಸ್ತಿಯನ್ನು ನಗದೀಕರಣಗೊಳಿಸುವ ನಿಟ್ಟಿನಲ್ಲಿ ಇದೊಂದು ಪಾರದರ್ಶಕ ವ್ಯವಸ್ಥೆ ಎಂದು ಸರ್ಕಾರ ಹೇಳಿಕೊಂಡಿದೆ. 'ಹೊಸ ಮೂಲಸೌಕರ್ಯ ಸೃಷ್ಟಿಗೆ ಖಾಸಗಿ ವಲಯದ ಹೂಡಿಕೆಯನ್ನು ಉತ್ತೇಜಿಸುವ ಗುರಿಯನ್ನು ಹೊಂದಲಾಗಿದ್ದು, ಉದ್ಯೋಗಾವಕಾಶ ಸೃಷ್ಟಿಸಲು ಇದು ಅಗತ್ಯವಾಗಿದೆ. ಆ ಮೂಲಕ ಹೆಚ್ಚಿನ ಆರ್ಥಿಕ ಬೆಳವಣಿಗೆ ಸಾಧಿಸಬಹುದು' ಎಂದು ನಿರ್ಮಲಾ ಸೀತಾರಾಮನ್ ಹೇಳಿದ್ದಾರೆ.

ರಸ್ತೆ ವಲಯದಿಂದ ಗರಿಷ್ಠ ಹಣ ಗಳಿಕೆಗೆ ಉದ್ದೇಶಿಸಲಾಗಿದ್ದು, 2025ರ ವೇಳೆಗೆ ₹1.6 ಲಕ್ಷ ಕೋಟಿ ಮೌಲ್ಯದ ನಗದೀಕರಣ ನಿರೀಕ್ಷಿಸಲಾಗಿದೆ. ನಂತರದ ಸ್ಥಾನದಲ್ಲಿ ರೈಲ್ವೆ ಇದೆ. ಸುಮಾರು 400 ನಿಲ್ದಾಣಗಳು, 150 ರೈಲುಗಳು, ಮತ್ತು ಕೆಲವು ಟ್ರ್ಯಾಕ್‌ಗಳಿಂದ ₹1.5 ಲಕ್ಷ ಕೋಟಿ ಮೌಲ್ಯದ ನಗದೀಕರಣ ಗುರಿ ಹೊಂದಲಾಗಿದೆ. ಯೋಜನೆಯಡಿ 15 ರೈಲ್ವೇ ಕ್ರೀಡಾಂಗಣಗಳು, 25 ವಿಮಾನ ನಿಲ್ದಾಣಗಳು, 160 ಕಲ್ಲಿದ್ದಲು ಗಣಿಗಾರಿಕೆ ಯೋಜನೆಗಳನ್ನು ನಗದೀಕರಣಕ್ಕಾಗಿ ಗುರುತಿಸಲಾಗಿದೆ.





ಜನರಿಗೆ ಶುಲ್ಕದ ಹೊರೆ

ಆಸ್ತಿ ನಗದೀಕರಣ ಯೋಜನೆ ಅಡಿ ದೇಶದ 26,700 ಕಿ.ಮೀ. ಉದ್ದದ ರಾಷ್ಟ್ರೀಯ ಹೆದ್ದಾರಿಯನ್ನು ಖಾಸಗಿ ಕಂಪನಿಗಳಿಗೆ ದೀರ್ಘಾವಧಿಯವರೆಗೆ ಭೋಗ್ಯಕ್ಕೆ ನೀಡಲು ಕೇಂದ್ರ ಸರ್ಕಾರವು ಸಿದ್ಧತೆ ನಡೆಸಿದೆ. ಈ ಕಾರ್ಯಕ್ರಮವು ಅನುಷ್ಠಾನಕ್ಕೆ ಬಂದರೆ ದೇಶದ ಬಹುತೇಕ ರಾಷ್ಟ್ರೀಯ ಹೆದ್ದಾರಿಗಳು ಟೋಲ್ ಹೆದ್ದಾರಿಗಳಾಗಿ (ಶುಲ್ಕ ಪಾವತಿಸಿ ಬಳಸುವ ಹೆದ್ದಾರಿ) ಬದಲಾಗಲಿವೆ. ಇದು ಸಾರ್ವಜನಿಕರಿಗೆ ಹೆಚ್ಚು ಹೊರೆಯಾಗಲಿದೆ.

ಈ ಹೆದ್ದಾರಿಗಳನ್ನು ಶುಲ್ಕ-ನಿರ್ವಹಣೆ-ವರ್ಗಾವಣೆ (ಟೋಲ್/ಆಪರೇಟ್/ಟ್ರಾನ್ಸವರ್-ಟಿಒಟಿ) ಮಾದರಿ ಮತ್ತು ಮೂಲಸೌಕರ್ಯ ಹೂಡಿಕೆ ಟ್ರಸ್ಟ್ (ಇನ್ವಿಟ್) ಮಾದರಿಯಲ್ಲಿ ನಗದೀಕರಣ ಮಾಡಿಕೊಳ್ಳಲು ಸರ್ಕಾರವು ರೂಪುರೇಷೆ ಸಿದ್ಧಪಡಿಸಿದೆ. ಸಾರ್ವಜನಿಕರ ಹಣದಲ್ಲಿ ಎನ್‌ಎಚ್‌ಎಐ ನಿರ್ಮಿಸಿದ ಹೆದ್ದಾರಿಯನ್ನು, ನಿರ್ವಹಣೆ ಮತ್ತು ಶುಲ್ಕ ಸಂಗ್ರಹಕ್ಕಾಗಿ ಮಾತ್ರವೇ ಖಾಸಗಿ ಕಂಪನಿಗೆ ಭೋಗ್ಯಕ್ಕೆ ನೀಡಲಾಗುತ್ತದೆ.

26,700 ಕಿ.ಮೀ. ಉದ್ದದ ರಾಷ್ಟ್ರೀಯ ಹೆದ್ದಾರಿಯಲ್ಲಿ ಬಹುತೇಕ ಭಾಗವನ್ನು ಟಿಒಟಿ ಮಾದರಿಯಲ್ಲಿ ನಗದೀಕರಣ ಮಾಡಿಕೊಳ್ಳಲಾಗುತ್ತದೆ. ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವಾಲಯವು, ರಸ್ತೆ-ಹೆದ್ದಾರಿ ನಗದೀಕರಣಕ್ಕೆ 2016ರಲ್ಲಿ ಸಿದ್ಧಪಡಿಸಿರುವ ಮಾರ್ಗಸೂಚಿಯ ಅನ್ವಯ ಇದನ್ನು ಅನುಷ್ಠಾನಕ್ಕೆ ತರಲಾಗುತ್ತದೆ.

30 ವರ್ಷ ಭೋಗ್ಯಕ್ಕೆ: ರಾಷ್ಟ್ರೀಯ ಹೆದ್ದಾರಿ ಅಭಿವೃದ್ಧಿ ಪ್ರಾಧಿಕಾರ (ಎನ್‌ಎಚ್‌ಎಐ) ಅಭಿವೃದ್ಧಿಪಡಿಸುವ ಹೆದ್ದಾರಿಗಳನ್ನು, ಪ್ರಾಧಿಕಾರವೇ ಎರಡು ವರ್ಷ ನಿರ್ವಹಣೆ ಮಾಡಲಿದೆ. ಆನಂತರ ಅದನ್ನು ಟೆಂಡರ್ ಮೂಲಕ ಖಾಸಗಿ ಕಂಪನಿಗೆ ಭೋಗ್ಯಕ್ಕೆ ಹಾಕಲಾಗುತ್ತದೆ. ಖಾಸಗಿ ಕಂಪನಿಯು, ಬಿಡ್ಡಿಂಗ್‌ನಲ್ಲಿ ನಮೂದಿಸಿದಷ್ಟು ಹಣವನ್ನು ಒಮ್ಮೆಲೇ ಪಾವತಿಸಿ ರಸ್ತೆಯ ಮೇಲ್ವಿಚಾರಣೆಯನ್ನು ವಹಿಸಿಕೊಳ್ಳುತ್ತದೆ. ಪ್ರತಿ ಹೆದ್ದಾರಿಯನ್ನು ಕನಿಷ್ಠ 30 ವರ್ಷಗಳವರೆಗೆ ಭೋಗ್ಯಕ್ಕೆ ನೀಡಲಾಗುತ್ತದೆ.

ಶುಲ್ಕ ನಿಯಂತ್ರಣ ಇಲ್ಲ: 30 ವರ್ಷಗಳವರೆಗೆ ಆ ಹೆದ್ದಾರಿಯ ನಿರ್ವಹಣೆ ಮತ್ತು ಶುಲ್ಕ ಸಂಗ್ರಹದ ಕರ್ತವ್ಯ ಮತ್ತು ಹಕ್ಕುಗಳು ಆ ಖಾಸಗಿ ಕಂಪನಿಯದ್ದಾಗಿರುತ್ತದೆ. ಭೋಗ್ಯದ ಅವಧಿ ಮುಗಿದ ನಂತರ ಹೆದ್ದಾರಿಯು ಎನ್‌ಎಚ್‌ಐಎ ಸುಪರ್ದಿಗೆ ಮರಳುತ್ತದೆ. ಶುಲ್ಕ ನಿಗದಿ, ಏರಿಕೆ ಮತ್ತು ಸಂಗ್ರಹದ ಸಂಪೂರ್ಣ ಅಧಿಕಾರವು ಖಾಸಗಿ ಕಂಪನಿಯದ್ದಾಗಿರುತ್ತದೆ. ಸರ್ಕಾರವು ಇದರಲ್ಲಿ ಮಧ್ಯಪ್ರವೇಶಿಸುವುದಿಲ್ಲ. ಹೀಗಾಗಿ ಖಾಸಗಿ ಕಂಪನಿಯು ವಿಧಿಸುವ ಶುಲ್ಕವನ್ನು ಬಳಕೆದಾರರು ಕಟ್ಟಬೇಕಾಗುತ್ತದೆ.

ಶುಲ್ಕ ವಿನಾಯಿತಿ ಇಲ್ಲ: ಬಳಕೆದಾರರ ಶುಲ್ಕ ವಿನಾಯಿತಿಯನ್ನು ತಪ್ಪಿಸುವ ಉದ್ದೇಶದಿಂದಲೇ ಈ ನೀತಿ ಜಾರಿಗೆ ತರಲಾಗುತ್ತಿದೆ ಎಂದು 2016 ರಸ್ತೆ-ಹೆದ್ದಾರಿ ನಗದೀಕರಣ ಮಾರ್ಗಸೂಚಿಯಲ್ಲಿ ಹೇಳಲಾಗಿದೆ. ಹೆದ್ದಾರಿಗಳನ್ನು ಭೋಗ್ಯಕ್ಕೆ ನೀಡಿದ ನಂತರ, ಸ್ಥಳೀಯರಿಗೆ ಬಳಕೆದಾರರ ಶುಲ್ಕದಿಂದ ವಿನಾಯಿತಿ ದೊರೆಯುತ್ತದೆಯೇ ಅಥವಾ ಇಲ್ಲವೇ ಎಂಬುದನ್ನು ಈ ಮಾರ್ಗಸೂಚಿ ಸ್ಪಷ್ಟಪಡಿಸಿಲ್ಲ.

ರೈಲ್ವೆಯೂ ಭೋಗ್ಯಕ್ಕೆ: ಕೊಂಕಣ ರೈಲ್ವೆ, 400 ರೈಲುನಿಲ್ದಾಣಗಳು, 90 ಪ್ರಯಾಣಿಕ ರೈಲುಗಳು, ರೈಲ್ವೆ ಕ್ರೀಡಾಂಗಣಗಳು, ರೈಲ್ವೆ ಕಾಲೋನಿಗಳು, ರೈಲ್ವೆ ಗೋದಾಮುಗಳನ್ನು ಖಾಸಗಿಯವರಿಗೆ ಭೋಗ್ಯಕ್ಕೆ ನೀಡಲಾಗುತ್ತದೆ. ಈ ಎಲ್ಲಾ ಸ್ವತ್ತುಗಳ ನಿರ್ವಹಣೆ ಮತ್ತು ಬಳಕೆದಾರರ ಶುಲ್ಕ ನಿಗದಿಪಡಿಸುವ ಅಧಿಕಾರ ಖಾಸಗಿ ಕಂಪನಿಯದ್ದಾಗಿರುತ್ತದೆ.

'ಕಾನೂನುಬದ್ಧ ಲೂಟಿ, ಸಂಘಟಿತ ಸುಲಿಗೆ'

ಮೊದಲು ನೋಟು ಅಮಾನ್ಯೀಕರಣ, ನಂತರ ಜಿಎಸ್‌ಟಿ ಈಗ ಬಂತು ನೋಡಿ ನಗದೀಕರಣ ಮೇಳ. ದಶಕಗಳ ಶ್ರಮದಿಂದ ರೂಪಿಸಲಾದ ಮಹತ್ವದ ಸಾರ್ವಜನಿಕ ಸ್ವತ್ತುಗಳನ್ನು ಈಗ ಕೆಲವೇ ಆಯ್ದ ಮಂದಿಗೆ ನೀಡಲಾಗುತ್ತದೆ. ಇದು ಕಾನೂನುಬದ್ಧ ಲೂಟಿ ಮತ್ತು ಸಂಘಟಿತ ಸುಲಿಗೆ

ಜೈರಾಂ ರಮೇಶ್, ಕಾಂಗ್ರೆಸ್ ಹಿರಿಯ ನಾಯಕ

70 ವರ್ಷದಲ್ಲಿ ಹಿಂದಿನ ಸರ್ಕಾರಗಳು ಏನೂ ಮಾಡಿಲ್ಲ ಎಂದು ಮೋದಿ ಹೇಳುತ್ತಾರೆ. ಆದರೆ, ಹಿಂದಿನ ಸರ್ಕಾರಗಳು 70 ವರ್ಷಗಳ ಅವಧಿಯಲ್ಲಿ ಸಾರ್ವಜನಿಕರ ಹಣದಿಂದ ಕಟ್ಟಿದ, ದೇಶದ ಮುಕುಟಪ್ರಾಯವಾದ ಸ್ವತ್ತುಗಳನ್ನು ಈಗ ಮೋದಿ ಸರ್ಕಾರ ಮಾರಾಟ ಮಾಡಲು ಹೊರಟಿದೆ. ಇದರಿಂದ ಮಹತ್ವದ ಕ್ಷೇತ್ರಗಳಲ್ಲಿ ಏಕಸ್ವಾಮ್ಯ ಉಂಟಾಗುತ್ತದೆ. ಉದ್ಯೋಗ ನಷ್ಟವಾಗುತ್ತದೆ

ರಾಹುಲ್ ಗಾಂಧಿ, ಕಾಂಗ್ರೆಸ್ ಸಂಸದ

ಇದು ದಿವಾಳಿಯಾಗಿರುವ ನರೇಂದ್ರ ಮೋದಿ, ಜಾರಿಗೆ ತರಲು ಹೊರಟಿರುವ ಅತ್ಯಂತ ಅಪಾಯಕಾರಿ ಕಾರ್ಯಕ್ರಮ. ಇದೊಂದು ಅಸಾಧಾರಣ ಮತ್ತು ಜನವಿರೋಧಿ ಕ್ರಮ

ಸುಖೇಂದು ರೇ, ಟಿಎಂಸಿ ರಾಜ್ಯಸಭಾ ಸದಸ್ಯ

ದೇಶದ ಮಾರಾಟವನ್ನು ಕೇಂದ್ರ ಸರ್ಕಾರವು ಅಧಿಕೃತವಾಗಿ ಘೋಷಿಸಿದೆ. ದೇಶದ ಸ್ವತ್ತು ಮತ್ತು ಮೂಲಸೌಕರ್ಯಗಳನ್ನು ಹೇಗೆ ವ್ಯವಸ್ಥಿತವಾಗಿ ಲೂಟಿ ಹೊಡೆಯಲಾಗುತ್ತದೆ ಎಂಬುದನ್ನು ಹಣಕಾಸು ಸಚಿವರು ಅತ್ಯಂತ ಸ್ಪಷ್ಟವಾಗಿ ವಿವರಿಸಿದ್ದಾರೆ. ಇದು ಸಾರ್ವಜನಿಕ ಸ್ವತ್ತಿನ ಹಗಲು ದರೋಡೆಯಲ್ಲದೆ ಮತ್ತೇನು?

ಸಿಪಿಎಂ

ಅವರಿಗೆ ಇಷ್ಟಬಂದಂತೆ ಮಾರಾಟ ಮಾಡಲು ಇವೇನು ಮೋದಿ ಅಥವಾ ಬಿಜೆಪಿಯ ಸ್ವತ್ತಲ್ಲ, ಸಾರ್ವಜನಿಕರ ಸ್ವತ್ತು. ಈ ನಗದೀಕರಣದಿಂದ ಸಂಗ್ರಹಿಸಿದ ಹಣವನ್ನು ವಿರೋಧ ಪಕ್ಷಗಳನ್ನು ಹತ್ತಿಕ್ಕಲು ನರೇಂದ್ರ ಮೋದಿ ಬಳಸಲಿದ್ದಾರೆ. ಈ ಕಾರ್ಯಕ್ರಮದ ವಿರುದ್ಧ ದೇಶದ ಜನರೆಲ್ಲರೂ ಒಗ್ಗಟ್ಟಾಗಿ ಹೋರಾಡಬೇಕು

ಮಮತಾ ಬ್ಯಾನರ್ಜಿ, ಪಶ್ಚಿಮ ಬಂಗಾಳ ಮುಖ್ಯಮಂತ್ರಿ

ಸಚಿವ ರಾಣೆಗೆ ಬಂಧನದಿಂದ ರಕ್ಷಣೆ


ನಾರಾಯಣ ರಾಣೆ ಅವರು ಬುಧವಾರ ಮುಂಬೈನ ತಮ್ಮ ನಿವಾಸದಲ್ಲಿ ಮಾಧ್ಯಮ ಗೋಷ್ಠಿ ನಡೆಸಿದರು ಪಿಟಿಐ ಚಿತ್ರ

ಮುಖ್ಯಾಂಶಗಳು

- ಸೆಪ್ಟೆಂಬರ್ 17ರವರೆಗೆ ಮಾತ್ರವೇ ಬಂಧನದಿಂದ ರಕ್ಷಣೆ
- ರಾಯಗಡ, ಮಹಾಡ್ ಪ್ರಕರಣಗಳಲ್ಲಿ ದೊರೆಯದ ರಕ್ಷಣೆ
- ತನಿಖಾಧಿಕಾರಿಗಳ ಎದುರು ವಿಚಾರಣೆಗೆ ಹಾಜರಾಗಲು ಸೂಚನೆ

ಮುಂಬೈ (ಪಿಟಿಐ): 'ಮುಖ್ಯಮಂತ್ರಿ ಉದ್ಧವ್ ಠಾಕ್ರೆ ಅವರ ಕೆನ್ನೆಗೆ ಬಾರಿಸುತ್ತಿದ್ದೆ' ಎಂದಿದ್ದ ಕೇಂದ್ರ ಸಚಿವ ನಾರಾಯಣ ರಾಣೆ ಅವರನ್ನು, ನಾಸಿಕ್‌ನಲ್ಲಿ ದಾಖಲಾದ ಪ್ರಕರಣದಲ್ಲಿ ಬಂಧಿಸುವಂತಹ ಕ್ರಮಗಳನ್ನು ತೆಗೆದುಕೊಳ್ಳುವುದಿಲ್ಲ ಎಂದು ಮಹಾರಾಷ್ಟ್ರ ಸರ್ಕಾರವು ಬಾಂಬೆ ಹೈಕೋರ್ಟ್‌ಗೆ ಹೇಳಿದೆ.

ನಾಸಿಕ್‌ನಲ್ಲಿ ದಾಖಲಾಗಿದ್ದ ಪ್ರಕರಣದಲ್ಲಿ ಬಂಧನದಿಂದ ರಕ್ಷಣೆ ನೀಡಿ ಎಂದು ರಾಣೆ ಅವರು ಸಲ್ಲಿಸಿದ್ದ ಅರ್ಜಿಯ ವಿಚಾರಣೆ ವೇಳೆ ಹೈಕೋರ್ಟ್‌ಗೆ ಸರ್ಕಾರವು ಹೀಗೆ ಪ್ರಮಾಣಪತ್ರ ಸಲ್ಲಿಸಿದೆ. ಪ್ರಕರಣದ ಮುಂದಿನ ವಿಚಾರಣೆ ಸೆಪ್ಟೆಂಬರ್ 17ರಂದು ನಡೆಯಲಿದ್ದು, ಅಲ್ಲಿಯವರೆಗೆ ಮಾತ್ರವೇ ಈ ರಕ್ಷಣೆ ಅನ್ವಯವಾಗಲಿದೆ.

ಸರ್ಕಾರದ ಪ್ರಮಾಣಪತ್ರವನ್ನು ಪರಿಶೀಲಿಸಿದ ಪೀಠವು, 'ತನಿಖೆಗೆ ಸಹಕರಿಸಬೇಕು. ಪೊಲೀಸರು ನೋಟಿಸ್ ನೀಡಿರುವಂತೆ ಸೆಪ್ಟೆಂಬರ್ 2ರಂದು ತನಿಖಾಧಿಕಾರಿ ಎದುರು ನಾಸಿಕ್‌ನಲ್ಲಿ ಹಾಜರಾಗಬೇಕು' ಎಂದು ರಾಣೆ ಅವರಿಗೆ ಸೂಚನೆ ನೀಡಿದೆ.

'ರಾಯಗಡ ಮತ್ತು ಮಹಾಡ್‌ನಲ್ಲಿ ದಾಖಲಾಗಿರುವ ಪ್ರಕರಣಗಳಿಂದಲೂ ರಕ್ಷಣೆ ನೀಡಬೇಕು' ಎಂದು ರಾಣೆ ಪರ ವಕೀಲರು ಮನವಿ ಮಾಡಿಕೊಂಡರು. ಹೈಕೋರ್ಟ್ ಪೀಠವು ಅದನ್ನು ನಿರಾಕರಿಸಿತು.

'ನಾಸಿಕ್ ಪ್ರಕರಣದಲ್ಲಿ ಅವರನ್ನು ಬಂಧಿಸುವುದಿಲ್ಲ ಎಂದು ಸರ್ಕಾರ ಹೇಳಿದೆ. ಮಹಾಡ್ ಮತ್ತು ರಾಯಗಡ ಎಫ್‌ಐಆರ್‌ಗಳಿಗೆ ಸಂಬಂಧಿಸಿದಂತೆ ಅರ್ಜಿದಾರರು, ತಮ್ಮ ಅರ್ಜಿಯನ್ನು ತಿದ್ದುಪಡಿ ಮಾಡಬೇಕು' ಎಂದು ಪೀಠವು ಸೂಚನೆ ನೀಡಿತು.

ಪ್ರಧಾನಿ ನರೇಂದ್ರ ಮೋದಿ ವಿರುದ್ಧ ಯಾರಾದರೂ ಇಂತಹ ಹೇಳಿಕೆ ನೀಡಿದ್ದರೆ, ಅವರ ವಿರುದ್ಧ ದೇಶದ್ರೋಹ ಪ್ರಕರಣ ದಾಖಲಾಗುತ್ತಿತ್ತು. ಹಿಂದಿನ ಬಿಜೆಪಿ ಸರ್ಕಾರ ಎಲ್ಗಾರ್ ಪರಿಷದ್ ಪ್ರಕರಣದಲ್ಲಿ ಮಾಡಿದ್ದೂ ಇದನ್ನೆ

ಸಾಮ್ನಾ, ಶಿವಸೇನಾ ಮುಖವಾಣಿ

ಕೇಂದ್ರ ಸಚಿವರ ವಿರುದ್ಧ ಪ್ರತಿಭಟನೆ ನಡೆಸಿದವರೆಲ್ಲರೂ, ನಂತರ ಮುಖ್ಯಮಂತ್ರಿ ಠಾಕ್ರೆ ಅವರನ್ನು ಭೇಟಿ ಮಾಡಿದ್ದಾರೆ. ಅಧಿಕಾರ ದುರುಪಯೋಗ ಮಾಡಿಕೊಳ್ಳುತ್ತಿರುವ ಈ ಸರ್ಕಾರವನ್ನು ಕಿತ್ತೊಗೆಯಬೇಕು

ನಿತೀಶ್ ರಾಣೆ, ನಾರಾಯಣ ರಾಣೆ ಅವರ ಪುತ್ರ ಮತ್ತು ಶಾಸಕ

ಠಾಕ್ರೆಯನ್ನು ಬಂಧಿಸಿ ಬಿಜೆಪಿ ಆಗ್ರಹ

'ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರಿಗೆ ಚಪ್ಪಲಿಯಲ್ಲಿ ಹೊಡೆಯಿರಿ ಎಂದು ಉದ್ಧವ್ ಠಾಕ್ರೆ ತಮ್ಮ ಪಕ್ಷದ ಕಾರ್ಯಕರ್ತರನ್ನು ಪ್ರಚೋದಿಸಿದ್ದರು. ಅವರ ವಿರುದ್ಧವೂ ಎಫ್‌ಐಆರ್ ದಾಖಲಿಸಿ' ಎಂದು ಯವತ್ಮಾಳ್ ಜಿಲ್ಲಾ ಬಿಜೆಪಿ ಅಧ್ಯಕ್ಷ ನಿತಿನ್ ಬುಟಾಡಾ ಒತ್ತಾಯಿಸಿದ್ದಾರೆ.

2020ರ ಅಕ್ಟೋಬರ್‌ನಲ್ಲಿ ನಡೆದಿದ್ದ ದಸರಾ ಕಾರ್ಯಕ್ರಮದಲ್ಲಿ ಮಾತನಾಡಿದ್ದ ಉದ್ಧವ್ ಠಾಕ್ರೆ ಅವರು, 'ಛತ್ರಪತಿ ಶಿವಾಜಿ ಅವರಿಗೆ ಅವಮಾನ ಮಾಡಿದ ಯೋಗಿ ಅವರಿಗೆ ಚಪ್ಪಲಿಯಲ್ಲಿ ಹೊಡೆಯಬೇಕು' ಎಂದು ಆಗ್ರಹಿಸಿದ್ದರು.

ರಾಣೆಗೆ ಎಚ್ಚರಿಕೆ

ರಾಣೆ ಅವರಿಗೆ ಜಾಮೀನು ನೀಡಿದ ರತ್ನಗಿರಿ ಜಿಲ್ಲಾ ನ್ಯಾಯಾಲಯವು, 'ಮತ್ತೆ ಹೀಗೆ ಆಗದಂತೆ ಎಚ್ಚರವಹಿಸಿ' ಎಂದು ಎಚ್ಚರಿಕೆ ನೀಡಿದೆ.

'ಬಂಧನದ ಕಾರಣ ಮತ್ತು ಇತರ ಕಾರಣಗಳನ್ನು ಪರಿಗಣಿಸಿದರೆ, ಬಂಧನವು ನ್ಯಾಯಬದ್ಧವಾಗಿದೆ. ಆದರೆ ರಾಣೆ ವಿರುದ್ಧ ಪ್ರಕರಣದಲ್ಲಿ ದಾಖಲಿಸಲಾಗಿರುವ ಐಪಿಸಿ ಸೆಕ್ಷನ್‌ಗಳು ಜೀವಾವಧಿ ಅಥವಾ ಮರಣ ದಂಡನೆ ವಿಧಿಸಬಹುದಾದ ಸೆಕ್ಷನ್‌ಗಳಲ್ಲ' ಎಂದು ಜಿಲ್ಲಾ ನ್ಯಾಯಾಧೀಶರು ಅಭಿಪ್ರಾಯಪಟ್ಟಿದ್ದಾರೆ. 'ಮುಂದೆ ಇಂತಹ ತಪ್ಪು ಮಾಡಬೇಡಿ ಮತ್ತು ತನಿಖೆಗೆ ಸಹಕರಿಸಿ' ಎಂದು ರಾಣೆ ಅವರಿಗೆ ಎಚ್ಚರಿಕೆ ನೀಡಿದೆ.

ಪಿವಿ ಫ್ಯಾಕ್ಟ್ ಚೆಕ್


ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

✗ **ಬಾಲಿವುಡ್ ನಟ ಸಲ್ಮಾನ್ ಖಾನ್** ಅವರು ತಮ್ಮ ಹೊಸ ಚಿತ್ರದ ಚಿತ್ರೀಕರಣಕ್ಕಾಗಿ ರಷ್ಯಾಕ್ಕೆ ತೆರಳಿದ್ದಾರೆ. ಅವರು ವಿಮಾನ ನಿಲ್ದಾಣ ಪ್ರವೇಶಿಸುವಾಗ ಕೇಂದ್ರೀಯ ಕೈಗಾರಿಕಾ ಭದ್ರತಾ ಪಡೆ (ಸಿಐಎಸ್‌ಎಫ್) ಸಿಬ್ಬಂದಿಯೊಬ್ಬರು ತಡೆದು, ತಪಾಸಣೆ ನಡೆಸಿದ್ದಾರೆ. ಈ ಬಗ್ಗೆ ಸಾಮಾಜಿಕ ಜಾಲತಾಣಗಳಲ್ಲಿ ಪರ-ವಿರೋಧದ ಚರ್ಚೆ ನಡೆದಿದೆ. ತಪಾಸಣೆ ನಡೆಸಿದ ಭದ್ರತಾ ಸಿಬ್ಬಂದಿಯ ಮೊಬೈಲ್ ಮುಟ್ಟುಗೋಲು ಹಾಕಿಕೊಳ್ಳಲಾಗಿದ್ದು, ಅವರು ಮಾಧ್ಯಮಗಳ ಜತೆ ಮಾತನಾಡುವುದನ್ನು ನಿರ್ಬಂಧಿಸಲಾಗಿದೆ ಎಂಬ ವರದಿಗಳು ಬಂದಿವೆ.


Pic Courtesy: Viral Bhayani

✓ **ಭದ್ರತಾ ಸಿಬ್ಬಂದಿ** ವಿರುದ್ಧ ಕ್ರಮ ತೆಗೆದುಕೊಳ್ಳಲಾಗಿದೆ ಎಂಬ ವರದಿಗಳನ್ನು ಸಿಐಎಸ್‌ಎಫ್ ಅಲ್ಲಗಳೆದಿದೆ. ಮಿಗಿಲಾಗಿ, ಕರ್ತವ್ಯಪ್ರಜ್ಞೆ ಮೆರೆದ ಆ ಸಿಬ್ಬಂದಿಗೆ ಬಹುಮಾನ ನೀಡಲಾಗಿದೆ ಎಂದು ತಿಳಿಸಿದೆ. ಸಾಮಾಜಿಕ ಜಾಲತಾಣಗಳಲ್ಲಿ ಭದ್ರತಾ ಸಿಬ್ಬಂದಿಯ ಕರ್ತವ್ಯಪ್ರಜ್ಞೆಯನ್ನು ಶ್ಲಾಘಿಸಲಾಗಿದೆ. ತಾರತಮ್ಯ ಮಾಡದೇ, ಕೆಲಸವನ್ನು ಅಚ್ಚುಕಟ್ಟಾಗಿ ನಿರ್ವಹಿಸಿದ್ದನ್ನು ಹೊಗಳಲಾಗಿದೆ.

ಗುಂಡಣ್ಣ



ದಿನ ಭವಿಷ್ಯ

ಗುರುವಾರ ಆಗಸ್ಟ್ 26, 2021

ಶ್ರೀಪ್ಲವ ನಾಮ ಸಂವತ್ಸರ ದಕ್ಷಿಣಾಯಣ ವರ್ಷ ಋತು ಶ್ರಾವಣ ಮಾಸ ಕೃಷ್ಣಪಕ್ಷ ಮಳೆ ನಕ್ಷತ್ರ ಮಖಾ ಚತುರ್ಥೀ ಗಂ. 26-49 ಹ. 4-58) ಗುರುವಾರ ನಿತ್ಯ ನಕ್ಷತ್ರ ರೇವತಿ ಗಂ. 42-50 (ರಾ. 11-23) ಶೂಲ ನಾಮ ಯೋಗ ಗಂ. 2-47 ಬಾಲವ ಕರಣ ಗಂ. 26-49 ವಿಷ ಗಂ. 11-18 ಅಮೃತ ಗಂ. 37-3 : ರಾಹುಕಾಲ ಮ ಗಂ. 1-30 ರಿಂದ 3-00 ಗುಳಿಕ ಕಾಲ ಬೆ ಗಂ 9-00 ರಿಂದ 10-30 ಯಮಗಂಡ ಕಾಲ ಬೆ ಗಂ 6-00 ರಿಂದ 7-30: ಸೂರ್ಯೋದಯ: 6-11 ಸೂರ್ಯಾಸ್ತ: 6-34 ಅದೃಷ್ಟ ಸಂಖ್ಯೆ 5 7

ಮೇಷ: ತುರ್ತುವಿಷಯಕ್ಕಾಗಿ ಸಂಬಂಧಿಕರ ನೆರವನ್ನು ಪಡೆಯಬೇಕಾದೀತು. ಸಂಸಾರದಲ್ಲಿ ನೆಮ್ಮದಿ. ಅನಗತ್ಯ ಸುತ್ತಾಟದಿಂದಾಗಿ ದೇಹಾಲಾಸ್ಯ.

ವೃಷಭ: ಹೊಸದಾಗಿ ಕಟ್ಟಿಸುತ್ತಿರುವ ಮನೆಯ ಕೆಲಸಗಳು ಪೂರ್ಣಗೊಂಡು ನೆಮ್ಮದಿ. ಮಕ್ಕಳಿಗೆ ವಿವಾಹ ವಿಷಯದಲ್ಲಿ ನೆಂಟರಿಂದ ಒತ್ತಾಯ ಪೂರ್ವಕ ಪ್ರಸ್ತಾಪಗಳು ಬರಲಿದೆ.

ಮಿಥುನ: ತರಕಾರಿ ಹಣ್ಣುಗಳ ವ್ಯಾಪಾರಸ್ಥರಿಗೆ ಬಹು ಬೇಡಿಕೆಯಿಂದಾಗಿ ಅಧಿಕ ಲಾಭ. ಪತ್ನಿ ವರ್ಗದವರ ಮನೆಗಳಿಗೆ ಕುಟುಂಬ ಸಮೇತರಾಗಿ ಭೇಟಿನೀಡುವ ಸಾಧ್ಯತೆ. ಧಾನ್ಯ ವ್ಯಾಪಾರಸ್ಥರಿಗೆ ಹಿನ್ನಡೆ.

ಕರ್ಕಾಟಕ: ಹಂತಹಂತವಾಗಿ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವಿರಿ. ಸಂಬಂಧಿಕರೊಂದಿಗೆ ಸುದೀರ್ಘ ಆಪ್ತಸಮಾಲೋಚನೆಯಿಂದಾಗಿ ಬಾಂಧವ್ಯದಲ್ಲಿ ವೃದ್ಧಿ.

ಸಿಂಹ: ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಸಂಪನ್ಮೂಲಗಳ ಕ್ರೂಢೀಕರಣಕ್ಕಾಗಿ ಬ್ಯಾಂಕ್ ಮುಂತಾದ ಹಣಕಾಸು ಸಂಸ್ಥೆಗಳ ಮೊರಹೊಗಬೇಕಾದೀತು. ದೂರದ ಪ್ರಯಾಣ ಮಾಡಬೇಕಾದೀತು.

ಕನ್ಯಾ: ಪ್ರಾಪ್ತ ವಯಸ್ಕರು ವೈವಾಹಿಕ ಜೀವನಕ್ಕೆ ಕಾಲಿಡಲು ಮಾಡಿದ ಪ್ರಯತ್ನಗಳು ಫಲನೀಡಲಿವೆ. ಗಣ್ಯರೊಂದಿಗೆ ಸಮಾರಂಭದಲ್ಲಿ ಭಾಗವಹಿಸುವ ಸಾಧ್ಯತೆ.

ತುಲಾ: ಮನೆಯವರ ಅಸಮ್ಮತಿಯ ನಡುವೆಯೂ ಉದ್ಯೋಗದ ಸಲುವಾಗಿ ದೂರದ ಪ್ರಯಾಣ ಮಾಡಬೇಕಾದೀತು. ಸಂಬಂಧಿಗಳ ಮಧ್ಯಸ್ಥಿಕೆಯಿಂದಾಗಿ ಸಮಸ್ಯೆಗಳು ನಿವಾರಣೆಯಾಗಲಿದೆ.

ವೃಶ್ಚಿಕ: ಚಿನ್ನಾಭರಣಗಳ ವ್ಯವಹಾರ ಪ್ರಾರಂಭಿಸಲು ಉತ್ತಮ ದಿನ. ಲೆಕ್ಕಪತ್ರ ಪರಿಶೀಲನೆಯಲ್ಲಿ ಹೆಚ್ಚಿನ ಕಾಲ ಕಳೆಯಬೇಕಾದೀತು. ಪುಸ್ತಕ ಗ್ರಂಥಗಳ ಖರೀದಿಗಾಗಿ ವೆಚ್ಚವನ್ನು ಭರಿಸಬೇಕಾದೀತು.

ಧನು: ತಂದೆ ತಾಯಿಗಳಿಗೆ ಮಕ್ಕಳ ಸಲುವಾಗಿ ವಿದೇಶ ಪ್ರಯಾಣ ಯೋಗ. ಸತ್ಪುರುಷರ ಸಂದರ್ಶನ ಮಾಡುವ ಸಾಧ್ಯತೆ. ಅಧ್ಯಯನದಲ್ಲಿನ ಆಸಕ್ತಿಯಿಂದಾಗಿ ಉತ್ತಮ ಭವಿಷ್ಯ ನಿರ್ಮಾಣಕ್ಕೆ ಮಾರ್ಗವಾಗಲಿದೆ.

ಮಕರ: ಸಹೋದ್ಯೋಗಿಗಳೊಡನೆ ಉತ್ತಮ ಸಂಬಂಧ ಬೆಳೆಸಿಕೊಳ್ಳುವಿರಿ. ಲೋಕೋಪಯೋಗಿ ಇಲಾಖೆ, ತಾಂತ್ರಿಕ ಇಲಾಖೆಯ ಕಂಪ್ಯೂಟರ್ ವಿಭಾಗದವರಿಗೆ ಭತ್ಯೆಯಲ್ಲಿ ಹೆಚ್ಚಳ.

ಕುಂಭ: ವೈಯಕ್ತಿಕ ವಿಚಾರಗಳತ್ತ ಹೆಚ್ಚಿನ ಗಮನ ಹರಿಸಬೇಕಾದೀತು. ನೆರೆಯವರೊಂದಿಗೆ ಸ್ನೇಹ ಸಂಬಂಧಗಳು ವೃದ್ಧಿಯಾಗಲಿವೆ. ಮನೆ ಬದಲಾವಣೆ ವಿಚಾರ ಚರ್ಚೆಗೆ ಬರಲಿದೆ.

ಮೀನ: ಕೃಷಿ ಕೆಲಸಗಳು ಭರದಿಂದ ಸಾಗುವುದರ ಜೊತೆಗೆ ಕಾಮಗಾರಿಗಳು ಹೆಚ್ಚಳಗೊಳ್ಳುವವು. ಹಣಕಾಸು ಸಂಸ್ಥೆಗಳಿಂದ ಸಹಾಯ ಪಡೆಯುವ ಅವಶ್ಯಕತೆ ನೀಗಲಿದೆ.

ನಿಮ್ಮ ಜನ್ಮದಿನ 26-ಆಗಸ್ಟ್ ಇಂದು ಅತ್ಯಂತ ಶುಭದಾಯಕವಾಗಿದ್ದು, ನಿಮಗಿರುವ ರಾಜಕೀಯದ ಬಗೆಗಿನ ಆಸಕ್ತಿಗೆ ಪುಷ್ಟಿ ದೊರಕುವಂತಹ ಘಟನಾವಳಿಗಳ ಮತ್ತು ಅವಕಾಶಗಳ ಸರಮಾಲೆಯಿಂದಾಗಿ ಉನ್ನತ ದರ್ಜೆಯ ರಾಜಕಾರಣಕ್ಕೆ ಕಾಲಿಡಲಿದ್ದೀರಿ. ಆರೋಗ್ಯ ಉತ್ತಮವಾಗಿರುವುದು ಮಕ್ಕಳ ಸಲುವಾಗಿ ವಿದೇಶ ಪ್ರಯಾಣ ಮಾಡಬೇಕಾದೀತು.

ಬೆರಗಿನ ಬೆಳಕು

ಗುರುರಾಜ ಕರಜಗಿ

ಶಕ್ರನ ವರದಾನ

ಹೀಗೆ ಸಿವಿಗಳ ರಾಷ್ಟ್ರವರ್ಧನನಾದ ವೆಸ್ಸಂತರ ಬೋಧಿಸತ್ವ ನೀರು ಬಿಟ್ಟು ಬ್ರಾಹ್ಮಣನಿಗೆ ಮಾದ್ರಿದೇವಿಯನ್ನು ದಾನ ಕೊಟ್ಟಾಗ ನೆಲ ಕಂಪಿಸಿತು, ಪ್ರಾಣಿಗಳು ಹೂಂಕರಿಸಿದವು, ಪಕ್ಷಿಗಳು ಕಿರುಚಿದವು. ಆದರೆ ಮಾದ್ರಿದೇವಿ ಹುಬ್ಬೇರಿಸಲಿಲ್ಲ, ವಿರೋಧಿಸಲಿಲ್ಲ, ಅಳಲಿಲ್ಲ. ತನ್ನ ಗಂಡನಿಗೆ ಯಾವುದು ಸರಿ, ಯಾವುದು ತಪ್ಪು ಎಂಬುದು ಸರಿಯಾಗಿ ತಿಳಿದಿದೆ. ಆದ್ದರಿಂದ ಅವನು ಮಾಡಿದ್ದೇ ಸರಿಯೆಂದು ಭಾವಿಸಿ ಆಕೆ ಮೌನವಾಗಿ ಎಲ್ಲವನ್ನು ನೋಡುತ್ತಿದ್ದಳು. ಆಗ ಬೋಧಿಸತ್ವ ಹೇಳಿದ, 'ನನ್ನ ಮಗ ಜಾಲಿಕುಮಾರನನ್ನು ಮತ್ತು ಮಗಳು ಕೃಷ್ಣಾಜಿನಳನ್ನು ತ್ಯಾಗ ಮಾಡುವಾಗ ಚಿಂತಿಸಲಿಲ್ಲ. ಮಕ್ಕಳ ಬಗ್ಗೆ ನನಗೆ ಯಾವ ದ್ವೇಷವೂ ಇಲ್ಲ. ಅಂತೆಯೇ ಮಾದ್ರಿಯೊಂದಿಗೂ ನನಗೆ ದ್ವೇಷವಿಲ್ಲ. ನನಗೆ ಸರ್ವಜ್ಞತ್ವ ಅತ್ಯಂತ ಪ್ರಿಯ. ಅದು ನನ್ನ ಬದುಕಿನ ಗುರಿ. ಆದ್ದರಿಂದ ನನಗೆ ಪ್ರಿಯರಾದವರ ತ್ಯಾಗವನ್ನು ಮಾಡಿಬಿಟ್ಟೆ'. ಹೀಗೆ ಮಾತನಾಡಿ ಮಾದ್ರಿದೇವಿಯ ಕಡೆಗೆ ತಿರುಗಿ, 'ನಿನಗೇನಾದರೂ ಬೇಸರವಿದೆಯೇ?' ಎಂದು ಕೇಳಿದ.

ಆಕೆ, 'ದೇವ ನನಗೇಕೆ ಹೀಗೆ ಕೇಳುತ್ತೀರಿ? ಎಂದು ಕೇಳಿ ಸಿಂಹನಾದ ಮಾಡುತ್ತ ತನ್ನ ವಚನವನ್ನು ಘೋಷಿಸಿದಳು, 'ನಾನು ಮಾದ್ರಿದೇವಿ, ವೆಸ್ಸಂತರ ಬೋಧಿಸತ್ವನ ಹೆಂಡತಿ. ಆತ ನನ್ನ ಒಡೆಯ, ಆತ ನನ್ನ ಈಶ್ವರ. ಆತ ನನ್ನನ್ನು ಯಾರಿಗಾದರೂ ಕೊಡಲಿ, ಮಾರಲಿ ಅಥವಾ ಕೊಂದು ಹಾಕಲಿ. ಆತನ ತೀರ್ಮಾನವನ್ನು ನಾನು ಮನಸಾ ಒಪ್ಪಿಕೊಂಡಿದ್ದೇನೆ'. ಈ ಮಾತುಗಳನ್ನು ಕೇಳಿದ ಶಕ್ರ ಅವಳ ಶ್ರೇಷ್ಠ ವಿಚಾರದ ಸ್ತುತಿ ಮಾಡಿದ. ಮತ್ತೆ ಹೇಳಿದ, 'ಬೋಧಿಸತ್ವ, ನಿನ್ನ ನಡೆಯಿಂದ ಮನುಷ್ಯ ಹಾಗೂ ಶತ್ರುಗಳನ್ನು ಗೆದ್ದುಕೊಂಡು ಬಿಟ್ಟಿದ್ದೀಯಾ. ನಿನ್ನ ದಾನದಿಂದ ಭೂಮಿ ಅನುರಣಿತವಾಯಿತು. ನಿನ್ನ ಧ್ವನಿ ಮೂರು ಲೋಕಗಳವರೆಗೆ ತಲುಪಿದೆ. ಬೆಟ್ಟಗಳಿಂದ ಪ್ರತಿಧ್ವನಿಯಾದಂತೆ ಅದು ನಾಲ್ಕೂ ಕಡೆಗೆ ಮಿಂಚಿನಂತೆ ಹರಿದುಹೋಯಿತು. ಎರಡೂ ನಾರದ ಪರ್ವತದ ಅಧಿದೇವತೆಗಳಾದ ಇಂದ್ರ, ಬ್ರಹ್ಮ ಮತ್ತು ಪ್ರಜಾಪತಿ ನಿನ್ನ ಅನುಮೋದನೆ ಮಾಡಿದ್ದಾರೆ. ನೀನು ಅತ್ಯಂತ ದುಷ್ಕರವಾದ ಕಾರ್ಯವನ್ನು ಮಾಡಿದ್ದೀ ಎಂದು ಸೋಮ, ಯಮ ಮತ್ತು ರಾಜ ಕುಬೇರರು ನಿನ್ನ ಅನುಮೋದನೆ ಮಾಡಿದ್ದಾರೆ. ನೀನು ಮಾಡಿದ್ದು ಅತ್ಯಂತ ದುಜ್ರ್ಞೇಯವಾದ ಕರ್ಮ. ಇಂತಹ ಸತ್ಪುರುಷರು ಸ್ವರ್ಗಕ್ಕೆ ಹೋಗುತ್ತಾರೆ. ಮಕ್ಕಳನ್ನು ದಾನ ಮಾಡಿದ ಮತ್ತು ಕಾಡಿನಲ್ಲಿದ್ದುಕೊಂಡು ಹೆಂಡತಿಯನ್ನು ದಾನ ಮಾಡಿದ ಇವನ ಬ್ರಹ್ಮಯಾನ ನರಕ ಲೋಕವನ್ನು ದಾಟಿಕೊಂಡು ಸ್ವರ್ಗದಲ್ಲಿ ಫಲದಾಯಕವಾಗಲಿ'.

ಹೀಗೆ ಬೋಧಿಸತ್ವನ ದಾನದ ಅನುಮೋದನೆಯನ್ನು ಮಾಡಿ, ಶಕ್ರ, ಇನ್ನು ತಡಮಾಡಬಾರದೆಂದು ತೀರ್ಮಾನಿಸಿ ಹೇಳಿದ, 'ಹೇ ವೆಸ್ಸಂತರ ಬೋಧಿಸತ್ವ, ನಿನ್ನ ಸರ್ವಾಂಗ ಸುಂದರಿ ಮಡದಿ ಮಾದ್ರಿದೇವಿಯನ್ನು ನಿನಗೆ ಮರಳಿ ದಾನ ಮಾಡುತ್ತಿದ್ದೇನೆ. ಆದ್ದರಿಂದ ನೀನು ಆಕೆಯನ್ನು ಮತ್ತೆಂದೂ ದಾನ ಮಾಡಲಾರೆ. ನೀನೇ ಮಾದ್ರಿಗೆ ಅನುರೂಪನಾದವನು ಮತ್ತು ಆಕೆ ನಿನಗೆ ಅನುರೂಪಳಾದವಳು. ನೀವಿಬ್ಬರೂ ಸಮಾನ ಮನಸ್ಕರು ಮತ್ತು ಸಮಾನ ಚಿತ್ತವುಳ್ಳವರು. ಈ ಕಾಡಿನಲ್ಲಿ ಇಬ್ಬರೂ ಏಕಚಿತ್ತರಾಗಿ ಬಾಳಿರಿ'. ಹೀಗೆ ಹೇಳಿ ತನ್ನ ನಿಜರೂಪವನ್ನು ತೋರಿಸಿ, 'ನಾನು ದೇವೇಂದ್ರ ಶಕ್ರ. ನಿನ್ನ ಬಳಿಗೆ ಬಂದಿದ್ದೇನೆ. ನೀನು ರಾಜರ್ಷಿ. ನಿನಗೆ ನಾನು ಎಂಟು ವರಗಳನ್ನು ಕೊಡುತ್ತೇನೆ, ಕೇಳು' ಎಂದು ಪ್ರಸನ್ನನಾದ. ❖

ಪದಬಂಧ 4700

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಋತುಗಳ ರಾಜನ ತಿಂಗಳು (5)
4.ವಿಸ್ತಾರವಾದ ನಿರೂಪಣೆ (3)
5.ಮಾವನಿಗೆದುರು ಬಂದಿರುವ ಸ್ತ್ರಿ (3)
6.ತಾರುಣ್ಯವನ್ನು ಹೊಂದಿದವಳು (3)
8.ಉದಾಹರಣೆ ನೀಡುವಾಗ ಆದ ಬಾಯಾರಿಕೆ (2)
9.ಏಳು ದಿನಗಳ ಅವಧಿ (2)
10.ಬವಣೆಪಟ್ಟು ತಂದ ಧಾನ್ಯ (3)
13.ವನದಲ್ಲಿ ಮುಖ ಕಾಣುತ್ತಿದೆಯಲ್ಲಾ (3)
14.ಬೇಸಾಯವನ್ನು ಹೀಗೂ ಹೇಳುವರು (3)
15.ಯುದ್ಧದ ಕೇಸರಿಯಿದು (5)

ಮೇಲಿಂದ ಕೆಳಕ್ಕೆ

2.ಶಿರದ ಮೇಲಿರುವ ಶೀರ್ಷಿಕೆ! (5)
3.ಸತ್ತವರನ್ನು ಹೂಳುವ ಜಾಗ (3)
4. ಈಕೆ ಹೆಂಗಸು (3)
7.ರಕ್ತವನ್ನು ಹೀಗೂ ಹೇಳಬಹುದು (3)
8. ದಾನ ನೀಡಿರುವ ರಾಕ್ಷಸ (3)
9.ವಾರದೊಳಗೆ ಹಕ್ಕುದಾರಬಂದಿದ್ದಾನಲ್ಲಾ? (5)
11.ತಿರುಗಿ ನಿಂತಾಗ ಆಗಿರುವ ತೊಂದರೆ (3)
12.ನಿರೂಪವಿಲ್ಲಿ ಉಲ್ಟಾ ಆಗಿಬಿಟ್ಟಿದೆ (3)

1		2		3	■	4		
■	■		■	5			■	■
■	■		■		■	6	7	
■	■		■	■	■	■		■
■	8		■	■	■	9		■
■		■	■	■	■		■	■
10		11	■	12	■		■	■
■	■	13			■		■	■
14			■	15				

4699ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಬಂಡವಾಳ 3.ಸಂವೇದನೆ 5.ವರ್ತಕ 6.ಲೆಬ 8.ಟಗರು 10.ರಸಿಕ 13.ಕದ 15.ಮಾತುಲ 16.ಟ್ಟುಗಡಿನು 17.ಸಮಾಧಾನ

ಮೇಲಿಂದ ಕೆಳಕ್ಕೆ: 1.ಬಂಗಲೆ 2.ಳವಕ 3.ಸಂಕಟ 7.ಬಳಕೆಗಾರ 9.ರುದ್ರನಾಟಕ 11.ಕಮಾನು 12.ಆಲಸಿ 14.ಸಮಸ್ತ

ಸುಡೊಕು 5086

	2			6	7	4		
3		4					7	2
	7			4	8		6	3
	4			3			8	5
8		9		7				
	5		8		4		9	7
2				9		7	3	
		3					1	
6			4			5		9

ಆಡುವುದು ಹೇಗೆ? ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5085 ಸುಡೊಕು

9	6	5	8	7	3	4	1	2
2	8	3	1	4	6	9	7	5
7	1	4	9	5	2	8	3	6
3	4	6	7	1	8	5	2	9
5	7	9	3	2	4	6	8	1
8	2	1	5	6	9	3	4	7
4	5	7	6	8	1	2	9	3
1	3	2	4	9	5	7	6	8
6	9	8	2	3	7	1	5	4

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ | ಪರಸ್ಪರ ಅಂತರ ಕಾಯ್ದುಕೊಳ್ಳಿ

ಷೇರುಪೇಟೆ ವಹಿವಾಟು

ಹಿಂದಿನ ಅಂತ್ಯ 55,958 | ಇಂದಿನ ಅಂತ್ಯ 55,944 | ▼ 14

ಎನ್ಎಸ್ಇ ನಿಫ್ಟಿ

ಹಿಂದಿನ ಅಂತ್ಯ	16,624
ಇಂದಿನ ಅಂತ್ಯ	16,634
▲	10
ದಿನದ ಗರಿಷ್ಠ	16,712

ವಿನಿಮಯ ದರ

$ ಡಾಲರ್	74.24
£ ಪೌಂಡ್	101.92
€ ಯುರೊ	87.23
¥ ಯೆನ್ (100ಕ್ಕೆ)	68

ಎನ್ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹410
12 ಮೊಟ್ಟೆಗೆ	₹58
ಮೈಸೂರು	
100 ಮೊಟ್ಟೆಗೆ	₹410

ಖಾದ್ಯ ತೈಲ ಮುಂಬೈ (10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1540 (1540)
ಸೋಯಾ (ರಿಫೈನ್ಡ್)	₹1400 (1395)
ಸೂರ್ಯಕಾಂತಿ (ರಿಫೈನ್ಡ್)	₹1495(1490)
ಪಾಮೋಲಿನ್	₹1270 (1260)

300 ನವೋದ್ಯಮಗಳ ನೆರವಿಗೆ ‘ಸಮೃದ್ಧ್’ ಯೋಜನೆ

ನವದೆಹಲಿ (ಪಿಟಿಐ): ಕೇಂದ್ರ ಸರ್ಕಾರವು ಮಾಹಿತಿ ತಂತ್ರಜ್ಞಾನ (ಐ.ಟಿ.) ವಲಯದ 300 ನವೋದ್ಯಮಗಳಿಗೆ ನೆರವಾಗಲು ‘ಸಮೃದ್ಧ್’ (ಸ್ಟಾರ್ಟ್‌ಅಪ್ ಆಕ್ಸಲರೇಟರ್ ಆಫ್ ಎಂಇಐಟಿವೈ ಫಾರ್ ಪ್ರಾಡಕ್ಟ್ ಇನೊವೇಷನ್, ಡೆವಲಪ್‌ಮೆಂಟ್ ಆ್ಯಂಡ್ ಗ್ರೋತ್) ಯೋಜನೆ ಆರಂಭಿಸಿದೆ.

ಈ ಯೋಜನೆಯ ಅಡಿ, ಆಯ್ದ ನವೋದ್ಯಮಗಳಲ್ಲಿ 100 ಯೂನಿಕಾರ್ನ್‌ಗಳನ್ನು ಸೃಷ್ಟಿಸುವ ಉದ್ದೇಶದಿಂದ ಆರಂಭಿಕ ಬಂಡವಾಳ, ಮಾರ್ಗದರ್ಶನ ಹಾಗೂ ಮಾರುಕಟ್ಟೆ ಪ್ರವೇಶವನ್ನು ಕಲ್ಪಿಸಲಿದೆ.


ಯೋಜನೆಯ ಅಡಿ, ಆಯ್ಕೆ ಆಗುವ ನವೋದ್ಯಮಗಳಿಗೆ ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ಸಚಿವಾಲಯವು ₹ 40 ಲಕ್ಷದವರೆಗೆ ಆರಂಭಿಕ ಬಂಡವಾಳ ಮತ್ತು ಆರು ತಿಂಗಳವರೆಗೆ ಮಾರ್ಗದರ್ಶನವನ್ನು ಒದಗಿಸಲಿದೆ.

ಹಣದ ಕೊರತೆಯು ನವೋದ್ಯಮಗಳಿಗೆ ಅತಿದೊಡ್ಡ ಸಮಸ್ಯೆಯೇನೂ ಅಲ್ಲ ಎಂದು ಐ.ಟಿ. ಮತ್ತು ದೂರಸಂಪರ್ಕ ಸಚಿವ ಅಶ್ವಿನಿ ವೈಷ್ಣವ್ ಹೇಳಿದ್ದಾರೆ.

ಮಾರುತಿ ಸುಜುಕಿ ಅಧ್ಯಕ್ಷ ಭಾರ್ಗವ ಆಕ್ರೋಶ

‘ಬೆಂಬಲದ ಹೇಳಿಕೆಗಳು ಕಾರ್ಯರೂಪಕ್ಕೆ ಬರುತ್ತಿಲ್ಲ’

ನವದೆಹಲಿ (ಪಿಟಿಐ): ‘ಸರ್ಕಾರದ ಅಧಿಕಾರಿಗಳು ಆಟೊಮೊಬೈಲ್ ಉದ್ಯಮಕ್ಕೆ ಬೆಂಬಲವಾಗಿ ಹಲವು ಹೇಳಿಕೆಗಳನ್ನು ನೀಡಿದ್ದರೂ, ವಾಸ್ತವದಲ್ಲಿ ಯಾವುದೂ ಕಾರ್ಯರೂಪಕ್ಕೆ ಬಂದಿಲ್ಲ’ ಎಂದು ಮಾರುತಿ ಸುಜುಕಿ ಇಂಡಿಯಾ ಕಂಪನಿಯ ಅಧ್ಯಕ್ಷ ಆರ್‌.ಸಿ. ಭಾರ್ಗವ ಬುಧವಾರ ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದಾರೆ.



ಆರ್‌.ಸಿ. ಭಾರ್ಗವ

ಭಾರತೀಯ ವಾಹನ ತಯಾರಕರ ಒಕ್ಕೂಟದ (ಎಸ್‌ಐಎಎಂ) 61ನೇ ವಾರ್ಷಿಕ ಸಮಾವೇಶವನ್ನು ಉದ್ದೇಶಿಸಿ ಮಾತನಾಡಿದ ಅವರು, ‘ದೇಶದ ವಾಹನ ಉದ್ಯಮ ಕಳೆದ ಕೆಲವು ವರ್ಷಗಳಿಂದ ಕುಸಿತ ಕಾಣುತ್ತಿದೆ. ಗ್ರಾಹಕರಿಗೆ ಕೈಗೆಟಕುವ ಬೆಲೆಗೆ ಕಾರುಗಳನ್ನು ನೀಡುವಂತೆ ಆಗದ ಹೊರತು, ಸಾಂಪ್ರದಾಯಿಕ ಎಂಜಿನ್ ವಾಹನ ಆಗಲಿ ಇಲ್ಲವೇ ಸಿಎನ್‌ಜಿ, ಜೈವಿಕ ಇಂಧನ ಅಥವಾ ವಿದ್ಯುತ್ ಚಾಲಿತ ವಾಹನಗಳಿಂದಾಗಲಿ ಉದ್ಯಮದ ಪುನಶ್ಚೇತನ ಸಾಧ್ಯವಾಗುವುದಿಲ್ಲ’ ಎಂದಿದ್ದಾರೆ.

ಈ ಉದ್ಯಮವು ದೀರ್ಘಕಾಲದಿಂದ ಕುಸಿತ ಕಾಣುತ್ತಿದೆ. ಆಟೊಮೊಬೈಲ್ ಉದ್ಯಮದ ಮಹತ್ವದ ಬಗ್ಗೆ ಸರ್ಕಾರದಲ್ಲಿನ ಪ್ರಮುಖ ವ್ಯಕ್ತಿಗಳು ಹಲವು ಹೇಳಿಕೆಗಳನ್ನು ನೀಡಿದ್ದಾರೆ. ಆದರೆ, ಉದ್ಯಮವು ಚೇತರಿಸಿಕೊಳ್ಳುವಂತೆ ಮಾಡುವ ಯಾವ ಕ್ರಮವೂ ಕಾರ್ಯರೂಪಕ್ಕೆ ಬಂದಿರುವುದು ಕಾಣಿಸುತ್ತಿಲ್ಲ ಎಂದು ಭಾರ್ಗವ ಕಟುವಾಗಿ ಹೇಳಿದ್ದಾರೆ.

‘ಮಾರಾಟ ಹೆಚ್ಚಿಸುವಲ್ಲಿ ಮಾತುಗಳು ಹೆಚ್ಚಿನ ಕೆಲಸ ಮಾಡುವುದಿಲ್ಲ. ಮಾರಾಟ ಹೆಚ್ಚಬೇಕು ಎಂದಾದರೆ ಗಟ್ಟಿಯಾದ ಕ್ರಮಗಳು ಬೇಕು ಎಂಬುದನ್ನು ವಿಷಾದದಿಂದ ಹೇಳುತ್ತಿದ್ದೇನೆ’ ಎಂದಿದ್ದಾರೆ.

ಕಾರು ಉದ್ಯಮ ಮತ್ತು ಪ್ರಯಾಣಿಕ ಕಾರುಗಳು ಐಷಾರಾಮಿ ಸರಕುಗಳು, ಅವುಗಳನ್ನು ಶ್ರೀಮಂತರು ಮಾತ್ರವೇ ಹೊಂದಬೇಕು ಎನ್ನುವ ಹಳೆಯ ನಂಬಿಕೆಯಿಂದ ಕೆಲವರು ಹೊರಬಂದಂತೆ ಕಾಣುತ್ತಿಲ್ಲ. ಈ ಮನಃಸ್ಥಿತಿಯಲ್ಲಿ ಬದಲಾವಣೆ ಆಗಿದ್ದಿದ್ದರೆ, ವಾಹನೋದ್ಯಮದ ಬೆಳವಣಿಗೆ ವಿಚಾರವಾಗಿ ಏನಾಗುತ್ತಿದೆ ಎನ್ನುವುದನ್ನು ಆರ್ಥಿಕ ತಜ್ಞರು, ಚಿಂತಕರು, ಬರಹಗಾರರು, ಪತ್ರಕರ್ತರು ಬಹಳ ಹಿಂದೆಯೇ ಆಲೋಚಿಸಬೇಕಿತ್ತು. ಬೆಳವಣಿಗೆಯ ಅಂಕಿ–ಅಂಶಗಳು ಎಲ್ಲರಿಗೂ ಕಾಣುವಂತೆ ಇವೆಯಾದರೂ ಪರಿಸ್ಥಿತಿಯನ್ನು ಸರಿಪಡಿಸಲು ಕೆಲವೇ ಕೆಲವು ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ ಎಂದು ವಿಷಾದದಿಂದ ಹೇಳುತ್ತಿದ್ದೇನೆ’ ಎಂದು ಭಾರ್ಗವ ಹೇಳಿದ್ದಾರೆ.

‘ಕೇಂದ್ರೀಕೃತ ಯೋಜನಾ ವ್ಯವಸ್ಥೆಯಲ್ಲಿ ನಾವು ಯಾವಾಗಲೂ ಗ್ರಾಹಕರನ್ನು ಮರೆಯುತ್ತಿದ್ದೇವೆ. ಯೋಜನೆ ರೂಪಿಸುವಾಗ ನಾವು ಗ್ರಾಹಕರ ಬಗ್ಗೆ ಯೋಚಿಸುವುದೇ ಇಲ್ಲ. ಗ್ರಾಹಕರು ಈ ಉತ್ಪನ್ನವನ್ನು ಖರೀದಿಸಲು ಸಾಧ್ಯವಾಗುತ್ತದೆಯೇ ಅಥವಾ ಇಲ್ಲವೇ ಎಂದು ಆಲೋಚಿಸುವುದೇ ಇಲ್ಲ’ ಎಂದಿದ್ದಾರೆ.

ಹೊಸ ಸುರಕ್ಷತಾ ನಿಯಮಗಳ ಕಾರಣದಿಂದಾಗಿ ‘ಮಾರುತಿ 800’ ಮಾದರಿಯನ್ನು ಕೈಬಿಡಬೇಕಾಯಿತು ಎಂದು ಅವರು ತಿಳಿಸಿದ್ದಾರೆ. ಎರಡು ವರ್ಷಗಳ ಹಿಂದೆ ಆದಂತಹ ಸಣ್ಣ ಪ್ರಮಾಣದ ಬೆಲೆ ಹೆಚ್ಚಳವು ಕಾರು ಮಾರುಕಟ್ಟೆಯ ಬೆಳವಣಿಗೆಯಲ್ಲಿ ಕುಸಿತಕ್ಕೆ ಕಾರಣವಾಯಿತು. ಬಿಎಸ್–6 ಮಾನದಂಡದಿಂದಾಗಿ ಕಾರಿನ ಬೆಲೆ ₹ 22 ಸಾವಿರದಷ್ಟು ಹೆಚ್ಚಾಯಿತು. ಇದರಿಂದ ಕಾರುಗಳು ಮತ್ತಷ್ಟು ಕೈಗೆಟಕದಂತಾಗಿವೆ ಎಂದು ತಿಳಿಸಿದ್ದಾರೆ.

ವೇಣು ಅಸಮಾಧಾನ

ನವದೆಹಲಿ: ದ್ವಿಚಕ್ರ ವಾಹನಗಳು ಸಂಚಾರಕ್ಕೆ ಮೂಲಭೂತ ಅಗತ್ಯಗಳಲ್ಲಿ ಒಂದಾಗಿದ್ದರೂ, ಅವುಗಳಿಗೆ ಜಿಎಸ್‌ಟಿ ವ್ಯವಸ್ಥೆಯ ಅಡಿಯಲ್ಲಿ ಶೇಕಡ 28ರಷ್ಟು ತೆರಿಗೆ ವಿಧಿಸಲಾಗುತ್ತಿದೆ ಎಂದು ಟಿವಿಎಸ್ ಮೋಟರ್ ಕಂಪನಿಯ ಅಧ್ಯಕ್ಷ ವೇಣು ಶ್ರೀನಿವಾಸನ್ ಅಸಮಾಧಾನ ವ್ಯಕ್ತಪಡಿಸಿದರು.

ದ್ವಿಚಕ್ರ ವಾಹನಗಳಿಗೆ ಐಷಾರಾಮಿ ವಸ್ತುಗಳಿಗೆ ವಿಧಿಸುವ ಪ್ರಮಾಣದ ತೆರಿಗೆ ನಿಗದಿ ಮಾಡಲಾಗಿದೆ.

ದೇಶದ ಆಟೊಮೊಬೈಲ್ ಉದ್ದಿಮೆಯು ಮೂರು ಕೋಟಿ ಜನರಿಗೆ ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ಉದ್ಯೋಗ ನೀಡಿದೆ. ಆದರೆ, ‘ಉದ್ದಿಮೆಯು ಉದ್ಯೋಗ ಸೃಷ್ಟಿಗೆ, ಆದಾಯ ತಂದುಕೊಡುವುದಕ್ಕೆ ಹಾಗೂ ವಿದೇಶಿ ವಿನಿಮಯ ಗಳಿಸುವುದಕ್ಕೆ ನೀಡುತ್ತಿರುವ ಕೊಡುಗೆಯನ್ನು ಗುರುತಿಸಲಾಗುತ್ತಿದೆಯೇ’ ಎಂದು ಪ್ರಶ್ನಿಸಿದರು.

ಕಬ್ಬಿಗೆ ಎಫ್‌ಆರ್‌ಪಿ ಹೆಚ್ಚಳ, ಕ್ವಿಂಟಲ್‌ಗೆ ₹ 290 ನಿಗದಿ

ನವದೆಹಲಿ (ಪಿಟಿಐ): ಸಕ್ಕರೆ ಕಾರ್ಖಾನೆಗಳು ಕಬ್ಬು ಬೆಳೆಗಾರರಿಗೆ ಪ್ರತಿ ಕ್ವಿಂಟಲ್‌ಗೆ ಪಾವತಿಸಬೇಕಿರುವ ಮೊತ್ತವನ್ನು ಕೇಂದ್ರ ಸರ್ಕಾರವು ₹ 5ರಷ್ಟು ಹೆಚ್ಚಿಸಿದೆ. ಈ ವರ್ಷದ ಅಕ್ಟೋಬರ್‌ನಿಂದ ಅನ್ವಯವಾಗುವಂತೆ ಕಾರ್ಖಾನೆಗಳು ಪ್ರತಿ ಕ್ವಿಂಟಲ್‌ಗೆ ₹ 290ರಷ್ಟು ಪಾವತಿಸಬೇಕಿದೆ.

2021–22ನೇ ಮಾರುಕಟ್ಟೆ ವರ್ಷಕ್ಕೆ ಅನ್ವಯವಾಗುವಂತೆ ‘ನ್ಯಾಯಸಮ್ಮತ ಮತ್ತು ಪ್ರೋತ್ಸಾಹದಾಯಕ ದರ’ (ಎಫ್‌ಆರ್‌ಪಿ) ಹೆಚ್ಚಿಸಲು ಆರ್ಥಿಕ ವ್ಯವಹಾರಗಳಿಗೆ ಸಂಬಂಧಿಸಿದ ಸಂಪುಟ ಸಮಿತಿಯ ಸಭೆಯು ಬುಧವಾರ ಒಪ್ಪಿಗೆ ನೀಡಿದೆ. 2020–21ನೇ ಮಾರುಕಟ್ಟೆ ವರ್ಷಕ್ಕೆ ಕೇಂದ್ರವು ಪ್ರತಿ ಕ್ವಿಂಟಲ್ ಕಬ್ಬಿಗೆ ₹ 285 ಎಫ್‌ಆರ್‌ಪಿ ನಿಗದಿ ಮಾಡಿತ್ತು.

ಕಬ್ಬಿನಿಂದ ಉತ್ಪಾದನೆ ಆಗುವ ಸಕ್ಕರೆ ಪ್ರಮಾಣವು ಶೇಕಡ 10ರಷ್ಟಿದ್ದರೆ ₹ 290 ಎಫ್‌ಆರ್‌ಪಿ ಸಿಗಲಿದೆ. ಸಕ್ಕರೆ ಉತ್ಪಾದನೆ ಪ್ರಮಾಣವು ಶೇ 10ಕ್ಕಿಂತ ಜಾಸ್ತಿ ಇದ್ದರೆ, ಪ್ರತಿ ಹೆಚ್ಚುವರಿ ಶೇ 0.1ಕ್ಕೆ ಕ್ವಿಂಟಲ್‌ಗೆ ಹೆಚ್ಚುವರಿಯಾಗಿ ₹ 2.90 ಸಿಗಲಿದೆ. ಸಕ್ಕರೆ ಸಿಗುವ ಪ್ರಮಾಣ ಶೇ 10ಕ್ಕಿಂತ ಕಡಿಮೆ ಇದ್ದರೆ, ಪ್ರತಿ ಶೇ 0.1ರಷ್ಟು ಕಡಿಮೆ ಪ್ರಮಾಣಕ್ಕೆ ಎಫ್‌ಆರ್‌ಪಿಯಲ್ಲಿ ₹ 2.90ರಷ್ಟು ಕಡಿತ ಆಗಲಿದೆ.

ರೈತರ ಹಿತ ಕಾಯುವ ಉದ್ದೇಶದಿಂದ, ಸಕ್ಕರೆ ಸಿಗುವ ಪ್ರಮಾಣವು ಶೇ 9.5ಕ್ಕಿಂತ ಕಡಿಮೆ ಇದ್ದರೆ, ಎಫ್‌ಆರ್‌ಪಿಯಲ್ಲಿ ಹೆಚ್ಚುವರಿ ಕಡಿತ ಇರುವುದಿಲ್ಲ ಎಂದು ಕೇಂದ್ರ ಆಹಾರ ಮತ್ತು ಗ್ರಾಹಕರ ವ್ಯವಹಾರಗಳ ಸಚಿವ ಪೀಯೂಷ್ ಗೋಯಲ್ ತಿಳಿಸಿದರು.

ಎಫ್‌ಆರ್‌ಪಿ ಹೆಚ್ಚಿಸಿರುವ ಪರಿಣಾಮವಾಗಿ, ಸಕ್ಕರೆಯ ಕನಿಷ್ಠ ಮಾರಾಟ ದರವನ್ನು ಹೆಚ್ಚಿಸಲಾಗುತ್ತದೆಯೇ ಎಂಬ ಪ್ರಶ್ನೆಗೆ ಸಚಿವರು, ‘ಹೆಚ್ಚಿಸಬೇಕು ಎಂದೇನೂ ಇಲ್ಲ’ ಎಂದು ಉತ್ತರಿಸಿದರು.

‘ಆಸ್ತಿ ನಗದೀಕರಣ ಕಾಂಗ್ರೆಸ್ಸಿನಿಂದಲೂ ಆಗಿತ್ತು’

ಮುಂಬೈ (ಪಿಟಿಐ): ಆಸ್ತಿ ನಗದೀಕರಣ ಯೋಜನೆಯನ್ನು ಟೀಕಿಸುವವರ ವಿರುದ್ಧ ವಾಗ್ದಾಳಿ ನಡೆಸಿದ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್, ಈ ಯೋಜನೆಯಲ್ಲಿ ಏನಿದೆ ಎಂಬುದಾದರೂ ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ ಅವರಿಗೆ ತಿಳಿದಿದೆಯೇ ಎಂದು ಪ್ರಶ್ನಿಸಿದರು.

ಜಮೀನು ಹಾಗೂ ಗಣಿಗಳನ್ನು ಮಾರಾಟ ಮಾಡುವ ಮೂಲಕ ‘ಕಿಕ್‌ಬ್ಯಾಕ್’ ಪಡೆದಿದ್ದು ಕಾಂಗ್ರೆಸ್ ಪಕ್ಷ ಎಂದು ನಿರ್ಮಲಾ ಅವರು ಬುಧವಾರ ಆಕ್ರೋಶ ವ್ಯಕ್ತಪಡಿಸಿದರು. ಮುಂಬೈ–ಪುಣೆ ಎಕ್ಸ್‌ಪ್ರೆಸ್ ಹೆದ್ದಾರಿಯ ನಗದೀಕರಣಯೋಜನೆಮೂಲಕಕಾಂಗ್ರೆಸ್‌ನೇತೃತ್ವದ ಸರ್ಕಾರಗಳು ₹ 8 ಸಾವಿರ ಕೋಟಿ ಸಂಗ್ರಹಿಸಿದ್ದವು ಎಂದು ನೆನಪಿಸಿದರು.

ನವದೆಹಲಿಯ ರೈಲು ನಿಲ್ದಾಣವನ್ನು ಲೀಸ್ ಆಧಾರದಲ್ಲಿ ಬೇರೆಯವರಿಗೆ ನೀಡಲು 2008ರಲ್ಲಿ ಮುಂದಡಿ ಇರಿಸಿದ್ದು ಕಾಂಗ್ರೆಸ್ ನೇತೃತ್ವದ ಯುಪಿಎ ಸರ್ಕಾರ ಎಂದು ಹೇಳಿದರು. ತಮಗೆ ಒಪ್ಪಿಗೆ ಇರದಿದ್ದ ಸುಗ್ರೀವಾಜ್ಞೆಯೊಂದನ್ನು ರಾಹುಲ್ ಅವರು ಈ ಹಿಂದೆ ಹರಿದುಹಾಕಿದ್ದನ್ನು ನೆನಪಿಸಿದ ನಿರ್ಮಲಾ ಅವರು, ‘ನಗದೀಕರಣಕ್ಕೆ ರಾಹುಲ್ ಅವರು ನಿಜವಾಗಿಯೂ ವಿರೋಧಿಯಾಗಿದ್ದರೆ, ನವದೆಹಲಿ ರೈಲು ನಿಲ್ದಾಣದ ನಗದೀಕರಣಕ್ಕೆ ಸಂಬಂಧಿಸಿದ ಪ್ರಸ್ತಾವನೆಯ ಮನವಿಯನ್ನು ಏಕೆ ಹರಿದುಹಾಕಲಿಲ್ಲ, ನಗದೀಕರಣ ಅಂದರೆ ಏನು ಎಂಬುದು ಅವರಿಗೆ ಗೊತ್ತಿದೆಯೇ’ ಎಂದು ಪ್ರಶ್ನಿಸಿದರು.

ಆಸ್ತಿ ನಗದೀಕರಣ ಯೋಜನೆಯು ಆಸ್ತಿಯನ್ನು ಮಾರಾಟ ಮಾಡುವ ಉದ್ದೇಶ ಹೊಂದಿಲ್ಲ. ಆಸ್ತಿಯನ್ನು ಪಡೆದವರು ನಂತರದಲ್ಲಿ ಅದನ್ನು ಸರ್ಕಾರಕ್ಕೆ ವಾಪಸ್ ಕೊಡುತ್ತಾರೆ. ಹಣ ಹೂಡಿಕೆ ಮಾಡಿರುವ, ಆದರೆ ಪೂರ್ಣ ಪ್ರಮಾಣದಲ್ಲಿ ಬಳಕೆ ಆಗುತ್ತಿಲ್ಲದ ಆಸ್ತಿಗಳನ್ನು ಇಲ್ಲಿ ಗುರುತಿಸಲಾಗಿದೆ ಎಂದು ತಿಳಿಸಿದರು.

ಸಾಲ ನೀಡಲು ಉತ್ತೇಜನ: ಸಾಲಕ್ಕೆ ಬೇಡಿಕೆ ಇಲ್ಲ ಎಂದು ಈ ಸಂದರ್ಭದಲ್ಲಿ ಹೇಳಲು ಆಗದು. ಬ್ಯಾಂಕ್‌ಗಳು ಅಕ್ಟೋಬರ್‌ನಿಂದ ಸಾಲ ವಿತರಣೆ ಹೆಚ್ಚಿಸಲು ಜಿಲ್ಲಾ ಮಟ್ಟದಲ್ಲಿ ಕಾರ್ಯಕ್ರಮ ಹಮ್ಮಿಕೊಳ್ಳಲಿವೆ ಎಂದು ಸಚಿವರು ತಿಳಿಸಿದರು.

ರಾಷ್ಟ್ರೀಕೃತ ಬ್ಯಾಂಕ್ ನೌಕರರ ಕೌಟುಂಬಿಕ ಪಿಂಚಣಿ ಹೆಚ್ಚಳ

ಮುಂಬೈ (ಪಿಟಿಐ): ಬ್ಯಾಂಕ್ ನೌಕರರು ಕರ್ತವ್ಯದಲ್ಲಿದ್ದ ಅವಧಿಯಲ್ಲಿ ಮೃತಪಟ್ಟರೆ ಅವರ ಕುಟುಂಬಕ್ಕೆ ನೀಡುವ ಪಿಂಚಣಿ (ಕೌಟುಂಬಿಕ ಪಿಂಚಣಿ) ಮೊತ್ತ ಕಡಿಮೆ ಎಂಬುದನ್ನು ಒಪ್ಪಿಕೊಂಡಿರುವ ಕೇಂದ್ರ ಸರ್ಕಾರವು, ಈ ಮೊತ್ತವನ್ನು ನೌಕರನ ಕೊನೆಯ ಸಂಬಳದ ಶೇಕಡ 30ರಷ್ಟಕ್ಕೆ ಹೆಚ್ಚಿಸುವ ಘೋಷಣೆಯನ್ನು ಬುಧವಾರ ಮಾಡಿದೆ.



ಇದುವರೆಗೆ ಕೇಂದ್ರ ಸರ್ಕಾರಿ ಸ್ವಾಮ್ಯದ ಬ್ಯಾಂಕ್‌ಗಳ ನೌಕರರು ಮೃತಪಟ್ಟರೆ, ಅವರ ಕುಟುಂಬಕ್ಕೆ ನೀಡುವ ಮಾಸಿಕ ಪಿಂಚಣಿ ಮೊತ್ತವು ₹ 9,284ಕ್ಕಿಂತ ಹೆಚ್ಚಾಗಲು ಅವಕಾಶವಿರಲಿಲ್ಲ ಎಂದು ಹಣಕಾಸು ಸೇವೆಗಳ ಇಲಾಖೆಯ ಕಾರ್ಯದರ್ಶಿ ದೇವಶಿಶ್ ಪಾಂಡಾ ತಿಳಿಸಿದ್ದಾರೆ.

‘ಈ ಗರಿಷ್ಠ ಮಿತಿಯನ್ನು ಸಂಪೂರ್ಣವಾಗಿ ತೆಗೆದುಹಾಕಲಾಗಿದೆ. ನೌಕರನ ಕೊನೆಯ ಸಂಬಳದ ಶೇಕಡ 30ರಷ್ಟನ್ನು ಪಿಂಚಣಿಯಾಗಿ ಆತನ ಕುಟುಂಬಕ್ಕೆ ನೀಡಲಾಗುತ್ತದೆ’ ಎಂದು ಪಾಂಡಾ ಸುದ್ದಿಗಾರರಿಗೆ ತಿಳಿಸಿದ್ದಾರೆ. ಈ ತೀರ್ಮಾನದಿಂದಾಗಿ ಇಂತಹ ಪಿಂಚಣಿಯ ಮೊತ್ತವು ₹ 30 ಸಾವಿರದಿಂದ ₹ 35 ಸಾವಿರದವರೆಗೆ ಹೆಚ್ಚಳ ಕಾಣಲಿದೆ ಎಂದು ಅವರು ಹೇಳಿದ್ದಾರೆ.

ರಾಷ್ಟ್ರೀಯ ಪಿಂಚಣಿ ಯೋಜನೆಯಲ್ಲಿನ ನೌಕರರ ಖಾತೆಗೆ ಉದ್ಯೋಗದಾತದಿಂದ ಸಿಗುವ ಮೊತ್ತವನ್ನು ಶೇ 14ಕ್ಕೆ ಹೆಚ್ಚಿಸಲು ಕೂಡ ಇಲಾಖೆ ನಿರ್ಧರಿಸಿದೆ. ಇದು ಈವರೆಗೆ ಶೇ 10ರಷ್ಟು ಇತ್ತು ಎಂದು ಅವರು ಹೇಳಿದ್ದಾರೆ.

ಸ್ಕೋಡಾ ವಿನ್ಯಾಸ ಸ್ಪರ್ಧೆ: ಐವರು ಆಯ್ಕೆ

ಬೆಂಗಳೂರು: ಹೊಸ ಕಾರಿನ ವಿನ್ಯಾಸವು ಇತರರಿಗೆ ತಕ್ಷಣಕ್ಕೆ ಗೊತ್ತಾಗಂತೆ ಮಾಡುವ ಮೇಲುಹೊದಿಕೆಯೊಂದನ್ನು ವಿನ್ಯಾಸ ಮಾಡಿಕೊಡುವಂತೆ ಸಾರ್ವಜನಿಕರಲ್ಲಿ ಮಾಡಿದ್ದ ಮನವಿಗೆ ಪ್ರತಿಯಾಗಿ 200ಕ್ಕೂ ಹೆಚ್ಚಿನ ವಿನ್ಯಾಸಗಳು ಬಂದಿವೆ ಎಂದು ಸ್ಕೋಡಾ ಕಂಪನಿ ತಿಳಿಸಿದೆ.

ಈ ಪೈಕಿ ಒಟ್ಟು ಐದು ಜನ ಕಳುಹಿಸಿದ ವಿನ್ಯಾಸಗಳನ್ನು ಕಂಪನಿಯು ಅಂತಿಮಗೊಳಿಸಿದೆ.

ಬೆನ್ ಸ್ಟುವರ್ಟ್ (ತಮಿಳುನಾಡು), ಪ್ರತೀಕ್ ಸೇಥಿ (ಮಹಾರಾಷ್ಟ್ರ), ರಿಜು ಕರುಣಾಕರನ್ (ಕರ್ನಾಟಕ), ರೋಹಿತ್ ಬಂಡ್ವಾಲ್ಕರ್ (ಮಹಾರಾಷ್ಟ್ರ), ಶ್ರೇಯಸ್ ಕರಂಬೇಲ್ಕರ್ (ಮಹಾರಾಷ್ಟ್ರ) ಸಿದ್ಧಪಡಿಸಿದ ವಿನ್ಯಾಸಗಳು ಆಯ್ಕೆಯಾಗಿವೆ ಎಂದು ಕಂಪನಿಯ ಪ್ರಕಟಣೆ ತಿಳಿಸಿದೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	600-650
ನಡುಗೋಲು	700-750
ರಾಶಿ	800-850
ರಾಶಿ ಉತ್ತಮ	900-950
ಜರಡಿ	1000-1050
ಹೆರಕಿದ್ದು	1200-1300
ಹಸಿರು ಸಾಧಾರಣ	800-850
ಹಸಿರು ಉತ್ತಮ	1000-1050
ಹಸಿರು ಅತಿ ಉತ್ತಮ	1300-1400
ಕಾಳು ಮೆಣಸು	395-400
ಅಡಿಕೆ	
ಬಂಟ್ವಾಳ	
ಕೋಕ	10000-22500
ಹೊಸತು	23500-46000
ಹಳತು	42500-51000
ಕುಮಟ	
ಚಿಪ್ಪು	32599-35199
ಕೋಕ	22169-33509
ಫ್ಯಾಕ್ಟರಿ	15699-21700
ಹಳೆಚಾಲಿ	42509-43599
ಹೊಸಚಾಲಿ	38899-40819
ಪುತ್ತೂರು	
ಕೋಕ	10500-26000
ಹೊಸತು	31500-46000
ಸಿದ್ದಾಪುರ	
ಬಿಳಿಗೋಟು	26699-35599
ಚಾಲಿ	37499-41299
ಕೋಕ	27899-33699
ಕೆಂಪುಗೋಟು	32699-35609
ರಾಶಿ	41699-44509
ತಟ್ಟಿಬೆಟ್ಟೆ	34699-43419
ಶಿರಸಿ	
ಬೆಟ್ಟೆ	27699-41889
ಬಿಳಿಗೋಟು	16699-36696
ಚಾಲಿ	33719-41511
ರಾಶಿ	40199-44599
ಯಲ್ಲಾಪುರ	
ಬಿಳಿಗೋಟು	29299-36499
ಚಾಲಿ	36899-41399
ಕೋಕ	22612-33699
ಕೆಂಪುಗೋಟು	30199-34811
ರಾಶಿ	42419-47299
ತಟ್ಟಿಬೆಟ್ಟೆ	35699-42040
ರಾಮನಗರ ರೇಷ್ಮೆ	
ಮಿಶ್ರತಳಿ	278-456
ದ್ವಿತಳಿ	289-529

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	---	12500	12650	183.30 ಸೆಂಟ್ಸ್
ಎಸಿ	---	4800	4100	
ಆರ್‌ಪಿ	---	5700	6100	ಲಂಡನ್
ಆರ್‌ಸಿ	---	3500	3550	1964 ಡಾಲರ್ಸ್

ಮುಂಬೈ ಧಾರಣೆ

ಶೇಂಗಾ 25-8-2021

ಜಾವಾ 70/80(ಹೊಸ)	10100-10150
ಜಾವಾ 80/90(ಹೊಸ)	9200-9250
ದಪ್ಪ ಮಧ್ಯಪ್ರದೇಶ(ಹೊಸ)	9700-9750
ದಪ್ಪ ಗುಜರಾತ್(ಹೊಸ)	9450-9500

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1550 (1550)
ಒಂದು ವಾರದ ಡೆಲಿವರಿ	1545 (1545)
ಸೋಯಾ ಕಚ್ಚಾ	1370 (1365)
ಪಾಮ್ ವಾರದ ಡೆಲಿವರಿ	1268 (1258)
ಸೂರ್ಯಕಾಂತಿ ಎಣ್ಣೆ ಕಚ್ಚಾ	1440 (1440)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10 ಗ್ರಾಂ 47,350 (47,450)

ಬೆಳ್ಳಿ ಕೆ.ಜಿ 63,400 (63,400)

ಆವರಣದಲ್ಲಿ ಹಿಂದಿನ ದಿನದ ಧಾರಣೆ



ಅಫ್ಘಾನಿಸ್ತಾನ ಸ್ವಾತಂತ್ರ್ಯದ ಅವಸಾನ

ಇದೇ 31ರೊಳಗೆ ತೆರವು ಕಾರ್ಯಾಚರಣೆ ಪೂರ್ಣಗೊಳಿಸಲು ಬೈಡನ್ ನಿರ್ಧಾರ

ಗಡುವು ನಿಕಟ: ವಲಸೆಗೆ ಧಾವಂತ

ಕಾಬೂಲ್ (ಎಎಫ್‌ಪಿ): ಅಫ್ಘಾನಿಸ್ತಾನದಿಂದ ತೆರವು ಕಾರ್ಯಾಚರಣೆ ಮುಂದಿನ ವಾರ ಕೊನೆಗೊಳ್ಳಲಿದೆ ಎಂದು ಅಮೆರಿಕ ಅಧ್ಯಕ್ಷ ಜೋ ಬೈಡನ್ ಬುಧವಾರ ಹೇಳಿದ್ದಾರೆ. ಇದರಿಂದಾಗಿ, ಅಫ್ಘಾನಿಸ್ತಾನದಿಂದ ತಪ್ಪಿಸಿಕೊಳ್ಳಲು ಅಲ್ಲಿನ ಜನರ ಧಾವಂತ ಹೆಚ್ಚಾಗಿದೆ.

ಅಫ್ಘಾನಿಸ್ತಾನವು ತಾಲಿಬಾನ್ ವಶವಾದ ಇದೇ 14ರ ನಂತರದಲ್ಲಿ 82 ಸಾವಿರಕ್ಕೂ ಹೆಚ್ಚು ಜನರನ್ನು ತೆರವು ಮಾಡಲಾಗಿದೆ. ತಾಲಿಬಾನ್ ಆಳ್ವಿಕೆಯಲ್ಲಿ ದಮನ ಅಥವಾ ಕಿರುಕುಳಕ್ಕೆ ಒಳಗಾಗಬಹುದು ಎಂಬ ಭೀತಿ ಇರುವ ಸಾವಿರಾರು ಜನರು ಕಾಬೂಲ್ ವಿಮಾನ ನಿಲ್ದಾಣದ ಹೊರಗೆ ಜಮಾಯಿಸುವುದು ಮುಂದುವರಿದಿದೆ.

ಸಂಪೂರ್ಣ ತೆರವಿಗೆ ನಿಗದಿ ಮಾಡಲಾಗಿರುವ ಇದೇ 31ರ ಗಡುವನ್ನು ಪಾಲಿಸಲಾಗುವುದು ಎಂದು ಬೈಡನ್ ಅವರು ದೃಢಪಡಿಸಿದ್ದಾರೆ. ಅಫ್ಘಾನಿಸ್ತಾನದಲ್ಲಿ ಕಿರುಕುಳಕ್ಕೆ ಒಳಗಾಗಬಹುದಾದ ಎಲ್ಲ ಜನರ ತೆರವು ಸಾಧ್ಯವಾಗಲಿಕ್ಕಿಲ್ಲ ಎಂದು ಐರೋಪ್ಯ ಒಕ್ಕೂಟದ ದೇಶಗಳು ಎಚ್ಚರಿಕೆ ನೀಡಿದ್ದರೂ ಗಡುವಿಗೆ ಅಂಟಿಕೊಳ್ಳಲು ಬೈಡನ್ ನಿರ್ಧರಿಸಿದ್ದಾರೆ.

‘ಎಷ್ಟು ಬೇಗ ಪೂರ್ಣಗೊಳಿಸುತ್ತೇವೆಯೋ ಅಷ್ಟು ಒಳ್ಳೆಯದು. ಒಂದೊಂದು ದಿನ ಕಳೆದಂತೆಯೂ ನಮ್ಮ ಪಡೆಗಳಿಗೆ ಅಪಾಯ ಹೆಚ್ಚುತ್ತಲೇ ಹೋಗುತ್ತದೆ. ಈಗಿನ ವೇಗದಲ್ಲಿ ಹೋದರೆ 31ರ ಒಳಗೆ ತೆರವು ಕಾರ್ಯ ಪೂರ್ಣಗೊಳ್ಳಲಿದೆ’ ಎಂದು ಬೈಡನ್ ಹೇಳಿದ್ದಾರೆ.

ಆದರೆ, ತೆರವು ಕಾರ್ಯಾಚರಣೆಗೆ ಇರುವ ಅವಧಿಯು ಸೀಮಿತ ಆಗಿರುವುದರಿಂದ ಅಫ್ಘಾನಿಸ್ತಾನದಿಂದ ಹೊರ ಹೋಗಲು ಬಯಸುವ ಅಲ್ಲಿನ ಎಲ್ಲರ ತೆರವು ಸಾಧ್ಯವಾಗಲಿಕ್ಕಿಲ್ಲ. ಇದು ಅಲ್ಲಿನ ಜನರಲ್ಲಿ ಆತಂಕ ಮೂಡಿಸಿದೆ. 2001ರ ಹಿಂದಿನ ಐದು ವರ್ಷಗಳ ಅವಧಿಯಲ್ಲಿ ಇದ್ದ ತಾಲಿಬಾನ್ ಸರ್ಕಾರದ ರೀತಿಯಲ್ಲಿಯೇ ದಮನಕಾರಿ ನೀತಿ ಆರಂಭವಾಗಬಹುದು ಎಂಬ ಭೀತಿ ಜನರಲ್ಲಿ ಮನೆ ಮಾಡಿದೆ.



ದೇಶ ತೊರೆಯುವುದಕ್ಕಾಗಿ ಕಾಬೂಲ್ ವಿಮಾನ ನಿಲ್ದಾಣದ ಹೊರಗೆ ಜನರು ಜಮಾಯಿಸುವುದು ಬುಧವಾರವೂ ಮುಂದುವರಿದಿದೆ ಟ್ವಿಟರ್ ಚಿತ್ರ/ಡೇವಿಡ್ ಮಾರ್ಟಿನನ್

ಸತ್ತರೂ ಶರಣಾಗುವುದಿಲ್ಲ: ತಾಲಿಬಾನ್ ವಿರೋಧಿ ನಾಯಕ

ಪ್ಯಾರಿಸ್ (ಎಎಫ್‌ಪಿ): ತಾಲಿಬಾನ್‌ಗೆ ಶರಣಾಗುವುದಿಲ್ಲ, ಆದರೆ ಅಫ್ಘಾನಿಸ್ತಾನದ ಹೊಸ ಆಡಳಿತಗಾರರ ಜತೆಗೆ ಮಾತುಕತೆಗೆ ಸಿದ್ಧ ಎಂದು ತಾಲಿಬಾನ್ ವಿರೋಧಿ ಹೋರಾಟದ ನಾಯಕ ಅಹ್ಮದ್ ಮಸೂದ್ ಹೇಳಿದ್ದಾರೆ. ‘ಪ್ಯಾರಿಸ್ ಮ್ಯಾಚ್’ ಪೋರ್ಟಲ್‌ಗೆ ಅವರು ನೀಡಿದ ಸಂದರ್ಶನ ಬುಧವಾರ ಪ್ರಕಟವಾಗಿದೆ.

ತಾಲಿಬಾನ್ ವಿರುದ್ಧ ಹೋರಾಟದಲ್ಲಿ ದಂತಕತೆಯೇ ಆಗಿ ಮಾರ್ಪಟ್ಟಿದ್ದ ಕಮಾಂಡರ್ ಅಹ್ಮದ್ ಶಾ ಮಸೂದ್ ಮಗನಾಗಿರುವ ಅಹ್ಮದ್ ಮಸೂದ್, ಕಾಬೂಲ್‌ನ ಉತ್ತರ ಭಾಗದಲ್ಲಿರುವ ಪಂಜ್‌ಶಿರ್ ಕಣಿವೆಯಲ್ಲಿ ನೆಲೆಯಾಗಿದ್ದಾರೆ. ಇದು ಅವರ ಹುಟ್ಟೂರು ಕೂಡ ಹೌದು. ಅವರ ಜತೆಗೆ ಕಾಬೂಲ್‌ನ ಮಾಜಿ ಉಪಾಧ್ಯಕ್ಷ ಅಮ್ರುಲ್ಲಾ ಸಾಲಿಹ್ ಕೂಡ ಇದ್ದಾರೆ.

ತಾಲಿಬಾನ್ ಗೆಲುವಿನ ಬಳಿಕ ಮಸೂದ್ ನೀಡಿದ ಮೊದಲ ಸಂದರ್ಶನ ಇದು. ಶರಣಾಗುವುದಕ್ಕಿಂತ ಸಾಯುವುದೇ ಲೇಸು ಎಂದು ಅವರು ಹೇಳಿದ್ದಾರೆ. ‘ನಾನು ಅಹ್ಮದ್ ಶಾ ಮಸೂದ್ ಮಗ. ಶರಣಾಗತಿ ಎಂಬ ಪದ ನನ್ನ ನಿಘಂಟಿನಲ್ಲಿಯೇ ಇಲ್ಲ’ ಎಂದಿದ್ದಾರೆ.

ತಾವು ರೂಪಿಸಿರುವ ನ್ಯಾಷನಲ್ ರೆಸಿಸ್ಟೆನ್ಸ್ ಫ್ರಂಟ್‌ಗೆ ಸಾವಿರಾರು ಜನರು ಸೇರ್ಪಡೆ ಆಗಿದ್ದಾರೆ. ಅವರೆಲ್ಲರೂ ಪಂಜ್‌ಶಿರ್ ಕಣಿವೆಯಲ್ಲಿ ಇದ್ದಾರೆ. ಪಂಜ್‌ಶಿರ್ ಅತ್ಯಂತ ದುರ್ಗಮ ಮತ್ತು ಗೆಲ್ಲಲು ಕಠಿಣವಾದ ಪ್ರದೇಶ. 1979ರಲ್ಲಿ ಸೋವಿಯತ್ ಆಕ್ರಮಣದ ಸಂದರ್ಭದಲ್ಲಿ ಮತ್ತು 1996–2001ರ ತಾಲಿಬಾನ್ ಆಳ್ವಿಕೆ ಅವಧಿಯಲ್ಲಿ ಈ ಪ್ರದೇಶವನ್ನು ವಶಕ್ಕೆ ಪಡೆಯುವುದು ಸಾಧ್ಯವಾಗಿರಲಿಲ್ಲ.

ಜಾಗತಿಕ ನೆರವಿಗಾಗಿ ಮಸೂದ್ ಮತ್ತೆ ಮನವಿ ಮಾಡಿಕೊಂಡಿದ್ದಾರೆ. ಫ್ರಾನ್ಸ್ ಅಧ್ಯಕ್ಷ ಇಮ್ಯಾನುವೆಲ್ ಮ್ಯಾಕ್ರನ್ ಅವರನ್ನೂ ನೆರವಿಗಾಗಿ ಕೋರಿದ್ದಾರೆ. ತಾಲಿಬಾನ್ ಕೈಗೆ ಕಾಬೂಲ್ ಸಿಗುವುದಕ್ಕೆ ಮೊದಲು ಶಸ್ತ್ರಾಸ್ತ್ರಕ್ಕೆ ಮಾಡಿದ ಮನವಿ ತಿರಸ್ಕೃತ ಆದದ್ದರ ಬಗ್ಗೆ ಅಸಮಾಧಾನವನ್ನೂ ವ್ಯಕ್ತಪಡಿಸಿದ್ದಾರೆ.

‘ಎಂಟೇ ದಿನಗಳ ಹಿಂದೆ ನಾನು ಶಸ್ತ್ರಾಸ್ತ್ರಕ್ಕಾಗಿ ಇಟ್ಟ ಮೊರೆಯನ್ನು ಆಲಿಸದೆ ಚಾರಿತ್ರಿಕ ಪ್ರಮಾದ ಎಸಗಿದವರನ್ನು ನಾನು ಎಂದಿಗೂ ಮರೆಯಲಾರೆ’ ಎಂದೂ ಅವರು ಹೇಳಿದ್ದಾರೆ.

ಅವರು ಮನವಿಯನ್ನು ತಿರಸ್ಕರಿಸಿದರು. ಈಗ, ಆ ಶಸ್ತ್ರಾಸ್ತ್ರ–ಫಿರಂಗಿಗಳು, ಹೆಲಿಕಾಪ್ಟರ್‌ಗಳು, ಅಮೆರಿಕದಲ್ಲಿ ತಯಾರಾದ ಟ್ಯಾಂಕುಗಳು ಎಲ್ಲವೂ ತಾಲಿಬಾನ್ ಕೈಸೇರಿದೆ ಎಂದು ಮಸೂದ್ ವಿಷಾದ ವ್ಯಕ್ತಪಡಿಸಿದ್ದಾರೆ.

‘ತಾಲಿಬಾನ್ ಜತೆಗೆ ಮಾತುಕತೆಗೆ ಸಿದ್ಧ. ಎಲ್ಲ ಯುದ್ಧಗಳಲ್ಲಿಯೂ ಮಾತುಕತೆ ಇರುತ್ತದೆ. ನನ್ನ ತಂದೆಯೂ ಶತ್ರುಗಳ ಜತೆಗೆ ಮಾತುಕತೆ ನಡೆಸಿದ್ದರು’ ಎಂದು ಅವರು ಹೇಳಿದ್ದಾರೆ.

‘ಮಹಿಳೆಯರು, ಅಲ್ಪಸಂಖ್ಯಾತರು, ಪ್ರಜಾಸತ್ತೆ, ಮುಕ್ತ ಸಮಾಜದ ತತ್ವಗಳನ್ನು ಗೌರವಿಸಲು ತಾಲಿಬಾನ್ ಒಪ್ಪಿದ್ದಾಗಿ ಕಲ್ಪಿಸಿಕೊಳ್ಳೋಣ. ಈ ತತ್ವಗಳು ತಾಲಿಬಾನ್ ಅನ್ನೂ ಸೇರಿಸಿ ಎಲ್ಲ ಅಫ್ಗನ್ನರಿಗೂ ಪ್ರಯೋಜನಕಾರಿ ಎಂದು ಅವರಿಗೆ ಮನದಟ್ಟು ಮಾಡಲು ಯತ್ನಿಸೋಣ’ ಎಂದು ಮಸೂದ್ ವಿವರಿಸಿದ್ದಾರೆ.

1980ರ ದಶಕದಲ್ಲಿ ಸೋವಿಯತ್ ವಿರುದ್ಧದ ಹೋರಾಟ ಮತ್ತು 1990ರ ದಶಕದಲ್ಲಿ ತಾಲಿಬಾನ್ ವಿರುದ್ಧ ಹೋರಾಟದಲ್ಲಿ ಮಸೂದ್ ತಂದೆ ಮುಂಚೂಣಿಯಲ್ಲಿ ಇದ್ದರು. ಅವರನ್ನು ‘ಪಂಜ್‌ಶಿರ್‌ನ ಸಿಂಹ’ ಎಂದೇ ಕರೆಯುತ್ತಿದ್ದರು. 2001ರ ಸೆಪ್ಟೆಂಬರ್ 11ರ ದಾಳಿಗೆ (9/11) ಎರಡು ದಿನ ಮೊದಲು ಅವರನ್ನು ಅಲ್ ಕೈದಾ ಹತ್ಯೆ ಮಾಡಿತ್ತು.

ಆಡಳಿತ ವ್ಯವಸ್ಥೆ ಸ್ಥಾಪನೆಗೆ ಮುಂದಾದ ತಾಲಿಬಾನ್

ಕಾಬೂಲ್: ತಾಲಿಬಾನ್ ಪಡೆಯು, ತನ್ನ ಇಬ್ಬರು ಹಿರಿಯ ನಾಯಕರನ್ನು ಅಫ್ಘಾನಿಸ್ತಾನದ ಹಣಕಾಸು ಹಾಗೂ ರಕ್ಷಣಾ ಸಚಿವರನ್ನಾಗಿ ನೇಮಿಸಿದೆ.

ದೇಶವನ್ನು ತೆಕ್ಕೆಗೆ ತೆಗೆದುಕೊಂಡ ಸಂಭ್ರಮದಿಂದ ಆಡಳಿತದ ಕಡೆಗೆ ಚಿತ್ತ ಹರಿಸಿರುವ ತಾಲಿಬಾನ್‌ಗೆ, ಸದ್ಯದ ಬಿಕ್ಕಟ್ಟಿನ ಪರಿಸ್ಥಿತಿಯಲ್ಲಿ ದೇಶವನ್ನು ನಡೆಸುವುದು ಹೇಗೆ ಎಂಬುದು ಸವಾಲಾಗಿದೆ. ಆ ಕಾರಣಕ್ಕಾಗಿಯೇ ಸಚಿವರ ನೇಮಕಾತಿಗೆ ಮುಂದಾಗಿದೆ ಎಂದು ತಿಳಿದುಬಂದಿದೆ. ಆದರೆ, ಅದು ಈ ನೇಮಕಾತಿಯನ್ನು ಅಧಿಕೃತವಾಗಿ ಘೋಷಿಸಿಲ್ಲ.

ಅಮೆರಿಕದ ಗುಂಟಾನಮೊ ಬಂಧಿತರ ಶಿಬಿರದಲ್ಲಿದ್ದ ಮುಲ್ಲಾ ಅಬ್ದುಲ್ ಖಯ್ಯಾಂನನ್ನು ರಕ್ಷಣಾ ಸಚಿವನನ್ನಾಗಿ ನೇಮಿಸಲಾಗಿದೆ ಎಂದು ತಾಲಿಬಾನ್ ಪಡೆಯ ಮೂಲಗಳನ್ನು ಉಲ್ಲೇಖಿಸಿ, ಅಲ್ ಜಝೀರಾ ಸುದ್ದಿವಾಹಿನಿಯು ವರದಿ ಮಾಡಿದೆ. ಕಾಬೂಲ್‌ನಲ್ಲಿನ ತಾಲಿಬಾನ್ ಅಧಿಕಾರಿಯೊಬ್ಬರೂ ಇದನ್ನು ರಾಯಿಟರ್ಸ್ ಸುದ್ದಿಸಂಸ್ಥೆಗೆ ದೃಢಪಡಿಸಿದ್ದು, ನೇಮಕಗೊಂಡವರ ಹೆಸರನ್ನು ಬಹಿರಂಗಪಡಿಸಿಲ್ಲ.



ಇರಾನ್ ಮೂಲಕ ಟರ್ಕಿ ಪ್ರವೇಶಿಸಿದ ಅಫ್ಘಾನಿಸ್ತಾನ ನಿರಾಶ್ರಿತರು ಭದ್ರತಾ ಪಡೆಗಳ ಕಣ್ಣಿಗೆ ಬೀಳದಂತೆ ಅಡಗಿದ್ದ ದೃಶ್ಯ ರಾಯಿಟರ್ಸ್ ಚಿತ್ರ

ಆದರೆ, ಹಣಕಾಸು ಸಚಿವ ಸ್ಥಾನಕ್ಕೆ ಗುಲ್ ಆಘಾ, ಆಂತರಿಕ ಆಡಳಿತ ಸಚಿವ ಸ್ಥಾನಕ್ಕೆ ಸದ್ರ್ ಇಬ್ರಾಹಿಂ ಅವರನ್ನು ಹಂಗಾಮಿಯಾಗಿ ನೇಮಕ ಮಾಡಿದ್ದಾಗಿ ಅಫ್ಘಾನಿಸ್ತಾನದ ಪಾಝ್ವೋಕ್ ಸುದ್ದಿಸಂಸ್ಥೆಯು ತಿಳಿಸಿದೆ.

ಇದರೊಂದಿಗೆ ತಾಲಿಬಾನ್ ಸರ್ಕಾರದಲ್ಲಿನ ಸ್ಥಾನಗಳಿಗೆ ನೇಮಕಗೊಳ್ಳುವವರ ಹೆಸರುಗಳು ಬಹುತೇಕ ಪರಿಚಿತವೇ ಆಗಿರಲಿದ್ದು, ಅವರಲ್ಲಿ ಬಹಳಷ್ಟು ಜನ ದಕ್ಷಿಣ ಪ್ರಾಂತ್ಯದ ಹೆಲ್ಮಾಂಡ್ ಹಾಗೂ ಕಂದಹಾರ್‌ಗೆ ಸೇರಿದವರಾಗಿರುತ್ತಾರೆ ಎಂದು ರಾಜಕೀಯ ತಜ್ಞರೊಬ್ಬರು ವಿಶ್ಲೇಷಿಸಿದ್ದಾರೆ.

ಹಣಕಾಸು ಸಚಿವನಾಗಿ ನೇಮಕಗೊಂಡಿರುವ ಗುಲ್ ಆಘಾ, ತಾಲಿಬಾನ್ ಸಂಸ್ಥಾಪಕನಾಗಿದ್ದ ಮುಲ್ಲಾ ಒಮರ್‌ನ ಬಾಲ್ಯಸ್ನೇಹಿತನೂ ಹೌದು. ಒಂದು ಕಾಲಕ್ಕೆ ಆಘಾನ ಅನುಮತಿ ಇಲ್ಲದೇ ಒಮರ್‌ನ ಭೇಟಿ ಸಾಧ್ಯವಾಗುತ್ತಿರಲಿಲ್ಲ ಎನ್ನುತ್ತಾರೆ ಓಸ್ಲೊದಲ್ಲಿನ, ಸಾಗರೋತ್ತರ ಸಶಸ್ತ್ರಪಡೆಗಳ ಅಭಿವೃದ್ಧಿ ಅಧ್ಯಯನ ಕೇಂದ್ರದ ಸಹ ನಿರ್ದೇಶಕ ಆಶ್ಲೆ ಜಾಕ್ಸನ್.

ಆಯಕಟ್ಟಿನ ಸ್ಥಾನಗಳಿಗೆ ನಿಷ್ಠರನ್ನು ನೇಮಿಸುವುದರೊಂದಿಗೆ, ಹಣಕಾಸು ಇಲಾಖೆಯ ಅಧಿಕಾರಿಗಳು ಹಾಗೂ ಕೇಂದ್ರ ಬ್ಯಾಂಕ್ ಸಿಬ್ಬಂದಿಗೆ ಕೆಲಸಕ್ಕೆ ಮರಳುವಂತೆ ತಾಲಿಬಾನ್ ಸೂಚಿಸಿದೆ.

ನಿಲ್ದಾಣ ನಿರ್ವಹಣೆಗೆ ನೆರವು ಕೋರಿಕೆ

ಅಂಕಾರ (ರಾಯಿಟರ್ಸ್): ಅಮೆರಿಕ ಮತ್ತು ನ್ಯಾಟೊ ಪಡೆಗಳು ತೆರಳಿದ ಬಳಿಕ ಕಾಬೂಲ್ ವಿಮಾನ ನಿಲ್ದಾಣ ನಿರ್ವಹಣೆಗೆ ನೆರವು ನೀಡಬೇಕು ಎಂದು ಟರ್ಕಿಯನ್ನು ತಾಲಿಬಾನ್ ಕೋರಿದೆ ಎಂದು ಟರ್ಕಿಯ ಅಧಿಕಾರಿಗಳು ಹೇಳಿದ್ದಾರೆ.

ಅಫ್ಘಾನಿಸ್ತಾನದಲ್ಲಿರುವ ಟರ್ಕಿ ಸೈನಿಕರು ಇದೇ 31ರೊಳಗೆ ದೇಶ ತೊರೆಯಬೇಕು ಎಂದೂ ತಾಲಿಬಾನ್ ಸೂಚಿಸಿದೆ.

ತಾಲಿಬಾನ್ ನಿಯಂತ್ರಣಕ್ಕೆ ಬರುವ ಕಾಬೂಲ್ ವಿಮಾನ ನಿಲ್ದಾಣದ ನಿರ್ವಹಣೆಯು ಅತ್ಯಂತ ಅಪಾಯಕಾರಿ ಕೆಲಸ. ಜತೆಗೆ, ಟರ್ಕಿಯು ನ್ಯಾಟೊದ ಭಾಗವೂ ಆಗಿದೆ. ಹಾಗಾಗಿ, ವಿಮಾನ ನಿಲ್ದಾಣ ನಿರ್ವಹಣೆಯ ಹೊಣೆಯನ್ನು ವಹಿಸಿಕೊಳ್ಳಬೇಕೇ ಬೇಡವೇ ಎಂಬ ದ್ವಂದ್ವಕ್ಕೆ ಟರ್ಕಿ ಸಿಲುಕಿದೆ.

ತಾಲಿಬಾನ್ ಗೆಲುವಿನ ಅಂದಾಜು ಇತ್ತು: ರಾವತ್

ನವದೆಹಲಿ (ಪಿಟಿಐ): ಅಫ್ಘಾನಿಸ್ತಾನವನ್ನು ತಾಲಿಬಾನ್ ಸ್ವಾಧೀನಪಡಿಸಿಕೊಳ್ಳುವ ಅಂದಾಜು ಭಾರತಕ್ಕೆ ಇತ್ತು. ಆದರೆ, ತಾಲಿಬಾನ್‌ನ ತ್ವರಿತಗತಿ ಆಶ್ಚರ್ಯಗೊಳಿಸಿದೆ ಎಂದು ರಕ್ಷಣಾ ಪಡೆಗಳ ಮುಖ್ಯಸ್ಥ ಜನರಲ್ ಬಿಪಿನ್ ರಾವತ್ ಬುಧವಾರ ಹೇಳಿದ್ದಾರೆ.



ರಾವತ್

ಅಬ್ಸರ್ವರ್ ರಿಸರ್ಚ್ ಫೌಂಡೇಷನ್ (ಒಆರ್‌ಎಫ್) ಆಯೋಜಿಸಿದ್ದ ಅಮೆರಿಕದ ಇಂಡೊ–ಪೆಸಿಫಿಕ್ ಕಮಾಂಡ್‌ನ ಕಮಾಂಡರ್ ಅಡ್ಮಿರಲ್ ಜಾನ್ ಅಕ್ವಿಲಿನೊ ಅವರ ಜೊತೆಗಿನ ಸಂವಾದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಕಳೆದ 20 ವರ್ಷಗಳಿಂದ ತಾಲಿಬಾನ್ ಉದ್ದೇಶ ಮಾತ್ರ ಬದಲಾಗಿಲ್ಲ ಎಂದು ಇದೇ ವೇಳೆ ಉಲ್ಲೇಖಿಸಿದರು.

ತಾಲಿಬಾನ್ ನಿಯಂತ್ರಿತ ಅಫ್ಘಾನಿಸ್ತಾನದಿಂದ ಹೊರಹೊಮ್ಮುವ ಯಾವುದೇ ಭಯೋತ್ಪಾದಕ ಚಟುವಟಿಕೆಗಳು ಭಾರತಕ್ಕೆ ಪ್ರವೇಶಿಸುವುದನ್ನು ತಡೆಹಿಡಿಯಲಾಗುವುದು ಎಂದು ಭರವಸೆ ನೀಡಿದ ಅವರು, ಭಯೋತ್ಪಾದನೆ ವಿರುದ್ಧದ ಜಾಗತಿಕ ಯುದ್ಧದಲ್ಲಿ ಕ್ವಾಡ್ ರಾಷ್ಟ್ರಗಳು ಸಹಕಾರವನ್ನು ಹೆಚ್ಚಿಸಬೇಕು ಎಂದು ಮನವಿ ಮಾಡಿದರು.

‘ಕಳೆದ 20 ವರ್ಷಗಳ ಹಿಂದೆ ಇದ್ದ ತಾಲಿಬಾನ್ ಬದಲಾಗಿಲ್ಲ. ಆದರೆ ಅದರಲ್ಲಿರುವ ಜನರು ಮಾತ್ರ ಬದಲಾಗಿದ್ದಾರೆ. ಸಂಘಟನೆಯು ಅಲ್ಲಿ ಯಾವ ರೀತಿ ಚಟುವಟಿಕೆ ನಡೆಸುತ್ತಿದೆ ಎಂದು ಅಲ್ಲಿಂದ ಬಂದ ಸಂತ್ರಸ್ತರು ಹೇಳುತ್ತಾರೆ’ ಎಂದು ರಾವತ್ ವಿವರಿಸಿದರು.

ತಾಲಿಬಾನ್ ವಿರುದ್ಧ ಪೋಸ್ಟ್: ಮುಸ್ಲಿಂ ಲೀಗ್ ಶಾಸಕನಿಗೆ ಬೆದರಿಕೆ ಪತ್ರ

ಕೋಯಿಕ್ಕೋಡ್ (ಪಿಟಿಐ): ಅಫ್ಘಾನಿಸ್ತಾನ ಜನತೆಯ ವಿರುದ್ಧ ತಾಲಿಬಾನ್ ನಡೆಸಿದ ಕ್ರೌರ್ಯದ ಬಗ್ಗೆ ಸಾಮಾಜಿಕ ಮಾಧ್ಯಮದಲ್ಲಿ ಸಂದೇಶವೊಂದನ್ನು ಪೋಸ್ಟ್ ಮಾಡಿದ್ದ ಮುಸ್ಲಿಂ ಲೀಗ್ ಶಾಸಕ ಎಂ.ಕೆ.ಮುನೀರ್ ಅವರಿಗೆ ಬುಧವಾರ ಅನಾಮಧೇಯ ಬೆದರಿಕೆ ಪತ್ರವೊಂದು ಬಂದಿದೆ.

‘ತಾಲಿಬಾನ್– ಒಂದು ವಿಸ್ಮಯ’ ಎಂಬ ಹೆಸರಿನಲ್ಲಿ ಬುಧವಾರ ಬೆಳಿಗ್ಗೆ ಶಾಸಕರಿಗೆ ಈ ಪತ್ರ ಬಂದಿದೆ. ಇನ್ನು 24 ಗಂಟೆಗಳಲ್ಲಿ ತಾಲಿಬಾನ್ ವಿರೋಧಿ ಪೋಸ್ಟ್ ಅನ್ನು ಫೇಸ್‌ಬುಕ್‌ನಿಂದ ತೆಗೆದುಹಾಕದಿದ್ದರೆ ಅವರು ಮತ್ತು ಅವರ ಕುಟುಂಬದವರನ್ನು ಇಲ್ಲವಾಗಿಸುವುದಾಗಿ ಜೀವ ಬೆದರಿಕೆ ಹಾಕಿದ್ದಾರೆ ಎಂದು ಶಾಸಕರು ಹೇಳಿದರು.

ಇಲ್ಲಿನ ಸರ್ಕಾರಿ ವೈದ್ಯಕೀಯ ಕಾಲೇಜು ಪ್ರದೇಶದಿಂದ ಪತ್ರ ಪೋಸ್ಟ್ ಮಾಡಲಾಗಿದೆ. ಧರ್ಮನಿಂದೆಯ ಆರೋಪದಲ್ಲಿ 2010ರಲ್ಲಿ ಕೈ ತುಂಡಾದ ಪ್ರೊ.ಟಿ.ಕೆ.ಜೋಸೆಫ್ ಅವರ ಸ್ಥಿತಿ ತಮಗೂ ಬರಲಿದೆ ಎಂದು ಮುನೀರ್ ಅವರಿಗೆ ಪತ್ರದಲ್ಲಿ ಎಚ್ಚರಿಕೆ ನೀಡಲಾಗಿದೆ.

ಈ ಬಗ್ಗೆ ಪೊಲೀಸರಿಗೆ ದೂರು ನೀಡಲಾಗುವುದು ಎಂದು ಮುನೀರ್ ಹೇಳಿದ್ದಾರೆ.

ಇ.ಡಿ., ಸಿಬಿಐ ತನಿಖೆ ವಿಳಂಬಕ್ಕೆ ‘ಸುಪ್ರೀಂ’ ಕಳವಳ

ನವದೆಹಲಿ (ಪಿಟಿಐ): ಜಾರಿ ನಿರ್ದೇಶನಾಲಯ (ಇ.ಡಿ) ಮತ್ತು ಸಿಬಿಐಯಲ್ಲಿ ಸಂಸದರು, ಶಾಸಕರ ವಿರುದ್ಧ ದಾಖಲಾಗಿರುವ ಪ್ರಕರಣಗಳ ತನಿಖೆಯಲ್ಲಿ ಆಗುತ್ತಿರುವ ಭಾರಿ ವಿಳಂಬದ ಬಗ್ಗೆ ನ್ಯಾಯಾಲಯವು ಕಳವಳ ವ್ಯಕ್ತಪಡಿಸಿದೆ. ಇಂತಹ ಪ್ರಕರಣಗಳ ತ್ವರಿತ ತನಿಖೆಗೆ ಅಗತ್ಯವಾದ ಮಾನವ ಸಂಪನ್ಮೂಲ ಮತ್ತು ಮೂಲಸೌಕರ್ಯ ಒದಗಿಸುವಂತೆ ಕೇಂದ್ರ ಸರ್ಕಾರಕ್ಕೆ ಸೂಚಿಸಿದೆ.

ಈ ವಿಚಾರಕ್ಕೆ ಸಂಬಂಧಿಸಿ ವಿವರವಾದ ಆದೇಶ ಪ್ರಕಟಿಸಲಾಗುವುದು. ಆದರೆ, ಜಾರಿ ನಿರ್ದೇಶನಾಲಯ ಅಥವಾ ಸಿಬಿಐಯಂತಹ ಸಂಸ್ಥೆಯ ಬಗ್ಗೆ ಯಾವುದೇ ಅಭಿಪ್ರಾಯವನ್ನು ವ್ಯಕ್ತಪಡಿಸುವುದಿಲ್ಲ. ಹೀಗೆ ವ್ಯಕ್ತಪಡಿಸುವ ಅಭಿಪ್ರಾಯವು ಈ ಸಂಸ್ಥೆಗಳ ನೈತಿಕಸ್ಥೈರ್ಯ ಕುಸಿಯಲು ಕಾರಣ ಆಗಬಹುದು ಎಂದು ಮುಖ್ಯ ನ್ಯಾಯಮೂರ್ತಿ ಎನ್.ವಿ. ರಮಣ, ನ್ಯಾಯಮೂರ್ತಿಗಳಾದ ಡಿ.ವೈ. ಚಂದ್ರಚೂಡ್ ಮತ್ತು ಸೂರ್ಯಕಾಂತ್ ಅವರ ಪೀಠವು ಹೇಳಿದೆ.

‘ಈ ನ್ಯಾಯಾಲಯದಲ್ಲಿ 200ಕ್ಕೂ ಹೆಚ್ಚು ಪ್ರಕರಣಗಳು ಇವೆ. ಈ ಪ್ರಕರಣಗಳ ಯಾವ ವರದಿಯೂ ಸಮರ್ಪಕ ಆಗಿಲ್ಲ ಎಂದು ಹೇಳಲು ವಿಷಾದ ಎನಿಸುತ್ತದೆ, ತುಷಾರ್ ಮೆಹ್ತಾ (ಸಾಲಿಸಿಟರ್ ಜನರಲ್) ಅವರೇ. 10–15 ವರ್ಷಗಳಿಂದ ಆರೋಪಪಟ್ಟಿಯನ್ನೇ ಸಲ್ಲಿಸದೇ ಇರುವುದಕ್ಕೆ ಯಾವ ಕಾರಣವನ್ನೂ ಕೊಟ್ಟಿಲ್ಲ. ನೂರಾರು ಕೋಟಿ ರೂಪಾಯಿಯ ಆಸ್ತಿ ಮುಟ್ಟುಗೋಲು ಹಾಕಿ ಸುಮ್ಮನಾಗುವುದರಿಂದ ಯಾವ ಪ್ರಯೋಜನವೂ ಇಲ್ಲ’ ಎಂದು ಪೀಠವು ಹೇಳಿದೆ.

ಗಂಭೀರ ಅಪರಾಧ ಪ್ರಕರಣಗಳಲ್ಲಿ ಭಾಗಿಯಾದ ಜನಪ್ರತಿನಿಧಿಗಳಿಗೆ ಆಜೀವ ನಿಷೇಧ ಹೇರಬೇಕು, ಪ್ರಕರಣಗಳ ವಿಚಾರಣೆಯು ತ್ವರಿತವಾಗಿ ನಡೆಯಬೇಕು ಎಂದು ವಕೀಲ ಅಶ್ವಿನಿ ಉಪಾಧ್ಯಾಯ ಅವರು ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಮೊಕದ್ದಮೆಯ ವಿಚಾರಣೆಯನ್ನು ಪೀಠವು ನಡೆಸಿತು.

ಜಾರಿ ನಿರ್ದೇಶನಾಲಯ ಮತ್ತು ಸಿಬಿಐಯಲ್ಲಿ ಜನಪ್ರತಿನಿಧಿಗಳ ವಿರುದ್ಧ ದಾಖಲಾಗಿರುವ ಪ್ರಕರಣಗಳ ತನಿಖೆಯ ಬಗೆಗಿನ ಸ್ಥಿತಿಗತಿ ವರದಿಯು ಆಘಾತಕಾರಿಯಾಗಿದೆ. ತನಿಖೆಯು ತ್ವರಿತಗೊಳ್ಳಲು ಸರ್ಜರಿ ಅಗತ್ಯ ಇದೆ ಎಂದು ಪ್ರಕರಣದಲ್ಲಿ ನ್ಯಾಯಾಲಯದ ಸಹಾಯಕರಾಗಿ ನೇಮಕವಾಗಿರುವ ವಿಜಯ್ ಹನ್ಸರಿಯಾ ಹೇಳಿದರು.

‘ಇ.ಡಿ. ಮತ್ತು ಸಿಬಿಐ ಕುರಿತ ವರದಿಗಳನ್ನು ನ್ಯಾಯಾಲಯವು ಗಮನಿಸಿದೆ. ತನಿಖೆಯನ್ನು ತ್ವರಿತಗೊಳಿಸಿ ಎಂದು ಹೇಳುವುದು ಸುಲಭ. ಆದರೆ, ಹಲವು ಸಮಸ್ಯೆಗಳು ಇವೆ ಎಂಬುದು ನಮಗೆ ತಿಳಿದಿದೆ. ನ್ಯಾಯಾಧೀಶರು, ನ್ಯಾಯಾಲಯಗಳು, ಮೂಲಸೌಕರ್ಯ ಎಲ್ಲದರ ಕೊರತೆಯೂ ಇದೆ. ಇ.ಡಿ.ಯಲ್ಲಿ 2012ರಿಂದ 76 ಪ್ರಕರಣಗಳು ಬಾಕಿ ಇವೆ. ಸಿಬಿಐಯಲ್ಲಿ ಜೀವಪರ್ಯಂತ ಶಿಕ್ಷೆ ವಿಧಿಸಬಹುದಾದ 58 ಪ್ರಕರಣಗಳು ಬಾಕಿ ಇವೆ. ಇವುಗಳಲ್ಲಿ ಹಳೆಯದು 2000ನೇ ಇಸವಿಯಲ್ಲಿ ದಾಖಲಾಗಿದೆ’ ಎಂದು ರಮಣ ಅವರು ಹೇಳಿದ್ದಾರೆ.

‘ಪ್ರಕರಣ ರದ್ದು ರಾಜ್ಯದ ಅಧಿಕಾರ’

‘ದುರುದ್ದೇಶಪೂರಿತ’ವಾಗಿ ದಾಖಲಿಸಲಾದ ಅಪರಾಧ ಪ್ರಕರಣಗಳನ್ನು ರದ್ದುಪಡಿಸುವ ಅಧಿಕಾರ ರಾಜ್ಯ ಸರ್ಕಾರಗಳಿಗೆ ಇದೆ. ಆದರೆ, ಈ ಪ್ರಕರಣಗಳು ಸಂಬಂಧಪಟ್ಟ ಹೈಕೋರ್ಟ್‌ನ ಪರಿಶೀಲನೆಗೆ ಒಳಪಟ್ಟಿರಬೇಕು ಎಂದು ಸುಪ್ರೀಂ ಕೋರ್ಟ್ ಬುಧವಾರ ಹೇಳಿದೆ. ದುರುದ್ದೇಶದಿಂದ ದಾಖಲಿಸಲಾದ ಪ್ರಕರಣಗಳನ್ನು ಹಿಂದಕ್ಕೆ ಪಡೆಯುವುದಕ್ಕೆ ತಾನು ವಿರುದ್ಧ ಅಲ್ಲ ಎಂದೂ ಕೋರ್ಟ್ ಹೇಳಿದೆ.

ಇ–ವೀಸಾ ಬಳಕೆಗೆ ಭಾರತ ಸೂಚನೆ

ನವದೆಹಲಿ (ಪಿಟಿಐ): ಇನ್ನು ಮುಂದೆ ಭಾರತಕ್ಕೆ ಬರಲು ಇಚ್ಛಿಸುವ ಎಲ್ಲಾ ಅಫ್ಗನ್ ಪ್ರಜೆಗಳು ಇ–ವೀಸಾ ಬಳಸಿ ಭಾರತಕ್ಕೆ ಪ್ರಯಾಣಿಸಬೇಕು ಎಂದು ಕೇಂದ್ರ ಗೃಹ ಸಚಿವಾಲಯ ಬುಧವಾರ ಘೋಷಿಸಿದೆ.

ಅಫ್ಘಾನಿಸ್ತಾನದ ಸದ್ಯದ ಪರಿಸ್ಥಿಯತಿಯಲ್ಲಿ ವೀಸಾ ಪ್ರಕ್ರಿಯೆಯನ್ನು ವ್ಯವಸ್ಥಿತಗೊಳಿಸುವ ನಿಟ್ಟಿನಲ್ಲಿ ಸರ್ಕಾರ ‘ಇ–ಎಮರ್ಜೆನ್ಸಿ ಎಕ್ಸ್–ಮಿಸ್ಕ್ ವೀಸಾ’ವನ್ನು ಪರಿಚಯಿಸಿದೆ. ಇನ್ನು ಮುಂದೆ ಅಫ್ಗನ್ನರು ಇದೇ ವೀಸಾ ಬಳಸಿ ಭಾರತಕ್ಕೆ ಬರಬೇಕು ಎಂದಿದೆ.

ಅಫ್ಘಾನಿಸ್ತಾನದ ಭಾರತೀಯ ರಾಯಭಾರ ಕಚೇರಿಯನ್ನು ಮುಚ್ಚಿರುವ ಕಾರಣ ಅರ್ಜಿಗಳನ್ನು ದೆಹಲಿಯಲ್ಲೇ ಪರಿಶೀಲಿಸಲಾಗುವುದು. ಇ–ಎಮರ್ಜೆನ್ಸಿ ಎಕ್ಸ್–ಮಿಸ್ಕ್ ವೀಸಾ 6 ತಿಂಗಳುಗಳ ವರೆಗೆ ಊರ್ಜಿತವಾಗಿರಲಿದೆ. ಅಫ್ಘಾನಿಸ್ತಾನದ ಎಲ್ಲಾ ಧರ್ಮೀಯರೂ ಇ–ವೀಸಾಕ್ಕೆ ಅರ್ಜಿ ಸಲ್ಲಿಸಬಹುದು ಎಂದು ಸಚಿವಾಲಯ ತಿಳಿಸಿದೆ. ಭಾರತ ತನ್ನ ರಾಯಭಾರ ಕಚೇರಿಯ ಎಲ್ಲಾ ಸಿಬ್ಬಂದಿಯನ್ನು ಮತ್ತು ಅಫ್ಘಾನಿಸ್ತಾನದಲ್ಲಿ ನೆಲೆಸಿದ್ದ ನೂರಾರು ಜನರನ್ನು ಭಾರತಕ್ಕೆ ಕರೆತಂದಿದೆ.

ಪ್ಯಾರಾಲಿಂಪಿಕ್ಸ್: ವೈಯಕ್ತಿಕ ಸಾಧನೆ ಉತ್ತಮಪಡಿಸಿಕೊಂಡ ಆಸ್ಟ್ರೇಲಿಯಾ ಸೈಕ್ಲಿಸ್ಟ್ ಪೀಜ್ ಗ್ರೆಕೊ

ಚಿಗುರಿದ ಸಾರಾ, ಡಯಾಸ್ ದಾಖಲೆ ಕನಸು


ಟೋಕಿಯೊ (ಎಪಿ/ಎಎಫ್‌ಪಿ/ಪಿಟಿಐ): ಹೀಟ್ಸ್‌ನಲ್ಲಿ ವಿಶ್ವ ದಾಖಲೆ ಮುರಿದ ಬ್ರಿಟನ್‌ನ ಸಾರಾ ಸ್ಟೋರಿ ಅವರು ಪ್ಯಾರಾಲಿಂಪಿಕ್ಸ್‌ನ ಸೈಕ್ಲಿಂಗ್‌ನಲ್ಲಿ ದಾಖಲೆಯ ಚಿನ್ನ ಗಳಿಕೆಯತ್ತ ಹೆಜ್ಜೆ ಹಾಕಿದ್ದಾರೆ. ಕೂಟದ ಸ್ಪರ್ಧೆಗಳು ಆರಂಭಗೊಂಡ ಬುಧವಾರ ಈಜುಕೊಳ ಮತ್ತು ಸೈಕ್ಲಿಂಗ್ ಟ್ರ್ಯಾಕ್‌ನಲ್ಲಿ ವಿಶ್ವ ದಾಖಲೆ ಹಾಗೂ ಪ್ಯಾರಾಲಿಂಪಿಕ್ ದಾಖಲೆಗಳು ಮುರಿದುಬಿದ್ದವು.

ಸಿ–5 ವಿಭಾಗದ 3,000 ಮೀಟರ್ಸ್ ವೈಯಕ್ತಿಕ ಪರ್ಸ್ಯೂಟ್‌ನಲ್ಲಿ ಫೈನಲ್ ಪ್ರವೇಶಿಸಿದ ಸಾರಾ 15ನೇ ಚಿನ್ನದ ಮೇಲೆ ಕಣ್ಣಿಟ್ಟಿದ್ದಾರೆ. ಈ ಮೂಲಕ ಪ್ಯಾರಾಲಿಂಪಿಕ್ಸ್‌ನಲ್ಲಿ ಅತಿ ಹೆಚ್ಚು ಚಿನ್ನ ಗೆದ್ದ ತಮ್ಮದೇ ದೇಶದ ಮೈಕಿ ಕೆನಿ ಅವರ ದಾಖಲೆಯತ್ತ ದಾಪುಗಾಲು ಹಾಕಿದ್ದಾರೆ. ಮೈಕ್ ಕೆನಿ ಅವರು ಪ್ಯಾರಾಲಿಂಪಿಕ್ಸ್‌ನ ಈಜಿನಲ್ಲಿ ಒಟ್ಟು 16 ಬಾರಿ ಚಾಂಪಿಯನ್ ಆಗಿದ್ದಾರೆ.

ಬ್ರೆಜಿಲ್‌ನ ಡ್ಯಾನಿಯಲ್ ಡಯಾಸ್ ಅವರೂ ಅಮೋಘ ಸಾಧನೆಯತ್ತ ಸಾಗಿದ್ದಾರೆ. ಈಜು ಸ್ಪರ್ಧೆಯಲ್ಲಿ ಭಾಗವಹಿಸುತ್ತಿರುವ ಅವರು ಮೂರು ಪದಕಗಳನ್ನು ಗೆದ್ದರೆ ಕೆನಿ ಅವರ ದಾಖಲೆಯನ್ನು ಹಿಂದಿಕ್ಕಲಿದ್ದಾರೆ. ಬುಧವಾರ ನಡೆದ ಎಸ್–5 ವಿಭಾ ಗದ 200 ಮೀಟರ್ಸ್ ಫ್ರೀಸ್ಟೈನಲ್‌ನಲ್ಲಿ ಅವರಿಗೆ ಕಂಚಿನ ಪದಕ ಗೆಲ್ಲಲಷ್ಟೇ ಸಾಧ್ಯವಾಯಿತು. ಚಿನ್ನ, ಇಟಲಿಯ ಫ್ರಾನ್ಸಿಸ್ಕೊ ಬೊಷಿಯಾರ್ಡೊ ಪಾಲಾಯಿತು. ಡಯಾಸ್ ಈ ವರೆಗೆ 14 ಚಿನ್ನ ಸೇರಿದಂತೆ 25 ಪದಕಗಳನ್ನು ಗಳಿಸಿದ್ದಾರೆ.

ಪೀಜ್ ಗ್ರೆಕೊಗೆ ಮೊದಲ ಚಿನ್ನ: ಆಸ್ಟ್ರೇಲಿಯಾದ ಪೀಜ್ ಗ್ರೆಕೊ ಅವರು ಟೋಕಿಯೊ ಪ್ಯಾರಾಲಿಂಪಿಕ್ಸ್‌ನ ಮೊದಲ ಚಿನ್ನ ತಮ್ಮದಾಗಿಸಿಕೊಂಡರು. ವೆಲೊಡ್ರೋಮ್ ಟ್ರ್ಯಾಕ್‌ನಲ್ಲಿ ಬುಧವಾರ ನಡೆದ ಮಹಿಳೆಯರ ಸಿ–1, 3 ವಿಭಾಗದ ಮೂರು ಸಾವಿರ ಮೀಟರ್ಸ್ ವೈಯಕ್ತಿಕ ಪರ್ಸ್ಯೂಟ್‌ನಲ್ಲಿ ಚೀನಾದ ವಾಂಗ್ ಕ್ಸಿಯಾಮಿ ಅವರನ್ನು ಹಿಂದಿಕ್ಕಿ ಪೀಜ್ ಮೊದಲಿಗರಾದರು. ಜರ್ಮನಿಯ ಶಿಂಡ್ಲರ್ ಡೆನಿಸ್ ಕಂಚಿನ ಪದಕ ಗಳಿಸಿದರು.

ಜನಿಸಿದಾಗಲೇ ಸೆರೆಬ್ರಲ್ ಪಾಲ್ಸಿ ಸಮಸ್ಯೆಗೆ ಒಳಗಾಗಿದ್ದ ಗ್ರೆಕೊ ಅವರ ದೇಹದ ಬಲಭಾಗದಲ್ಲಿ ಸ್ವಾಧೀನ ಇರಲಿಲ್ಲ. ಆದರೂ ಕ್ರೀಡೆಯಲ್ಲಿ ತೊಡಗಿಸಿಕೊಂಡು ಸಾಧನೆ ಮಾಡಿದರು. ಇದು, ಪ್ಯಾರಾಲಿಂಪಿಕ್ಸ್‌ನಲ್ಲಿ ಅವರು ಗೆದ್ದ ಮೊದಲ ಪದಕವಾಗಿದೆ. ಹೀಟ್ಸ್‌ನಲ್ಲಿ ಎಂಟು ಸೆಕೆಂಡುಗಳ ಅಂತರದಲ್ಲಿ ತಮ್ಮದೇ ವಿಶ್ವ ದಾಖಲೆ ಮುರಿದ ಅವರು ಫೈನಲ್‌ನಲ್ಲಿ ಮತ್ತಷ್ಟು ಉತ್ತಮ ಸಾಧನೆ ಮಾಡಿ 3 ನಿಮಿಷ 50.815 ಸೆಕೆಂಡುಗಳಲ್ಲಿ ಗುರಿ ಮುಟ್ಟಿದರು.


ಡ್ಯಾನಿಯಲ್ ಡಯಾಸ್ –ರಾಯಿಟರ್ಸ್ ಚಿತ್ರ

ಅತ್ಯಂತ ಖುಷಿಯಾಗುತ್ತಿದೆ. ಪ್ಯಾರಾಲಿಂಪಿಕ್ಸ್‌ನಲ್ಲಿ ಚಿನ್ನದ ಪದಕ ಗೆದ್ದಿದ್ದೇನೆಂದು ನಂಬಲು ಸಾಧ್ಯವಾಗುತ್ತಿಲ್ಲ. ಆದ್ದರಿಂದ ಪದೇ ಪದೇ ಬಗ್ಗಿ ಪದಕವನ್ನೇ ನೋಡುತ್ತಿದ್ದೇನೆ.
ಪೀಜ್ ಗ್ರೆಕೊ
ಆಸ್ಟ್ರೇಲಿಯಾ ಸೈಕ್ಲಿಸ್ಟ್

ವ್ಹೀಲ್ ಚೇರ್ ರಗ್ಬಿ: ಆಸ್ಟ್ರೇಲಿಯಾಗೆ ಆಘಾತ

ವ್ಹೀಲ್‌ಚೇರ್ ರಗ್ಬಿ ಸ್ಪರ್ಧೆಯಲ್ಲಿ ಹ್ಯಾಟ್ರಿಕ್ ಚಿನ್ನದ ಕನಸಿನೊಂದಿಗೆ ಬಂದಿರುವ ಆಸ್ಟ್ರೇಲಿಯಾ ತಂಡಕ್ಕೆ ಆರಂಭದಲ್ಲೇ ಆಘಾತವಾಯಿತು. ಬುಧವಾರ ನಡೆದ ಪಂದ್ಯದಲ್ಲಿ ಇದೇ ಮೊದಲ ಬಾರಿ ಈ ಸ್ಪರ್ಧೆಯಲ್ಲಿ ಭಾಗವಹಿಸುತ್ತಿರುವ ಡೆನ್ಮಾರ್ಕ್ ವಿರುದ್ಧ ಆಸ್ಟ್ರೇಲಿಯಾ 53–54ರಲ್ಲಿ ಸೋತಿತು. ವ್ಹೀಲ್‌ಚೇರ್ ರಗ್ಬಿಯಲ್ಲಿ 2008ರಿಂದ ಆಸ್ಟ್ರೇಲಿಯಾ ಒಂದು ಪಂದ್ಯ ಕೂಡ ಸೋತಿರಲಿಲ್ಲ. ಎರಡು ಗುಂಪುಗಳಲ್ಲಿ ಅಗ್ರ ಸ್ಥಾನ ಗಳಿಸುವ ಎರಡು ತಂಡಗಳು ಮಾತ್ರ ಸೆಮಿಫೈನಲ್ ಪ್ರವೇಶಿಸಲಿವೆ.


ಸಾರಾ ಸ್ಟೋರಿ –ರಾಯಿಟರ್ಸ್ ಚಿತ್ರ


ಪೀಜ್ ಗ್ರೆಕೊ –ರಾಯಿಟರ್ಸ್ ಚಿತ್ರ

ಭವಿನಾಗೆ ಸೋಲು

ಭಾರತದ ಭವಿನಾ ಬೆನ್ ಪಟೇಲ್ ಮತ್ತು ಸೋನಲ್ ಬೆನ್ ಪಟೇಲ್ ಅವರು ಪ್ಯಾರಾಲಿಂಪಿಕ್ಸ್ ಟೇಬಲ್ ಟೆನಿಸ್‌ನ ಮೊದಲ ಸುತ್ತಿನಲ್ಲಿ ಸೋತರು. ಮಹಿಳೆಯರ ಕ್ಲಾಸ್–3 ಸ್ಪರ್ಧೆಯಲ್ಲಿ ಸೋನಲ್‌ಬೆನ್ 11-9, 3-11, 17-15, 7-11, 4-11ರಲ್ಲಿ ಚೀನಾದ ಲೀ ಕ್ವಾನ್ ಅವರ ಎದುರು ಸೋತರು.

ಕ್ಲಾಸ್–4 ವಿಭಾಗದಲ್ಲಿ ಭವಿನಾ ಬೆನ್ ಅವರು ಚೀನಾದ ಜೌ ಯಿಂಗ್ ಅವರಿಗೆ 3-11, 9-11, 2-11ರಲ್ಲಿ ಮಣಿದರು.


ಚಾಂಪಿಯನ್ ಯಂಗ್ ಒರಾಯನ್ಸ್ ತಂಡ. ನಿಂತವರು (ಎಡದಿಂದ): ಜೊಹು, ಯೆವು, ಮಂದಾರ್, ಗುಣಶೇಖರ್ (ಕೋಚ್), ಕಟ್ಟಾ ಜಗದೀಶ್ (ಮ್ಯಾನೇಜರ್), ಗೌತಮ್, ಭರತ್, ಪ್ರತ್ಯಾಂಶು. ಕೆಳಗಿನ ಸಾಲು: ರಾಹುಲ್, ಪ್ರಿಯನ್, ವಿಶಾಲ್, ಕಿಶನ್, ತನಿ, ನವೀನ್ –ಪ್ರಜಾವಾಣಿ ಚಿತ್ರ

ರಾಜ್ಯ 'ಎ' ಡಿವಿಷನ್ ಪ್ರಶಸ್ತಿ ಗೆದ್ದ ಮೊದಲ ಖಾಸಗಿ ಕ್ಲಬ್

ಒರಾಯನ್ಸ್ ಚಾರಿತ್ರಿಕ ಸಾಧನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಬ್ಯಾಸ್ಕೆಟ್‌ಬಾಲ್ ಇತಿಹಾಸದಲ್ಲಿ ಖಾಸಗಿ ಕ್ಲಬ್ ಒಂದು 'ಎ' ಡಿವಿಷನ್ ಟೂರ್ನಿಯ ಪ್ರಶಸ್ತಿ ಗೆದ್ದು ವಿಶಿಷ್ಟ ಸಾಧನೆ ಮಾಡಿದೆ. ಸೋಮವಾರ ರಾತ್ರಿ ಮುಕ್ತಾಯಗೊಂಡ ಪ್ರೊ.ಎನ್.ಸಿ.ಪರಪ್ಪ ಸ್ಮಾರಕ ಟ್ರೋಫಿ ಟೂರ್ನಿಯಲ್ಲಿ ಯಂಗ್ ಒರಾಯನ್ಸ್ ತಂಡ ಚಾಂಪಿಯನ್ ಆಗಿದೆ.

ಟೂರ್ನಿಯ 14 ಲೀಗ್ ಪಂದ್ಯಗಳಲ್ಲೂ ಅಜೇಯವಾಗಿ ಉಳಿದಿದ್ದ ಒರಾಯನ್ಸ್ ತಂಡ ಅಂತಿಮ ಫಲಿತಾಂಶಕ್ಕಾಗಿ ಒಂದು ವಾರ ಕಾಯಬೇಕಾಗಿ ಬಂದಿತ್ತು. ತಂಡದ ಪಂದ್ಯಗಳು ಕಳೆದ ವಾರ ಮುಕ್ತಾಯಗೊಂಡಿದ್ದವು. ಆದರೆ ಈ ವಾರ ನಡೆದ ಕೊನೆಯ ಪಂದ್ಯದ ನಂತರ ವಿಜಯಿ ತಂಡ ಯಾವುದು ಎಂದು ನಿರ್ಧಾರವಾಯಿತು. ಕಂಠೀರವ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಎಎಸ್‌ಸಿ ತಂಡ 99–97ರಲ್ಲಿ ಬ್ಯಾಂಕ್ ಆಫ್ ಬರೋಡ ತಂಡವನ್ನು ಮಣಿಸಿತು.

ವಿದೇಶಿ ಆಟಗಾರ ಜೊಹು ಮತ್ತು ಭಾರತ ತಂಡದಲ್ಲಿ ಆಡುತ್ತಿರುವ ಪ್ರತ್ಯಾಂಶು ತೋಮರ್ ಅವರ ಅಮೋಘ ಆಟ ಒರಾಯನ್ಸ್ ತಂಡ ಲೀಗ್‌ನಲ್ಲಿ ಅತ್ಯುತ್ತಮ ಸಾಮರ್ಥ್ಯ ತೋರಲು ನೆರವಾಗಿತ್ತು. ಆದರೂ ಅರ್ಧ ಹಾದಿ ಸಾಗಿದಾಗ ಬ್ಯಾಂಕ್ ಆಫ್ ಬರೋಡದಿಂದ ಪ್ರಬಲ ಪೈಪೋಟಿ ಎದುರಾಯಿತು. ನಂತರ ಎಎಸ್‌ಸಿ ಕೂಡ ಮುನ್ನೆಲೆಗೆ ಬಂತು. ಕೊನೆಯ ಲೀಗ್ ಪಂದ್ಯದಲ್ಲಿ ಬ್ಯಾಂಕ್ ಆಫ್ ಬರೋಡ ಸೋಲುವುದರೊಂದಿಗೆ ಒರಾಯನ್ಸ್ ಅಗ್ರ ಸ್ಥಾನ ಗಳಿಸಿತು.

ಎಎಸ್‌ಸಿ, ಬ್ಯಾಂಕ್ ಆಫ್ ಬರೋಡ ಮುಂತಾದ ಸಂಸ್ಥೆಗಳ ತಂಡಗಳೇ ಈ ವರೆಗೆ 'ಎ' ಡಿವಿಷನ್‌ನಲ್ಲಿ ಪಾರಮ್ಯ ಮೆರೆಯುತ್ತಿದ್ದವು.

ಸ್ವಂತ ಕ್ರೀಡಾಂಗಣವಿಲ್ಲ

'ಸಿ' ಡಿವಿಷನ್ ಟೂರ್ನಿಯಲ್ಲಿ ಕೆಲವು ವರ್ಷಗಳ ಹಿಂದೆ ಅಭಿಯಾನ ಆರಂಭಿಸಿದ ಯಂಗ್ ಒರಾಯನ್ಸ್ ಕ್ಲಬ್ ನಂತರ ಒಂದೊಂದೇ ಹೆಜ್ಜೆ ಮೇಲಿಟ್ಟು ಈ ಹಂತಕ್ಕೆ ಬೆಳೆದಿದೆ. ಆದರೆ ಕ್ಲಬ್‌ಗೆ ಸ್ವಂತ ಕ್ರೀಡಾಂಗಣವಿಲ್ಲ. ಜೈನ್ ಸಂಸ್ಥೆಯ ನೆರವು ಪಡೆದು ತಂಡ ಕಾಲೇಜಿನ ಕ್ರೀಡಾಂಗಣದಲ್ಲಿ ಅಭ್ಯಾಸ ನಡೆಸುತ್ತಿದೆ.

'ಲೀಗ್ ಆರಂಭಗೊಂಡಾಗಲೇ ಗೆಲುವಿನ ಲೆಕ್ಕಾಚಾರದೊಂದಿಗೆ ತಂಡ ಕಟ್ಟಿದ್ದೆವು. ಕ್ಲಬ್‌ನ ರಣತಂತ್ರ ಮತ್ತು ಆಟಗಾರರ ಛಲ ಈಗ ಫಲ ಕೊಟ್ಟಿದೆ' ಎನ್ನುತ್ತಾರೆ ಕ್ಲಬ್‌ನ ಅಧ್ಯಕ್ಷ ಜಗದೀಶ್.

ಸತ್ಯನಾರಾಯಣ ಕೋಚ್ ಆಗಿ ನೇಮಕ


ಸತ್ಯನಾರಾಯಣ

ಬೆಂಗಳೂರು: ಪ್ಯಾರಾಲಿಂಪಿಕ್ಸ್‌ನಲ್ಲಿ ಪಾಲ್ಗೊಳ್ಳುವ ಭಾರತ ತಂಡದ ಕೋಚ್ ಆಗಿ ಬೆಂಗಳೂರಿನ ಸತ್ಯನಾರಾಯಣ ಅವರನ್ನು ನೇಮಕ ಮಾಡಲಾಗಿದೆ ಎಂದು ಭಾರತ ಪ್ಯಾರಾಲಿಂಪಿಕ್ ಸಮಿತಿಯ ಖಜಾಂಚಿ ಎಂ.ಮಹಾದೇವ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಟಿಟಿ: ಜಿ. ಸತ್ಯನ್‌ಗೆ ಪ್ರಶಸ್ತಿ


ಜಿ.ಸತ್ಯನ್

ಓಲೊಮೌಕ್, ಜೆಕ್ ಗಣರಾಜ್ಯ (ಪಿಟಿಐ): ಭಾರತದ ಜಿ.ಸತ್ಯನ್ ಅವರು ಐಟಿಟಿಎಫ್ ಜೆಕ್ ಅಂತರರಾಷ್ಟ್ರೀಯ ಟೇಬಲ್ ಟೆನಿಸ್ ಟೂರ್ನಿಯ ಪುರುಷರ ಸಿಂಗಲ್ಸ್ ವಿಭಾಗದ ಪ್ರಶಸ್ತಿ ತಮ್ಮದಾಗಿಸಿಕೊಂಡರು.

ಸತ್ಯನ್ ಬುಧವಾರ ನಡೆದ ಫೈನಲ್ ಪಂದ್ಯದಲ್ಲಿ ಉಕ್ರೇನ್‌ನ ಯೆವ್‌ಹೆನ್ ರಿಸ್ಚೆಪಾ ಎದುರು 11–0, 11–6, 11–6, 14–12ರಲ್ಲಿ ಜಯ ಗಳಿಸಿದರು.

ಸೆಮಿಫೈನಲ್‌ನಲ್ಲಿ ಸತ್ಯನ್ ಸ್ವೀಡನ್‌ನ ಟ್ರೂಲ್ಸ್ ಮೊರೆಗರ್ಧ್ ಎದುರು ಆಡಿದ್ದರು. ಮೊದಲ ಎರಡು ಗೇಮ್‌ಗಳಲ್ಲಿ 11-4, 11-8ರಲ್ಲಿ ಗೆದ್ದಿದ್ದ ಭಾರತದ ಆಟಗಾರ ಮೂರನೇ ಗೇಮ್‌ನಲ್ಲಿ 8–2ರಿಂದ ಮುನ್ನಡೆಯಲ್ಲಿದ್ದರು. ಆಗ ಗಾಯದ ಕಾರಣ ಸ್ವೀಡನ್ ಆಟಗಾರ ಹಿಂದೆ ಸರಿದರು.

ಮೂರನೇ ಟೆಸ್ಟ್: ಕೊಹ್ಲಿ ಪಡೆಯ ಬ್ಯಾಟಿಂಗ್ ವೈಫಲ್ಯ; ಆತಿಥೇಯ ಇಂಗ್ಲೆಂಡ್‌ಗೆ ಮುನ್ನಡೆ

ಜೇಮ್ಸ್, ಕ್ರೇಗ್ ವೇಗಕ್ಕೆ ನಲುಗಿದ ಭಾರತ

ಲೀಡ್ಸ್ (ರಾಯಿಟರ್ಸ್): ಜೇಮ್ಸ್ ಆ್ಯಂಡರ್ಸನ್ ಮತ್ತು ಕ್ರೇಗ್ ಓವರ್ಟನ್ ಅವರ ವೇಗದ ದಾಳಿ, ಭಾರತದ ಬಲಿಷ್ಠ ಬ್ಯಾಟಿಂಗ್ ಬಳಗಕ್ಕೆ ಆಘಾತ ನೀಡಿತು. ಹೀಗಾಗಿ ಇಂಗ್ಲೆಂಡ್ ಎದುರಿನ ಮೂರನೇ ಟೆಸ್ಟ್ ಪಂದ್ಯದ ಮೊದಲ ಇನಿಂಗ್ಸ್‌ನಲ್ಲಿ ತಂಡ 78 ರನ್‌ಗಳಿಗೆ ಪತನ ಕಂಡಿತು. ಮೊದಲ ದಿನದಾಟದ ಅಂತ್ಯಕ್ಕೆ ಬುಧವಾರ 42 ಓವರ್‌ಗಳಲ್ಲಿ ವಿಕೆಟ್ ನಷ್ಟವಿಲ್ಲದೆ 120 ರನ್ ಗಳಿಸಿರುವ ಆತಿಥೇಯರು ಭಾರಿ ಮುನ್ನಡೆಯತ್ತ ಸಾಗಿದ್ದಾರೆ.

ರೋರಿ ಬರ್ನ್ಸ್ (ಬ್ಯಾಟಿಂಗ್ 52) ಮತ್ತು ಹಸೀಬ್ ಹಮೀದ್ (ಬ್ಯಾಟಿಂಗ್ 60) ಕ್ರೀಸ್ ಕಾಯ್ದುಕೊಂಡಿದ್ದರು.

ಟಾಸ್ ಗೆದ್ದು ಬ್ಯಾಟಿಂಗ್ ಆಯ್ದುಕೊಂಡ ಭಾರತದ ಅಗ್ರಕ್ರಮಾಂಕ ಆ್ಯಂಡರ್ಸನ್ ದಾಳಿಗೆ ನಲುಗಿದರೆ ಕ್ರೇಗ್ ಓವರ್ಟನ್ ಕೆಳಕ್ರಮಾಂಕಕ್ಕೆ ಪೆಟ್ಟು ನೀಡಿದರು.

21 ರನ್ ಗಳಿಸುವಷ್ಟರಲ್ಲಿ ನಾಯಕ ವಿರಾಟ್ ಕೊಹ್ಲಿ ಸೇರಿದಂತೆ ಮೂವರ ವಿಕೆಟ್ ಕಳೆದುಕೊಂಡು ಭಾರತ ಸಂಕಷ್ಟಕ್ಕೆ ಸಿಲುಕಿತ್ತು. ಈ ಸಂದರ್ಭದಲ್ಲಿ ಮುಂಬೈ ಜೋಡಿ ರೋಹಿತ್ ಶರ್ಮಾ ಮತ್ತು ಅಜಿಂಕ್ಯ ರಹಾನೆ ಭರವಸೆ ಮೂಡಿಸಿದರು. ಅವರ ಹೋರಾಟ 35 ರನ್‌ಗಳ ಜೊತೆಯಾಟದಲ್ಲಿ ಕೊನೆಗೊಂಡಿತು.

ಮೊದಲ ಓವರ್‌ನಲ್ಲೇ ಕೆ.ಎಲ್. ರಾಹುಲ್ ಅವರನ್ನು ಆ್ಯಂಡರ್ಸನ್ ವಾಪಸ್ ಕಳುಹಿಸಿದರು. ನೇರ ಎಸೆತವನ್ನು ಡ್ರೈವ್ ಮಾಡಲು ಪ್ರಯತ್ನಿಸಿದ ರಾಹುಲ್ ವಿಕೆಟ್ ಕೀಪರ್‌ಗೆ ಕ್ಯಾಚ್ ನೀಡಿ ಶೂನ್ಯಕ್ಕೆ ವಾಪಸಾದರು. ಸ್ವಿಂಗ್ ಆದ ಚೆಂಡಿನ ಗತಿ ನಿರ್ಣಯಿಸಲು ವಿಫಲರಾದ ಚೇತೇಶ್ವರ್ ಪೂಜಾರ ಕೂಡ ವಿಕೆಟ್ ಕೀಪರ್‌ಗೆ ಕ್ಯಾಚ್ ನೀಡಿ ಮರಳಿದರು. ವಿರಾಟ್ ಕೊಹ್ಲಿ ಅವರೂ ಬಟ್ಲರ್ ಪಡೆದ ಕ್ಯಾಚ್‌ಗೆ ಬಲಿಯಾದರು.

ರೋಹಿತ್–ರಹಾನೆ ರಕ್ಷಣಾ ಕಾರ್ಯ: ಆರಂಭಿಕ ಬ್ಯಾಟ್ಸ್‌ಮನ್ ರೋಹಿತ್ ಶರ್ಮಾ ಮತ್ತು ಉಪನಾಯಕ ಅಜಿಂಕ್ಯ ರಹಾನೆ ಲಯ ಕಂಡುಕೊಂಡ ನಂತರ ಬೌಂಡರಿಗಳು ಹರಿದು ಬಂದವು. ರಹಾನೆ ಕೊಂಚ ಆಕ್ರಮಣಕಾರಿಯಾಗಿ ಕಂಡುಬಂದರು. ಇಬ್ಬರೂ ತಂಡದ ಮೊತ್ತವನ್ನು 50ರ ಗಡಿ ದಾಟಿಸಿದರು. ಆದರೆ ಭೋಜನ ವಿರಾಮಕ್ಕೆ ತೆರಳುವ ಮುನ್ನ ಒಲಿ ರಾಬಿನ್ಸನ್ ಅವರು ಅಜಿಂಕ್ಯ ವಿಕೆಟ್ ಕಬಳಿಸಿದರು. ಭೋಜನದ ನಂತರವೂ ತಂಡದ ಕಳಪೆ ಬ್ಯಾಟಿಂಗ್ ಮುಂದುವರಿಯಿತು. ಅಪಾಯಕಾರಿ ರಿಷಭ್ ಪಂತ್ ಅವರನ್ನು ರಾಬಿನ್ಸನ್ ವಿಕೆಟ್ ಕೀಪರ್ ಕೈವಸಿನಲ್ಲಿ ಬಂಧಿಯಾಗಿಸಿದರು. 105 ಎಸೆತಗಳಲ್ಲಿ 19 ರನ್ ಗಳಿಸಿದ್ದ ರೋಹಿತ್ ಶರ್ಮಾ ವಿಕೆಟ್ ಗಳಿಸುವುದರೊಂದಿಗೆ ಓವರ್ಟನ್ ಆಕ್ರಮಣ ಆರಂಭವಾಯಿತು. ಕೊನೆಯ ಆರು ವಿಕೆಟ್ 22 ರನ್‌ಗಳಿಗೆ ಉರುಳಿದವು.

ಸಿರಾಜ್ ಮೇಲೆ ಚೆಂಡೆಸೆದ ಪ್ರೇಕ್ಷಕರು: ಪಂದ್ಯದ ಮೊದಲ ದಿನ ಇಂಗ್ಲೆಂಡ್ ಇನಿಂಗ್ಸ್ ಸಂದರ್ಭದಲ್ಲಿ ಬೌಂಡರಿ ಗೆರೆ ಬಳಿ ಫೀಲ್ಡಿಂಗ್ ಮಾಡುತ್ತಿದ್ದ ಭಾರತದ ವೇಗಿ ಮೊಹಮ್ಮದ್ ಸಿರಾಜ್ ಮೇಲೆ ಪ್ರೇಕ್ಷಕರು ಚೆಂಡು ಎಸೆದ ಘಟನೆ ನಡೆದಿದೆ. ದಿನದಾಟದ ಮುಕ್ತಾಯದ ನಂತರ ರಿಷಭ್ ಪಂತ್ ಅವರು ಈ ವಿಷಯವನ್ನು ಬಹಿರಂಗಪಡಿಸಿದ್ದಾರೆ.

'ಏನಾದರೂ ಹೇಳಲು ಬಯಸಿದರೆ ಹೇಳಿಬಿಡಬೇಕು. ಆದರೆ ಫೀಲ್ಡರ್‌ಗಳ ಮೇಲೆ ಯಾವುದೇ ವಸ್ತುಗಳನ್ನು ಎಸೆಯಬಾರದು. ಅದು ಒಳ್ಳೆಯದಲ್ಲ' ಎಂದು ಪಂತ್ ಹೇಳಿದ್ದಾರೆ.


ವಿರಾಟ್ ಕೊಹ್ಲಿ ವಿಕೆಟ್ ಪಡೆದು ಸಂಭ್ರಮಿಸಿದ ಜೇಮ್ಸ್ ಆ್ಯಂಡರ್ಸನ್ –ಪಿಟಿಐ ಚಿತ್ರ

ಸ್ಕೋರ್ ಕಾರ್ಡ್

ಭಾರತ ಮೊದಲ ಇನಿಂಗ್ಸ್ 78 (40.4 ಓವರ್)

ರೋಹಿತ್ ಸಿ ರಾಬಿನ್ಸನ್ ಬಿ ಓವರ್ಟನ್ 19 (105 ಎ, 4X1) ರಾಹುಲ್ ಸಿ ಬಟ್ಲರ್ ಬಿ ಆ್ಯಂಡರ್ಸನ್ 0 (4 ಎ), ಚೇತೇಶ್ವರ್ ಸಿ ಬಟ್ಲರ್ ಬಿ ಆ್ಯಂಡರ್ಸನ್ 1 (9 ಎ), ವಿರಾಟ್ ಸಿ ಬಟ್ಲರ್ ಬಿ ಆ್ಯಂಡರ್ಸನ್ 7 (17 ಎ, 4x1), ಅಜಿಂಕ್ಯ ಸಿ ಬಟ್ಲರ್ ಬಿ ರಾಬಿನ್ಸನ್ 18 (54ಎ, 4x3), ರಿಷಭ್ ಸಿ ಬಟ್ಲರ್ ಬಿ ರಾಬಿನ್ಸನ್ 2 (9 ಎ), ರವೀಂದ್ರ ಎಲ್‌ಬಿಡಬ್ಲ್ಯು ಬಿ ಸ್ಯಾಮ್ 4 (29 ಎ) ಶಮಿ ಸಿ ಬರ್ನ್ಸ್ ಬಿ ಓವರ್ಟನ್ 0 (1 ಎ), ಇಶಾಂತ್ ಔಟಾಗದೆ 8 (10 ಎ), ಬೂಮ್ರಾ ಎಲ್‌ಬಿಡಬ್ಲ್ಯು ಬಿ ಸ್ಯಾಮ್ 0 (1 ಎ), ಸಿರಾಜ್ ಸಿ ರೂಟ್ ಬಿ ಓವರ್ಟನ್ 3 (10 ಎ).

ಇತರೆ (ಲೆಗ್‌ಬೈ 11, ನೋಬಾಲ್ 5) 16

ವಿಕೆಟ್ ಪತನ: 1-1 (ಕೆ.ಎಲ್.ರಾಹುಲ್, 0.5), 2-4 (ಚೇತೇಶ್ವರ್ ಪೂಜಾರ, 4.1), 3-21 (ವಿರಾಟ್ ಕೊಹ್ಲಿ, 10.5), 4-56 (ಅಜಿಂಕ್ಯ ರಹಾನೆ, 25.5), 5–58 (ರಿಷಭ್ ಪಂತ್, 29.1), 6–67 (ರೋಹಿತ್ ಶರ್ಮಾ, 36.4), 7–67 (ಮೊಹಮ್ಮದ್ ಶಮಿ, 36.5), 8–67 (ರವೀಂದ್ರ ಜಡೇಜ, 37.2), 9–67 (ಜಸ್‌ಪ್ರೀತ್ ಬೂಮ್ರಾ, 37.3), 10–78 (ಮೊಹಮ್ಮದ್ ಸಿರಾಜ್, 40.4).

ಬೌಲಿಂಗ್: ಜೇಮ್ಸ್ ಆ್ಯಂಡರ್ಸನ್ 8–5–6–3, ಒಲಿ ರಾಬಿನ್ಸನ್ 10–3–16–2, ಸ್ಯಾಮ್ ಕರನ್ 10–2–27–2, ಮೊಯಿನ್ ಅಲಿ 2–0–4–0, ಕ್ರೇಗ್ ಓವರ್ಟನ್ 10.4–5–14–3

ಇಂಗ್ಲೆಂಡ್ ಮೊದಲ ಇನಿಂಗ್ಸ್ ವಿಕೆಟ್ ನಷ್ಟವಿಲ್ಲದೆ 120 (42 ಓವರ್)

ಬರ್ನ್ಸ್ ಬ್ಯಾಟಿಂಗ್ 52(125 ಎ, 5x2, 6X1)

ಹಸೀಬ್ ಬ್ಯಾಟಿಂಗ್ 60(130 ಎ, 4x11). ಇತರೆ (ಬೈ 4, ನೋಬಾಲ್ 3, ವೈಡ್ 1) 8

ಬೌಲಿಂಗ್: ಇಶಾಂತ್ ಶರ್ಮಾ 7–0–26–0, ಜಸ್‌ಪ್ರೀತ್ ಬೂಮ್ರಾ 12–5–19–0, ಮೊಹಮ್ಮದ್ ಶಮಿ 11–2–39–0, ಮೊಹಮ್ಮದ್ ಸಿರಾಜ್ 7–1–26–0, ರವೀಂದ್ರ ಜಡೇಜ 5–3–6–0

ವಿಶ್ವ ಕುಸ್ತಿ: ರವಿ ಅಲಭ್ಯ


ರವಿ ದಹಿಯಾ

ನವದೆಹಲಿ (ಪಿಟಿಐ): ಟೋಕಿಯೊ ಒಲಿಂಪಿಕ್ಸ್ ಬೆಳ್ಳಿ ಪದಕ ವಿಜೇತ, ಭಾರತದ ರವಿ ದಹಿಯಾ ಅವರು ವಿಶ್ವ ಕುಸ್ತಿ ಚಾಂಪಿಯನ್‌ಷಿಪ್‌ನಲ್ಲಿ ಕಣಕ್ಕಿಳಿಯದಿರಲು ನಿರ್ಧರಿಸಿದ್ದಾರೆ.

ಚಾಂಪಿಯನ್‌ಷಿಪ್‌ಗಾಗಿ ಭಾರತ ಕುಸ್ತಿ ಫೆಡರೇಷನ್ (ಡಬ್ಲ್ಯುಎಫ್‌ಐ) ಮಂಗಳವಾರ ಆಯ್ಕೆ ಟ್ರಯಲ್ಸ್‌ನಲ್ಲಿ ನಡೆಸುತ್ತಿದೆ. ಟ್ರಯಲ್ಸ್‌ಗೆ ಸಿದ್ಧವಾಗಲು ತನಗೆ ಸಮಯ ದೊರೆಯದ ಹಿನ್ನೆಲೆಯಲ್ಲಿ ಚಾಂಪಿಯನ್‌ಷಿಪ್‌ನಿಂದ ದೂರ ಉಳಿಯಲು ನಿರ್ಧರಿಸಿದ್ದಾಗಿ ರವಿ ತಿಳಿಸಿದ್ದಾರೆ. ವಿಶ್ವ ಚಾಂಪಿಯನ್‌ಷಿಪ್ ಅಕ್ಟೋಬರ್ 2ರಿಂದ 10ರವರೆಗೆ ನಾರ್ವೆಯ ಓಸ್ಲೊದಲ್ಲಿ ನಿಗದಿಯಾಗಿದೆ.

'ಯಾವುದೇ ತಾಲೀಮು ಇಲ್ಲದೆ ಮ್ಯಾಟ್‌ಗೆ ತೆರಳಲು ಬಯಸುವುದಿಲ್ಲ. ಸಾಕಷ್ಟು ಅಭ್ಯಾಸವಿಲ್ಲದೆ ಸ್ಪರ್ಧಿಸುವುದರಿಂದ ಏನು ಪ್ರಯೋಜ' ಎಂದು ರವಿ ಹೇಳಿದ್ದಾರೆ.

ಐಪಿಎಲ್: ಆರ್‌ಸಿಬಿಗೆ ಜಾರ್ಜ್ ಗಾರ್ಟನ್

ಬೆಂಗಳೂರು: ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಫ್ರಾಂಚೈಸ್ ರಾಯಲ್ ಚಾಲೆಂಜರ್ಸ್ ಬೆಂಗಳೂರು (ಆರ್‌ಸಿಬಿ) ತಂಡವು ಇಂಗ್ಲೆಂಡ್‌ನ ವೇಗದ ಬೌಲರ್ ಜಾರ್ಜ್ ಗಾರ್ಟನ್ ಅವರನ್ನು ತಂಡಕ್ಕೆ ಸೇರಿಸಿಕೊಂಡಿದೆ.

ಆಸ್ಟ್ರೇಲಿಯಾದ ಕೇನ್ ರಿಚರ್ಡ್ಸನ್ ಅವರ ಸ್ಥಾನಕ್ಕೆ ಈ ಆಯ್ಕೆ ಮಾಡಲಾಗಿದೆ ಎಂದು ತಂಡದ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಅಮೆರಿಕ ಓಪನ್: ರಾಮ್‌ಕುಮಾರ್, ಸುಮಿತ್ ಕನಸು ಭಗ್ನ

ನ್ಯೂಯಾರ್ಕ್ (ಪಿಟಿಐ/ಎಪಿ): ಅಮೆರಿಕ ಓಪನ್ ಟೆನಿಸ್ ಟೂರ್ನಿಯ ಅರ್ಹತಾ ಸುತ್ತಿನ ಮೊದಲ ಪಂದ್ಯಗಳಲ್ಲಿ ಸೋತ ಸುಮಿತ್ ನಗಾಲ್ ಮತ್ತು ರಾಮ್‌ಕುಮಾರ್ ರಾಮನಾಥನ್ ವಾಪಸಾಗಿದ್ದಾರೆ. ಅಂಕಿತಾ ರೈನಾ ಕೂಡ ಸೋಲನುಭವಿಸಿದ್ದಾರೆ.

ಅರ್ಜೆಂಟೀನಾದ ಜುವಾನ್ ಪ್ಯಾಬ್ಲೊ ಫಿಕೊವಿಚ್ ಎದುರು ಮಂಗಳವಾರ ರಾತ್ರಿ ನಡೆದ ಪಂದ್ಯದಲ್ಲಿ ಸುಮಿತ್ ನಗಾಲ್ 5-7, 6-4, 3-6ರಲ್ಲಿ ಸೋಲುಂಡರು. 35 ನಿಮಿಷಗಳ ಹಣಾಹಣಿಯಲ್ಲಿ ರಷ್ಯಾದ ಎವ್ಗಿನಿ ಡಾನ್‌ಸ್ಕಯ್ 6-4, 6-7(1), 4-6ರಲ್ಲಿ ಭಾರತದ ರಾಮ್ ಕುಮಾರ್ ಅವರನ್ನು ಮಣಿಸಿದರು. ಅಂಕಿತಾ ಅಮೆರಿಕದ ಜೆಮಿ ಲಾಬ್‌ಗೆ ಮಣಿದರು.

ಉದಕಮಂಡಲ ರೇಸ್

ರೋಮನ್ ಸೆನೆಟರ್ ಗೆಲ್ಲುವ ನಿರೀಕ್ಷೆ

ಗುರುವಾರ ಚೆನ್ನೈನಲ್ಲಿ ಏರ್ಪಡಿಸಿರುವ ಉದಕಮಂಡಲ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿರುವ ಕ್ಯಾಲಿಸ್ಟ ಹ್ಯಾಂಡಿಕ್ಯಾಪ್ ರೇಸ್‌ನಲ್ಲಿ ರೋಮನ್ ಸೆನೆಟರ್ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 2.30ಕ್ಕೆ ಪ್ರಾರಂಭವಾಗಲಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿದೆ:

1ನೇ ರೇಸ್: ಅಪ್ ಅಂಡ್ ಅಟ್ ದೆಮ್ 1, ಸಿಂಫೋನಿ ಇನ್ ಸ್ಟೈಲ್ 3, ಅಮೇಜಿಂಗ್ ಕಿಟ್ಟನ್ 9
2ನೇ ರೇಸ್: ಬ್ಯಾಟಿಸ್ಟ 1, ಡೈಮಂಡ್ಸ್ ಅಂಡ್ ಪರ್ಲ್ಸ್ 3, ಪ್ರೊಪೋಸ್ಡ್ 6
3ನೇ ರೇಸ್: 50957 1, ಅರಪಾಹೊ 2, ಪ್ರೊಪ್ಲಾಲೇಡಿ 8
4ನೇ ರೇಸ್: ಗ್ಲೋರಿಯಸ್ ಸನ್‌ಸೈನ್ 6, ಅನೆಕ್ಸ್ 7, ವೇಟುಗೋ 3
5ನೇ ರೇಸ್: ರೋಮನ್ ಸೆನೆಟರ್ 4, ಕಾಟನ್‌ಹಾಲ್ 3, ರ್‍ಯಾಡಿಕಲ್ ರೆವ್ಯೂ 9
6ನೇ ರೇಸ್: ಬಿಗ್ ಟ್ರೆಷರ್ 5, ಸ್ಟಾರ್ ಫ್ಲಿಂಗ್ 8, ಸಾಂಗ್ ಆಫ್ ಗ್ಲೋರಿ 4
7ನೇ ರೇಸ್: ಬ್ಯೂಟಿ ಆಫ್ ದಿ ಟರ್ಫ್ 3, ವೈಬ್ರಂಟ್ ಅಪ್ರೋಚ್ 10, ಬ್ರೇಕ್ ದಿ ಸೈಲೆನ್ಸ್ 5.

ಉತ್ತಮ ಬೆಟ್: 50957

ಜಾಕ್‌ಪಾಟ್	ಮಿನಿ ಜಾಕ್‌ಪಾಟ್	1ನೇ ಟ್ರಬಲ್	2ನೇ ಟ್ರಬಲ್
3,4,5,6,7	4,5,6,7	2,3,4	5,6,7